ಗುರುವಾರ, ಜೂನ್ 11, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನಗು...

ಟೆನಿಸ್ ಪ್ರೀಮಿಯರ್ ಲೀಗ್‌ನಲ್ಲಿ ನಟಿ, ಲಖನೌ ಬ್ಲೇಜರ್ಸ್ ಸಹ ಮಾಲೀಕರಾದ ಸೋನಾಲಿ ಬೇಂದ್ರೆ ಅವರು ತಂಡದ ಜೆರ್ಸಿಯನ್ನು ಮುಂಬೈನಲ್ಲಿ ಬುಧವಾರ ಬಿಡುಗಡೆ ಮಾಡಿದರು

ಆಕ್ರೋಶ...

ಅಡುಗೆ ಅನಿಲದ ಸಿಲಿಂಡರ್ ದರ ಏರಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತೆಯೊಬ್ಬರು ಖಾಲಿ ಸಿಲಿಂಡರ್ ಹಿಡಿದು ಹುಬ್ಬಳ್ಳಿಯಲ್ಲಿ ಬುಧವಾರ ಆಕ್ರೋಶ ವ್ಯಕ್ತಪಡಿಸಿದರು

1,000 ಗುತ್ತಿಗೆ, 200 ಕಾಯಂ ವೈದ್ಯರ ನೇಮಕಾತಿ: ಸಚಿವ ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ಸರ್ಕಾರಿ ಆಸ್ಪತ್ರೆಗಳಲ್ಲಿ 200 ಎಂಬಿಬಿಎಸ್ ಪದವೀಧರ ವೈದ್ಯರನ್ನು ತಕ್ಷಣ ಕಾಯಂ ಆಧಾರದ ಮೇಲೆ ಮತ್ತು 1,000ಕ್ಕೂ ಅಧಿಕ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ವಾಕ್-ಇನ್ ಸಂದರ್ಶನಗಳ ಮೂಲಕ ನೇಮಕ ಮಾಡಲಾಗುವುದು ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.

ಇಲಾಖೆ ಯೋಜನೆಗಳ ಪ್ರಗತಿ ಪರಿಶೀಲನೆಯನ್ನು ಬುಧವಾರ ನಡೆಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

ಯು.ಟಿ. ಖಾದರ್ ಅವರು ಇಲಾಖೆ ಯೋಜನೆಗಳ ಪ್ರಗತಿ ಪರಿಶೀಲಿಸಿದರು

ಇಲಾಖೆಯು 1,280 ಎಂಬಿಬಿಎಸ್ ಪದವೀಧರರು, 924 ತಜ್ಞರು ಮತ್ತು 892 ದಾದಿಯರ ಕೊರತೆಯನ್ನು ಎದುರಿಸುತ್ತಿದೆ ಎಂದು ಮಾಹಿತಿ ನೀಡಿದರು.

ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯರನ್ನು ಅವರ ಕಾರ್ಯಕ್ಷಮತೆಯ ಆಧಾರದ ಮೇಲೆ ಐದು ವರ್ಷಗಳ ನಂತರ ಕಾಯಂಗೊಳಿಸಲಾಗುವುದು. ಸರ್ಕಾರದೊಂದಿಗೆ ಕೆಲಸ ಮಾಡಲು ಆಸಕ್ತಿ ಹೊಂದಿರುವ ಎಂಬಿಬಿಎಸ್ ಪದವೀಧರರು ಅರ್ಜಿಯನ್ನು ಆಯಾ ಜಿಲ್ಲಾ ಆರೋಗ್ಯ ಅಧಿಕಾರಿಗೆ ಸಲ್ಲಿಸಬಹುದು. ಎಂಬಿಬಿಎಸ್ ಪದವೀಧರರಿಗೆ ₹60,000 ಮತ್ತು ತಜ್ಞರಿಗೆ ₹1.10 ಲಕ್ಷ ಪಾವತಿಸಲಾಗುವುದು ಎಂದರು.

'ಗಡಿ ಅಥವಾ ಘಟ್ಟ ಪ್ರದೇಶಗಳಲ್ಲಿ ಕೆಲಸ ಮಾಡಲು ಇಚ್ಛಿಸುವ ವೈದ್ಯರಿಗೆ ಇತರ ಪ್ರದೇಶಗಳಲ್ಲಿ ಕೆಲಸ ಮಾಡುವ ವೈದ್ಯರಿಗಿಂತ ಹೆಚ್ಚಿನ ವೇತನ ನೀಡಲಾಗುವುದು. ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗಿರುವ ನಿವೃತ್ತ ವೈದ್ಯರನ್ನು ಸಹ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು' ಎಂದರು.

ಇಲಾಖೆಯಡಿಯಲ್ಲಿ ಕೆಲಸ ಮಾಡುತ್ತಿರುವ ಎಂಬಿಬಿಎಸ್ ಪದವೀಧರರಿಗೆ ವಿಶೇಷ ಕೋರ್ಸ್‌ಗಳನ್ನು ತೆಗೆದುಕೊಳ್ಳಲು ಅವಕಾಶ ನೀಡುವ ಸೌಲಭ್ಯವನ್ನು ಹಿಂದಿನ ಆರೋಗ್ಯ ಸಚಿವರು ಫೆಬ್ರುವರಿಯಲ್ಲಿ ರದ್ದು ಮಾಡಿದ್ದರು. ಅದನ್ನು ಮತ್ತೆ ಆರಂಭಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಲಾಖೆಯು 400 ದಾದಿಯರು, ಔಷಧಗಾರರು ಮತ್ತು ಪ್ರಯೋಗಾಲಯ ತಂತ್ರಜ್ಞರ ನೇಮಕಾತಿಯನ್ನು ಸಹ ಕೈಗೊಳ್ಳುತ್ತಿದೆ ಎಂದರು.

ಮಕ್ಕಳ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸಲು ಪ್ರತಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ (ಆರ್‌ಬಿಎಸ್‌ಕೆ) ಎರಡು ತಂಡಗಳು ಇರಲಿವೆ. ಔಷಧ ಕೊರತೆ ಸಮಸ್ಯೆಯನ್ನು ಮೂರು ತಿಂಗಳಲ್ಲಿ ಪರಿಹರಿಸಲಾಗುವುದು ಎಂದರು.

ಜನಸ್ನೇಹಿ ಉಪಕ್ರಮಕ್ಕೆ ಹಲವು ಸಮಿತಿ

'ಜನರು ಮತ್ತು ಇಲಾಖೆಯ ನಡುವಿನ ಅಂತರವನ್ನು ಕಡಿಮೆ ಮಾಡಲು ಕರ್ನಾಟಕ ವಿಷನ್ ಸಮಿತಿ, ಮಾನಸಿಕ ಆರೋಗ್ಯ ಸಮಿತಿ, ಕಾಕ್ಲಿಯರ್ ಇಂಪ್ಲಾಂಟ್ ಸಮಿತಿ ಮತ್ತು ಮೌಖಿಕ ಆರೋಗ್ಯ ಸಮಿತಿ ಸೇರಿದಂತೆ ಬಹು ಸಮುದಾಯಗಳ ರಚನೆ ಮಾಡಲಾಗುವುದು' ಎಂದು ಯು.ಟಿ. ಖಾದರ್ ಹೇಳಿದರು.

ಹಾವು ಕಡಿತಕ್ಕೆ ಲಸಿಕೆ: 'ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಸೇರಿದಂತೆ ಎಲ್ಲ ಆರೋಗ್ಯ ಕೇಂದ್ರಗಳಿಗೆ ವಿಷ ನಿರೋಧಕ ಲಸಿಕೆಗಳನ್ನು ಪೂರೈಸಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಯಾವುದೇ ಸಮಯದಲ್ಲಿ ಕನಿಷ್ಠ ಹತ್ತು ಲಸಿಕೆಗಳನ್ನು ಹೊಂದಿರಲಿವೆ' ಎಂದು ಅವರು ತಿಳಿಸಿದರು.

ಖಾಸಗಿ ಆಸ್ಪತ್ರೆಗಳು ವಿಷ ನಿರೋಧಕ ಲಸಿಕೆಗಳನ್ನು ಹೊಂದಿರಬೇಕು ಎಂದು ಸಚಿವರು ಹೇಳಿದರು.

'ಬಿಜೆಪಿ ಸೀಟ್ ಚೋರಿಗೆ ಇಳಿದಿದೆ'

ಪ್ರಜಾತಂತ್ರ ನೆಲಸಮ ಮಾಡಲು ಬಿಜೆಪಿ ಷಡ್ಯಂತ್ರ: ಹರಿಪ್ರಸಾದ್ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯವರು ಇಲ್ಲಿಯವರೆಗೆ ಮತ ಕಳವು ಮಾಡುತ್ತಿದ್ದರು. ಈಗ ರಾಜ್ಯಸಭೆ ಸ್ಥಾನಗಳನ್ನೇ ಕಳವು (ಸೀಟ್ ಚೋರಿ) ಮಾಡುತ್ತಿದ್ದಾರೆ. ಇಷ್ಟು ಕೀಳು ಮಟ್ಟಕ್ಕೆ ಬಿಜೆಪಿಯವರು ಇಳಿದಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಟೀಕಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಜಾತಂತ್ರವನ್ನು ಸಂಪೂರ್ಣವಾಗಿ ನೆಲಸಮ ಮಾಡಲು ಬಿಜೆಪಿಯವರು ಕುತಂತ್ರ, ಷಡ್ಯಂತ್ರ ಮಾಡುತ್ತಿದ್ದಾರೆ. ಸಂವಿಧಾನ ಮೀರಿ ಕೆಲಸ ಮಾಡಲು ಮುಂದಾಗಿದ್ದಾರೆ' ಎಂದರು.

ಮಧ್ಯಪ್ರದೇಶ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಮೀನಾಕ್ಷಿ ನಟರಾಜನ್ ಸಲ್ಲಿಸಿದ್ದ ನಾಮಪತ್ರ ತಿರಸ್ಕೃತಗೊಂಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಹರಿಪ್ರಸಾದ್, 'ಇದು ಹೊಸತೇನೂ ಅಲ್ಲ. ಎರಡು ತಿಂಗಳ ಹಿಂದೆ ಹರಿಯಾಣದಿಂದ ರಾಜ್ಯಸಭೆ ಚುನಾವಣೆ ನಡೆದಾಗ ನಮಗೆ (ಕಾಂಗ್ರೆಸ್‌ಗೆ) ಸಿಗಬೇಕಿದ್ದ ನಾಲ್ಕು ಮತಗಳನ್ನು ಅಸಿಂಧುಗೊಳಿಸಿದ್ದರು. 2016ರ ಚುನಾವಣೆಯಲ್ಲಿ ನಮ್ಮ 14 ಮತಗಳನ್ನು ಅಸಿಂಧುಗೊಳಿಸಿ ಬಿಜೆಪಿ ಸದಸ್ಯರನ್ನು ಆರಿಸಿದ್ದರು' ಎಂದರು.

ಆರ್‌ಎಸ್‌ಎಸ್ ನೋಂದಣಿ ವಿಚಾರವಾಗಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ನೀಡಿರುವ ಹೇಳಿಕೆ ಬಗ್ಗೆ ಕೇಳಿದಾಗ, 'ಪ್ರಿಯಾಂಕ್ ಅವರು ಸರ್ಕಾರದ ಭಾಗ. ಸಂವಿಧಾನದ ವ್ಯಾಪ್ತಿಯಲ್ಲಿ ಕ್ರಮ ತೆಗೆದುಕೊಳ್ಳಲು ಅವರಿಗೆ ಅಧಿಕಾರವಿದೆ. ಅವರ ಮಾತಿಗೆ ನನ್ನ ಸಹಮತವಿದೆ' ಎಂದರು.

'ಮುಂದಿನ ಎರಡು ವರ್ಷ ಕಾಂಗ್ರೆಸ್ ಕಾರ್ಯಕರ್ತರ ವರ್ಷ. ರಾಜ್ಯದ ವಿಧಾನ ಸಭೆ, ನಂತರ ಲೋಕಸಭೆ ಚುನಾವಣೆಯಲ್ಲಿ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಿ, ಬಿಜೆಪಿ ಹಾಗೂ ಆರ್‌ಎಸ್‌ಎಸ್ ಅನ್ನು ಮಣಿಸಲು ಸಿದ್ಧರಾಗಬೇಕು. ಕಾಂಗ್ರೆಸ್ ಪಕ್ಷದ ಸಂವಿಧಾನ ಹಾಗೂ ಸೋನಿಯಾ ಗಾಂಧಿಯವರ ಆಶಯದಂತೆ ನಾನು ಕೆಲಸ ಮಾಡುತ್ತೇನೆ. ಮಹಿಳೆಯರಿಗೆ ಶೇ 33ರಷ್ಟು ಅವಕಾಶ ಸಿಕ್ಕೇ ಸಿಗುತ್ತದೆ. ಯಾವುದೇ ಜಾತಿ, ಧರ್ಮ, ಭಾಷೆ ತಾರತಮ್ಯ ಇಲ್ಲದೇ ಯುವಕರನ್ನು ಸೇರಿಸಿಕೊಂಡು ಮುಂದೆ ಸಾಗಬೇಕಾಗುತ್ತದೆ' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಮಾತನಾಡಿ, 'ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್ ಅವರ ಪದಗ್ರಹಣ ಇದೇ 21ರಂದು ಅರಮನೆ ಮೈದಾನದಲ್ಲಿ ನಡೆಯಲಿದೆ. ಹರಿಪ್ರಸಾದ್ ಅವರ ಮುಂದೆ ಸಾಕಷ್ಟು ಸವಾಲುಗಳಿವೆ. ಅವರ ಜೊತೆ ಎಲ್ಲ ಕಾರ್ಯಕರ್ತರು ನಿಂತು ಬೆಂಬಲಿಸಬೇಕು' ಎಂದರು.

ಮತ್ತೊಬ್ಬ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ, 'ಕಾಂಗ್ರೆಸ್ ಪಕ್ಷವೇ ತಮ್ಮ ಉಸಿರು ಎಂದು ಭಾವಿಸಿ ಐದು ದಶಕಗಳಿಂದ ಬದುಕನ್ನು ಕಾಂಗ್ರೆಸ್ ಪಕ್ಷಕ್ಕೆ ಮುಡಿಪಾಗಿಟ್ಟವರು ಹರಿಪ್ರಸಾದ್. ಅವರ ನೇತೃತ್ವದಲ್ಲಿ ನಾವು ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರಬೇಕಾಗಿದೆ' ಎಂದು ಕಾರ್ಯಕರ್ತರಿಗೆ ಮನವಿ ಮಾಡಿದರು.

ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಮೊದಲ ಬಾರಿ ಕಚೇರಿಗೆ ಬಂದ ಬಿ.ಕೆ. ಹರಿಪ್ರಸಾದ್ ಅವರಿಗೆ ಜಿ.ಸಿ. ಚಂದ್ರಶೇಖರ್ ಸಂವಿಧಾನದ ಪ್ರತಿ ನೀಡಿದರು.ಕೆಪಿಸಿಸಿ ಉಪಾಧ್ಯಕ್ಷ ಎಂ. ನಾರಾಯಣ ಸ್ವಾಮಿ, ಮಂಜುನಾಥ ಭಂಡಾರಿ ಮತ್ತಿತರರು ಇದ್ದರು

ಅದ್ದೂರಿ ಸ್ವಾಗತ

ಕೆಪಿಸಿಸಿ ಅಧ್ಯಕ್ಷರಾಗಿ ನೇಮಕಗೊಂಡಿರುವ ಬಿ.ಕೆ. ಹರಿಪ್ರಸಾದ್ ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿಗೆ ಬುಧವಾರ ಮೊದಲ ಬಾರಿ ಬಂದರು. ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಅವರಿಗೆ ಅದ್ದೂರಿ ಸ್ವಾಗತ ನೀಡಿದರು. ಇದೇ ಸಂದರ್ಭದಲ್ಲಿ ಕಾರ್ಯಕರ್ತರ ಜೊತೆಗೆ ಹರಿಪ್ರಸಾದ್ ಮಾತುಕತೆ ನಡೆಸಿದರು. ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಶಾಸಕರಾದ ಜಮೀರ್ ಅಹಮದ್ ಖಾನ್, ಬಿ. ನಾಗೇಂದ್ರ ಮತ್ತಿತರರು ಇದ್ದರು.

ಮೋದಿ ಸಂಭ್ರಮ, ಪ್ರಜಾತಂತ್ರದ ಅಣಕ– ಸಿದ್ದರಾಮಯ್ಯ

'ಮಧ್ಯಪ್ರದೇಶ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಮೀನಾಕ್ಷಿ ನಟರಾಜನ್ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಲೋಪ-ದೋಷಗಳಿರಲಿಲ್ಲ. ಆದರೂ ಲೋಪದೋಷಗಳನ್ನು ಸೃಷ್ಟಿಸಿ ತಿರಸ್ಕರಿಸಲಾಗಿದೆ.ಇದು ಚುನಾವಣಾ ಅಕ್ರಮ, ರಾಜಕೀಯ ಷಡ್ಯಂತ್ರ' ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

'ಎಕ್ಸ್' ಮಾಡಿರುವ ಅವರು, 'ಭಾರತದ ಪ್ರಜಾಪ್ರಭುತ್ವವನ್ನು ಹಾಳುಗೆಡುವ ಮೂಲಕ ದೀರ್ಘಾವಧಿ ಪ್ರಧಾನಿಯಾಗಿ ಮುಂದುವರಿದಿರುವ ನರೇಂದ್ರ ಮೋದಿಯವರ ಸಾಧನೆಯ ಬಗ್ಗೆ ಬಿಜೆಪಿ ಸಂಭ್ರಮಿಸುತ್ತಿರುವುದು ಪ್ರಜಾಪ್ರಭುತ್ವದ ವಿರುದ್ಧದ ಅತಿ ದೊಡ್ಡ ಅಣಕ' ಎಂದು ಅವರು ಹೇಳಿದ್ದಾರೆ.

'ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ತಿರಸ್ಕರಿಸಿರುವ ನಿರ್ಧಾರವು ಪಕ್ಷಪಾತವಾಗಿದ್ದು, ಚುನಾವಣಾ ಆಯೋಗವು ಸ್ವತಂತ್ರವಾಗಿ ತೆಗೆದುಕೊಂಡ ನಿರ್ಧಾರವಾಗಿಲ್ಲ. ಚುನಾವಣೆಯನ್ನು ನ್ಯಾಯಯುತವಾಗಿ ಗೆಲ್ಲಲು ಸಾಧ್ಯವಿಲ್ಲದ ಬಿಜೆಪಿಗೆ ಪರೋಕ್ಷವಾಗಿ ಗೆಲ್ಲಲು ಚುನಾವಣಾ ಆಯೋಗವು ನೀಡುತ್ತಿರುವ ಸಹಕಾರ' ಎಂದೂ ಹೇಳಿದ್ದಾರೆ.

'ಮತಗಳ್ಳತನವನ್ನು ಅಧಿಕೃತ ದಂಧೆಯಾಗಿ ಮಾಡಿಕೊಳ್ಳಲಾಗಿದ್ದು, ಎಸ್‌ಐಆರ್ ಸೇರಿದಂತೆ ಅನೇಕ ಕಳ್ಳಮಾರ್ಗದ ಮೂಲಕ ಚುನಾವಣೆಗಳನ್ನು ಬಿಜೆಪಿ ಗೆಲ್ಲುತ್ತಿದೆ. ರಾಜ್ಯಸಭೆ ಚುನಾವಣೆಯಲ್ಲೂ ಗುರುತರ ಅಕ್ರಮ ಎಸಗುವ ಮೂಲಕ ಸ್ಥಾನಗಳ್ಳತನವನ್ನು ತನ್ನ ಮತಗಳ್ಳತನದ ದಂಧೆಗೆ ಸೇರ್ಪಡೆಗೊಳಿಸಿದೆ. ಬಿಜೆಪಿಯ ಮತಗಳ್ಳತನದ ದಂಧೆಯಲ್ಲಿ ಮತದಾರರ ದಿಕ್ಕು ತಪ್ಪಿಸುವುದು, ಪ್ರಾದೇಶಿಕ ಪಕ್ಷಗಳನ್ನು ಒಡೆಯುವುದು ಸ್ಥಾನಗಳ್ಳತನ ನಡೆಸುವುದು ಸೇರಿದೆ' ಎಂದಿದ್ದಾರೆ.

'ಮಧ್ಯಪ್ರದೇಶದಿಂದ ರಾಜ್ಯಸಭೆಗೆ ಕೇವಲ ಇಬ್ಬರು ಅಭ್ಯರ್ಥಿಗಳನ್ನಷ್ಟೇ ಗೆಲ್ಲಿಸಿಕೊಳ್ಳಬಹುದಾದ ಸಂಖ್ಯಾಬಲ ಹೊಂದಿದ್ದರೂ ಮೂರನೇ ಅಭ್ಯರ್ಥಿಯನ್ನು ಬಿಜೆಪಿ ಕಣಕ್ಕಿಳಿಸಿತ್ತು. ದೊಡ್ಡ ಮೊತ್ತದ ಹಣದ ಆಮಿಷ ಒಡ್ಡುವ ಮೂಲಕ ಕುದುರೆ ವ್ಯಾಪಾರ ನಡೆಸಲು ಬಿಜೆಪಿ ತಯಾರಿ ನಡೆಸಿತ್ತು. ಕಾಂಗ್ರೆಸ್ ಶಾಸಕರನ್ನು ಖರೀದಿಸಿ ಮೂರನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಹುನ್ನಾರ ನಡೆಸಿತ್ತು. ಆದರೆ, ಕಾಂಗ್ರೆಸ್ ಶಾಸಕರು ಒಗ್ಗಟ್ಟಾಗಿದ್ದರಿಂದ ಬಿಜೆಪಿಯ ಕುದುರೆ ವ್ಯಾಪಾರ ನಡೆಯಲಿಲ್ಲ. ಹೀಗಾಗಿ, ಕೊನೆಯ ಅಸ್ತ್ರ ಎಂಬಂತೆ ಚುನಾವಣಾ ಆಯೋಗದ ಮೂಲಕ ಅಭ್ಯರ್ಥಿಯ ನಾಮಪತ್ರವೇ ನೇರವಾಗಿ ತಿರಸ್ಕೃತಗೊಳ್ಳುವಂತೆ ಮಾಡಿದೆ' ಎಂದಿದ್ದಾರೆ.

'ರಾಜ್ಯಸಭೆಯ ವ್ಯಾಮೋಹವಿಲ್ಲ'

'ಮೋದಿ ಜತೆಗಿನ ಬಾಂಧವ್ಯ ಎಲ್ಲ ಸ್ಥಾನವನ್ನೂ ಮೀರಿದ್ದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಸಭಾ ಸ್ಥಾನಕ್ಕೆ ಬೇಡಿಕೆ ಇಟ್ಟಿರಲಿಲ್ಲ. ಈ ಕುರಿತು ದೆಹಲಿ ಬಿಜೆಪಿ ನಾಯಕರ ಜತೆ ಮಾತುಕತೆಯನ್ನೂ ನಡೆಸಿರಲಿಲ್ಲ. ನನ್ನ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ಬಾಂಧವ್ಯವು ರಾಜ್ಯಸಭೆಯ ಸ್ಥಾನವನ್ನೂ ಮೀರಿದ್ದು' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಅವರು ಮಾತನಾಡಿದರು.

'70 ವರ್ಷಗಳ ಸುದೀರ್ಘ ರಾಜಕೀಯ ಜೀವನ ಸವೆಸಿರುವ ನನಗೆ ರಾಜ್ಯಸಭೆ ಸದಸ್ಯನಾಗಬೇಕು ಎಂಬ ವ್ಯಾಮೋಹವಿಲ್ಲ. ದೇವೇಗೌಡರಿಗೆ ರಾಜ್ಯಸಭೆಗೆ ಆಯ್ಕೆ ಮಾಡದೆ ಬಿಜೆಪಿ ಮೋಸ ಮಾಡಿದೆ. ಅಪಮಾನವಾಗಿದೆ ಎಂಬ ಕಾಂಗ್ರೆಸ್ ಹೇಳಿಕೆ ಹಾಗೂ ಮಾಧ್ಯಮಗಳ ವರದಿ ಕಪೋಕಲ್ಪಿತ. ಅದಕ್ಕಾಗಿ ಎರಡು ದಿನ ಟಿ.ವಿಯನ್ನೇ ಬಂದ್ ಮಾಡಿದ್ದೆ. ಈ ಚರ್ಚೆ ಅನಗತ್ಯ. 18 ಶಾಸಕರನ್ನು ಹೊಂದಿರುವ ಜೆಡಿಎಸ್ ರಾಜ್ಯಸಭೆಗೆ ಹೇಗೆ ಆಯ್ಕೆ ಮಾಡುತ್ತದೆ. ಆಯ್ಕೆ ಮಾಡಬೇಕು ಎನ್ನುವುದು ಸ್ನೇಹಿತರು, ಹಿತೈಷಿಗಳು ಹಾಗೂ ಪಕ್ಷದ ಮುಖಂಡರು, ಕಾರ್ಯಕರ್ತರ ಆಶಯವಾಗಿತ್ತು ಅಷ್ಟೆ. ನಾನಾಗಲಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಾಗಲಿ ಈ ಕುರಿತು ಯಾವುದೇ ಚರ್ಚೆ ನಡೆಸಿರಲಿಲ್ಲ' ಎಂದು ಸ್ಪಷ್ಟಪಡಿಸಿದರು.

> **ಹಲಸು, ಹುಣಸೆ ಬೆಳೆಗಾರರಿಗೆ ಸೂಕ್ತ ನೆರವು, ಮಾರುಕಟ್ಟೆಯ ಅಗತ್ಯವಿದೆ. ಅವರ ಆರ್ಥಿಕ ಹಿತಾಸಕ್ತಿಗಾಗಿ ಮಂಡಳಿ ರಚಿಸಲು ಕೇಂದ್ರಕ್ಕೆ ಮನವಿ ಮಾಡಿದ್ದೆ. ಬೇಡಿಕೆಗೆ ಸ್ಪಂದನೆ ಸಿಗುತ್ತದೆ ಎಂಬ ವಿಶ್ವಾಸವಿದೆ**
> **ಎಚ್.ಡಿ.ದೇವೇಗೌಡ,** ಜೆಡಿಎಸ್ ವರಿಷ್ಠ

'ಒಂದು ಕಾಲದಲ್ಲಿ ನಾನು ಮೋದಿಯವರನ್ನು ಕಟುವಾಗಿ ಟೀಕಿಸಿದ್ದೆ. ಆದರೆ, ಹಲವು ವರ್ಷಗಳಿಂದ ನಾನು ಅವರನ್ನು ಬಹಳಷ್ಟು ಅರ್ಥ ಮಾಡಿಕೊಂಡಿದ್ದೇನೆ. ಅವರಲ್ಲಿ ವಿಶ್ವಾಸ ಇರಿಸಿದ್ದೇನೆ. ಅವರ ಒಳ್ಳೆಯ ಕೆಲಸಗಳನ್ನು ಹೃದಯಪೂರ್ವಕವಾಗಿ ಶ್ಲಾಘಿಸಿದ್ದೇನೆ. ದೇಶಕ್ಕೆ ಉತ್ತಮ ಆಡಳಿತ ನೀಡುತ್ತಿದ್ದಾರೆ. ಪಕ್ಷಕ್ಕೆ ಬಹುಮತ ಬಂದಾಗಲೂ ಮಿತ್ರ ಪಕ್ಷಗಳನ್ನು ಕಡೆಗಣಿಸಿಲ್ಲ. ಅವರ ನನ್ನ ಸಂಬಂಧ ಚೆನ್ನಾಗಿದೆ. 10 ವರ್ಷಗಳಿಂದ ಉತ್ತಮ ಒಡನಾಟ ಇಟ್ಟುಕೊಂಡಿದ್ದೇನೆ. ರಾಜ್ಯಸಭೆ ಸ್ಥಾನ ಇಂತಹ ಉತ್ತಮ ಬಾಂಧವ್ಯವನ್ನು ಹಾಳು ಮಾಡುತ್ತದೆಯೇ? ಸಂಸತ್ತಿನಲ್ಲಿ ಇಲ್ಲದಿದ್ದರೂ ಮೋದಿ ಜತೆಗಿನ ಸಂಬಂಧಕ್ಕೆ ದಕ್ಕೆ ಬರುವುದಿಲ್ಲ' ಎಂದರು.

'1954-55 ರಿಂದಲೇ ನಾನು ಸಕ್ರಿಯ ರಾಜಕಾರಣದಲ್ಲಿದ್ದೇನೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯಿಂದ ದೇಶದ ಪ್ರಧಾನಿ ಸ್ಥಾನದವರೆಗೆ ರಾಜಕೀಯವಾಗಿ ಬೆಳೆದೆ. ಈಗಲೂ ಸುಮ್ಮನೆ ಕೂರುವುದಿಲ್ಲ. ಪಕ್ಷದ ಬಲವರ್ಧನೆಗೆ ನನ್ನ ಶಕ್ತಿ ಮೀರಿ ಕೆಲಸ ಮಾಡುತ್ತೇನೆ' ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ಗ್ರೇಟರ್ ಬೆಂಗಳೂರು ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ, ಮುಖಂಡರಾದ ಕೆ.ಎ.ತಿಪ್ಪೇಸ್ವಾಮಿ, ಚೌಡರೆಡ್ಡಿ ತೂಪಲ್ಲಿ, ದೊಡ್ಡನಗೌಡ ಪಾಟೀಲ, ಜೆಡಿಎಸ್ ರಾಜ್ಯ ಕಾನೂನು ವಿಭಾಗದ ಅಧ್ಯಕ್ಷ ಎ.ಪಿ. ರಂಗನಾಥ್, ಸಾಮಾಜಿಕ ಜಾಲತಾಣ ವಿಭಾಗದ ಅಧ್ಯಕ್ಷ ಚಂದನ್ ಉಪಸ್ಥಿತರಿದ್ದರು.

'ಅಧಿಕಾರ ಹಂಚಿಕೆ ಸೂತ್ರ ಜಾರಿಯಾಗಲಿ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ರಾಜ್ಯ ಕಾಂಗ್ರೆಸ್‌ನಲ್ಲಿ 2023ರಲ್ಲಿ ಸರ್ಕಾರ ರಚನೆ ವೇಳೆ ನಡೆದ ಅಧಿಕಾರ ಹಂಚಿಕೆ ಸೂತ್ರ ಸಂಪೂರ್ಣವಾಗಿ ಮತ್ತು ಯಥಾವತ್ತಾಗಿ ಜಾರಿಯಾಗಬೇಕು' ಎಂದು ಇಂಡಿ ವಿಧಾನಸಭಾ ಕ್ಷೇತ್ರದ ಶಾಸಕ ಯಶವಂತ-ರಾಯಗೌಡ ಪಾಟೀಲ ಆಗ್ರಹಿಸಿದರು.

'ಸಮಾನ ಅಧಿಕಾರ ಹಂಚಿಕೆ ಸೂತ್ರದಂತೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿದ್ದಾರೆ. ಅವರ ಜೊತೆಯೇ ನಮಗೂ ಅಧಿಕಾರ ಹಂಚಿಕೆ ಆಗಬೇಕಿತ್ತು. ಮುಂದಿನ ಸಚಿವ ಸಂಪುಟ ವಿಸ್ತರಣೆ ವೇಳೆ ಕಾಂಗ್ರೆಸ್ ವರಿಷ್ಠರು ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಯಶವಂತ ರಾಯಗೌಡ ಪಾಟೀಲ

'ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ಸರ್ಕಾರ ರಚನೆ ವೇಳೆ ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ ಎಂ.ಬಿ.ಪಾಟೀಲ, ಶಿವಾನಂದ ಪಾಟೀಲ ಮತ್ತು ನನ್ನ ನಡುವೆ ಸಚಿವ ಸ್ಥಾನ ಸಮಾನ ಹಂಚಿಕೆ ಮಾಡುವುದಾಗಿ ಹೇಳಿದ್ದರು. ಅಂದು ನನಗೆ ಕೊಟ್ಟ ಮಾತಿನಂತೆ ಸಚಿವ ಸ್ಥಾನ ನೀಡುತ್ತಾರೆ ಎಂಬ ಅದಮ್ಯ ವಿಶ್ವಾಸದಲ್ಲಿ ಇದ್ದೇನೆ. ಅಂದು ನನಗೆ ಕೊಟ್ಟ ಮಾತನ್ನು ಉಳಿಸಿಕೊಂಡರೆ ರಾಜಕೀಯ ಪಕ್ಷಕ್ಕೆ ಬೆಲೆ ಇರುತ್ತದೆ' ಎಂದರು.

ಖಾತೆ ಕ್ಯಾತೆ, ಸಚಿವ ಸಂಪುಟ ವಿಸ್ತರಣೆ ಬಗ್ಗೆ ಸೋನಿಯಾ, ರಾಹುಲ್‌ಗೆ ಮಾಹಿತಿ

ಹೈಕಮಾಂಡ್ ಭೇಟಿಯಾದ ಡಿಕೆಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ದೆಹಲಿ ಪ್ರವಾಸ ಕೈಗೊಂಡಿರುವ ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್ ನಾಯಕರನ್ನು ಬುಧವಾರ ಭೇಟಿ ಮಾಡಿ ಸಮಾಲೋಚಿಸಿದರು.

ನವದೆಹಲಿಯ 10 ಜನಪಥ್‌ನಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಭೇಟಿ ಮಾಡಿ ಧನ್ಯವಾದ ಸಲ್ಲಿಸಿದರು. ಜತೆಗೆ, ಸಚಿವರ ಖಾತೆ ಕ್ಯಾತೆ ಬಗ್ಗೆ ಹೈಕಮಾಂಡ್ ನಾಯಕರಿಗೆ ಮಾಹಿತಿ ನೀಡಿದರು. ಸಚಿವ ಸಂಪುಟ ವಿಸ್ತರಣೆ ಬಗ್ಗೆಯೂ ಪ್ರಸ್ತಾಪಿಸಿದರು. ಈ ವಿಷಯದ ಬಗ್ಗೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಪಕ್ಷದ ರಾಜ್ಯ ಉಸ್ತುವಾರಿಯೊಂದಿಗೆ ಸಮಾಲೋಚಿಸುವಂತೆ ರಾಹುಲ್ ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.

ಆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, 'ಸೋನಿಯಾ ಹಾಗೂ ರಾಹುಲ್ ಅವರೊಂದಿಗೆ ಯಾವ ವಿಷಯದ ಬಗ್ಗೆ ಚರ್ಚಿಸಿದೆ ಎಂಬುದನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲ' ಎಂದರು.

'ಜನರ ಕಲ್ಯಾಣ, ಸಮಗ್ರ ಅಭಿವೃದ್ಧಿ, ಸಮೃದ್ಧ ಕರ್ನಾಟಕ ಮತ್ತು ಭಾರತವನ್ನು ನಿರ್ಮಿಸುವ ವಿಷಯದ ಬಗ್ಗೆ ವರಿಷ್ಠರೊಂದಿಗೆ ಚರ್ಚೆ ನಡೆಸಿದ್ದೇನೆ' ಎಂದು ಶಿವಕುಮಾರ್ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ರಾಜಕೀಯ ಪ್ರಯಾಣದ ಉದ್ದಕ್ಕೂ ಗಾಂಧಿ ಕುಟುಂಬವು ನನ್ನ ಮೇಲೆ ಇಟ್ಟಿರುವ ನಂಬಿಕೆ, ಪ್ರೀತಿ ಮತ್ತು ಮಾರ್ಗ-ದರ್ಶನಕ್ಕಾಗಿ ಕೃತಜ್ಞನಾಗಿದ್ದೇನೆ' ಎಂದು ಅವರು ಹೇಳಿದ್ದಾರೆ.

ಇದಕ್ಕೂ ಮುನ್ನ ಮುಖ್ಯಮಂತ್ರಿಯವರು ರಾಷ್ಟ್ರೀಯ ಯುವ ಕಾಂಗ್ರೆಸ್ ಕಚೇರಿ, ಎನ್‌ಎಸ್‌ಯುಐ ಕಚೇರಿ, ಮಹಿಳಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಿದರು. ಈ ವೇಳೆ, ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ಬಿ.ವಿ. ಶ್ರೀನಿವಾಸ್, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ಇದ್ದರು.

ಗುರುವಾರ ನಡೆಯುವ ನೀತಿ ಆಯೋಗದ ಸಭೆಯಲ್ಲಿ ಶಿವಕುಮಾರ್ ಭಾಗಿಯಾಗಲಿದ್ದಾರೆ. ಪ್ರಧಾನಿ ಮೋದಿ ಭೇಟಿಗೆ ಕಾಲಾವಕಾಶ ಕೇಳಿದ್ದಾರೆ.

ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರಿಗೆ ಡಿ.ಕೆ. ಶಿವಕುಮಾರ್ ಹೂಗುಚ್ಛ ನೀಡಿದರು. ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ ಉಪಸ್ಥಿತರಿದ್ದರು

ಮಾರಾಟಕ್ಕೆ ಸಜ್ಜು

ಪ್ರಜಾವಾಣಿ ಚಿತ್ರ
ಅನೂಪ್ ರಾಘ. ಟಿ.

ಮೈಸೂರಿನ ಎಪಿಎಂಸಿ ಆವರಣದಲ್ಲಿ ವರ್ತಕರೊಬ್ಬರು ಗೋಣಿ ಚೀಲಗಳನ್ನು ಹೊಲಿದು ಮಾರಾಟಕ್ಕೆ ಸಿದ್ಧಪಡಿಸುವಲ್ಲಿ ನಿರತರಾಗಿದ್ದರು

ಅಧ್ಯಕ್ಷ ಗಾದಿಗೆ ಶ್ರೀರಾಮುಲು ಲಾಬಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಮಾಜಿ ಸಚಿವ ಬಿ.ಶ್ರೀರಾಮುಲು ಲಾಬಿ ನಡೆಸಿದ್ದಾರೆ.

ಮೂರು–ನಾಲ್ಕು ದಿನಗಳಿಂದ ರಾಷ್ಟ್ರ ರಾಜ-ಧಾನಿಯಲ್ಲಿರುವ ಅವರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಭೇಟಿ ಮಾಡಿ ಸಮಾಲೋಚಿಸಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಭೇಟಿಗೂ ಸಮಯ ಕೇಳಿದ್ದಾರೆ. ಒಂದು ವೇಳೆ, ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಮಾಡುವುದಿದ್ದರೆ ತಮ್ಮನ್ನು ಪರಿಗಣಿಸಬೇಕು ಎಂದು ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

ಕಾವೇರಿ ನಿವಾಸಕ್ಕೆ ಬುಧವಾರ ಬಂದಿದ್ದ ಜನರ ಯೋಗಕ್ಷೇಮವನ್ನು ಸಿದ್ದರಾಮಯ್ಯ ವಿಚಾರಿಸಿದರು

ಸಿದ್ದರಾಮಯ್ಯ ಮನೆಗೆ ನಿತ್ಯವೂ ಜನಜಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮ್ಯಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬಳಿಕವೂ ಅವರ ನಿವಾಸ 'ಕಾವೇರಿ' ಜನಜಂಗುಳಿಯಿಂದ ಮುಕ್ತವಾಗಿಲ್ಲ.

ಬುಧವಾರವೂ ಕೆಲ ಸಚಿವರು, ಹಲವು ಶಾಸಕರ ದಂಡು ಭೇಟಿ ಮಾಡಿತು. ಬೆಳಿಗ್ಗೆಯಿಂದ ಸಂಜೆಯವರೆಗೂ ಜನಸಾಗರವೇ ನೆರೆದಿತ್ತು. ಹೊಸ ಸರ್ಕಾರದಲ್ಲಿ ಸಚಿವರಿಗೆ ಹೇಳಿ ತಮ್ಮ ಕೆಲಸ ಮಾಡಿಕೊಡಿ ಎಂದು ಮನವಿ ಮಾಡಿದರು.

ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಕೆಲ ಸಮಯ ಮಾತುಕತೆ ನಡೆಸಿದರು. ಶಾಸಕರು, ವಿಧಾನಪರಿಷತ್ ಸದಸ್ಯರು ನಿರಂತರವಾಗಿ ಭೇಟಿ ನೀಡುತ್ತಲೇ ಇದ್ದರು.

ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳ ಕುಶಲೋಪರಿ ವಿಚಾರಿಸಿದರು. ಬಹಳಷ್ಟು ಜನರು ಅವರ ಕಾಲಿಗೆ ಬಿದ್ದು ನಮಸ್ಕರಿಸಿದರು. ಕೆಲವರನ್ನು ಪ್ರೀತಿಯಿಂದ ಗದರಿ ಕೂರಿಸಿದರು.

ಬಿಜೆಪಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು

'ಕೇಶವಕೃಪಕ್ಕೆ ನಾನೇ ಬರುವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯ ಸಿ.ಟಿ. ರವಿ ಅವರಿಗೆ ಆರ್‌ಎಸ್‌ಎಸ್ ಇತಿಹಾಸವೇ ಗೊತ್ತಿಲ್ಲ. ಮೊದಲು ಇತಿಹಾಸ ಓದಿಕೊಂಡು ಬರಲಿ' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು.

ಆರ್‌ಎಸ್‌ಎಸ್ ನೋಂದಣಿಯ ಬಗ್ಗೆ ಪ್ರಿಯಾಂಕ್ ಖರ್ಗೆ ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯಿಸಿದ್ದ ಸಿ.ಟಿ. ರವಿ, 'ಪ್ರಿಯಾಂಕ್ ಖರ್ಗೆ ಅವರ ಅಪ್ಪನಿಂದಲೇ ಆರ್‌ಎಸ್‌ಎಸ್‌ಗೆ ಏನೂ ಮಾಡಲು ಸಾಧ್ಯವಾಗಿಲ್ಲ' ಎಂದಿದ್ದರು.

ರವಿ ಹೇಳಿಕೆಗೆ ಬುಧವಾರ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ನೋಂದಣಿ ಮಾಡಿಕೊಳ್ಳಿ ಎಂದಾಗ ಇವರಿಗೆ (ಆರ್‌ಎಸ್‌ಎಸ್) ಯಾಕಿಷ್ಟು ಭಯ? ಈ ಸಂವಿಧಾನದ ಅಡಿಯಲ್ಲಿ ನೆಲದ ಕಾನೂನಿಗೆ ನಾವು ಒಳಪಡುವುದಿಲ್ಲವೆಂದು ಅವರು ಹೇಳಲಿ. ನಾನೇ ಅವರ ಕೇಶವಕೃಪ ಅಥವಾ ಬಿಜೆಪಿಯ ರಾಜ್ಯ ಕಚೇರಿ ಜಗನ್ನಾಥ ಭವನಕ್ಕೆ ಬರುತ್ತೇನೆ ಅಥವಾ ಅವರೇ ದಾಖಲೆ ಸಹಿತ ನನ್ನ ಕಚೇರಿಗೆ ಬರಲಿ' ಎಂದು ಸವಾಲು ಹಾಕಿದರು.

'ಸರ್ದಾರ್ ಪಟೇಲ್, ನೆಹರೂ ಅವರು ಆರ್‌ಎಸ್‌ಎಸ್ ನಿಷೇಧಿಸಿದಾಗ ಕೈಕಾಲು ಹಿಡಿದವರು ಇದೇ ಆರ್‌ಎಸ್‌ಎಸ್‌ನವರು' ಎಂದರು.

'ಬ್ರಿಟಿಷರಿಂದ ವೀರ ಸಾವರ್ಕರ್ ₹60 ಪಿಂಚಣಿ ಪಡೆದು ಕೊಳ್ಳುತ್ತಿದ್ದರು. ಆರ್‌ಎಸ್‌ಎಸ್ ಸರಸಂಘಚಾಲಕರಾಗಿದ್ದ ಅವರು ಇಂದಿರಾ ಗಾಂಧಿಯವರಿಗೆ ಪತ್ರ ಬರೆದಿದ್ದರು. ಪತ್ರದಲ್ಲಿ ತುರ್ತು ಪರಿಸ್ಥಿತಿಯ ಅಗತ್ಯವಿದೆ ಎಂದು ಉಲ್ಲೇಖಿಸಿದ್ದರು. ಈ ಎಲ್ಲ ಮಾಹಿತಿಗಳು ಆರ್‌ಎಸ್‌ಎಸ್‌ನ ಮುಖವಾಣಿ 'ಆರ್ಗನೈಸರ್'ನಲ್ಲಿ ಅವರೇ ಬರೆದುಕೊಂಡಿದ್ದಾರೆ. ಓದಿ ನೋಡಲಿ' ಎಂದೂ ಹೇಳಿದರು.

ಆರ್‌ಎಸ್‌ಎಸ್ ಮಾನ್ಯತೆ ಪ್ರಶ್ನೆ ಉದ್ಭವಿಸದು: ಸಂಸದ ಬೊಮ್ಮಾಯಿ

ಗದಗ: 'ಕಾಂಗ್ರೆಸ್ ವಿದೇಶಿಯರಿಂದ ಸ್ಥಾಪಿತ ಪಕ್ಷವಾದರೆ, ಆರ್‌ಎಸ್‌ಎಸ್ ಸ್ವದೇಶಿಯರಿಂದ ಸ್ಥಾಪನೆಯಾಗಿದೆ. ಸುದೀರ್ಘ ವರ್ಷಗಳ ಇತಿಹಾಸ ಇರುವ ಆರ್‌ಎಸ್‌ಎಸ್‌ನ ಮಾನ್ಯತೆ ಪ್ರಶ್ನೆ ಉದ್ಭವಿಸದು' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಬೊಮ್ಮಾಯಿ

ಆರ್‌ಎಸ್‌ಎಸ್ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಜಗತ್ತಿನಲ್ಲೇ ಅತಿ ದೊಡ್ಡ ಸಂಸ್ಥೆಯಾದ ಆರ್‌ಎಸ್‌ಎಸ್ ಜನಸೇವೆಯಲ್ಲಿ ಶ್ರೇಷ್ಠ ಕೆಲಸ ಮಾಡುತ್ತಿದೆ. ಯಾರು, ಏನೇ ಪ್ರಶ್ನೆ ಮಾಡಿದರೂ ಅದರ ಜನಪರ ಕೆಲಸ ಮುಂದುವರಿ ಯುತ್ತದೆ. ಆರ್‌ಎಸ್‌ಎಸ್ ಮಾರ್ಗದರ್ಶನದಲ್ಲಿಯೇ ನಮ್ಮ ರಾಜಕೀಯ ತತ್ವ ಹಾಗೂ ಮೌಲ್ಯಗಳು ಮೂಡಿಬಂದಿವೆ' ಎಂದರು.

'ಈ ದೇಶದಲ್ಲಿ ಬೀದಿ ವ್ಯಾಪಾರಿಯೂ ನೋಂದಣಿ ಮಾಡಿಕೊಳ್ಳಬೇಕು, ದೇವಸ್ಥಾನ ನೋಂದಣಿ ಮಾಡಬೇಕು. ದೇವರು, ಜನರು ಐಟಿ ಮುಂದೆ ಲೆಕ್ಕ ಕೊಡಲೇಬೇಕು. ಇವರು ಮಾತ್ರ ಯಾವ ಲೆಕ್ಕವನ್ನು ಕೊಡುವ ಹಾಗೆ ಇಲ್ಲವೇ? ಇವರ ದೇಣಿಗೆಗೆ ಯಾವುದೇ ಲೆಕ್ಕವನ್ನು ಕೊಡುವ ಇವರು ಯಾವ ರೀತಿ ಹೇಡಿಗಳ ರೀತಿ ಕೈಕಾಲಿಗೆ ಬೀಳುತ್ತಾರೆ ಗೊತ್ತಿಲ್ಲವೇ' ಎಂದು ಕೆಣಕಿದರು.

ಎಚ್.ಸಿ. ಮಹದೇವಪ್ಪಗೆ ಸಚಿವಗಿರಿ ಫಲಿಸದ ಸಿದ್ದರಾಮಯ್ಯ ಒತ್ತಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ಎಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ಕೊಡಿಸಲು ಸಿದ್ದರಾಮಯ್ಯ ಒತ್ತಡ ಹಾಕಿದರೂ ಕಾಂಗ್ರೆಸ್ ಹೈಕಮಾಂಡ್ ಒಲವು ತೋರಿಲ್ಲ.

ಹೊಸ ಸರ್ಕಾರದ ಮುಖ್ಯಮಂತ್ರಿಯಾಗಿ ಶಿವಕುಮಾರ್ ಅವರ ಜತೆ ಪ್ರಮಾಣ ವಚನ ಸ್ವೀಕರಿಸಲು 13 ಶಾಸಕರ ಪಟ್ಟಿಯನ್ನು ದೆಹಲಿಯಲ್ಲಿ ಸಿದ್ಧಪಡಿಸುವಾಗಲೇ ತಮ್ಮ ಆಪ್ತ ಮಹದೇವಪ್ಪ ಅವರನ್ನು ಪರಿಗಣಿಸುವಂತೆ ಸಿದ್ದರಾಮಯ್ಯ ಹೈಕಮಾಂಡ್ ನಾಯಕರಲ್ಲಿ ವಿನಂತಿಸಿದ್ದರು. ಆದರೆ, ಅವರ ಪ್ರಯತ್ನ ಫಲ ನೀಡಿರಲಿಲ್ಲ. ಸಂಪುಟ ವಿಸ್ತರಣೆಯ ಸಮಯದಲ್ಲಾದರೂ ಪರಿಗಣಿಸುವಂತೆ ಮತ್ತೆ ಒತ್ತಡ ಹಾಕುತ್ತಿದ್ದಾರೆ ಎನ್ನಲಾಗಿದೆ.

ರಾಜ್ಯಸಭೆಗೆ ನಾಮಪತ್ರ ಸಲ್ಲಿಸಲು ಬೆಂಗಳೂರಿಗೆ ಬಂದಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಸಿದ್ದರಾಮಯ್ಯ ಮತ್ತೊಮ್ಮೆ ನೆನಪು ಮಾಡಿದ್ದರು. ಆದರೂ, ಅವರ ಪ್ರಯತ್ನ ಫಲ ನೀಡಿಲ್ಲ ಎಂದು ಗೊತ್ತಾಗಿದೆ.

2018ರ ವಿಧಾನಸಭೆ ಚುನಾವಣೆ ಸಮಯದಲ್ಲೇ ಮಹದೇವಪ್ಪ ಬಗ್ಗೆ ಹೈಕಮಾಂಡ್ ಒಲವು ತೋರಿರಲಿಲ್ಲ. 'ಅವರು ಪಕ್ಷಕ್ಕಾಗಿ ದುಡಿದಿಲ್ಲ' ಎಂಬ ಅಸಮಾಧಾನವನ್ನು ಹೈಕಮಾಂಡ್ ನಾಯಕರು ವ್ಯಕ್ತಪಡಿಸಿದ್ದರು. 2023ರ ಚುನಾವಣೆಯಲ್ಲಿ ಟಿಕೆಟ್ ನೀಡಲೂ ಹಿಂದೇಟು ಹಾಕಲಾಗಿತ್ತು. 'ಇದು ಕೊನೆಯ ಚುನಾವಣೆ. ಹಾಗಾಗಿ, ಟಿಕೆಟ್ ನೀಡುವುದು ಸೂಕ್ತ' ಎಂದು ಸಿದ್ದರಾಮಯ್ಯ ಒತ್ತಡ ಹಾಕಿದ್ದರು. ಸಂಪುಟ ರಚನೆ ವೇಳೆ, ಹೈಕಮಾಂಡ್ ಮನವೊಲಿಸಿ, ಸಚಿವ ಸ್ಥಾನ ಕೊಡಿಸಿದ್ದರು. ಅವರಿಗೆ ಸಮಾಜ ಕಲ್ಯಾಣ ಇಲಾಖೆಯ ಜವಾಬ್ದಾರಿ ನೀಡಿದ್ದರು.

'ಈಗ ಅವರ ಮಗ ಸುನಿಲ್ ಬೋಸ್ ಸಂಸದರಾಗಿದ್ದಾರೆ. ಮಹದೇವಪ್ಪ ಇಷ್ಟು ದಿನ ಸರ್ಕಾರದ ಕೆಲಸ ಮಾಡಿದ್ದಾರೆ. ಹೊಸಬರಿಗೆ ಸ್ಥಾನ ಬಿಟ್ಟುಕೊಡಲಿ ಎನ್ನುವುದು ಹೈಕಮಾಂಡ್ ಆಲೋಚನೆ. ಹಾಗಾಗಿ, ಸಿದ್ದರಾಮಯ್ಯ ಅವರ ಒತ್ತಡಕ್ಕೂ ಹೈಕಮಾಂಡ್ ನಾಯಕರು ಮಣಿಯುತ್ತಿಲ್ಲ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

prajavani.net prajavani | ಗುರುವಾರ, ಜೂನ್ 11, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 161 | ಪುಟ 16 | www.prajavani.net

ಸಿಂಧು ಮುನ್ನಡೆ
ಭಾರತದ ಪಿ.ವಿ.ಸಿಂಧು ಅವರು ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಬುಧವಾರ ಎರಡನೇ ಸುತ್ತಿಗೆ ಮುನ್ನಡೆದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 73,98 | ನಿಫ್ಟಿ 23,214 | $/₹ 95.25 | ಚಿನ್ನ (Std. 10g) ₹1,53,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,50,300 (ಬೆಂಗಳೂರು)

ಪಿಯು– ಸಿಇಟಿ: ಇನ್ನು ಒಂದೇ ಅರ್ಜಿ

ಸಮಯ ವ್ಯಯ, ಒತ್ತಡ ನಿವಾರಣೆಗೆ ಮುಂದಾದ ಪರೀಕ್ಷಾ ಪ್ರಾಧಿಕಾರ



6.32 ಲಕ್ಷ	2.90 ಲಕ್ಷ	3.30 ಲಕ್ಷ	3.09 ಲಕ್ಷ
2026ರಲ್ಲಿ ಪಿಯು ಪರೀಕ್ಷೆ ಬರೆದವರು	ರಾಜ್ಯಪಠ್ಯದ ವಿಜ್ಞಾನ ವಿದ್ಯಾರ್ಥಿಗಳು	ಸಿಇಟಿಗೆ ಅರ್ಜಿ ಸಲ್ಲಿಸಿದ್ದವರು	ಸಿಇಟಿ ಬರೆದಿದ್ದ ವಿದ್ಯಾರ್ಥಿಗಳು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವಿದ್ಯಾರ್ಥಿಗಳು 2027–28ನೇ ಶೈಕ್ಷಣಿಕ ಸಾಲಿನಿಂದ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಯುಜಿ–ಸಿಇಟಿ) ಪ್ರತ್ಯೇಕ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ದ್ವಿತೀಯ ಪಿಯುಗೆ ಪ್ರವೇಶದ ಅರ್ಜಿಯಲ್ಲೇ ಸಿಇಟಿ ಆಯ್ಕೆ ನಮೂದಿಸಬಹುದು. ಶುಲ್ಕ ಪಾವತಿಸಿದ ಬಳಿಕ ಪ್ರವೇಶಪತ್ರ ಪಡೆಯಬಹುದು.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಪ್ರತಿ ವರ್ಷವೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿಇಟಿ ನಡೆಸುತ್ತದೆ. ಅದಕ್ಕಾಗಿ ಆಯಾ ಶೈಕ್ಷಣಿಕ ವರ್ಷದ ಜನವರಿ ಅಥವಾ ಫೆಬ್ರುವರಿಯಲ್ಲಿ ಅರ್ಜಿ ಆಹ್ವಾನಿಸುತ್ತದೆ. ಅರ್ಜಿಯ ಜತೆಗೆ ವಿದ್ಯಾರ್ಥಿಗಳು ಶೈಕ್ಷಣಿಕ ದಾಖಲೆಗಳು, ಜಾತಿ, ಆದಾಯ ಪ್ರಮಾಣ ಪತ್ರ, ಗ್ರಾಮೀಣ, ಅಂಗವಿಕಲ ಪ್ರಮಾಣಪತ್ರಗಳೂ ಸೇರಿದಂತೆ ವಿವಿಧ ಮೀಸಲಾತಿಗಾಗಿ ಪೂರಕ ದಾಖಲೆಗಳನ್ನು ಸಲ್ಲಿಸಬೇಕು. ಅರ್ಜಿ ಆಹ್ವಾನಿಸುವ ಸಮಯದಲ್ಲಿ ವಿದ್ಯಾರ್ಥಿಗಳು ದ್ವಿತೀಯ ಪಿಯು ಪರೀಕ್ಷೆಯ ಸಿದ್ಧತೆಯಲ್ಲಿ ಇರುತ್ತಾರೆ. ಇದರಿಂದ ಸಮಯ ವ್ಯರ್ಥವಾಗುವ ಜತೆಗೆ, ಪೂರಕ ದಾಖಲೆಗಳನ್ನು ಹೊಂದಿಸುವ ಒತ್ತಡಕ್ಕೆ ಒಳಗಾಗುತ್ತಾರೆ. ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪಿಯುಸಿ ಪ್ರವೇಶದ ಸಮಯದಲ್ಲೇ ಸಲ್ಲಿಸುವ ಅರ್ಜಿಯನ್ನೇ ಪರಿಗಣಿಸಲು ಕೆಇಎ ನಿರ್ಧರಿಸಿದೆ.

ಪ್ರತಿ ವರ್ಷ ಸರಾಸರಿ 3 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಸಿಇಟಿ ಬರೆಯುತ್ತಿದ್ದಾರೆ. 2025–26ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆ ಫೆ.28ರಿಂದ ಆರಂಭವಾಗಿತ್ತು. ಸಿಇಟಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜ.17ರಿಂದ ಫೆ.16ರವರೆಗೆ ಅವಕಾಶ ನೀಡಲಾಗಿತ್ತು. ಪಿಯು ಪರೀಕ್ಷೆಯ ಸಿದ್ಧತೆಯ ಒತ್ತಡದಲ್ಲಿದ್ದ ಕಾರಣ ಬಹುತೇಕ ವಿದ್ಯಾರ್ಥಿಗಳು ನಿಗದಿತ ಅವಧಿಯ ಒಳಗೆ ಅರ್ಜಿ ಸಲ್ಲಿಸಿರಲಿಲ್ಲ. ಹಾಗಾಗಿ, ಅವಧಿಯನ್ನು ಪಿಯು ಪರೀಕ್ಷೆ ಆರಂಭವಾಗುವ ಮುನ್ನಾ ದಿನದವರೆಗೂ ಅಂದರೆ, ಫೆ. 27ರವರೆಗೂ ವಿಸ್ತರಿಸಲಾಗಿತ್ತು.

ಈ ಕುರಿತು ‘ಪ್ರಜಾವಾಣಿ’ ಜತೆ ಮಾತನಾಡಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ, ‘2026–27ನೇ ಸಾಲಿನ ಸಿಇಟಿ ಅರ್ಜಿಯು ‘ಆಧಾರ್’ ಆಧಾರಿತವಾಗಿತ್ತು. ಹೆಸರು ಮತ್ತಿತರ ಅಂಶಗಳು ಸ್ವಯಂ-ಚಾಲಿತವಾಗಿ ಅರ್ಜಿಯಲ್ಲಿ ಕಾಣಿಸಿ-ಕೊಳ್ಳುವಂತೆ ವ್ಯವಸ್ಥೆ ಮಾಡಲಾಗಿತ್ತು. ಒಟಿಪಿ ಜತೆಗೆ ಪ್ರತಿ ಹಂತದ ಮಾಹಿತಿಯನ್ನು ತಿಳಿಸುವ ವಿಶೇಷ ವ್ಯವಸ್ಥೆ ಒಳಗೊಂಡಿತ್ತು. ವಾಟ್ಸ್‌ಆ್ಯಪ್ ಮೂಲಕವೂ ಸಂದೇಶಗಳನ್ನು ರವಾನಿಸಲಾಗಿತ್ತು. ಎಸ್‌ಎಟಿಎಸ್ ಮತ್ತು ಆರ್‌ಡಿ ಸಂಖ್ಯೆ ದಾಖಲಿಸಿದ ನಂತರ ಆನ್‌ಲೈನ್‌ನಲ್ಲಿ ಪರಿಶೀಲನೆಗೆ ಒಳಪಡುವ ಅಭ್ಯರ್ಥಿಗಳು ಅದಕ್ಕಾಗಿ ಕಾಲೇಜಿಗೆ ಹೋಗುವ ಅಗತ್ಯ ಇರಲಿಲ್ಲ. ಆನ್‌ಲೈನ್‌ನಲ್ಲಿ ಪರಿಶೀಲನೆ ಆಗದವರು ಕಾಲೇಜು ಹಂತದಲ್ಲೇ ಪರಿಶೀಲನೆ ಮಾಡಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. ಆದರೂ, ಪಿಯು ಪರೀಕ್ಷೆ ಬರೆಯುವ ಧಾವಂತದಲ್ಲಿದ್ದ ಬಹಳಷ್ಟು ವಿದ್ಯಾರ್ಥಿಗಳು ಕೊನೆಯ ದಿನದ ಒಳಗೆ ಅರ್ಜಿ ಸಲ್ಲಿಸಿರಲಿಲ್ಲ. ಇಂತಹ ಒತ್ತಡ ನಿವಾರಣೆಗೆ ಕಾಲೇಜು ಪ್ರವೇಶದ ಅವಧಿಯಲ್ಲೇ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗುತ್ತಿದೆ’ ಎಂದು ಹೇಳಿದರು.

ಅರ್ಜಿ ಭರ್ತಿಗೆ ಕಾಲೇಜುಗಳಲ್ಲೇ ತರಬೇತಿ

ಸಿಇಟಿ ಬರೆಯುವ ಶೇ 85ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ರಾಜ್ಯ ಪಠ್ಯಕ್ರಮದವರು. ಹಾಗಾಗಿ, ದ್ವಿತೀಯ ಪಿಯು ಪ್ರವೇಶದ ಜತೆಯಲ್ಲೇ ಸಿಇಟಿಗೂ ಅನುಕೂಲವಾಗುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ, ಪದವಿಪೂರ್ವ ನಿರ್ದೇಶನಾಲಯ ಸಹಯೋಗದಲ್ಲಿ ಹೊಸ ಸ್ವರೂಪದ ಅರ್ಜಿ ಸಿದ್ಧಪಡಿಸಲು ಕೆಇಎ ನಿರ್ಧರಿಸಿದೆ.

‘ಹೊಸ ಅರ್ಜಿಗಳನ್ನು ತಪ್ಪಿಲ್ಲದಂತೆ ಭರ್ತಿ ಮಾಡಲು ಪ್ರತಿ ಕಾಲೇಜಿನಲ್ಲೂ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳಿಗೆ ಸೂಕ್ತ ತರಬೇತಿ ನೀಡಲಾಗುತ್ತದೆ. ಸಾಕಷ್ಟು ಸಮಯ ಸಿಗುವ ಕಾರಣ ವಿದ್ಯಾರ್ಥಿಗಳೂ ಅಗತ್ಯ ದಾಖಲೆಗಳನ್ನು ಹೊಂದಿಸಿಕೊಳ್ಳಬಹುದು. ಪ್ರಥಮ ಪಿಯು ಮುಗಿದ ನಂತರ ಬೇಸಿಗೆ ರಜೆಯಲ್ಲೇ ಎಲ್ಲ ದಾಖಲೆಗಳನ್ನು ಸಿದ್ಧಪಡಿಸಿಟ್ಟುಕೊಂಡು ಅರ್ಜಿ ಜತೆಗೆ ಅಪ್‌ಲೋಡ್ ಮಾಡಬಹುದು. ಇದರಿಂದ ಸಿಇಟಿ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯಲ್ಲೂ ಹೆಚ್ಚಳವಾಗಬಹುದು’ ಎಂದು ಕೆಇಎ ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಪ್ರವೇಶದ ಅರ್ಜಿಯಲ್ಲೇ ಸಿಇಟಿ ಆಯ್ಕೆ ನಮೂದಿಗೆ ಅವಕಾಶ
- ಶುಲ್ಕ ಪಾವತಿಸಿದ ಬಳಿಕ ಪ್ರವೇಶಪತ್ರ

ಸಿಬಿಎಸ್‌ಇ ಸೇರಿದಂತೆ ಕೇಂದ್ರೀಯ ಮಂಡಳಿಗಳು, ಬೇರೆ ರಾಜ್ಯಗಳ ಪರೀಕ್ಷಾ ಮಂಡಳಿಗಳ ಜತೆಗೂ ಏಕ ಸ್ವರೂಪದ ಅರ್ಜಿ ಬಳಕೆ ಕುರಿತು ಮಾತುಕತೆ ನಡೆದಿದೆ. ಈಗಾಗಲೇ 12ನೇ ತರಗತಿ ಅಂಕಗಳನ್ನು ಡಿಜಿಟಲ್ ರೂಪದಲ್ಲಿ ನೇರವಾಗಿ ಪಡೆಯಲಾಗುತ್ತಿದೆ

ಎಚ್.ಪ್ರಸನ್ನ, ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಕಾಲ್ಚೆಂಡಿನ ಕೌತುಕ ಇಂದಿನಿಂದ

ಜಾಗತಿಕ ಫುಟ್‌ಬಾಲ್ ಹಬ್ಬವು ಗುರುವಾರ ಆರಂಭವಾಗಲಿದೆ. ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ದೇಶಗಳ ಜಂಟಿ ಆತಿಥ್ಯದಲ್ಲಿ 23ನೇ ಫಿಫಾ ವಿಶ್ವಕಪ್ ಟೂರ್ನಿ ನಡೆಯಲಿದೆ. ಜಗತ್ತಿನ ಕೆಲವು ಕಡೆ ಯುದ್ಧದ ಕರಾಳತೆ ತುಂಬಿರುವ ಈ ಹೊತ್ತಿನಲ್ಲಿ ಶಾಂತಿ, ಸಾಮರಸ್ಯದ ಸಂದೇಶದೊಂದಿಗೆ ಕಾಲ್ಚೆಂಡಿನ ಸಂಭ್ರಮ ಗರಿಗೆದರಲಿದೆ.


ಎಂಬಾಪೆ

ರೊನಾಲ್ಡೊ

- ದಿನಾಂಕ: ಜೂನ್ 11ರಿಂದ ಜುಲೈ 19
- ಒಟ್ಟು ತಂಡಗಳು: 48
- ಒಟ್ಟು ಪಂದ್ಯಗಳು 104
- ಹಾಲಿ ಚಾಂಪಿಯನ್: ಅರ್ಜೆಂಟೀನಾ
- ಹಾಲಿ ರನ್ನರ್ಸ್ ಅಪ್: ಫ್ರಾನ್ಸ್

ಅರ್ಜೆಂಟೀನಾ ತಂಡದ ಲಯೊನೆಲ್ ಮೆಸ್ಸಿ

ಇನ್ನಷ್ಟು ಸುದ್ದಿಗಳು 11

ದೆಹಲಿಯಲ್ಲಿ ಕೃಷ್ಣ ಮೊಕ್ಕಾಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ವರಿಷ್ಠರನ್ನು ಭೇಟಿ ಮಾಡಿ ಖಾತೆ ಗೊಂದಲ ಪರಿಹರಿಸಲು ದೆಹಲಿಗೆ ದೌಡಾಯಿಸಿರುವ ಸಚಿವ ಕೃಷ್ಣ ಬೈರೇಗೌಡ, ಅಲ್ಲಿಯೇ ಮೊಕ್ಕಾಂ ಹೂಡಿದ್ದಾರೆ.

ಕೃಷ್ಣ ಬೈರೇಗೌಡ

ಬಿಡಿಎ ಮತ್ತು ಬಿಎಂಆರ್‌ಡಿಎ ಹೊರತುಪಡಿಸಿ, ಬೆಂಗಳೂರು ಅಭಿವೃದ್ಧಿ ಖಾತೆಯನ್ನು ಕೃಷ್ಣ ಬೈರೇಗೌಡ ಅವರಿಗೆ ಹಂಚಿಕೆ ಮಾಡಲಾಗಿದೆ. ಆದರೆ, ಈ ಎರಡೂ ಪ್ರಾಧಿಕಾರಗಳನ್ನು ಜೊತೆಗೆ ನೀಡಿದರಷ್ಟೆ ಖಾತೆ ವಹಿಸಿಕೊಳ್ಳುವುದಾಗಿ ಅವರು ಪಟ್ಟು ಹಿಡಿದಿದ್ದಾರೆ.

ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಈ ಬಗ್ಗೆ ತಮ್ಮ ಅಹವಾಲು ಸಲ್ಲಿಸಲು ಶಾಸಕ ರಿಜ್ವಾನ್ ಅರ್ಷದ್ ಮತ್ತು ಶಾಸಕ ಎನ್.ಎಸ್. ಬೋಸರಾಜು ಪುತ್ರ ರವಿ ಬೋಸರಾಜು ಜೊತೆ ಸೋಮವಾರ ರಾತ್ರಿಯೇ ಅವರು ದೆಹಲಿಗೆ ತೆರಳಿದ್ದಾರೆ. ಆದರೆ, ವರಿಷ್ಠರು ಭೇಟಿಗೆ ಲಭ್ಯರಾಗಿಲ್ಲ.

ಖಾತೆ ಗೊಂದಲ

ಮಧ್ಯಪ್ರದೇಶ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುತ್ತಿರುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕರಿಸಿರುವ ಕ್ರಮದ ವಿರುದ್ಧ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ನೇತೃತ್ವದಲ್ಲಿ ಹಲವು ರೀತಿಯ ಹೋರಾಟ ನಡೆಯುತ್ತಿದೆ. ಹೀಗಾಗಿ, ವೇಣುಗೋಪಾಲ್ ಭೇಟಿ ಸಾಧ್ಯವಾಗಲಿಲ್ಲ ಎನ್ನಲಾಗಿದೆ.

ಈ ಮಧ್ಯೆ, ಬುಧವಾರ ಬೆಳಿಗ್ಗೆ ದೆಹಲಿ ತಲುಪಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ವರಿಷ್ಠ ನಾಯಕಿ ಸೋನಿಯಾ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿಯನ್ನು ಭೇಟಿ ಮಾಡಿದ್ದಾರೆ. ಅಲ್ಲದೆ, ಬೆಂಗಳೂರಿನಲ್ಲಿ ‘ನಮ್ಮ ಮೆಟ್ರೊ’ ಮೂರನೇ ಹಂತ ಯೋಜನೆ ವಿಸ್ತರಣೆ ಕುರಿತಂತೆ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರ್ ಲಾಲ್ ಖಟ್ಟರ್ ಜೊತೆ ಶಿವಕುಮಾರ್ ಚರ್ಚೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಕೃಷ್ಣ ಬೈರೇಗೌಡ ಅವರು ಶಿವಕುಮಾರ್ ಜೊತೆ ಇರಲಿಲ್ಲ.

ಬಹರೇನ್, ಕುವೈತ್, ಜೋರ್ಡನ್ ಮೇಲೆ ಇರಾನ್ ದಾಳಿ: ಶಾಂತಿ ಸ್ಥಾಪನೆಗೆ ಹಿನ್ನಡೆ

ಇರಾನ್ ಮೇಲೆ ಅಮೆರಿಕ ವಾಯು ದಾಳಿ

ದುಬೈ(ಎಪಿ): ಅಮೆರಿಕ ಮತ್ತು ಇರಾನ್ ನಡುವೆ ಬುಧವಾರ ಮತ್ತೆ ಸಂಘರ್ಷ ಆರಂಭವಾಗಿದ್ದು, ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ಕುರಿತ ಪ್ರಯತ್ನಗಳಿಗೆ ಹಿನ್ನಡೆಯಾಗುವ ಆತಂಕ ಮನೆಮಾಡಿದೆ.

ತನ್ನ ಅಪಾಚೆ ಹೆಲಿಕಾಪ್ಟರ್ ಪತನಗೊಂಡಿದ್ದು, ಇದಕ್ಕೆ ಇರಾನ್ ನಡೆಸಿದ ದಾಳಿಯೇ ಕಾರಣ ಎಂದು ಅಮೆರಿಕ ದೂರಿದೆ. ಇರಾನ್‌ನ ಹಲವು ಪ್ರದೇಶಗಳ ಮೇಲೆ ವಾಯು ದಾಳಿ ನಡೆಸಿದೆ. ಇದಕ್ಕೆ ಪ್ರತೀಕಾರವಾಗಿ, ಬಹರೇನ್ ಮತ್ತು ಕುವೈತ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ. ಇರಾನ್ ಉಡ್ಡಯನ ಮಾಡಿದ್ದ ಐದು ಕ್ಷಿಪಣಿಗಳನ್ನು ಹೊಡೆದುರು-ಳಿಸಿದ್ದಾಗಿ ಜೋರ್ಡನ್ ಕೂಡ ಹೇಳಿಕೊಂಡಿದೆ.

ಜೋರ್ಡನ್‌ನ ಮುವಾಫಾಕ್ ಸಾಲ್ಟಿ ವಾಯು ನೆಲೆ ಗುರಿಯಾಗಿಸಿ ದಾಳಿ ನಡೆಸಿದ್ದಾಗಿ ಇರಾನ್ ಹೇಳಿದೆ. ಈ ವಾಯು ನೆಲೆಯಲ್ಲಿ ಅಮೆರಿಕದ ಎಫ್–35 ಯುದ್ಧ ವಿಮಾನಗಳಿವೆ.

ಸಂಘರ್ಷ ಮತ್ತೆ ಉಲ್ಬಣಗೊಂಡ ಬೆನ್ನಲ್ಲೇ, ಅಂತರರಾಷ್ಟ್ರೀಯ ಮಾರುಕಟ್ಟೆ-ಯಲ್ಲಿ ಬ್ರೆಂಟ್ ಕಚ್ಚಾ ತೈಲ ಬೆಲೆಯಲ್ಲೂ (ಪ್ರತಿ ಬ್ಯಾರೆಲ್‌ಗೆ 91 ಡಾಲರ್) ಏರಿಕೆ ಕಂಡುಬಂತು.

ದಾಳಿ: ‘ಇರಾನ್‌ನ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆ, ನಿಯಂತ್ರಣ ಕೇಂದ್ರಗಳು ಹಾಗೂ ರೇಡಾರ್‌ಗಳನ್ನು ಗುರಿಯಾಗಿಸಿ ವಾಯು ದಾಳಿ ನಡೆಸಲಾಗಿದೆ’ ಎಂದು ಅಮೆರಿಕ ಸೇನೆಯ ಸೆಂಟ್ರಲ್ ಕಮಾಂಡ್ ಹೇಳಿದೆ.

ಅಮೆರಿಕ ದಾಳಿ ನಡೆಸಿರುವುದನ್ನು ಇರಾನ್ ಖಚಿತಪಡಿಸಿದೆ. ಬಂದರ್ ಅಬ್ಬಾಸ್, ಕೆಶಮ್ ದ್ವೀಪ ಗುರಿಯಾಗಿಸಿ ಅಮೆರಿಕ ದಾಳಿ ನಡೆಸಿದೆ ಎಂದಿರುವ ಇರಾನ್, ಹಾನಿ ಕುರಿತು ಮಾಹಿತಿ ನೀಡಿಲ್ಲ.

ನಮ್ಮ ಮೇಲಿನ ದಾಳಿಗೆ ಪ್ರತ್ಯುತ್ತರ ಕೊಡದೇ ಇರುವುದಿಲ್ಲ. ನೀವು ಸುರಕ್ಷಿತವಾಗಿರಬೇಕು ಎಂದಾದಲ್ಲಿ ಈ ಪ್ರದೇಶ ತೊರೆಯಿರಿ

ಅಬ್ಬಾಸ್ ಅರಾಘ್ಚಿ, ಇರಾನ್ ವಿದೇಶಾಂಗ ಸಚಿವ

ಭಾರಿ ಬೆಲೆ ತೆರಬೇಕಾಗುತ್ತದೆ: ಟ್ರಂಪ್

ವಾಷಿಂಗ್ಟನ್(ಎಎಫ್‌ಪಿ): ‘ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವನ್ನು ಅಂತ್ಯಗೊಳಿಸುವ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲು ಇರಾನ್ ವಿಪರೀತ ವಿಳಂಬ ಮಾಡುತ್ತಿದೆ. ಇದಕ್ಕಾಗಿ ಈಗ ಅದು ಭಾರಿ ಬೆಲೆ ತೆರಬೇಕಾಗುತ್ತದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಗುಡುಗಿದ್ದಾರೆ.

ಈ ಕುರಿತು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ ‘ಟ್ರೂತ್ ಸೋಷಿಯಲ್’ನಲ್ಲಿ ಬರೆದುಕೊಂಡಿರುವ ಅವರು, ‘ಅಮೆರಿಕ ಪಡೆಗಳು ಇರಾನ್ ಅನ್ನು ಸಂಪೂರ್ಣ ಪರಾಭವಗೊಳಿಸಿವೆ’ ಎಂದಿದ್ದಾರೆ.

‘ಪಶ್ಚಿಮ ಏಷ್ಯಾಕ್ಕೆ ಎದುರಾಗಿದ್ದ ಬೆದರಿಕೆ ಸಂಪೂರ್ಣ ನಾಶವಾಗಿದೆ. ಶಾಂತಿ ಒಪ್ಪಂದ ಮಾಡಿಕೊಂಡಿದ್ದರೆ ಇರಾನ್‌ಗೆ ಹೆಚ್ಚು ಅನುಕೂಲ-ವಾಗುತ್ತಿತ್ತು. ಈಗ ಸಾಕಷ್ಟು ವಿಳಂಬವಾಗಿದೆ. ಇದಕ್ಕಾಗಿ ಅವರು ಬೆಲೆ ತೆರಲಿದ್ದಾರೆ’ ಎಂದು ಪೋಸ್ಟ್‌ನಲ್ಲಿ ಹೇಳಿದ್ದಾರೆ.

‘ಇರಾನ್ ಜೊತೆಗಿನ ಮಾತುಕತೆಯಲ್ಲಿ ಪ್ರಗತಿ ಕಂಡುಬರುತ್ತಿಲ್ಲ. ಇರಾನ್‌ನ ವಿದ್ಯುತ್ ಸ್ಥಾವರಗಳು ಹಾಗೂ ಸೇತುವೆಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗುವುದು’ ಎಂದಿದ್ದಾರೆ.

ಕಸ: ₹10,000 ಕೋಟಿ ಕಿಕ್ ಬ್ಯಾಕ್– ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಘನತ್ಯಾಜ್ಯ ವಿಲೇವಾರಿ ನಿರ್ವಹಣೆ ಟೆಂಡರ್ ಅನ್ನು ದೆಹಲಿ ಮೂಲದ ಎಂಎಸ್‌ಡಬ್ಲ್ಯು ಸೊಲ್ಯೂಶನ್ಸ್ ಲಿಮಿಟೆಡ್‌ಗೆ (ರಾಮ್‌ಕಿ ಕಂಪನಿ) ₹39,000 ಕೋಟಿಗೆ ನೀಡಿದ್ದು, ಕಾಂಗ್ರೆಸ್ ಸರ್ಕಾರ ₹10,000 ಕೋಟಿ ಕಿಕ್ ಬ್ಯಾಕ್ ಪಡೆದಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಆರೋಪಿಸಿದರು. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು ಬಳಿಕ ರಾಜ್ಯಪಾಲರು ಮತ್ತು ಲೋಕಾಯುಕ್ತಕ್ಕೆ ದೂರು ನೀಡಿ ತನಿಖೆಗೆ ಆಗ್ರಹಿಸಿದರು. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನೂ ಬಿಡುಗಡೆ ಮಾಡಿದರು. 3B

ಕಡತಗಳೊಂದಿಗೆ ಆರ್. ಅಶೋಕ್ ಹಾಗೂ ಛಲವಾದಿ ನಾರಾಯಣಸ್ವಾಮಿ

‘ಮಾಫಿಯಾಕ್ಕೆ ಅಶೋಕ ಏಜೆಂಟ್’

ನವದೆಹಲಿ: ‘ಬೆಂಗಳೂರು ಕಸ ಮಾಫಿಯಾ ಗ್ಯಾಂಗಿನ ಏಜೆಂಟರಾಗಿ ಆರ್.ಅಶೋಕ ಮಾತನಾಡುತ್ತಿದ್ದಾರೆ. ಈ ಮಾಫಿಯಾ ನಿಯಂತ್ರಿಸಬೇಕು ಎಂದು ನಾನು ಈ ಹಿಂದೆ ಅವರೊಂದಿಗೆ ಚರ್ಚೆ ಮಾಡಿದ್ದೆ. ಈಗ ಅಶೋಕ ಅವರು ಮಾಫಿಯಾದ ವಕ್ತಾರರಾಗಿರುವುದು ನನಗೆ ಆಶ್ಚರ್ಯವಾಗಿದೆ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು. 3B

‘ಸ್ಥಿರ ಸರ್ಕಾರದ ಮಹತ್ವ ಗೊತ್ತಾಗಿದೆ’

ನವದೆಹಲಿ (ಪಿಟಿಐ): ‘ದೇಶದ ಜನರು ರಾಜಕೀಯ ಸ್ಥಿರತೆಯ ಮತ್ತು ಸ್ಥಿರ ಸರ್ಕಾರದ ಮಹತ್ವವನ್ನು ಅರ್ಥಮಾಡಿಕೊಂಡಿದ್ದಾರೆ’ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

‘ವಿಕಸಿತ ಭಾರತದ ಕನಸು ಒಬ್ಬ ವ್ಯಕ್ತಿ ಅಥವಾ ಪಕ್ಷಕ್ಕೆ ಸೇರಿದ್ದಲ್ಲ. ಅದು ದೇಶದ ಪ್ರತಿ ಪ್ರಜೆಯ ಸಂಕಲ್ಪ’ ಎಂದು ಅವರು ಬಣ್ಣಿಸಿದರು.

ವಿವರ 7

ಭಾರತಿರಾಜ ಇನ್ನಿಲ್ಲ

ಚೆನ್ನೈ (ಪಿಟಿಐ): ತಮಿಳು ಚಿತ್ರರಂಗದ ಹೆಸರಾಂತ ನಿರ್ದೇಶಕ, ನಟ ಹಾಗೂ ಚಿತ್ರಕಥೆಗಾರ ಪಿ.ಭಾರತಿರಾಜ (84) ಅವರು ಇಲ್ಲಿನ ತಮ್ಮ ನಿವಾಸದಲ್ಲಿ ಬುಧವಾರ ನಿಧನರಾದರು. ತಮ್ಮ ಪ್ರಯೋಗಗಳ ಮೂಲಕ ತಮಿಳು ಚಿತ್ರರಂಗಕ್ಕೆ ಹೊಸತನದ ಮೆರುಗು ತಂದಿದ್ದ ಅವರನ್ನು ‘ಇಯಕ್ಕುನಾರ್ ಇಮಯಮ್’ (ನಿರ್ದೇಶಕರ ಮೇರು ಶಿಖರ) ಎಂದೇ ಕರೆಯಲಾಗುತ್ತಿತ್ತು.

ವಿವರ 7

ಚಿನಕುರುಳಿ ಪ್ರಕಾಶ್ ಶೆಟ್ಟಿ

JSS ACADEMY OF HIGHER EDUCATION & RESEARCH (DEEMED TO BE UNIVERSITY) MYSURU

NAAC A++ Accredited | nirf Among Top 25 University in India

ADMISSIONS OPEN 2026-27

APPLY @ www.jssuni.edu.in | admissions@jssuni.edu.in | +91 99808 41859 +91 821-2548014/416

B.Sc (Allied & Healthcare Education)
- Anesthesia & Operation Theatre Technology
- Medical Laboratory Technology
- Renal Dialysis Technology
- Respiratory Therapy
- Cardiac Care Technology
- Perfusion Technology
- Emergency Medicine Technology
- Optometry
- Physician Assistant

MA/ M.Sc (Medical / Allied & Healthcare Education)
- Medical Microbiology
- Medical Biochemistry
- Medical Physiology
- Medical Anatomy
- Medical Pharmacology
- Medical Genetics and Counseling
- Clinical Psychology
- Clinical Embryology
- Clinical Research
- Respiratory Therapy
- Forensic Odontology
- Echocardiography
- Health Technologies and Data Sciences
- Epidemiology (Spatial epidemiology)
- MA Clinical Psychology
- Prof. Diploma in Clinical Psychology

School of Public Health
- Bachelor of Public Health (BPH)
- Masters in Public Health (MPH)
- Masters in Public Health in Biostatistics

DENTISTRY
- Diploma in Dental Mechatronics
- Dental Operating Room Assistant (DORA)

HEALTH SYSTEM MANAGEMENT STUDIES
- BBA Hospital & Health System Management (Hon's)
- MBA Hospital Administration
- MBA (HR/Finance/Marketing)

LIFE SCIENCES
- Microbiology
- Environmental Sciences
- Food, Nutrition & Dietetics
- Psychology
- Biochemistry
- Statistics & Data Analytics
- Artificial Intelligence & Data Science (Ooty Campus-Tamilnadu)

M.Sc (2 Years)
- Biochemistry
- Geoinformatics
- Microbiology
- Cognitive Neuroscience
- Environmental Sciences
- Molecular Biology
- Nano Science & Technology
- Nutrition & Dietetics
- Medical Statistics
- Bioinformatics
- Medical Physics
- Cosmetic Science
- Biotechnology
- Sports, Nutrition & Management
- Master of Library and Information Science (M.Lib & Info. Sci.)
- Clinical Psychology (Ooty Campus-Tamilnadu)

M.Sc (NEP) -1 Year
- Psychology
- Nutrition and Dietetics
- Biochemistry
- Microbiology
- Biotechnology
- Environmental Sciences

Diploma
- Tissue Culture
- Nutraceutical Technology
- Environment Health & Safety Management
- Industrial Safety

YOGA
- B.Sc Yoga
- M.Sc Yoga
- Yoga Teachers Course (YTC) 3 Months

JSS ACADEMY OF HIGHER EDUCATION & RESEARCH
Sri Shivarathreeshwara Nagara, Bannimantap, Mysuru - 570015 Karnataka, India

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ ಇದೆ

‘ಮುಜರಾಯಿ ಖಾತೆ ಕೊಡದಿದ್ದರೆ ಹೋರಾಟ’

ಬೆಂಗಳೂರು: ರಾಮಲಿಂಗಾರೆಡ್ಡಿ ಅವರಿಗೆ ಒಂದು ತಿಂಗಳೊಳಗಾಗಿ ಮುಜರಾಯಿ ಖಾತೆ ನೀಡದಿದ್ದರೆ ಹೋರಾಟ ನಡೆಸುವುದಾಗಿ ರಾಜ್ಯ ಮುಜರಾಯಿ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ನೌಕರರ ಸಂಘ ಎಚ್ಚರಿಸಿದೆ.

‘ರಾಮಲಿಂಗಾರೆಡ್ಡಿ ಅವರು ಈ ಹಿಂದೆ ಮುಜರಾಯಿ ಖಾತೆ ವಹಿಸಿಕೊಂಡ ಬಳಿಕ ಹಲವು ಬದಲಾವಣೆಗಳು ಆಗಿವೆ. ಅವರಿಗೆ ಈ ಬಾರಿಯೂ ಆ ಇಲಾಖೆಯನ್ನೇ ನೀಡಬೇಕು’ ಎಂದು ಸಂಘದ ಅಧ್ಯಕ್ಷ ಶ್ರೀವತ್ಸ, ಸಂಘಟನಾ ಕಾರ್ಯದರ್ಶಿ ಮಂಜುನಾಥ್ ದೀಕ್ಷಿತ್ ಅವರು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

‘ಜುಲೈ 15ರಿಂದ ಆಗಸ್ಟ್ 15ರವರೆಗೆ ರಾಜ್ಯದ ಎಲ್ಲಾ ಮುಜರಾಯಿ ದೇವಸ್ಥಾನಗಳಲ್ಲಿ ಬೃಹತ್ ಸಮಾವೇಶ ನಡೆಸಿ, ರಾಮಲಿಂಗಾರೆಡ್ಡಿ ಅವರಿಗೆ ಅಭಿನಂದನೆ ಸಲ್ಲಿಸಲು ನಿರ್ಧರಿಸಲಾಗಿದೆ. ಡಿ.ಕೆ. ಶಿವಕುಮಾರ್ ಅವರನ್ನೂ ಸಮಾರಂಭಕ್ಕೆ ಆಹ್ವಾನಿಸಲಾಗುತ್ತದೆ. ಆ ವೇಳೆಯೊಳಗೆ ಮುಜರಾಯಿ ಖಾತೆಯನ್ನು ರಾಮಲಿಂಗಾರೆಡ್ಡಿ ಅವರಿಗೆ ವಹಿಸದಿದ್ದರೆ, ಅಭಿನಂದನಾ ಸಮಾರಂಭದ ಬದಲು ಹೋರಾಟ ನಡೆಸಬೇಕಾಗುತ್ತದೆ. ಅವರಿಗೆ ಖಾತೆ ನೀಡಲು ಅರ್ಚಕರ ಸಂಘದ ವತಿಯಿಂದ ವಿನೂತನ ರೀತಿಯಲ್ಲಿ ಮನವಿ ಮಾಡಲೂ ಸಂಘ ನಿರ್ಧರಿಸಿದೆ’ ಎಂದರು

ಮೋದಿ ನಾಯಕತ್ವ: ವಿಶೇಷ ಪೂಜೆ

ಪ್ರಧಾನಿಯಾಗಿ 4,399 ದಿನ ಪೂರ್ಣ ಬಿಜೆಪಿ ನಾಯಕರಿಂದ ಪ್ರಾರ್ಥನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 2014ರ ಮೇ ತಿಂಗಳಿನಲ್ಲಿ ಪ್ರಮಾಣ ವಚನ ಸ್ವೀಕಾರ
- ದಾಖಲೆ ಅವಧಿ

ಬೆಂಗಳೂರು: ಪ್ರಧಾನಿಯಾಗಿ ನರೇಂದ್ರಮೋದಿ ಅವರು 4,399 ದಿನಗಳನ್ನು ಪೂರ್ಣಗೊಳಿಸಿದ ಕಾರಣ ನಗರದ ವಿವಿಧ ದೇವಾಲಯಗಳಲ್ಲಿ ಬಿಜೆಪಿ ನಾಯಕರು ಬುಧವಾರ ಪೂಜೆ ಸಲ್ಲಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಪೂಜೆಯ ಬಳಿಕ ಮಾತನಾಡಿ, ‘ಹಲವು ಜಾಗತಿಕ ಸವಾಲುಗಳ ನಡುವೆಯೂ ಕೈಗಾರಿಕೆ, ಮೂಲಸೌಕರ್ಯ, ಕೃಷಿ, ಆರೋಗ್ಯ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ದೇಶವನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ಇದರಿಂದ ಭಾರತ ಜಗತ್ತಿನ ನಾಲ್ಕನೇ ಆರ್ಥಿಕ ಶಕ್ತಿಯಾಗಿ ಹೊರ ಹೊಮ್ಮಿದೆ. ಇದಕ್ಕೆ ಮೋದಿಯವರ ದಿಟ್ಟ ನಾಯಕತ್ವವೇ ಕಾರಣ’ ಎಂದರು.

2014ರ ಮೇ ತಿಂಗಳಿನಲ್ಲಿ ಮೊದಲ ಬಾರಿಗೆ ಪ್ರಮಾಣ ವಚನ ಸ್ವೀಕಾರ ಮಾಡಿ, ಸತತ ಮೂರನೇ ಬಾರಿಗೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. 4,399 ದಿನಗಳು ನಿರಂತರವಾಗಿ ಪ್ರಧಾನಿಯಾಗಿ, ದೇಶದ ‘ಪ್ರಧಾನ ಸೇವಕ’ ಎಂಬ ಭಾವನೆಯಿಂದ ಭಾರತವನ್ನು ಮುನ್ನಡೆಸುತ್ತಿದ್ದಾರೆ. ಇದೊಂದು ದಾಖಲೆ ಎಂದು ಅವರು ಹೇಳಿದರು.

ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಮಾತನಾಡಿ, ‘ಮೋದಿ ಅವರು ಮಾಡಿದ ಸೇವೆ ಐತಿಹಾಸಿಕ ದಾಖಲೆ. ದೇಶ ಸಮರ್ಥವಾಗಿ ಮುನ್ನಡೆ ಸಾಧಿಸಿದೆ. ರೈತರು, ಮಹಿಳೆಯರು ಸೇರಿ ಎಲ್ಲ ವರ್ಗದ ಜನರಿಗೆ ಇದರಿಂದ ಪ್ರಯೋಜನ ಲಭಿಸಿದೆ. ದೇಶದ ಅತ್ಯುತ್ತಮ ಜಿಡಿಪಿಯೇ ಇದಕ್ಕೆ ಉದಾಹರಣೆ’ ಎಂದು ಹೇಳಿದರು.

ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಬಿ.ವೈ.ವಿಜಯೇಂದ್ರ ಪೂಜೆ ಸಲ್ಲಿಸಿದರು. ರಾಜ್ಯ ಬಿಜೆಪಿ ಸಹ ಉಸ್ತುವಾರಿ ಸುಧಾಕರ್ ರೆಡ್ಡಿ, ಮಾಜಿ ಸಚಿವ ಮುರುಗೇಶ ನಿರಾಣಿ ಮತ್ತಿತರರು ಇದ್ದರು

‘ಭ್ರಷ್ಟಾಚಾರ ರಹಿತ ಆಡಳಿತ’

‘ಒಂದು ದಿನವೂ ವಿಶ್ರಾಂತಿ ಪಡೆಯದೇ ಭ್ರಷ್ಟಾಚಾರ ರಹಿತ ಆಡಳಿತವನ್ನು ನೀಡಿದ್ದಾರೆ. ಮೋದಿಯವರ ವಿಕಸಿತ ಭಾರತ, ಆತ್ಮನಿರ್ಭರ ಭಾರತದ ಕನಸು ಈಡೇರಲಿ. ಅವರಿಗೆ ಆರೋಗ್ಯ, ಆಯಸ್ಸು ಮತ್ತು ಹೆಚ್ಚು ಶಕ್ತಿ ಕೊಟ್ಟು, ಹೆಚ್ಚು ದಿನ ಪ್ರಧಾನಿಯಾಗಿ ಕೆಲಸ ಮಾಡುವ ಚೈತನ್ಯವನ್ನು ಭಗವಂತ ದಯಪಾಲಿಸಲಿ ಎಂದು ಪ್ರಾರ್ಥನೆ ಸಲ್ಲಿಸಿದೆವು ಎಂದು ಬಿ.ವೈ.ವಿಜಯೇಂದ್ರ ಹೇಳಿದರು.

ಸಂಕ್ಷಿಪ್ತ ಸುದ್ದಿ

ಕನ್ನಡ ಸಾಹಿತ್ಯದ ಹಲವು ಜಗತ್ತುಗಳು ಸಂವಾದ 14ರಂದು

ಬೆಂಗಳೂರು: ವಿಮರ್ಶಕ ಪ್ರೊ.ರಾಜೇಂದ್ರ ಚೆನ್ನಿ ಅವರ ಇಂಗ್ಲಿಷ್ ಕೃತಿ ‘ಅ ಕ್ರಿಟಿಕಲ್ ಹಿಸ್ಟರಿ ಆಫ್ ಕನ್ನಡ ಲಿಟರೇಚರ್’ ಕುರಿತ ಸಂವಾದ ಕಾರ್ಯಕ್ರಮವು ಜೂನ್ 14ರಂದು ಬೆಳಿಗ್ಗೆ 11.30ಕ್ಕೆ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

‘ಕನ್ನಡ ಸಾಹಿತ್ಯದ ಹಲವು ಜಗತ್ತುಗಳು; ಬದಲಿಸಲಾಗದ ಬಹುತ್ವ ಪಠ್ಯಗಳು ಮತ್ತು ಮಾರ್ಗಗಳು’ ಶೀರ್ಷಿಕೆ ಅಡಿಯಲ್ಲಿ ನಡೆಯುವ ಸಂವಾದದಲ್ಲಿ ಇಂಗ್ಲಿಷ್–ಮಲೆಯಾಳ ಬರಹಗಾರ ಇ.ವಿ.ರಾಮಕೃಷ್ಣನ್, ಅನುವಾದಕರಾದ ಪ್ರೊ.ವನಮಾಲಾ ವಿಶ್ವನಾಥ್ ಹಾಗೂ ಪ್ರೊ.ಎನ್.ಎಸ್.ಗುಂಡೂರ್ ಪಾಲ್ಗೊಳ್ಳಲಿದ್ದಾರೆ.

ಮೆಟ್ರೊ: ಉಚಿತ ಪಾಸ್ ನೀಡಲು ಆಗ್ರಹ

ಬೆಂಗಳೂರು: ನಮ್ಮ ಮೆಟ್ರೊದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಾಸ್‌ಗಳನ್ನು ನೀಡಬೇಕು ಎಂದು ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘ (ಬಿಎಂಸಿಎ) ಆಗ್ರಹಿಸಿದೆ.

ರಾಜೇಶ್ ಭಟ್

ಸಾಮಾಜಿಕ-ಆರ್ಥಿಕ ಹಿನ್ನೆಲೆ ಉತ್ತಮವಾಗಿಲ್ಲದ ವಿದ್ಯಾರ್ಥಿಗಳಿಗೆ ನಗರದಾದ್ಯಂತ ಇರುವ ಶಾಲೆ, ಕಾಲೇಜಿಗೆ ಸಮಯಕ್ಕೆ ಸರಿಯಾಗಿ ತಲುಪಲು ಉಚಿತ ಸಂಚಾರವು ಅನುವು ಮಾಡಿಕೊಡುತ್ತದೆ ಎಂದು ಸಂಘದ ಸಹ ಸಂಚಾಲಕ ರಾಜೇಶ್ ಭಟ್ ಬಿ. ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ನಮ್ಮ ಮೆಟ್ರೊ ಸುಲಭವಾಗಿ ಲಭ್ಯವಾಗುವಂತೆ ಮಾಡಿದರೆ, ಸಾರ್ವಜನಿಕ ಸಾರಿಗೆಯನ್ನು ತಮ್ಮ ಪ್ರಾಥಮಿಕ ಮತ್ತು ಆದ್ಯತೆಯ ಪ್ರಯಾಣದ ಮಾರ್ಗವಾಗಿ ನೋಡುವ ಪೀಳಿಗೆಯನ್ನು ಬೆಳೆಸಬಹುದು. ಸಾರ್ವಜನಿಕ ಸಾರಿಗೆಯಿಂದಾಗಿ ಪ್ರಯಾಣಿಕರ ಆರೋಗ್ಯ ಸುಧಾರಣೆ ಆಗಲಿದೆ ಎಂಬುದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸುಸ್ಥಿರ ಸಾರಿಗೆ ಪ್ರಯೋಗಾಲಯವು ಹಳದಿ ಮಾರ್ಗದಲ್ಲಿ ನಡೆಸಿದ ಅಧ್ಯಯನದಿಂದ ಗೊತ್ತಾಗಿದೆ. ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡುವ ಮೂಲಕ, ಕಲುಷಿತ ಗಾಳಿ ಮತ್ತು ವಾಹನ ದಟ್ಟಣೆಯ ಒತ್ತಡದಿಂದ ಅವರನ್ನು ರಕ್ಷಿಸಬಹುದು ಎಂದು ಸಲಹೆ ನೀಡಿದ್ದಾರೆ.

ಮೇಲುಕೋಟೆ ದೇಗುಲದಲ್ಲಿ ಚಿನ್ನಾಭರಣ ಕಳವು

ಮೇಲುಕೋಟೆ (ಮಂಡ್ಯ): ಐದು ತಿಂಗಳ ಹಿಂದೆಯೇ ಇಲ್ಲಿನ ಬೆಟ್ಟದ ಯೋಗಾನರಸಿಂಹ ದೇವಾಲಯದ ಹುಂಡಿಯಿಂದ ಚಿನ್ನಾಭರಣ ಮತ್ತು ನಗದು ನಾಪತ್ತೆಯಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗ ದೂರು ದಾಖಲಾಗಿದೆ.

ಪಾರುಪತ್ತೆಗಾರರು, ಅರ್ಚಕರು, ಪರಿಕಾರರು, ಕಾವಲುಗಾರರ ಸಮಕ್ಷಮದಲ್ಲೇ ದೇವಾಲಯ ಬಾಗಿಲು ಮುಚ್ಚಬೇಕು ಮತ್ತು ತೆರೆಯಬೇಕು. ಇದು ದೇವಸ್ಥಾನದಲ್ಲಿ ನಡೆದುಕೊಂಡು ಬಂದಿರುವ ನಿಯಮ. ಆದರೆ, ಇದೇ ಜನವರಿ 11ರಂದು ದೇವಾಲಯದಲ್ಲಿ ಮಧ್ಯಾಹ್ನ 3 ಗಂಟೆಗೆ ಬಾಗಿಲು ಮುಚ್ಚುವ ವೇಳೆ ಮತ್ತು ಬಾಗಿಲು ತೆಗೆಯುವ ವೇಳೆ ಕರ್ತವ್ಯಲೋಪ ಎಸಗಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ದೇವಸ್ಥಾನದ ಭದ್ರತಾ ಮಾಹಿತಿ ತಿಳಿದಿರುವ ದೇವಾಲಯದ ಸಿಬ್ಬಂದಿ ಈ ಕೃತ್ಯದಲ್ಲಿ ಶಾಮೀಲಾಗಿರುವ ಸಾಧ್ಯತೆ ಇದೆ ಎಂದು ದೂರಿನಲ್ಲಿ ಶಂಕೆ ವ್ಯಕ್ತಪಡಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ಸಂಖ್ಯೆ: ಬಿಡಿಎ/ಕಾಅ(ಪೂರ್ವ)/ಟೆಂಡರ್/290/2026–27 ದಿನಾಂಕ: 09.06.2026
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಜಿಓಕೆ ಕೆಪಿಪಿ ಪೋರ್ಟಲ್ http://kppp.karnataka.gov.in ಮೂಲಕ)
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು **ಆನೇಕಲ್ ತಾಲ್ಲೂಕು, ಬಿಡಿಎ ಯೋಜನಾ ಪ್ರದೇಶಗಳಲ್ಲಿ (ಪ್ಯಾಕೇಜ್–1) ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿಗಾಗಿ** ಎಲೆಕ್ಟ್ರಾನಿಕ್ ಟೆಂಡರಿಂಗ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಯ ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ): **ರೂ.2496.00 ಲಕ್ಷಗಳು.** ಇಎಂಡಿ: **ರೂ.25,00,000/– (ಇ–ಪಾವತಿ ಮೂಲಕ ರೂ.1,00,000/– ಮತ್ತು ಬ್ಯಾಂಕ್ ಗ್ಯಾರಂಟಿ ಮೂಲಕ ರೂ.24,00,000/–).** ಕಾಲಾವಧಿ: **09 ತಿಂಗಳು (ಮಳೆಗಾಲ ಸೇರಿದಂತೆ).** ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **25.06.2026, 16.00ಗಂಟೆವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **27.06.2026, 16.30 ಗಂಟೆಗೆ.**
ಹೆಚ್ಚಿನ ವಿವರಗಳಿಗೆ ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ ಸಂಪರ್ಕ ಸಂಖ್ಯೆ: +91 80 46010000, +91 80 68948777 ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸೆಲ್ ಸಂಪರ್ಕ ಸಂಖ್ಯೆ: 080–22230960, 080–22234115 ಸಂಪರ್ಕಿಸಿ.
ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪೂರ್ವ ವಿಭಾಗ, ಬಿಡಿಎ, ಬೆಂಗಳೂರು

ಭಾರತ ಸರ್ಕಾರ
ಸಿಬ್ಬಂದಿ ಹಾಗೂ ತರಬೇತಿ ಇಲಾಖೆ
ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿಗಳ ಸಚಿವಾಲಯ
ಸಿಬ್ಬಂದಿ ನೇಮಕಾತಿ ಆಯೋಗ (ಕರ್ನಾಟಕ–ಕೇರಳ ವಲಯ)
ಮೊದಲನೇ ಮಹಡಿ, ‘ಇ’ ವಿಂಗ್, ಕೇಂದ್ರಿಯ ಸದನ, ಕೋರಮಂಗಲ, ಬೆಂಗಳೂರು–560034
ಪರೀಕ್ಷಾ ಪ್ರಕಟಣೆ–ಸಂಯೋಜಿತ ಪದವಿ ಮಟ್ಟದ ಪರೀಕ್ಷೆ, 2026
ಭಾರತ ಸರ್ಕಾರದ ವಿವಿಧ ಸಚಿವಾಲಯಗಳ/ ಇಲಾಖೆಗಳ/ ಸಂಸ್ಥೆಗಳಲ್ಲಿನ ಹಾಗೂ ವಿವಿಧ ಸಂವಿಧಾನಾತ್ಮಕ ಅಂಗಗಳು/ ಶಾಸನಬದ್ಧ ಅಂಗಸಂಸ್ಥೆಗಳು/ ನ್ಯಾಯಾಧಿಕರಣಗಳು ಮುಂತಾದ ಕಡೆಗಳಲ್ಲಿನ ನಾನ್ ಗೆಜೆಟೆಡ್ ‘ಬಿ’ ವೃಂದ ಹಾಗೂ ‘ಸಿ’ ವೃಂದದ ಹುದ್ದೆಗಳಿಗಾಗಿ, ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ) ಇವರು ಮುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ಕೈಗೊಳ್ಳಲಿದ್ದಾರೆ.

ವೇತನ ಹಂತ	ವೇತನ ಹಂತ 4 ರಿಂದ 8 ರವರೆಗೆ (7ನೇ ಸಿಪಿಸಿ ಮೇರೆಗೆ) (ವಿವಿಧ ಹುದ್ದೆಗಳಿಗೆ) ವಿಭಿನ್ನವಾಗಿರುತ್ತದೆ.
ವಯೋಮಿತಿ	18 ರಿಂದ 32 ವರ್ಷ (ವಿವಿಧ ಹುದ್ದೆಗಳಿಗೆ) ವಿಭಿನ್ನವಾಗಿರುತ್ತದೆ.
ಖಾಲಿಹುದ್ದೆಗಳು	12,256
ಶುಲ್ಕ	ರೂ.100/– (ಮಹಿಳಾ/ಎಸ್‌ಸಿ/ಎಸ್‌ಟಿ/ ಇಎಸ್‌ಎಂ/ ಪಿಡಬ್ಲ್ಯುಬಿಡಿ ಅಭ್ಯರ್ಥಿಗಳಿಗೆ ವಿನಾಯಿತಿ)
ಅಗತ್ಯ ವಿದ್ಯಾರ್ಹತೆ	ಅಂಗೀಕೃತ ವಿಶ್ವವಿದ್ಯಾಲಯದಿಂದ ಬ್ಯಾಚುಲರ್ ಪದವಿ ಅಥವಾ ತತ್ಸಮಾನ. ವಿವಿಧ ಹುದ್ದೆಗಳ ವಿವರವಾದ ಇಕ್ಯೂ'ಗಾಗಿ, ಸಿಬ್ಬಂದಿ ನೇಮಕಾತಿ ಆಯೋಗದ ದಿನಾಂಕ 21.05.2026ರ ಪ್ರಕಟಣೆಯಲ್ಲಿನ ಪ್ಯಾರಾ 8 ಪರಿಶೀಲಿಸಿರಿ.
ಅರ್ಜಿ ದಿನಾಂಕಗಳು	21.05.2026 ರಿಂದ 22.06.2026 (23:00) ರವರೆಗೆ ಅರ್ಜಿ ಸಲ್ಲಿಸಬಹುದು.
ಅರ್ಜಿ ವಿಧಾನ	ಸಿಬ್ಬಂದಿ ನೇಮಕಾತಿ ಆಯೋಗದ ssc.gov.in ವೆಬ್‌ಸೈಟ್ ಮೂಲಕ ಅಥವಾ ಆಂಡ್ರಾಯ್ಡ್ ಫೋನ್‌ಗಳಲ್ಲಿನ ಎಸ್‌ಎಸ್‌ಸಿ ಆಪ್ ಮುಖಾಂತರ **ಆನ್‌ಲೈನ್ ವಿಧಾನದಲ್ಲಿ** ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ssc.gov.in ವೆಬ್‌ಸೈಟ್‌ನಲ್ಲಿ ದಿನಾಂಕ 21.05.2026 ರಂದು ಪ್ರಕಟಗೊಂಡಿರುವ ವಿವರವಾದ ಜಾಹೀರಾತು ಪರಿಶೀಲಿಸಿರಿ.
CBC 32203/11/0009/2627

ಪ್ರವೇಶಾತಿ ಪ್ರಕಟಣೆ
ಕೇರಳದ ತಿರುವನಂತಪುರಂನಲ್ಲಿರುವ ಭಾರತೀಯ ಕ್ರೀಡಾ ಪ್ರಾಧಿಕಾರದ ಲಕ್ಷ್ಮೀಬಾಯಿ ರಾಷ್ಟ್ರೀಯ ದೈಹಿಕ ಶಿಕ್ಷಣ ಮಹಾವಿದ್ಯಾಲಯ (ಎಸ್‌ಎಐ–ಎಲ್‌ಎನ್‌ಸಿಪಿಇ) ಎಂಬ ಸಂಸ್ಥೆಯು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನಗಳ ಕ್ಷೇತ್ರದಲ್ಲಿರುವ ಪ್ರಮುಖ ಸಂಸ್ಥೆಗಳಲ್ಲಿ ಒಂದಾಗಿದೆ. ಇದೀಗ, ಸದರಿ ಸಂಸ್ಥೆಯಲ್ಲಿ ಶೈಕ್ಷಣಿಕ ವರ್ಷ 2026–27ನೇ ಸಾಲಿನ 4 ವರ್ಷಗಳ ಇನ್ನೋವೇಟಿವ್ ಬಿಪಿಇಡಿ ಮತ್ತು ಎಂಪಿಇಎಸ್ ಕಾರ್ಯಕ್ರಮಗಳ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 20ನೇ ಮೇ 2026 ರಿಂದ 22ನೇ ಜೂನ್ 2026 ರಂದು ಸಂಜೆ 6.00 ಗಂಟೆವರೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
ಪರೀಕ್ಷಾ ಕೇಂದ್ರಗಳು: ಎಸ್‌ಎಐ–ಎಲ್‌ಎನ್‌ಸಿಪಿಇ, ತಿರುವನಂತಪುರಂ, ಎಲ್‌ಎನ್‌ಐಪಿಇ, ಗ್ವಾಲಿಯರ್ ಮತ್ತು ಎಲ್‌ಎನ್‌ಐಪಿಇ–ಎನ್‌ಇಆರ್‌ಸಿ, ಗುವಾಹಟಿ.
ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಭೇಟಿ ಕೊಡಿ: **www.lncpe.ac.in**
ದೂರವಾಣಿ ಸಂಖ್ಯೆ: 0471–2418712, 2412189.
(ಪ್ರಿನ್ಸಿಪಾಲ್)
CBC 47115/11/0001/2627 ಎಸ್‌ಎಐ–ಎಲ್‌ಎನ್‌ಸಿಪಿಇ

ಅಂತರರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರಗಳ ಪ್ರಾಧಿಕಾರ
IFSCA
2ನೇ ಮತ್ತು 3ನೇ ಮಹಡಿ, ಪ್ರಜ್ಞಾ ಟವರ್, ಜಿಐಎಫ್‌ಟಿ ಸಿಟಿ, ಗಾಂಧಿನಗರ, ಗುಜರಾತ್.
ಕಡತ ಸಂ. 73/ಐಎಫ್‌ಎಸ್‌ಸಿಎ/ಕನ್ಸಲ್ಟಂಟ್ಸ್/2020–21 ಜೂನ್ 04, 2026
ಖಾಲಿಹುದ್ದೆಗಳ ಅಧಿಸೂಚನೆ
ಭಾರತ ಸರ್ಕಾರದ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆ ಅಡಿಯಲ್ಲಿನ, ಶಾಸನಬದ್ಧ ಏಕೀಕೃತ ನಿಯಂತ್ರಣಾ ಅಂಗಸಂಸ್ಥೆ ಆಗಿರುವ, ಅಂತರರಾಷ್ಟ್ರೀಯ ಹಣಕಾಸು ಸೇವಾ ಪ್ರಾಧಿಕಾರ (ಐಎಫ್‌ಎಸ್‌ಸಿಎ) ಇವರು, ವಿವಿಧ ಯಂಗ್ ಪ್ರೊಫೆಷನಲ್, ಕನ್ಸಲ್ಟಂಟ್ ಗ್ರೇಡ್ II ಮತ್ತು ಸೀನಿಯರ್ ಕನ್ಸಲ್ಟಂಟ್ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇರೆಗೆ ಭರ್ತಿ ಮಾಡಿಕೊಳ್ಳಲು ಅರ್ಹ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಗುಜರಾತ್‌ನ ಗಾಂಧಿನಗರದಲ್ಲಿರುವ ಜಿಐಎಫ್‌ಟಿ ಸಿಟಿ ಎಂಬ ಸ್ಥಳದಲ್ಲಿ ನಿಯೋಜನೆ ಮಾಡಲಾಗುತ್ತದೆ.
2. ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು, ವಿವರವಾದ ಖಾಲಿಹುದ್ದೆಗಳ ಅಧಿಸೂಚನೆಯನ್ನು ಪರಿಶೀಲಿಸಲು **www.ifsca.gov.in/career** ವೆಬ್‌ಸೈಟ್‌ಗೆ ಭೇಟಿ ನೀಡಬೇಕೆಂದು ಕೋರಲಾಗಿದೆ. ಅಗತ್ಯ ದಾಖಲಾತಿಗಳನ್ನು ಹೊಂದಿರುವ ಅರ್ಜಿಯನ್ನು ಸ್ವೀಕರಿಸುವ ಕೊನೆಯ ದಿನಾಂಕ 30.06.2026 ರಂದು ಸಂಜೆ 6.00 ಗಂಟೆ.
ಮಹಾ ಪ್ರಬಂಧಕರು
CBC 15228/11/0001/2627 ಸಾಮಾನ್ಯ ಆಡಳಿತ ಇಲಾಖೆ

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ
ಶ್ರೀ ವೆಂಕಟರಮಣಸ್ವಾಮಿ ದೇವಾಲಯ, ಬಂಗಾರುತಿರುಪತಿ (ಗುಟ್ಟಹಳ್ಳಿ), ಕೆಜಿಎಫ್ ತಾಲ್ಲೂಕು.
ಕ್ರ.ಸಂ:ಶ್ರೀ.ವೆಂ.ದೇ.ಬಂ.ತಿ(ಗು).ಸಿಆರ್:04/2026–27 ದಿನಾಂಕ:06/06/2026
ಇ–ಟೆಂಡರ್ ಪ್ರಕಟಣೆ
ಕೋಲಾರ ಜಿಲ್ಲೆ, ಕೆಜಿಎಫ್ ತಾಲ್ಲೂಕು, ಬಂಗಾರು ತಿರುಪತಿ (ಗುಟ್ಟಹಳ್ಳಿ), ಶ್ರೀ ವೆಂಕಟರಮಣಸ್ವಾಮಿ ದೇವಾಲಯದ 2026–27ನೇ ಸಾಲಿನ ಒಂದು ವರ್ಷದ ಅವಧಿಗೆ (ಶ್ರಾವಣ ಮಾಸದಿಂದ ಆಷಾಢ ಮಾಸದವರೆಗೆ) ಮುಡಿ ಕೂದಲು ಸಂಗ್ರಹಣೆ ಹಕ್ಕನ್ನು ಟೆಂಡರ್ ಕಂ ಇ–ಹರಾಜು ಮೂಲಕ ವಿಲೆ ಮಾಡಲಾಗಿದ್ದು, ಇಷ್ಟ ಉಳ್ಳವರು ಸದರಿ ಹರಾಜಿನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕಂ ಇ–ಹರಾಜಿನಲ್ಲಿ ಭಾಗವಹಿಸಿ ಹಕ್ಕನ್ನು ಪಡೆಯಬಹುದು.

Tender Schedule:	
Tender Reference No	HRICE/2026-27/SE0584
Last Date & Time for tender Queries/ clarifications	21/06/2026 up to 14.00hr
Last Date & Time for receipt of tenders	22/06/2026 up to 14.00 hr
Date & Time for Opening of Financial Bids	23/06/2026 up to 14.10
Auction Schedule:	
Auction Reference No	HRICE/2026-27/AUCTION281
Last Date and Time For Submit The Query	19/06/2026 up to 14.00hr
Date and Time to confirm participation of interest in Auction	20/06/2026 up to 12.00 hr
Start Date And Time Of Evalution	22/06/2026 up to 10.30hr
Live Auction Start & End Date	23/06/2026 up to 10.00 To 14.10 hr

ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ವೆಂಕಟರಮಣ ಸ್ವಾಮಿ ದೇವಾಲಯ
ಬಂಗಾರುತಿರುಪತಿ. ಕೆಜಿಎಫ್ ತಾಲ್ಲೂಕು.

ಜಾಹೀರಾತು ಸಂ. 04/2026
ಕೇಂದ್ರಿಯ ಸಂಸ್ಕೃತ ವಿಶ್ವವಿದ್ಯಾಲಯ
(ಸಂಸತ್ ಕಾಯ್ದೆ ಅಡಿಯಲ್ಲಿ ಸ್ಥಾಪಿತ)
56–57, ಇನ್‌ಸ್ಟಿಟ್ಯೂಷನಲ್ ಏರಿಯಾ, ಜನಕಪುರಿ, ನವದೆಹಲಿ–110058
ವೆಬ್‌ಸೈಟ್: www.sanskrit.nic.in
A++ NAAC
ನೇಮಕಾತಿ ಅಧಿಸೂಚನೆ
ಕೇಂದ್ರಿಯ ಸಂಸ್ಕೃತ ವಿಶ್ವವಿದ್ಯಾಲಯ, ದೆಹಲಿ ಇವರು ತಮ್ಮ **ವೇದವ್ಯಾಸ ಕ್ಯಾಂಪಸ್**, ಬಲಹರ್, ಹಿಮಾಚಲ ಪ್ರದೇಶ, **ಶ್ರೀ ರಘುನಾಥ ಕೀರ್ತಿ ಕ್ಯಾಂಪಸ್**, ದೇವಪ್ರಯಾಗ್, ಉತ್ತರಾಖಂಡ್ ಮತ್ತು **ಏಕಲವ್ಯ ಕ್ಯಾಂಪಸ್**, ಅಗರ್ತಲ, ತ್ರಿಪುರ ಎಂಬ **ಮೂರು ಕ್ಯಾಂಪಸ್‌ಗಳಲ್ಲಿನ ವಿವಿಧ ಬೋಧಕ/ಇನ್ನಿತರ ಅಕಾಡೆಮಿಕ್ ಹುದ್ದೆಗಳ [ಅಸೋಸಿಯೇಟ್ ಪ್ರೊಫೆಸರ್–23, ಅಸಿಸ್ಟಂಟ್ ಪ್ರೊಫೆಸರ್–63 ಮತ್ತು ಇನ್ನಿತರ ಅಕಾಡೆಮಿಕ್ ಹುದ್ದೆಗಳು–04]** ನೇರ ನೇಮಕಾತಿಗಾಗಿ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಅರ್ಹತಾ ಮಾನದಂಡ, ವಿದ್ಯಾರ್ಹತೆ, ನೇಮಕಾತಿ ಪ್ರಕ್ರಿಯೆ, ಖಾಲಿಹುದ್ದೆಗಳ ವಿಂಗಡಣೆ, ಮೀಸಲಾತಿಗಳು, ಅರ್ಜಿ ಪ್ರಕ್ರಿಯೆ, **ಯುಜಿಸಿ ನಿಯಮಾವಳಿಗಳ ಮೇರೆಗಿನ ಆಯ್ಕೆ ಮಾನದಂಡ ಸೇರಿದಂತೆ ಆಯ್ಕೆ ಪ್ರಕ್ರಿಯೆ ಮತ್ತು ವೈಟೇಜ್ ಕ್ರೈಟೀರಿಯಾ, ಮೌಲ್ಯಮಾಪನ ಮಾನದಂಡ, ಸಂದರ್ಶನ** ವಿವರಗಳೂ ಒಳಗೊಂಡಂತೆ, ಇನ್ನಿತರೆ ಅಗತ್ಯ ಅವಶ್ಯಕತೆಗಳ ವಿವರಗಳು, ಕೇಂದ್ರಿಯ ಸಂಸ್ಕೃತ ವಿಶ್ವವಿದ್ಯಾಲಯದ **www.sanskrit.nic.in** ವೆಬ್‌ಸೈಟ್‌ನಲ್ಲಿನ ರಿಕ್ರೂಟ್ಮೆಂಟ್/ನೋಟಿಫಿಕೇಶನ್ ಶೀರ್ಷಿಕೆ ಅಡಿಯಲ್ಲಿ, 10.06.2026 ರಿಂದ ಲಭ್ಯವಾಗುವ, ವಿವರವಾದ ಜಾಹೀರಾತು ಸಂ. 04/2026 ರಲ್ಲಿ ಲಭ್ಯವಿರುತ್ತವೆ. **ಆಸಕ್ತಿಯುಳ್ಳ ಎಲ್ಲಾ ಅಭ್ಯರ್ಥಿಗಳು, ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವುದಕ್ಕೂ ಮುಂಚೆಯೇ ವಿವರವಾದ ಜಾಹೀರಾತನ್ನು ಸಮಗ್ರವಾಗಿ ಪರಿಶೀಲಿಸಿಕೊಳ್ಳಬೇಕೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಕ 10.07.2026.**
ದಿನಾಂಕ: 10.06.2026 CBC 21212/11/0005/2627 ಸಹಿ/– ಪ್ರಭಾರಿ ರಿಜಿಸ್ಟ್ರಾರ್

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
ಜಿಲ್ಲಾ ಅಧಿಕಾರಿಗಳ ಕಚೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
ಜಿಲ್ಲಾಡಳಿತ ಭವನ, #ಎಸ್.ಬಿ4, 2ನೇ ಮಹಡಿ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ. ದೂರವಾಣಿ: 08156–277053
Email: dobcmchikkaballapura@gmail.com
ಸಂಖ್ಯೆ:ಹಿಂವಕಇ/ಚಿಪುರ/ಸಿಬ್ಬಂದಿ/ಸಿಆರ್–53/2025–26 ದಿನಾಂಕ:06.06.2026
: : ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (2ನೇ ಕರೆ) : :
2026–27ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ, ತಾಲ್ಲೂಕು ಕಚೇರಿ, ವಿದ್ಯಾರ್ಥಿನಿಲಯಗಳಲ್ಲಿ ಮತ್ತು ವಸತಿ ಶಾಲೆ/ಕಾಲೇಜುಗಳಲ್ಲಿ ಖಾಲಿ ಇರುವ ಗ್ರೂಪ್ ‘ಸಿ’ ಮತ್ತು ‘ಡಿ’ ಹುದ್ದೆಗಳನ್ನು ತಾತ್ಕಾಲಿಕವಾಗಿ ಹೊರಸಂಪನ್ಮೂಲದಿಂದ ಪಡೆಯಲು ನೊಂದಾಯಿತ ಅರ್ಹ ಏಜೆನ್ಸಿ/ಸಂಸ್ಥೆಗಳ ಮುಖಾಂತರ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ (E-Procurement) ಮೂಲಕ ಅಲ್ಪಾವಧಿ ಮರು ಟೆಂಡರ್ (2ನೇ ಕರೆ) ಆಹ್ವಾನಿಸಲಾಗಿದೆ. **ವಿವರ:** (1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 22.06.2026 ಸಂಜೆ 05.00 ಗಂಟೆಗೆ.** (2) ಪೂರ್ವಭಾವಿ ಸಭೆ (Pre Bid) **ದಿನಾಂಕ: 11.063.2026 ಬೆಳಗ್ಗೆ 11.00 ಗಂಟೆಗೆ.** ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಚಿಕ್ಕಬಳ್ಳಾಪುರ ಜಿಲ್ಲೆ. (3) ತಾಂತ್ರಿಕ ಟೆಂಡರನ್ನು ತೆರೆಯುವ **ದಿನಾಂಕ: 23.06.2026 ಸಂಜೆ 05.30 ಗಂಟೆಗೆ.** (4) ಆರ್ಥಿಕ ಟೆಂಡರನ್ನು ತೆರೆಯುವ **ದಿನಾಂಕ: 02.07.2026 ಬೆಳಗ್ಗೆ 10.30 ಗಂಟೆಗೆ.** ಅರ್ಹ ಟೆಂಡರ್‌ದಾರರು ಟೆಂಡರನ್ನು kppPortal ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವೈಬ್‌ಸೈಟ್ **https://kppp.karnataka.gov.in/** ನಲ್ಲಿ ನೋಡುವುದು (ದೂ. ಸಂ:+91–8046010000, +91–8068948777) ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾಡಳಿತ ಭವನ, #ಎಸ್‌ಬಿ–4, 2ನೇ ಮಹಡಿ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಪಡೆಯಬಹುದಾಗಿದೆ. (ಕಚೇರಿ ದೂ.ಸಂ–08156–277053)
ಸಹಿ/– ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:98/ಕೆಎಸ್‌ಎಂಸಿಎ/2026–27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಸಂಖ್ಯೆ: ಮು.ಪ್ರ.ವ್ಯ(ತಾ)/ಉ.ಪ್ರ.ವ್ಯ(ಎಪಿಸಿಸಿ & ಪ್ರೊ)/ಕಾನಿಇಂ–ಪ್ರೊ 2/ಸ.ಇಂ–4/2026–27/1459–1477 ದಿನಾಂಕ: 10.06.2026
ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ, ಶೇಕಡಾವಾರು ದರ (Percentage Rate)** ಆಧಾರಿತವಾಗಿ **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು ಪೂರೈಕೆ ಮತ್ತು ಸ್ಥಾಪನೆ (ಕಳಚಿಹಾಕುವಿಕೆ ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು ಸೇರಿದಂತೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:
ವಿಚಾರಣಾ ಸಂಖ್ಯೆಗಳು ಮತ್ತು ಕಾಮಗಾರಿಗಳ ವಿವರ
ಕವಿಪ್ರನಿನಿ/2026–27/ಎಸ್‌ಎಸ್/ವರ್ಕ್_ಇಂಡೆಂಟ್3816
ಕಾಮಗಾರಿ–ಎ: ಬೆಂಗಳೂರು ನಗರ ಜಿಲ್ಲೆಯ ದಕ್ಷಿಣ ತಾಲ್ಲೂಕಿನಲ್ಲಿರುವ **66/11kV ಎಲೆಕ್ಟ್ರಾನಿಕ್ ಸಿಟಿ ಹಂತ–2, ಸೆಕ್ಟರ್–2 (ಮಾಲ್ಗುಡಿ)** ಉಪ–ಕೇಂದ್ರದಲ್ಲಿ 2x20MVA, 66/11kV ವಿದ್ಯುತ್ ಪರಿವರ್ತಕಗಳನ್ನು **2x31.5 MVA, 66/11kV** ವಿದ್ಯುತ್ ಪರಿವರ್ತಕಗಳಿಂದ ಹೆಚ್ಚಿಸುವ ಕಾಮಗಾರಿ.
ಕಾಮಗಾರಿ–ಬಿ: ಬೆಂಗಳೂರು ನಗರ ಜಿಲ್ಲೆಯ ಪೂರ್ವ ತಾಲ್ಲೂಕಿನಲ್ಲಿರುವ **66/11 kV ಪ್ರೆಸ್ಟೀಜ್ ಶಾಂತಿನಿಕೇತನ** ಉಪ–ಕೇಂದ್ರದಲ್ಲಿ ಹೆಚ್ಚುವರಿ **1x31.5MVA, 66/11kV** ವಿದ್ಯುತ್ ಪರಿವರ್ತಕಗಳನ್ನು ಒದಗಿಸುವ ಕಾಮಗಾರಿ.
ಕಾಮಗಾರಿ–ಸಿ: ಬೆಂಗಳೂರು ನಗರ ಜಿಲ್ಲೆಯ, ಆನೇಕಲ್ ತಾಲ್ಲೂಕಿನ **66/11kV ಅರೆಹಳ್ಳಿ** ಉಪ–ಕೇಂದ್ರದಲ್ಲಿ **2x20MVA, 66/11kV** ವಿದ್ಯುತ್ ಪರಿವರ್ತಕಗಳನ್ನು **2x31.5MVA, 66/11kV** ವಿದ್ಯುತ್ ಪರಿವರ್ತಕಗಳಿಂದ ಹೆಚ್ಚಿಸುವ ಕಾಮಗಾರಿ.
ಕವಿಪ್ರನಿನಿ/2026–27/ಎಸ್‌ಎಸ್/ವರ್ಕ್_ಇಂಡೆಂಟ್3836
ಕಾಮಗಾರಿ–ಎ: ಬೆಂಗಳೂರು ನಗರ ಜಿಲ್ಲೆಯ ದಕ್ಷಿಣ ತಾಲ್ಲೂಕಿನಲ್ಲಿರುವ **ಬನ್ನೇರುಘಟ್ಟ ರಸ್ತೆ** ಉಪ–ಕೇಂದ್ರದಲ್ಲಿ **2x20 ಎಂವಿಎ,** 66/11 ಕೆವಿ ವಿದ್ಯುತ್ ಪರಿವರ್ತಕಗಳನ್ನು **2x31.5 ಎಂವಿಎ, 66/11ಕೆವಿ** ವಿದ್ಯುತ್ ಪರಿವರ್ತಕಗಳಿಂದ ಹೆಚ್ಚಿಸುವ ಕಾಮಗಾರಿ.
ಕಾಮಗಾರಿ–ಬಿ: ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿರುವ 66/11 ಕೆವಿ **ಜಿಗಣಿ ಹಳೆಯ** ಉಪ–ಕೇಂದ್ರದಲ್ಲಿ **2x20 ಎಂವಿಎ,** 66/11 ಕೆವಿ ವಿದ್ಯುತ್ ಪರಿವರ್ತಕಗಳನ್ನು **2x31.5 ಎಂವಿಎ, 66/11 ಕೆವಿ** ವಿದ್ಯುತ್ ಪರಿವರ್ತಕಗಳಿಂದ ಹೆಚ್ಚಿಸುವ ಕಾಮಗಾರಿ.
ಕಾಮಗಾರಿ–ಸಿ: ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ 66/11ಕೆವಿ **ಚೊಕ್ಕಸಂದ್ರ** ಉಪ ಕೇಂದ್ರದಲ್ಲಿ ಅಸ್ತಿತ್ವದಲ್ಲಿರುವ **2x12.5ಎಂವಿಎ,** 66/11 ಕೆವಿ ವಿದ್ಯುತ್ ಪರಿವರ್ತಕಗಳನ್ನು **2x31.5ಎಂವಿಎ, 66/11kV** ವಿದ್ಯುತ್ ಪರಿವರ್ತಕಗಳಿಂದ ಹೆಚ್ಚಿಸುವ ಕಾಮಗಾರಿ.
ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್: **https://kptcl.karnataka.gov.in** ನ ಹೈಪರ್‌ಲಿಂಕ್ ‘ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ’ ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ **12.06.2026 ರಂದು 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. **ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.
ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕವಿಪ್ರನಿನಿ, ನಿಗಮ ಕಚೇರಿ, 11ನೇ ಮಹಡಿ, ಇಂಧನ ಭವನ, ಆನಂದರಾವ್ ವೃತ್ತ, ಬೆಂಗಳೂರು–560 009.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ
ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ರಸ್ತೆ, ದೊಡ್ಡಬಳ್ಳಾಪುರ – 561203, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ: 080–29799416
ಇ–ಮೇಲ್: apmc.dbpur@gmail.com
ಸಂಖ್ಯೆ: ಕೃಉಮಾಸ/ದೊ/32–33/2026–27 ದಿನಾಂಕ: 10–06–2026
ಟೆಂಡರ್–ಕಂ–ಬಹಿರಂಗ ಹರಾಜು ಪ್ರಕಟಣೆ
ದೊಡ್ಡಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಉಪಹಾರ ಗೃಹ: 01 ಮತ್ತು 02 ಹಾಗೂ ಗೌರಿಬಿದನೂರು ರಸ್ತೆಗೆ ಅಭಿಮುಖವಾಗಿರುವ 06 ಸಂಖ್ಯೆ ಸಣ್ಣ ವಾಣಿಜ್ಯ ಮಳಿಗೆಗಳ ಪೈಕಿ ಮಳಿಗೆ ಸಂಖ್ಯೆ. GR/06 ನ್ನು ಪರಿಶಿಷ್ಟ ಜಾತಿಗೆ ಮೀಸಲಿಡಲಾಗಿದ್ದು, ಅದನ್ನು ಟೆಂಡರ್–ಕಂ–ಬಹಿರಂಗ ಹರಾಜಿನ ಮೂಲಕ ಮಾಹೆಯಾನ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ 55 ತಿಂಗಳ ಅವಧಿಗೆ 11 ತಿಂಗಳಿಗೊಮ್ಮೆ ನವೀಕರಿಸುವ ಹಾಗೂ 33 ತಿಂಗಳಿಗೊಮ್ಮೆ ಪ್ರತಿಶತ ಶೇ. 5% ರಷ್ಟು ಲೀವ್ ಅಂಡ್ ಲೈಸೆನ್ಸ್ ಶುಲ್ಕವನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ) ನಿಯಮಗಳು 2004 ರ 14 ರನ್ವಯ ಹಂಚಿಕೆ ಮಾಡಲು ಉದ್ದೇಶಿದ್ದು, ಸಮಿತಿಯು ನಿಗಧಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಹಂಚಿಕೆ ಮಾಡುತ್ತಿರುವ ಕಟ್ಟಡದ ವಿವರ	ಮಾಹೆಯಾನ ಲೀವ್ ಅಂಡ್ ಲೈಸೆನ್ಸ್ ಶುಲ್ಕ (ರೂ.ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಹಂಚಿಕೆ ವಿಧಾನ
1	ಉಪಹಾರ ಗೃಹ ಸಂಖ್ಯೆ: 01	16,549.00 (ಜಿ.ಎಸ್.ಟಿ ಹೊರತುಪಡಿಸಿ)	500.00 (ಜಿ.ಎಸ್.ಟಿ ಹೊರತುಪಡಿಸಿ)	33,098.00	ಟೆಂಡರ್–ಕಂ–ಬಹಿರಂಗ ಹರಾಜು
2	ಉಪಹಾರ ಗೃಹ ಸಂಖ್ಯೆ: 02	16,549.00 (ಜಿ.ಎಸ್.ಟಿ ಹೊರತುಪಡಿಸಿ)	500.00 (ಜಿ.ಎಸ್.ಟಿ ಹೊರತುಪಡಿಸಿ)	33,098.00	
3	ಸಣ್ಣ ವಾಣಿಜ್ಯ ಮಳಿಗೆ ಸಂಖ್ಯೆ: GR/06 (ಪರಿಶಿಷ್ಟ ಜಾತಿಗೆ ಮೀಸಲು)	4,142.00 (ಜಿ.ಎಸ್.ಟಿ ಹೊರತುಪಡಿಸಿ)	500.00 (ಜಿ.ಎಸ್.ಟಿ ಹೊರತುಪಡಿಸಿ)	8,284.00	ಟೆಂಡರ್–ಕಂ–ಬಹಿರಂಗ ಹರಾಜು

ಷರತ್ತು ಮತ್ತು ನಿಬಂಧನೆಗಳು: 1) ಮೇಲ್ಕಾಣಿಸಿದ ಉಪಹಾರ ಗೃಹಗಳಿಗೆ ಮತ್ತು ಸಣ್ಣ ವಾಣಿಜ್ಯ ಮಳಿಗೆಗೆ ಅರ್ಜಿ ಸಲ್ಲಿಸುವವರು **ರೂ. 500.00 (ಜಿ.ಎಸ್.ಟಿ. ಹೊರತುಪಡಿಸಿ) ಗಳನ್ನು (ಹಿಂತಿರುಗಿಸಲಾಗದ ಹಣ)** ಪಾವತಿಸಿ ದಿನಾಂಕ: **12–06–2026** ರಿಂದ **13–07–2026 ರಂದು ಸಂಜೆ 5.30 ಗಂಟೆಯವರೆಗೆ** ಟೆಂಡರ್ ಅರ್ಜಿ ಫಾರಂಗಳನ್ನು ಮತ್ತು ವಿವರಗಳನ್ನು ಸಮಿತಿಯಲ್ಲಿ ಪಡೆಯತಕ್ಕದ್ದು. 2) ಭರ್ತಿ ಮಾಡಿದ ಟೆಂಡರ್ ಫಾರ್ಮ್‌ನೊಂದಿಗೆ **ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ** ಇವರ ಹೆಸರಿಗೆ ಪಡೆದ ಇ.ಎಂ.ಡಿ ಮೊತ್ತದ ಡಿ.ಡಿ., ಆಧಾರ್ ಕಾರ್ಡ್, ಪಾನ್ ಕಾರ್ಡ್, ಇತ್ತೀಚಿನ 01 ಭಾವಚಿತ್ರವನ್ನು ಹಾಗೂ ಮುಚ್ಚಳಿಕೆ ಪತ್ರವನ್ನು ಮುಚ್ಚಿದ ಲಕೋಟೆಯೊಂದಿಗೆ ಲಗತ್ತಿಸಿ ಹಾಕುವುದು. 3) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಮುಚ್ಚಿದ ಲಕೋಟೆಯಲ್ಲಿ ದಿನಾಂಕ: **20–07–2026 ರಂದು ಮಧ್ಯಾಹ್ನ 1.00 ಗಂಟೆಯೊಳಗೆ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಹಾಕತಕ್ಕದ್ದು.** ನಂತರ ಬಂದ ಟೆಂಡರ್ ಫಾರಂಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್‌ನಲ್ಲಿ ಭಾಗವಹಿಸಿದ ಟೆಂಡರ್‌ದಾರರಿಗೆ ಮಾತ್ರ **ಅಂದೇ ಮಧ್ಯಾಹ್ನ 2.30 ರ ನಂತರ ಬಹಿರಂಗ ಹರಾಜು ನಡೆಸಲಾಗುವುದು.** 4) ಉಪಹಾರ ಗೃಹಗಳ ಮತ್ತು ಸಣ್ಣ ವಾಣಿಜ್ಯ ಮಳಿಗೆಗೆ ಅರ್ಜಿ ಸಲ್ಲಿಸುವ ಸಂಬಂಧ ಷರತ್ತು ಮತ್ತು ನಿಬಂಧನೆಗಳು ಬೇರೆ–ಬೇರೆಯಾಗಿದ್ದು ಕಛೇರಿಗೆ ಬಂದು ವಿವರಗಳ ಪ್ರತಿಯನ್ನು ಪಡೆದುಕೊಂಡು ನಂತರ ಅರ್ಜಿ ಸಲ್ಲಿಸುವುದು. 5) ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕಛೇರಿಗೆ ಬಂದು ಪಡೆಯಬಹುದಾಗಿದೆ ಅಥವಾ ಸಮಿತಿಯ ದೂರವಾಣಿ ಸಂಖ್ಯೆ. **080–29799416** ಗೆ ಕರೆ ಮಾಡುವ ಮೂಲಕ ಅಥವಾ ಇ–ಮೇಲ್: **apmc.dbpur@gmail.com** ಮೂಲಕ ಪಡೆಯಬಹುದಾಗಿದೆ.
ಸಹಿ/– ಕಾರ್ಯದರ್ಶಿ, ಕೃಉಮಾಸ, ದೊಡ್ಡಬಳ್ಳಾಪುರ | ಸಹಿ/– ಆಡಳಿತಾಧಿಕಾರಿಗಳು, ಕೃಉಮಾಸ, ದೊಡ್ಡಬಳ್ಳಾಪುರ
ವಾಸಾಸಂಇ/ವಾ.ಪ್ರ/1095/ಅಡ್ವರ್ಟೋರ್/2026–27

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
CENTUM
(CIN): L85110KA1993PLC013869
ನೋಂದಾಯಿತ ಕಚೇರಿ: ನಂ.44, ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು 560 064. ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ-ಮೇಲ್: investors@centumelectronics.com
ವೆಬ್‌ಸೈಟ್: www.centumelectronics.com
ಕಂಪನಿಯ ಇಕ್ವಿಟಿ ಷೇರುದಾರರಿಗೆ ಸೂಚನೆ:
ಇಕ್ವಿಟಿ ಷೇರುಗಳನ್ನು ಷೇರುದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ (IEPF) ವರ್ಗಾಯಿಸುವ ಕುರಿತು
ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 124ರ ನಿಯಮಗಳನ್ನು ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ (ಅಕೌಂಟಿಂಗ್, ಆಡಿಟ್, ಟ್ರಾನ್ಸ್‌ಫರ್ & ರಿಫಂಡ್) ನಿಯಮಗಳು, 2016 ರೊಂದಿಗೆ ಮತ್ತು ಅದಕ್ಕೆ ಮಾಡಲಾದ ತಿದ್ದುಪಡಿಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳನುಸಾರ, ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ (ಐಇಪಿಎಫ್) ಇವರಲ್ಲಿ ಕ್ಲೇಮ್ ಆಗದಿರುವ ಡಿವಿಡೆಂಡ್‌ಗೆ ಸಂಬಂಧಿತ ಕಂಪನಿಯ ಇಕ್ವಿಟಿ ಷೇರುಗಳ ವರ್ಗಾವಣೆ ಕುರಿತು ಇಕ್ವಿಟಿ ಷೇರುದಾರರಿಗೆ ಈ ಮಾಹಿತಿ.
ಕಂಪನಿಗಳ ಕಾಯ್ದೆ, 2013ರ ನಿಯಮಗಳು ಮತ್ತು ಮೇಲೆ ತಿಳಿಸಲಾಗಿರುವ ನಿಯಮಾವಳಿಗಳ ಪ್ರಕಾರ, ನಿರಂತರವಾಗಿ ಏಳು ವರ್ಷಗಳಿಂದ ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳಿಂದ ಡಿವಿಡಂಡ್ ಕ್ಲೇಮ್ ಆಗದಿರುವ ಎಲ್ಲಾ ಷೇರುಗಳನ್ನು ಐಇಪಿಎಫ್ ಪ್ರಾಧಿಕಾರದ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆ ಮಾಡಬೇಕಾಗುತ್ತದೆ. ಕಂಪನಿಯು ತನ್ನ ಹಣಕಾಸು ವರ್ಷ 2018-19ನೇ ಸಾಲಿಗೆ ಘೋಷಿಸಿರುವ ಅಂತಿಮ ಡಿವಿಡೆಂಡ್‌ಗೆ ಸಂಬಂಧಿಸಿದಂತೆ, ಕಾಯ್ದೆ ಮತ್ತು ಐಇಪಿಎಫ್ ನಿಯಮಾವಳಿಗಳ ಪ್ರಕಾರ ಡಿವಿಡೆಂಡ್ ಹಾಗೂ ತತ್ಸಂಬಂಧಿತ ಷೇರುಗಳ ವರ್ಗಾವಣೆಗೆ ಅಂತಿಮ ದಿನಾಂಕ 19ನೇ ಸೆಪ್ಟೆಂಬರ್, 2026 ಆಗಿರುತ್ತದೆ.
ಡಿವಿಡೆಂಡ್‌ನ ಕ್ಲೇಮ್‌ಗಾಗಿ ಸೂಕ್ತ ಕ್ರಮ ಕೈಗೊಳ್ಳಲೆಂದು, ಯಾರ ಷೇರುಗಳ ವರ್ಗಾವಣೆಗೊಳ್ಳುವ ಸಾಧ್ಯತೆ ಇದೆಯೊ ಅಂತಹ ಷೇರುದಾರರಿಗೆ ಕಂಪನಿಯು ವೈಯಕ್ತಿಕವಾಗಿ ಮಾಹಿತಿ ರವಾನಿಸಿದೆ. ಕಂಪನಿಯು ಇಂತಹ ಷೇರುದಾರರ ಸಂಪೂರ್ಣ ವಿವರವನ್ನು ತನ್ನ ವೆಬ್‌ಸೈಟ್ https://www.centumelectronics.com/unclaimed-dividends/ ನಲ್ಲಿ ಕೂಡ ಪ್ರಕಟಿಸಿರುತ್ತದೆ.
ನಿರಂತರವಾಗಿ 7 ವರ್ಷಗಳ ಅವಧಿಗೆ ಕ್ಲೇಮ್ ಆಗದಿರುವ ಡಿವಿಡಂಡ್‌ಗೆ ಸಂಬಂಧಿತ ಷೇರುಗಳು:
- ಡಿಮ್ಯಾಟ್ ರೂಪದ ಷೇರುಗಳಾಗಿದ್ದಲ್ಲಿ, ಅಂತಹವುಗಳನ್ನು ನೇರವಾಗಿ ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಇವರೊಂದಿಗೆ ನಿರ್ವಹಿಸಲಾಗುತ್ತಿರುವ ಐಇಪಿಎಫ್ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆ ಮಾಡಲಾಗುತ್ತದೆ.
- ಭೌತಿಕ ರೂಪದ ಷೇರುಗಳು ಯಾವುದಾದರೂ ಇದ್ದಲ್ಲಿ, ಅಂತಹ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸಲು ಮೂಲ ಷೇರು ಪ್ರಮಾಣಪತ್ರಗಳು ರದ್ದುಗೊಳಿಸುವ ಜೊತೆಗೆ ಹೊಸ ಫೋಲಿಯೊ ಮತ್ತು ಪ್ರಮಾಣಪತ್ರ ಸಂಖ್ಯೆಗಳನ್ನು ನೀಡಲಾಗುತ್ತದೆ. ಸದರಿ ಷೇರುಗಳನ್ನು ಡಿಮ್ಯಾಟ್ ರೂಪದಲ್ಲಿ ಮಾರ್ಪಡಿಸಲು ಮತ್ತು ಐಇಪಿಎಫ್ ಪರವಾಗಿ ವರ್ಗಾಯಿಸಲು ವ್ಯವಹಾರಿಕ ಕ್ರಮ ಕೈಗೊಳ್ಳುವ ಮೂಲಕ ಕಂಪನಿಯು ಎನ್‌ಎಸ್‌ಡಿಎಲ್ ಇವರಿಗೆ ಮಾಹಿತಿ ನೀಡಬಹುದಾಗಿರುತ್ತದೆ.

ಒಂದು ವೇಳೆ ಸಂಬಂಧಿತ ಷೇರುದಾರರಿಂದ ಕಂಪನಿಗೆ 10ನೇ ಸೆಪ್ಟೆಂಬರ್, 2026 ರೊಳಗೆ ಯಾವುದೇ ರೀತಿಯ ಪ್ರತಿಕ್ರಿಯೆ ಲಭಿಸದಿದ್ದಲ್ಲಿ, ಐಇಪಿಎಫ್ ನಿಯಮಗಳ ಪ್ರಕಾರ ಕಂಪನಿಯಿಂದ ಅಂತಹ ಕ್ಲೇಮ್ ಆಗದಿರುವ ಡಿವಿಡೆಂಡ್ ಅನ್ನು ನಿಗದಿತ ದಿನಾಂಕದಂದು ಅಥವಾ ಮೊದಲು ವರ್ಗಾವಣೆ ಮಾಡಲಾಗುತ್ತದೆ. ಅನುಕ್ರಮವಾದ ಷೇರುಗಳನ್ನು ಕೂಡ ಷೇರುದಾರರಿಗೆ ಯಾವುದೇ ಮುನ್ಸೂಚನೆ ನೀಡದೆ ವರ್ಗಾವಣೆ ಮಾಡಲಾಗುತ್ತದೆ.
ಮೇಲೆ ತಿಳಿಸಿರುವಂತೆ, ಕಂಪನಿಯಿಂದ ಒಂದು ಬಾರಿ ಡಿವಿಡಂಡ್ ಮತ್ತು ಇಕ್ವಿಟಿ ಷೇರುಗಳನ್ನು ವರ್ಗಾವಣೆ ಮಾಡಿದ ನಂತರ, ಷೇರುದಾರರು ತಮ್ಮ ಕ್ಲೇಮ್ ಆಗದಿರುವ ಡಿವಿಡೆಂಡ್ ಅನ್ನು ಮತ್ತು ಇಕ್ವಿಟಿ ಷೇರುಗಳನ್ನು ಐಇಪಿಎಫ್ ನಿಯಮಾವಳಿಗಳ ಪ್ರಕಾರ ಐಇಪಿಎಫ್ ಪ್ರಾಧಿಕಾರದಿಂದ ಮಾತ್ರ ಕ್ಲೇಮ್ ಮಾಡಿಕೊಳ್ಳಬಹುದಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಂಪನಿಗೆ ಪ್ರತಿಯಾಗಿ ಯಾವುದೇ ಕ್ಲೇಮ್ ಮಾಡಲು ಅವಕಾಶವಿರುವುದಿಲ್ಲ ಎಂಬುದು ದಯವಿಟ್ಟು ಗಮನದಲ್ಲಿರಲಿ.
ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಷೇರುದಾರರಿಗೆ ಯಾವುದೇ ವಿಚಾರಣೆಗಳಿದ್ದಲ್ಲಿ, ನಮ್ಮ ರೆಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ಸ್ ಕೇಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಇವರನ್ನು ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಬೇಕೆಂದು ಕೋರಲಾಗಿದೆ:
ಘಟಕ: ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
ಸೆಲೆನಿಯಮ್ ಟವರ್ ಬಿ, ಪ್ಲಾಟ್ ಸಂಖ್ಯೆ 31 ಮತ್ತು 32,
ಫೈನ್ಯಾನ್‌ಶಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗುಡ,
ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ - 500 032,
ಫೋನ್ ಸಂಖ್ಯೆ: 040 6716 2222, ಇಮೇಲ್: einward.ris@kfintech.com
ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಇಂದು ಎಚ್ ಎಸ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಾಯೆನ್ಸ್ ಆಫೀಸರ್
ಸದಸ್ಯತ್ವ ಸಂಖ್ಯೆ: F12285
ಬೆಂಗಳೂರು
10ನೇ ಜೂನ್, 2026

ಚಟಿಕೆ ಸುದ್ದಿ

ರಾಜ್ಯಮಟ್ಟದ ಟಗರು ಕಾಳಗ 13ರಂದು

ಚನ್ನರಾಯಪಟ್ಟಣ (ಹಾಸನ): ಅತಿ ಹೆಚ್ಚು ದಿನ ರಾಜ್ಯದ ಮುಖ್ಯಮಂತ್ರಿ ಆಗಿ ಸಿದ್ದರಾಮಯ್ಯ ಅಧಿಕಾರ ಪೂರೈಸಿದ ಅಂಗವಾಗಿ ಜೂನ್ 13ರಂದು ಪಟ್ಟಣದ ಮಾಧ್ಯಮಿಕ ಶಾಲಾ ಆವರಣದಲ್ಲಿ ರಾಜ್ಯಮಟ್ಟದ ಟಗರು ಕಾಳಗ ಟೂರ್ನಿ ಏರ್ಪಡಿಸಲಾಗಿದೆ ಎಂದು ರಾಷ್ಟ್ರೀಯ ಅಹಿಂದ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಮಹೇಶ್ ಕಬ್ಬಾಳು ತಿಳಿಸಿದರು.

ಮೈಸೂರು ವಿಭಾಗದಲ್ಲಿ ಇದೇ ಪ್ರಥಮ ಬಾರಿಗೆ ಟಗರು ಕಾಳಗ ಏರ್ಪಡಿಸಲಾಗುತ್ತಿದೆ. ಶಿವಮೊಗ್ಗ, ದಾವಣಗೆರೆ, ಹೊನ್ನಾಳಿ, ಹುಬ್ಬಳಿ, ಹರಿಹರ, ಹಾಸನ, ಮೈಸೂರು, ಅರಸೀಕೆರೆ, ಕಡೂರು, ಚನ್ನಗಿರಿ, ಚಿತ್ರದುರ್ಗ ಸೇರಿ ಹಲವು ಜಿಲ್ಲೆಗಳಿಂದ ಅಂದಾಜು 250-300 ಟಗರುಗಳು ಭಾಗವಹಿಸಲಿವೆ. ಟೂರ್ನಿ ಮೂರು ಹಂತದಲ್ಲಿ ನಡೆಯಲಿದ್ದು, ಎರಡು ಹಲ್ಲು, ನಾಲ್ಕು ಹಾಗೂ ಎಂಟು ಹಲ್ಲುಗಳ ಟಗರುಗಳು ಭಾಗವಹಿಸಲಿವೆ. ಮೂರು ವಿಭಾಗಕ್ಕೆ ಪ್ರತ್ಯೇಕವಾಗಿ ಟ್ರೋಫಿ, ನಗದು ಬಹುಮಾನ ನೀಡಲಾಗುವುದು ಎಂದು ಬುಧವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಲೋಕಾಯುಕ್ತ ಬಲೆಗೆ ಎಎಸ್‌ಐ

ಮಂಡ್ಯ: ಆರೋಪಿಯೊಬ್ಬನನ್ನು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲು ₹10 ಸಾವಿರ ಲಂಚ ಪಡೆಯುತ್ತಿದ್ದ ಮಳವಳ್ಳಿ ಗ್ರಾಮಾಂತರ ಠಾಣೆ ಸಹಾಯಕ ಸಬ್‌ಇನ್‌ಸ್ಪೆಕ್ಟರ್ (ಎಎಸ್‌ಐ) ಶಿವಕುಮಾರ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಜಮೀನು ವ್ಯಾಜ್ಯದಲ್ಲಿ ಮಳವಳ್ಳಿ ತಾಲ್ಲೂಕಿನ ಗಟ್ಟಿಕೊಪ್ಪಲು ಗ್ರಾಮದ ರಾಜೇಗೌಡ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಠಾಣಾ ಜಾಮೀನು ಮಂಜೂರು ಮಾಡಲು ಎಎಸ್‌ಐ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಬುಧವಾರ ರಾತ್ರಿ ಪೊಲೀಸ್ ಠಾಣೆಯಲ್ಲೇ ಲಂಚ ಪಡೆಯುವ ವೇಳೆ ಶಿವಕುಮಾರ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದರು.

ಸಾಂಸ್ಕೃತಿಕ ಮುನ್ನೋಟ

ಕಲಾ ಪ್ರದರ್ಶನ

ಬೆಂಗಳೂರು: ಸಂಸ್ಕಾರ ಭಾರತೀ ಕರ್ನಾಟಕ, ದಕ್ಷಿಣ ಪ್ರಾಂತವು 'ಸ್ವಾಭಿಮಾನ ಭಾರತ' ಸಂವಿಧಾನ–75 ಕಲಾ ಪ್ರದರ್ಶನವನ್ನು ಜೂನ್ 12ರಂದು ಬೆಳಿಗ್ಗೆ 10.30ಕ್ಕೆ ಬಸವನಗುಡಿಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಹಮ್ಮಿಕೊಂಡಿದೆ.

ದೃಶ್ಯ ಕಲಾವಿದ ಎಸ್.ಜಿ. ವಾಸುದೇವ ಉದ್ಘಾಟಿಸುವರು. ಸಂಸ್ಕಾರ ಭಾರತೀ ಅಖಿಲ ಭಾರತ ಅಧ್ಯಕ್ಷ ಮೈಸೂರು ಮಂಜುನಾಥ, ಕೇಂದ್ರ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಚಿ.ಸು. ಕೃಷ್ಣ ಸೆಟ್ಟಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಂಸ್ಕಾರ ಭಾರತೀ ಪ್ರಾಂತಾಧ್ಯಕ್ಷ ಕ. ಸುಚೇಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸುವರು.

ಮಾಹಿತಿಗಾಗಿ ದೃಶ್ಯಕಲಾ ವಿಭಾಗದ ಸಂಯೋಜಕ ಗಣಪತಿ ಎಸ್. ಹೆಗಡೆ (99800 75463) ಸಂಪರ್ಕಿಸಬಹುದು.


ಎಸ್.ಜಿ. ವಾಸುದೇವ


ಚಿ.ಸು. ಕೃಷ್ಣ ಸೆಟ್ಟಿ

ವಿಫುಲ ರೂಪ ಧಾರಿಣಿ ಪ್ರದರ್ಶನ

ಬೆಂಗಳೂರು: ಜಿ.ಎಸ್.ಎಸ್. ಅವರ ಆಯ್ದ ಕವನಗಳ ಕಾವ್ಯಾಭಿನಯ 'ವಿಫುಲ ರೂಪ ಧಾರಿಣಿ' ಜೂನ್ 12ರಂದು ಸಂಜೆ 6.30ಕ್ಕೆ ಬಸವನಗುಡಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಪ್ರದರ್ಶನಗೊಳ್ಳಲಿದೆ.

ಶ್ರೀಪಾದ್ ಭಟ್ ಮತ್ತು ಸಾಸ್ವೇಹಳ್ಳಿ ಸತೀಶ್ ನಿರ್ದೇಶನದಲ್ಲಿ 'ಹೊಂಗಿರಣ' ಶಿವಮೊಗ್ಗ ತಂಡ ಅಭಿನಯಿಸಲಿದೆ.

ವಿಫುಲ ರೂಪ ಧಾರಿಣಿ

'ಸಿಂಡ್ರೆಲಾ' ಪ್ರದರ್ಶನ

ಬೆಂಗಳೂರು: ಬೆಂಗಳೂರು ಪ್ರಭಾತ ಕಲಾವಿದರಿಂದ 'ಸಿಂಡ್ರೆಲಾ' ನೃತ್ಯ ನಾಟಕ ಪ್ರದರ್ಶನವು ಜೂನ್ 13ರಂದು ರಾತ್ರಿ 7ಕ್ಕೆ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನಗೊಳ್ಳಲಿದೆ.

ಮಾಹಿತಿಗೆ: 94482 00676/ 94485 74370 ಸಂಪರ್ಕಿಸಬಹುದು ಎಂದು ಪ್ರಭಾತ್ ಕಲಾವಿದರು ನಿರ್ದೇಶಕ ಹರೀಶ್ ಪ್ರಭಾತ್ ತಿಳಿಸಿದ್ದಾರೆ.

ಸಿಂಡ್ರೆಲಾ ನಾಟಕದ ದೃಶ್ಯ

'ಅಂಗಾರ' ಪ್ರದರ್ಶನ

ಬೆಂಗಳೂರು: ಉಡುಪಿಯ ಪುನಃ ಥಿಯೇಟರ್‌ನ ಅಭಿನವ್ ಗ್ರೋವರ್ ನಿರ್ದೇಶನದ, ಉಷಾ ಕಟ್ಟೆಮನೆ ರಚಿಸಿದ 'ಅಂಗಾರ' ನಾಟಕವು ಜೂನ್ 12ರಂದು ರಾತ್ರಿ 7.30ಕ್ಕೆ ಕೋಣನಕುಂಟೆ ಅಂಜನಾದ್ರಿ ಬಡಾವಣೆಯ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾಮಿಂಗ್ ಆರ್ಟ್ಸ್‌ನಲ್ಲಿ ಪ್ರದರ್ಶನಗೊಳ್ಳಲಿದೆ.

ಚಿಗುರು, ಕುಸುಮಾಲೆ– ಗಿರೀಶ ಕಾರ್ನಾಡ ಕನ್ನಡ ನಾಟಕ ರಚನಾ ಫೆಲೊಶಿಪ್ ಸಹಯೋಗದಲ್ಲಿ ಸಮಾಗತ ಫೌಂಡೇಷನ್ ಭಾಷಾ ಕೇಂದ್ರ ನಾಟಕೋತ್ಸವವನ್ನು ಹಮ್ಮಿಕೊಂಡಿದೆ.

ಮಾರುತೇಶ ಕಸಾಪುರ ರಚಿಸಿದ, ಸವಿತಾ ಬೈರಪ್ಪ ನಿರ್ದೇಶನದ 'ಸರಗು' ನಾಟಕವು ಇದೇ ನಾಟಕೋತ್ಸವದಲ್ಲಿ ಜೂನ್ 13ರಂದು ಪ್ರದರ್ಶನಗೊಳ್ಳಲಿದೆ. ಭೀಮಣ್ಣ ಹಟ್ಟಿಕುಣಿ ರಚಿಸಿದ ರಾಘವೇಂದ್ರ ಜೆ. ನಿರ್ದೇಶನದ 'ಬಣ್ಣ' ನಾಟಕವು ಜೂನ್ 14ರಂದು ಪ್ರದರ್ಶನಗೊಳ್ಳಲಿದೆ.

ರಂಗಶಂಕರದಲ್ಲಿ ನಾಟಕಗಳು

ಬೆಂಗಳೂರು: ರಂಗಶಂಕರದಲ್ಲಿ ಜೂನ್ 12ರಿಂದ 18ರವರೆಗೆ ವಿವಿಧ ನಾಟಕಗಳು ಪ್ರದರ್ಶನಗೊಳ್ಳಲಿವೆ.

ವಾರದ ದಿನಗಳಲ್ಲಿ ಪ್ರತಿದಿನ ರಾತ್ರಿ 7.30ಕ್ಕೆ, ಭಾನುವಾರ ಬೆಳಿಗ್ಗೆ 11, ಮಧ್ಯಾಹ್ನ 3.30 ಹಾಗೂ ರಾತ್ರಿ 7.30ಕ್ಕೆ ಪ್ರದರ್ಶನಗಳು ಇರಲಿವೆ.

ಜೂನ್ 12ರಂದು 'ಜಾಜಿ', 13ರಂದು 'ಸಿಲಪ್ರತಿಕಾರಂ', 14ರಂದು 'ಚಿಪ್ಪಿದ ಚಿಪ್ಕಲಿ', 'ವೆನ್ ದಿ ರಿವರ್ ಸ್ಪೋಕ್', 'ತಿಲ', 16ರಂದು 'ಮಾಯಾದೀಪ', 17ರಂದು 'ದ್ರೌಪತಿ ಹೇಳ್ತವ್ಳೆ', 18ರಂದು 'ಬ್ಯಾಗ್ ಡ್ಯಾನ್ಸಿಂಗ್' ನಾಟಕಗಳು ಪ್ರದರ್ಶನಗೊಳ್ಳಲಿವೆ.

ಯುವ ಸಂಗೀತೋತ್ಸವ

ಬೆಂಗಳೂರು: ಬೆಂಗಳೂರು ಗಾಯನ ಸಮಾಜದಿಂದ ಯುವ ಸಂಗೀತೋತ್ಸವ ನಡೆಯುತ್ತಿದ್ದು, ಜೂನ್ 14ಕ್ಕೆ ಕೊನೆಗೊಳ್ಳಲಿದೆ. ಪ್ರತಿದಿನ ಸಂಜೆ 5.15ಕ್ಕೆ ಮತ್ತು 7ಕ್ಕೆ ಸಂಗೀತ ಕಛೇರಿಗಳು ನಡೆಯಲಿವೆ.

ಎರಡು ನಾಟಕ ಪ್ರದರ್ಶನ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡದಿಂದ ಜೂನ್ 13 ಮತ್ತು 14ರಂದು ಎರಡು ನಾಟಕಗಳು ಪ್ರದರ್ಶನಗೊಳ್ಳಲಿವೆ.

ಎಚ್. ಡುಂಡಿರಾಜ್ ರಚನೆಯ, ಅಶೋಕ್ ಬಿ. ನಿರ್ದೇಶನದ 'ಪುಕ್ಸಟೆ ಸಲಹೆ' ನಾಟಕವು ಜೂನ್ 13ರಂದು ಸಂಜೆ 7ಕ್ಕೆ ಮಲ್ಲೇಶ್ವರದ 14ನೇ ಅಡ್ಡರಸ್ತೆಯಲ್ಲಿರುವ ಸೇವಾ ಸದನದಲ್ಲಿ ಪ್ರದರ್ಶನಗೊಳ್ಳಲಿದೆ. ರಾಜೇಂದ್ರ ಕಾರಂತ ರಚಿಸಿರುವ, ಅಶೋಕ್ ಬಿ. ನಿರ್ದೇಶನದ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕವು ಜೂನ್ 14ರಂದು ಸಂಜೆ 5 ಮತ್ತು 7ಕ್ಕೆ ಬಸವನಗುಡಿ ಎನ್.ಆರ್. ಕಾಲೊನಿಯ ಅಶ್ವಥ್ ಕಲಾ ಭವನದಲ್ಲಿ ಪ್ರದರ್ಶನಗೊಳ್ಳಲಿದೆ.

ಮಾಹಿತಿಗೆ: 99459 77184, 99168 63637

'ಅಡವಿ' ಪ್ರದರ್ಶನ

ಬೆಂಗಳೂರು: 'ಪಯಣ' ನಾಟಕ ತಂಡದಿಂದ 'ಅಡವಿ' ನಾಟಕವು 'ದಮ್ರು' ಶಂಕರಾ ಫೌಂಡೇಷನ್‌ನಲ್ಲಿ ಜೂನ್ 14ರಂದು ಸಂಜೆ 7.15ಕ್ಕೆ ಪ್ರದರ್ಶನಗೊಳ್ಳಲಿದೆ.

ಅರುಣ್ ಸೂರ್ಯ ಅವರ ಕಥೆ, ಪರಿಕಲ್ಪನೆ ಮತ್ತು ನಿರ್ದೇಶನ ಇರಲಿದ್ದು, ಸಾಹಿತ್ಯ ಮತ್ತು ಸಂಗೀತವನ್ನು ಕರ್ಣ, ಮಯೂರ ನೀಡಿದ್ದಾರೆ. ಟಿಕೆಟ್‌ಗೆ ಬುಕ್‌ಮೈ ಶೋ ಸಂಪರ್ಕಿಸಬಹುದು.

ಮಾಹಿತಿಗೆ: 63633 33506

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ–ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಫಿಫಾ ವಿಶ್ವ ಕಪ್ 2026 ಮೆಕ್ಸಿಕೋ, ಕೆನಡಾ ಮತ್ತು ಯು ಎಸ್ ಎ ದೇಶಗಳಲ್ಲಿ ಆರಂಭವಾಗಿದೆ!

'ಗ್ರಾಮೀಣ ಶಾಲೆಗಳ ನಿರ್ಲಕ್ಷ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2,500 ಐ.ಟಿ ಶಿಕ್ಷಕರ ನೇಮಕಾತಿಯನ್ನು ಕೆಪಿಎಸ್ ಶಾಲೆಗಳಿಗಷ್ಟೇ ಮೀಸಲಿಟ್ಟಿರುವುದು ಖಂಡನೀಯ' ಎಂದು ಎಐಡಿಎಸ್‌ಒ ಹೇಳಿದೆ.

'ಇತ್ತೀಚೆಗೆ ನೇಮಕವಾದ 11,000 ಅತಿಥಿ ಶಿಕ್ಷಕರ ಹುದ್ದೆ ಹಾಗೂ ಶಿಕ್ಷಕರ ವರ್ಗಾವಣೆಯಲ್ಲೂ ಕೆಪಿಎಸ್ ಶಾಲೆಗಳಿಗೆ ಆದ್ಯತೆ ನೀಡಲಾಗಿದೆ. ಇದರಿಂದ ಗ್ರಾಮೀಣ ಬಡ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಸರ್ಕಾರಿ ಶಾಲೆಗಳು ಕಡೆಗಣನೆಗೆ ಒಳಗಾಗಿವೆ' ಎಂದು ಎಐಡಿಎಸ್‌ಒ ಕರ್ನಾಟಕ ರಾಜ್ಯ ಸಮಿತಿ ಆಕ್ಷೇಪಿಸಿದೆ.

ಐಟಿ ಶಿಕ್ಷಕರ ನೇಮಕ ಕೆಪಿಎಸ್‌ಗೆ ಸೀಮಿತ

'ನೇರವಾಗಿ ಶಾಲೆಗಳನ್ನು ಮುಚ್ಚದೇ, ನೇಮಕಾತಿ ಸೇರಿ ಎಲ್ಲ ಸೌಕರ್ಯಗಳನ್ನು ಕೆಪಿಎಸ್ ಶಾಲೆಗಳಿಗೇ ನೀಡುವುದು, ಹಳ್ಳಿಯ ಶಾಲೆಗಳನ್ನು ಹಂತಹಂತವಾಗಿ ಮುಚ್ಚುವ ಹುನ್ನಾರ' ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಆರೋಪಿಸಿದ್ದಾರೆ.

'ರಾಜ್ಯದಲ್ಲಿ 7 ಸಾವಿರ ಏಕೋಪಾಧ್ಯಾಯ ಶಾಲೆಗಳಿವೆ. ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳು ಶಿಕ್ಷಕರ ಕೊರತೆ ಎದುರಿಸುತ್ತಿದ್ದು, ಈ ಶಾಲೆಗಳಿಗೆ ತಕ್ಷಣ ಶಿಕ್ಷಕರನ್ನು ನೇಮಕ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

'ಕೆಪಿಎಸ್‌ಗೆ ಗ್ರಾಮೀಣ ಶಾಲೆಗಳ ವಿಲೀನ ವಿರೋಧಿಸಿ ಎಐಡಿಎಸ್‌ಒ ಹಾಗೂ ಸಾರ್ವಜನಿಕ ಶಿಕ್ಷಣ ಸಮಿತಿ ರಾಜ್ಯದಾದ್ಯಂತ ಹೋರಾಟ ನಡೆಸುತ್ತಿದ್ದು, 'ನಮ್ಮೂರ ಶಾಲೆ ಉಳಿಸಿ' ಆಂದೋಲನವನ್ನು ತೀವ್ರಗೊಳಿಸಲಾಗುವುದು' ಎಂದಿದ್ದಾರೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

SBI
ಭಾರತೀಯ ಸ್ಟೇಟ್ ಬ್ಯಾಂಕ್
ಆಡಳಿತ ಕಚೇರಿ– 01, ಬೆಂಗಳೂರು ದಕ್ಷಿಣ, 1ನೇ ಮಹಡಿ, ಮೈಸೂರು ಬ್ಯಾಂಕ್ ವೃತ್ತ, ಕೆಜಿ ರಸ್ತೆ, ಬೆಂಗಳೂರು– 560009

ಗುತ್ತಿಗೆ/ಬಾಡಿಗೆ ಆಧಾರದ ಮೇಲೆ ಕಟ್ಟಡ ಆವರಣ ಬೇಕಾಗಿದೆ

ಭಾರತೀಯ ಸ್ಟೇಟ್ ಬ್ಯಾಂಕ್, ಪರವಾಗಿ ಉಪ ಮಹಾ ವ್ಯವಸ್ಥಾಪಕರು (ಬಿ ಆಂಡ್ ಓ) ಆ.ಕ–1, ಬೆಂಗಳೂರು ದಕ್ಷಿಣ, ಇವರು, ಎಸ್‌ಬಿಐ ನೆಕ್ಸ್ಟ್ (ನ್ಯೂ ಎರಾ ಎಕ್ಸ್‌ಪೀರಿಯನ್ಸ್ ಟೆಕ್) ಶಾಖೆಗೆ ವೈಟ್‌ಫೀಲ್ಡ್, ಕೋರಮಂಗಲ ಮತ್ತು ಹೆಚ್‌ಎಸ್‌ಆರ್ ಲೇಔಟ್–ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಮುಖ್ಯ ರಸ್ತೆಯಲ್ಲಿ ನೆಲ ಮಹಡಿಯಲ್ಲಿ ಮಾನ್ಯವಾದ ಸುಮಾರು 446 ಚದರ ಮೀಟರ್ (4800 ಚದರ ಅಡಿ+/–25%) ನಿರ್ಮಿತ ಪ್ರದೇಶವನ್ನು ಹೊಂದಿರುವ ಮಾಲೀಕರು/ಪವರ್ ಆಫ್ ಅಟಾರ್ನಿ ಹೊಂದಿರುವವರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿರುತ್ತಾರೆ. ಸದರಿ ಕಾರ್ಪೆಟ್ ಪ್ರದೇಶ ಹೊಂದಿರುವವರು ತಮ್ಮ ಇ–ಖಾತಾ, ವಾಣಿಜ್ಯ ಪರವಾನಗಿ ಮತ್ತು ನಿವಾಸ ಅನುಮತಿ ಪತ್ರ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಬಹುದಾಗಿದೆ.
ವಿವರವಾದ ನಿಯತಾಂಕಗಳು, ಪ್ರಸ್ತಾವನೆ ಸಲ್ಲಿಕೆಯ ಸ್ಥಳ, ಷರತ್ತುಗಳ ನಿಯಮಗಳು ಮತ್ತು ಬೆಲೆ ಸವಾಲುಗಳನ್ನು (Price bid) ಒಳಗೊಂಡಿರುವ ತಾಂತ್ರಿಕ ಬಿಡ್‌ಗಳನ್ನು (Technical bid) ಸಲ್ಲಿಸುವ ನಮೂನೆಯನ್ನು ಎಸ್‌ಬಿಐ ವೆಬ್‌ಸೈಟ್ https://sbi.bank.in ನಿಂದ 11.06.2026 ರಿಂದ 24.06.2026 ರವರೆಗೆ ಸುದ್ದಿ/ಖರೀದಿ ಸುದ್ದಿಗಳಲ್ಲಿ ಡೌನ್‌ಲೋಡ್ ಮಾಡಬಹುದು. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ 24.06.2026 ರಂದು ಮಧ್ಯಾಹ್ನ 3.00 ಗಂಟೆ ಅಥವಾ ಅದಕ್ಕಿಂತ ಮೊದಲು. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸ್ಥಳ : ಬೆಂಗಳೂರು
ದಿನಾಂಕ: 11.06.2026

ಸಹಿ/– ಉಪ ಪ್ರಧಾನ ಪ್ರಬಂಧಕರು (ಬಿ & ಒ), ಆಡಳಿತ ಕಚೇರಿ– 01, ಬೆಂಗಳೂರು ದಕ್ಷಿಣ

ಸರ್ಕಾರಿ ಶಾಲೆಗೆ ನೆರವಾಗಲು ಮನವಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಸರ್ಕಾರಿ ಶಾಲೆಗಳಿಗೆ ದಾನಿಗಳು ನೆರವು ನೀಡಬೇಕು' ಎಂದು ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ ಮನವಿ ಮಾಡಿದರು.

ಆರ್.ಆರ್.ನಗರ ಕ್ಷೇತ್ರದ ಕೆಬ್ಬೆಹಳ್ಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಎಚ್.ಕುಸುಮಾ ಅಭಿಮಾನಿ ಬಳಗ, ಜಯ ಕರ್ನಾಟಕ ಸಂಘಟನೆ ವತಿಯಿಂದ ನೀಡಿದ ನೋಟ್ ಪುಸ್ತಕ, ಪೆನ್ನು, ಪೆನ್ಸಿಲ್ ಹಾಗೂ ಪೌರ-ಕಾರ್ಮಿಕರಿಗೆ ಸೀರೆ, ಹೊದಿಕೆ ವಿತರಿಸಿ ಮಾತನಾಡಿದರು.

'ನಾನು ಗ್ರಾಮೀಣ ಭಾಗದ ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದೆ. ನಾಲ್ಕೈದು ಕಿಲೋ ಮೀಟರ್ ನಡೆದುಕೊಂಡು ಹೋಗುತ್ತಿದ್ದೆ. ಅಂದಿನ ಸಮಸ್ಯೆ ಈಗ ಇಲ್ಲ. ಸರ್ಕಾರ ಎಲ್ಲ ಸೌಲಭ್ಯ ನೀಡುತ್ತಿರುವುದರಿಂದ ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು' ಎಂದರು.

ಎಚ್‌ಕುಸುಮಾ ಅಭಿಮಾನಿಗಳ ಬಳಗ ಹಾಗೂ ಜಯ ಕರ್ನಾಟಕ ಸಂಘಟನೆ ವತಿಯಿಂದ ನೀಡಿದ ಪಠ್ಯ ಸಾಮಗ್ರಿಗಳೊಂದಿಗೆ ಮಕ್ಕಳು

ನಗರದಲ್ಲಿ ಇಂದು

ಮ್ಯಾನ್ಯುವಲ್ ಸ್ಕ್ಯಾವೆಂಜರ್ಸ್‌ಗಳಿಗೆ ಜಾಗೃತಿ ಶಿಬಿರ: ಉದ್ಘಾಟನೆ: ಮುರಳಿ ಅಶೋಕ್ ಸಾಲಪ್ಪ, ಅಧ್ಯಕ್ಷತೆ: ಬಾಬು ಮ್ಯಾಥ್ಯು, ಆಯೋಜನೆ: ಡಾ.ಬಾಬು ಜಗಜೀವನ್‌ರಾಮ್ ಸಂಶೋಧನಾ ಸಂಸ್ಥೆ, ಸ್ಥಳ: ದಕ್ಷಿಣ ಭಾರತದ ಪ್ರಾದೇಶಿಕ ಇಂಗ್ಲಿಷ್ ಸಂಸ್ಥೆ, ಜ್ಞಾನಭಾರತಿ, ಬೆಳಿಗ್ಗೆ 9.30

'ಜನತಾ ಶಿಕ್ಷಣ ಸಂಸ್ಥೆ' ಸುವರ್ಣ ಮಹೋತ್ಸವ: ಉದ್ಘಾಟನೆ: ಅಕ್ಕೈ ಪದ್ಮಶಾಲಿ, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಕಾನೂನು ಕಾಲೇಜು, ರಾಜಾಜಿನಗರ, ಬೆಳಿಗ್ಗೆ 10.30

ರೇಬಾ ಹೋರೆ ಜನ್ಮಶತಮಾನೋತ್ಸವ: 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

7ನೇ ಆವೃತ್ತಿಯ ಆಹಾರ ಮೇಳ: ಭಾರತೀಯ ಟೀ– ಕಾಫಿ ಮೇಳ: ಉದ್ಘಾಟನೆ: ಕೆ.ಎಚ್.ಮುನಿಯಪ್ಪ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ, ಬೆಳಿಗ್ಗೆ 11.30

ವಿಶ್ವ ಪರಿಸರ ದಿನಾಚರಣೆ: 'ಪರಿಸರ ಸಂರಕ್ಷಣೆ' ಉಪನ್ಯಾಸ: ಲಲಿತಾ ಕೆ.ಹೊಸಪ್ಯಾಟಿ, ಅತಿಥಿ: ಸಿರಿಗೇರಿ ಯರಿಸ್ವಾಮಿ, ಸುಧಾಮಣಿ, ವಸುಂಧರಾ ಭೂಪತಿ, ಆಯೋಜನೆ: ಯು.ಭೂಪತಿ ಸ್ಮಾರಕ ಟ್ರಸ್ಟ್, ಸ್ಥಳ: ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಪೀಣ್ಯ, ಮಧ್ಯಾಹ್ನ 2

ವಸುಂಧರಾ ಭೂಪತಿ

ಪದವೀಧರರ ದಿನಾಚರಣೆ: ಉದ್ಘಾಟನೆ: ಕೆ.ಎನ್.ಸತ್ಯನಾರಾಯಣ, ಆಯೋಜನೆ ಮತ್ತು ಸ್ಥಳ: ಸರ್ ಎಂ.ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೃಷ್ಣದೇವರಾಯನಗರ, ಹುಣಸಮಾರನಹಳ್ಳಿ, ಮಧ್ಯಾಹ್ನ 2

ಯುವ ಸಂಗೀತೋತ್ಸವ: ಕೊಳಲು ವಾದನ: ಶ್ರೀನಿಧಿ ಶಿರೂರು, ಕರ್ನಾಟಕ ಸಂಗೀತ ಗಾಯನ: ರೋಹಿತ್ ಕಲ್ಯಾಣ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಸಂಜೆ 5.15

ಭರತನಾಟ್ಯ ಪ್ರದರ್ಶನ: ಪ್ರಿಯಾ ಗಣೇಶ್ ಮತ್ತು ಅವರ ವಿದ್ಯಾರ್ಥಿಗಳು, ಆಯೋಜನೆ: ಸಮುದ್ಭವ ಕಲೆ ಮತ್ತು ಸಾಂಸ್ಕೃತಿಕ ಸಂಸ್ಥೆ, ಸ್ಥಳ: ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, 5ನೇ ಬಡಾವಣೆ, ಜಯನಗರ, ಸಂಜೆ 6

'ಶರ್ಮಿಷ್ಠೆ' ನಾಟಕ ಪ್ರದರ್ಶನ: ಉಮಾಶ್ರೀ, ರಚನೆ: ಬೇಲೂರು ರಘುನಂದನ, ನಿರ್ದೇಶನ: ಚಿದಂಬರ ರಾವ್ ಜಂಬೆ, ತಂಡ: ರಂಗ ಸಂಪದ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಸಂಜೆ 7.30

'ಕನ್ನಡ ಭಾಷೆ ಮತ್ತು ಮೌಲ್ಯಗಳು' ಕುರಿತು ಉಪನ್ಯಾಸ: ಡಿ.ಪಿ.ಗಂಗಾಧರ, ಉಪಸ್ಥಿತಿ: ಎಂ.ಸಿ.ನರೇಂದ್ರ, ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘ, ಎಚ್.ಸಿದ್ಧಯ್ಯ ರಸ್ತೆ, ಹೊಂಬೇಗೌಡ ನಗರ, ಸಂಜೆ 6.30

ಅಂತರರಾಷ್ಟ್ರೀಯ ಆರ್ಕೈವ್ ಸಪ್ತಾಹ: 'ಸಾಂಗ್ಸ್ ಆಫ್ ಅವರ್ ಸಾಯ್ಲ್– ಪಾನಿ ಪಾಟ ಪೋರಾಟಂ' ಸಿನಿಮಾ ಪ್ರದರ್ಶನ, ನಿರ್ದೇಶನ: ಅದಿತಿ ಮದ್ದಲಿ, ಆಯೋಜನೆ: ಭಾರತೀಯ ಕಲಾ ಪ್ರತಿಷ್ಠಾನ (ಐಎಫ್‌ಎ), ಸ್ಥಳ: 'ಅಪೂರ್ವ' ನೆಲಮಹಡಿ, ನಂ.259, 4ನೇ ಕ್ರಾಸ್, ರಾಜ್ ಮಹಲ್ 4ನೇ ಹಂತ, ಸಂಜಯ್‌ನಗರ, ಸಂಜೆ 6.30

ಪ್ರಿಯಾ ಗಣೇಶ್

26ನೇ ವರ್ಷದ ಪ್ರವಚನ ವಾಹಿನಿ: 'ವಿದುರ ನೀತಿ' ವಿಷಯದ ಬಗ್ಗೆ ಪ್ರವಚನ: ಕಡೂರ್ ಶ್ರೀಧರಾಚಾರ್ಯ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ರಂಗ ಪರಂಪರೋತ್ಸವ: 'ಧ್ರುವಸ್ವಾಮಿನಿ', 'ಹಳ್ಳಿಯಲ್ಲೊಂದು ಹರಿಕಥಾ ಪ್ರಸಂಗ' 'ದು–ರೋಧನ' ನಾಟಕಗಳ ಪ್ರದರ್ಶನ, ಸಂಜೆ 4.30ರಿಂದ, ಉತ್ಸವದ ಉದ್ಘಾಟನೆ: ಎಸ್.ರಾಜು, ಅತಿಥಿ: ಎಚ್.ಆರ್.ಮಲ್ಲಿಕಾರ್ಜುನಯ್ಯ, ಅಚ್ಚು ವೆಂಕಟೇಶ್, ಆಯೋಜನೆ: ರಂಗ ಪರಂಪರೆ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.45

ಎರಡು ದಿನಗಳ ರಂಗಸಂಭ್ರಮ: 'ರಣದುಂದುಭಿ' ನಾಟಕ ಪ್ರದರ್ಶನ: ಉದ್ಘಾಟನೆ: ಕೆ.ವಿ.ನಾಗರಾಜಮೂರ್ತಿ, ಅಧ್ಯಕ್ಷತೆ: ಡಿ.ರಾಜು, ಅತಿಥಿ: ಕೆ.ಮುನಿರಾಜು, ಆರ್. ರಾಮಕೃಷ್ಣ, ರಂಗ ಗೌರವ: ವಿ.ಹನುಮಂತರಾಜು, ಶ್ರೀನಿವಾಸ ಹೆಡಿಗೆರೆ, ಎ.ಎನ್. ಮಹೇಂದ್ರಕುಮಾರ್, ಮೌನಿಕಾ ಭಾಸ್ಕರ್, ಆಯೋಜನೆ: ಅಮ್ಮನ ಮಡಿಲು ಸಾಮಾಜಿಕ ಸಾಂಸ್ಕೃತಿಕ ಕಲಾ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

'ಅಂಕುರ' ನಾಟಕ ಪ್ರದರ್ಶನ: ರಚನೆ: ಮಾಧುರಿ ಕುಲಕರ್ಣಿ, ತಂಡ: ಭೂತಾಯಿ, ನಿರ್ದೇಶನ: ವಸಂತ ಕೃಷ್ಣ, ಆಯೋಜನೆ: ಚಿಗುರು, ಕುಸುಮಾಲೆ– ಗಿರೀಶ ಕಾರ್ನಾಡ ಕನ್ನಡ ನಾಟಕ ರಚನಾ ಫೆಲೊಶಿಪ್, ಭಾಷಾ ಕೇಂದ್ರ, ಸಮಾಗತ ಫೌಂಡೇಷನ್, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾಮಿಂಗ್ ಆರ್ಟ್ಸ್, ಅಂಜನಾದ್ರಿ ಬಡಾವಣೆ, ಕೋಣನಕುಂಟೆ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ರಾಷ್ಟ್ರೀಯ ಪ್ರಾಮುಖ್ಯತಾ ಸಂಸ್ಥೆ, ಬೆಂಗಳೂರು–೨೯
राष्ट्रीय मानसिक स्वास्थ्य एवं तंत्रिका विज्ञान संस्थान (राष्ट्रीय प्रमुखाथा संस्थ) बेंगलुरू – 29
NATIONAL INSTITUTE OF MENTAL HEALTH AND NEURO SCIENCES
Institute of National Importance, Bengaluru -560029
Ph: 080 – 2699 5708 / 5127 | www.nimhans.ac.in | Email : recruitment@nimhans.net

No. NIMH/RECT/ADVT-1/B&C/2026-27 **Date: 08.06.2026**

NOTIFICATION

NIMHANS invites applications for the following vacant posts through offline mode from Indian Nationals residing in India and abroad:

Sl No	Name of the post	Group	No. of vacancy	Category	Pay level (as per 7th CPC)	Upper Age limit
1	Neuroanaesthesia Technologist	B	1	ST	Level 6 with initial Basic Pay of Rs. 35,400/-	30 years
2	Accountant	B	1	UR	Level 6 with initial Basic Pay of Rs. 35,400/-	30 years
3	Junior Secretarial Assistant	C	1	OBC	Level 2 with initial Basic Pay of Rs. 19,900/-	27 years

IMPORTANT NOTICE:
- Fill the application carefully after reading the given instructions.
- All applicant must go through the detailed advertisement, post and eligibility and ensure that they are eligible in all respect before applying.
- The eligibility of the applicant will be provisional and merely submitting the application form and appearing in examination shall not be treated as validity of eligibility and Candidature shall stands cancelled in case any ineligibility detected at any stage of recruitment process including after joining on an offered post.
- The last date and time for submission of applications is **07.07.2026 up to 04:30 PM.**
- **Refer NIMHANS Website www.nimhans.ac.in for detailed Notification.**

Sd/-
DIRECTOR

SUDARSHAN® PIPES & FITTINGS
23 YEARS OF TRUST & INNOVATION
u-PVC UGD Solid Core/u-PVC UGD Foam Core/uPVC/ O-PVC/Column Pipe/Casing Pipe
HDPE/DWC/PLB Duct/MDPE/Power Duct/Electro Fusion Fittings/Spigot Fittings

www.sudarshanpipes.com | Bengaluru, Karnataka. | For Dealership +91 97311 00553
WE SUPPLY TO:
hdpe@sudarshanpipes.com
projects@sudarshanpipes.com
+91 96066 76865
+91 97423 50063

CRETA benefits up to ₹1 05 000* | i20 benefits up to ₹65 000* | EXTER benefits up to ₹40 000*

30 Hyundai Celebrating Thirty Years in India | 6 hai toh safe hai – 6 airbags standard | 3 YEAR Unlimited** Kilometer Warranty – Up to 7 years extended warranty^^
i20 starts at ₹5.99 Lakh~~. ALCAZAR available in 6 & 7 seater.
Hy-CNG also available in EXTER, Grand i10 NIOS & AURA.
For bulk deals contact: corporatesales@hmil.net

HYUNDAI

Advaith Hyundai 25 New Car Showrooms | 5 Hyundai Promise Showrooms | 37 State-of-art Service Centers across Karnataka

New Car Showrooms
Bangalore: Residency Road - 9845390084 | Marathalli ORR - 9845516907 | Bilekahalli - 9900095665 | Millers Road - 9620147012 | Koramangala - 9606950352 | Bannerghatta Road - 9900086782 | Avalahalli - 9845186051 | Sarjapura - 9620733385 | Anekal - 9964039537 | Kolar - 9620229885 | Chintamani - 8147994737 | Ramanagara - 9620594433 | Tiptur - 7619577050 | Mysore - Belwadi - 9538970707 | JLB Road - 9538971141 | V V Nagar - 9945773967 | Hassan - 9538971132 | Mandya - 9740060075 | Kodagu: Gonikoppal - 9945774088 | Madikeri - 9538971151 | Kushalnagara 9538971149 | Mangalore - 7760962814 | Belthangadi - 7760962819 | Sullia - 7760962813

Service:
Bangalore - Mission Road | JC Road | Vasanth Nagar | Rajajinagar | Binnyston | Bannerghatta Road | Outer Ring Road | Banashankari | Hulimavu | Hulimavu New | JP Nagar | ITPL | ITPL NEW | Indiranagar | Sarjapura | Anekal | Avalahalli | Mandur | Uttarahalli | Kolar | Chintamani | Ramanagara | Mandya | Mysore - JBL Road | Belvadi | VV Nagar | Hassan | Hassan New | Tiptur | Kodagu - Kushalnagar | Madikeri | Gonikoppal | Mangalore - Kuntikana | Baikampady (New) | Baikampady | Sulia | Belthangady

9606076451 www.advaithhyundai.com 9902099944

my Hyundai app | Hyundai Promise Certified Pre-Owned Car

*Terms & conditions apply. *Offers and benefits mentioned are valid till 30th June 2026. Offers and benefits mentioned include cash, corporate, government employee exclusive offers, upgrade offers, either exchange or scrappage benefits as applicable. **3-year warranty or up to 100 000 km whichever is earlier for Grand i10 NIOS, AURA, i20 & i20 N Line. 3-year unlimited km warranty is applicable for EXTER, VENUE, VENUE N Line, CRETA, CRETA N Line, CRETA Electric, ALCAZAR, VERNA and IONIQ 5. ^^Up to 7 Years extended warranty or 1 40 000 km whichsoever is earlier is available for Grand i10 NIOS, i20, i20 N Line, AURA, VERNA, EXTER, VENUE, VENUE N Line, CRETA, CRETA N Line, CRETA Electric & ALCAZAR in all variants (Petrol/Diesel/CNG) and subject to payment. ~~Price mentioned is ex-showroom price. ##CSD: Canteen Stores Department, KPKB: Kendriya Police Kalyan Bhandar.

ಚಿಟಿಕೆ ಸುದ್ದಿ

ಈಜಿಪುರ ಮೇಲ್ಸೇತುವೆ: ಭೂ ಸ್ವಾಧೀನಕ್ಕೆ ಪತ್ರ

ಬೆಂಗಳೂರು: ಈಜಿಪುರ ಮೇಲ್ಸೇತುವೆ ಕಾಮಗಾರಿಗೆ ಜಾಗ ಬಿಟ್ಟುಕೊಡುವಂತೆ ಸೇಂಟ್ ಜಾನ್ ಆಸ್ಪತ್ರೆಗೆ ಮನವಿ ಪತ್ರ ಸಲ್ಲಿಸಲು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮೇಲ್ಸೇತುವೆ ಕಾಮಗಾರಿಯನ್ನು ಬುಧವಾರ ಪರಿಶೀಲಿಸಿದ ಅವರು, ಕೇಂದ್ರೀಯ ಸದನ ಜಂಕ್ಷನ್ ಬಳಿ ಸರ್ವಿಸ್ ರಸ್ತೆ ವಿಸ್ತರಣೆಗಾಗಿ ಸೇಂಟ್ ಜಾನ್ಸ್ ಸಂಸ್ಥೆಯ ಸುಮಾರು 590 ಚದರ ಮೀಟರ್ ಜಾಗದ ಅಗತ್ಯವಿದೆ. ಸಿಗ್ನಲ್ ಬಳಿ ಮೇಲ್ಸೇತುವೆ ಪಿಲ್ಲರ್‌ಗೆ, ಸರ್ಜಾಪುರ ಕಡೆಯಿಂದ ಬರುವ ವಾಹನಗಳಿಗೆ ನಿರ್ಮಿಸಬೇಕಿರುವ ಹೆಚ್ಚುವರಿ ಫ್ರೇಮ್‌ಗೆ ಅವಶ್ಯವಿರುವ ಜಮೀನು ನೀಡುವಂತೆ ಕೋರಲು ಹೇಳಿದರು.

ಸಾರ್ವಜನಿಕರ ಸುಗಮ ಸಂಚಾರಕ್ಕೆ ಪರ್ಯಾಯವಾಗಿ ಸರ್ವಿಸ್ ರಸ್ತೆ ನಿರ್ಮಿಸಲು ಮಡಿವಾಳ ಮುಖ್ಯ ರಸ್ತೆ ಹಾಗೂ ಈಜಿಪುರ-ಮಡಿವಾಳ ರಸ್ತೆ ಮಾರ್ಗವನ್ನು ಆಯುಕ್ತರು ಪರಿಶೀಲಿಸಿದರು.

ಕಾಮಗಾರಿ ನಡೆಯುವ ಅವಧಿಯಲ್ಲಿ ನಾಗರಿಕರು, ವಾಹನ ಸವಾರರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಯೋಜನೆಯ ಮುಖ್ಯ ಎಂಜಿನಿಯರ್ ರಾಘವೇಂದ್ರ ಪ್ರಸಾದ್, ಹೆಚ್ಚುವರಿ ಮುಖ್ಯ ನಗರ ಯೋಜಕ ಬಿ. ಎನ್. ಗಿರೀಶ್ ಉಪಸ್ಥಿತರಿದ್ದರು.

ಉಚಿತ ತರಬೇತಿ

ಬೆಂಗಳೂರು: ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದಲ್ಲಿರುವ ಜಿನೇಂದ್ರ ಸ್ಪರ್ಧಾತ್ಮಕ ಪರೀಕ್ಷಾ ಸಂಸ್ಥೆಯಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆಗೆ 45 ದಿನಗಳ ಉಚಿತ ತರಬೇತಿ ಆಯೋಜಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳಿಗೆ ದೈಹಿಕ ತರಬೇತಿ ಜೊತೆಗೆ ಮಾದರಿ ಪರೀಕ್ಷೆಗಳನ್ನು ಆಯೋಜಿಸಲಾಗುವುದು. ಆಸಕ್ತರು ಜೂನ್ 15ರ ಒಳಗೆ ಅರ್ಜಿ ಸಲ್ಲಿಸಬೇಕು. www.jiceias.com ಮೂಲಕ ಆನ್‌ಲೈನ್ ನೋಂದಣಿ ಮಾಡಬಹುದು. ಮಾಹಿತಿಗೆ 76761 67901, 99864 39874 ಸಂಪರ್ಕಿಸಬಹುದು ಎಂದು ಸಂಸ್ಥೆಯ ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದ್ದಾರೆ.

‘ಪಾಲಿಕೆಯಿಂದ ತ್ಯಾಜ್ಯ ವಿಲೇವಾರಿ ಏಕಿಲ್ಲ’

ಗುತ್ತಿಗೆದಾರರನ್ನೇ ಅವಲಂಬಿಸದೆ ಸ್ವಂತ ಟಿಪ್ಪರ್ ಖರೀದಿಸಲು ಲೋಕಾಯುಕ್ತರ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಗರ ಮತ್ತು ಪಟ್ಟಣಗಳಲ್ಲದೆ, ದೇಶದ ಇತರೆ ರಾಜ್ಯಗಳಲ್ಲಿ ತ್ಯಾಜ್ಯ ವಿಲೇವಾರಿಯನ್ನು ಪಾಲಿಕೆಗಳೇ ತಮ್ಮ ಸ್ವಂತ ವಾಹನದ ಮೂಲಕ ನಿರ್ವಹಿಸುತ್ತಿವೆ. ಈ ವ್ಯವಸ್ಥೆ ಬೆಂಗಳೂರು ನಗರ ಪ್ರದೇಶದಲ್ಲಿ ಏಕೆ ಅನುಷ್ಠಾನಗೊಂಡಿಲ್ಲ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಪ್ರಶ್ನಿಸಿದರು.

ನಗರದ ವಿವಿಧ ಭಾಗಗಳಲ್ಲಿ ಘನತ್ಯಾಜ್ಯ ವಿಲೇವಾರಿ ಇನ್ನೂ ಸಮರ್ಪಕವಾಗಿ ನಡೆಯದ ಬಗ್ಗೆ ಐದು ನಗರ ಪಾಲಿಕೆಗಳ ಆಯುಕ್ತರು, ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಮುಖ್ಯ ಕಾರ್ಯಕಾರಿ ಅಧಿಕಾರಿ, ಉಪ ವ್ಯವಸ್ಥಾಪಕರ ಸಭೆಯಲ್ಲಿ ಅವರು ಹಲವು ಪ್ರಶ್ನೆಗಳನ್ನು ಕೇಳಿದರು.

ಪಾಲಿಕೆಯ ಹಂತದಲ್ಲಿ ಸಂಪೂರ್ಣವಾಗಿ ತ್ಯಾಜ್ಯ ವಿಲೇವಾರಿಯಲ್ಲಿ ಗುತ್ತಿಗೆದಾರರನ್ನೇ ಅವಲಂಬಿಸದೆ, ಪಾಲಿಕೆಗಳು ಸ್ವಂತ ಟಿಪ್ಪರ್‌ಗಳನ್ನು ಖರೀದಿಸಬೇಕು. ಪ್ರತಿ ನಗರ ಪಾಲಿಕೆಯ ಎರಡು ಮೂರು ವಾರ್ಡ್‌ಗಳಿಗೆ ಇವನ್ನು ಉಪಯೋಗಿಸಬಹುದು. ಇದಕ್ಕೆ ಬೇಕಾದ ವಾಹನ ಚಾಲಕರು ಮತ್ತು ಸಹಾಯಕರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಬೇಕು ಎಂದು ಲೋಕಾಯುಕ್ತರು ಹೇಳಿದರು.

ಗುತ್ತಿಗೆದಾರರ ವಾಹನಗಳು ಕೆಟ್ಟು ನಿಂತ ಸಂದರ್ಭದಲ್ಲಿ ಪಾಲಿಕೆಯ ವಾಹನಗಳನ್ನು ಉಪಯೋಗಿಸಿಕೊಂಡು ವಿಲೇವಾರಿ ಮಾಡಬಹುದು ಎಂದು ಸಲಹೆ ನೀಡಿದರು.

ಲೋಕಾಯುಕ್ತರ ಸಲಹೆಯನ್ನು ಒಪ್ಪಿಕೊಂಡ ಪಾಲಿಕೆ ಆಯುಕ್ತರು, ಘನತ್ಯಾಜ್ಯ ನಿರ್ವಹಣೆ ಸಂಸ್ಥೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ‘ಈ ಕುರಿತು ಕ್ರಮ ಕೈಗೊಂಡಿರುವ ಬಗ್ಗೆ ಜುಲೈ 28ರಂದು ನಡೆಯುವ ಸಭೆಗೆ ಖುದ್ದಾಗಿ ಹಾಜರಾಗಿ, ವರದಿ ಸಲ್ಲಿಸಬೇಕು’ ಎಂದು ಲೋಕಾಯುಕ್ತರು ಸೂಚಿಸಿದರು.

ಮೂರು ತಂಡ: ಲೋಕಾಯುಕ್ತ ಸಂಸ್ಥೆಯಲ್ಲಿ ಪೊಲೀಸ್ ಅಧೀಕ್ಷಕರ ನೇತೃತ್ವದಲ್ಲಿ ಅಧಿಕಾರಿಗಳ ಮೂರು ತಂಡಗಳನ್ನು ರಚಿಸಲಾಗಿದೆ. ಈ ತಂಡಗಳು ನಗರದ ವಿವಿಧ ಭಾಗಗಳಲ್ಲಿ ತಪಾಸಣೆ ನಡೆಸಿ, ಘನತ್ಯಾಜ್ಯ ವಿಲೇವಾರಿಯ ಬಗ್ಗೆ ವರದಿ ಸಲ್ಲಿಸಿವೆ. ಸಾರ್ವಜನಿಕರ ದೂರಿನ ಆಧಾರದ ಮೇಲೆ ಆರ್.ಟಿ. ನಗರ ಬಡಾವಣೆಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ್ದ ಲೋಕಾಯುಕ್ತರು, ರಸ್ತೆ ಬದಿ ಕಸ ಬಿದ್ದಿರುವುದನ್ನು ಕಂಡಿದ್ದರು. ಈ ಕಾರಣದಿಂದ ಅಧಿಕಾರಿಗಳ ಸಭೆ ನಡೆಸಿದರು.

ಲೋಕಾಯುಕ್ತರ ಸಭೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳು

‘ಟೆಂಡರ್ ಕರೆದಿಲ್ಲ’

ನಗರದಲ್ಲಿ ಕಸ ವಿಲೇವಾರಿಯ ಜವಾಬ್ದಾರಿಯನ್ನು 2018–19ರಲ್ಲಿ ಗುತ್ತಿಗೆದಾರರಿಗೆ ವಹಿಸಿದ್ದು, ನಂತರ ಗುತ್ತಿಗೆಗೆ ಟೆಂಡ ರ್ ಕರೆದಿಲ್ಲ. ದರಪಟ್ಟಿಯ ಆಧಾರದಲ್ಲಿ ಹಿಂದಿನ ಟೆಂಡರ್‌ದಾರರಿಗೆ ಜವಾಬ್ದಾರಿ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು. ಗುತ್ತಿಗೆದಾರರು ಕಸ ವಿಲೇವಾರಿಗೆ ಪ್ರತಿ ದಿನ ಪೂರ್ಣ ಪ್ರಮಾಣದಲ್ಲಿ ಆಟೊಗಳನ್ನು ನಿಯೋಜಿಸಿರುವುದಿಲ್ಲ. ಈ ಬಗ್ಗೆ ಗುತ್ತಿಗೆದಾರರಿಗೆ ನೋಟಿಸ್ ನೀಡಿ ದಂಡ ವಿಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ದಂಡ ವಸೂಲಿ ಬಗ್ಗೆ ಲೋಕಾಯುಕ್ತರು ಮಾಹಿತಿ ಕೇಳಿದಾಗ, ‘ಗುತ್ತಿಗೆದಾರರು ಬಿಲ್‌ಗಳನ್ನು ಸಲ್ಲಿಸದೇ ಇರುವುದರಿಂದ, ದಂಡದ ಮೊತ್ತ ಕಡಿತ ಮಾಡಿಲ್ಲ’ ಎಂದು ಉತ್ತರಿಸಿದರು.

ಕೆಲವು ಪ್ರದೇಶಗಳಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸದ ಗುತ್ತಿಗೆದಾರರ ಬದಲಿಗೆ ಹೊಸಬರಿಗೆ ಗುತ್ತಿಗೆ ನೀಡಲು ಟೆಂಡರ್ ಕರೆದಿದ್ದರೂ, ಯಾರೂ ಭಾಗವಹಿಸಿಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ರಸಗೊಬ್ಬರ ಪೂರೈಕೆಯಲ್ಲಿ ಪಾರದರ್ಶಕತೆ ಇರಲಿ: ಕಾಂತರಾಜು

ಬೆಂಗಳೂರು; ‘ನಗರ ಜಿಲ್ಲೆಯಲ್ಲಿ ಮುಂಗಾರು ಬಿತ್ತನೆ ಪ್ರಾರಂಭವಾಗಲಿದ್ದು, ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಮತ್ತು ರಸಗೊಬ್ಬರವನ್ನು ಸಕಾಲದಲ್ಲಿ ಮತ್ತು ನಿಗದಿತ ಬೆಲೆಯಲ್ಲಿ ಒದಗಿಸಬೇಕು. ರಸಗೊಬ್ಬರ ಪೂರೈಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು’ ಎಂದು ಜಿಲ್ಲಾಧಿಕಾರಿ ಕಾಂತರಾಜು ಪಿ.ಎಸ್ ಸೂಚಿಸಿದರು.

ನಗರದಲ್ಲಿ ಬುಧವಾರ ಜಿಲ್ಲಾ ಮಟ್ಟದ ಕೃಷಿ ಪರಿಕರಗಳ ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ‘ಅಗತ್ಯ ಪ್ರಮಾಣದ ರಸಗೊಬ್ಬರವನ್ನು ಕಾಯ್ದಿರಿಸಿ, ಸಕಾಲಕ್ಕೆ ವಿತರಿಸಬೇಕು. ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸುವುದನ್ನು ತಡೆಗಟ್ಟಲು ಕೃಷಿ ಅಧಿಕಾರಿಗಳು ನಿರಂತರ ನಿಗಾ ವಹಿಸಬೇಕು’ ಎಂದರು.

‘ಅಧಿಕಾರಿಗಳು ಅಂಕಿ-ಅಂಶಗಳನ್ನು ನೀಡದೆ, ವಾಸ್ತವದಲ್ಲಿ ರೈತರಿಗೆ ತಲುಪಿರುವ ಸೌಲಭ್ಯಗಳ ಬಗ್ಗೆ ನಿಗಾ ವಹಿಸಬೇಕು. ನಿರ್ಲಕ್ಷ್ಯ ಕಂಡುಬಂದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

‘ಜಿಲ್ಲೆಯಲ್ಲಿ ಈವರೆಗೆ ಸುಮಾರು 16 ಸೆಂ. ಮೀ. ವಾಡಿಕೆ ಮಳೆಯಾಗಿದೆ. ಮುಂಗಾರು ಹಂಗಾಮಿಗೆ 21,022 ಹೆಕ್ಟೇರ್ ಬಿತ್ತನೆ ಗುರಿ ಇದ್ದು, ಸಿದ್ಧತೆ ನಡೆದಿದೆ. 1,069 ಕ್ವಿಂಟಲ್ ಬಿತ್ತನೆ ಬೀಜಕ್ಕೆ ಬೇಡಿಕೆ ಇದ್ದು, 317 ಕ್ವಿಂಟಲ್ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗಿದೆ’ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಸಿ ಸೀತಾ ಮಾಹಿತಿ ನೀಡಿದರು. ‘ರಿಯಾಯಿತಿ ದರದ ಬೇವು ಲೇಪಿತ ಯೂರಿಯಾ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಸುವುದನ್ನು ತಡೆಯಲಾಗುವುದು’ ಎಂದರು.

ರಸಗೊಬ್ಬರ ಕಂಪನಿಗಳ ಪ್ರತಿನಿಧಿಗಳು, ತಾಲ್ಲೂಕು ಮಟ್ಟದ ಕೃಷಿ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕೋಗಿಲು: ಆಕ್ಷೇಪಣೆ ಸಲ್ಲಿಕೆಗೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: ‘ಕೋಗಿಲು ಬಡಾವಣೆಯಲ್ಲಿನ ಅಕ್ರಮ ಮನೆಗಳ ತೆರವು ಕಾರ್ಯಾಚರಣೆಯಲ್ಲಿ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಿದ್ದರೂ ಅವರು ಅದನ್ನು ಬಳಕೆ ಮಾಡುತ್ತಿಲ್ಲ ಎಂಬುದು ಛಾಯಾಚಿತ್ರಗಳಿಂದ ಕಂಡುಬರುತ್ತಿದೆ’ ಎಂದು ಹೈಕೋರ್ಟ್ ತಿಳಿಸಿದೆ.

‘ತೆರವು ಕಾರ್ಯಾಚರಣೆಯನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು, ಸಂತ್ರಸ್ತರಿಗೆ ಪುನರ್ವಸತಿ ಹಾಗೂ ಪರಿಹಾರ ನೀಡಲು ನಿರ್ದೇಶಿಸಬೇಕು’ ಎಂದು ಕೋರಿ ಈ ಪ್ರದೇಶದಲ್ಲಿ ವಾಸವಿದ್ದ ಝೈಬಾ ತಬಸ್ಸುಮ್, ರೆಹಾನ ಮತ್ತು ಅರೀಫಾ ಬೇಗಂ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು ‘ಸರ್ಕಾರದ ಪುನರ್ವಸತಿ ಕೇಂದ್ರದಲ್ಲಿ 100 ಮಂದಿಯನ್ನೂ ಇರಿಸಲು ಅವಕಾಶ ಇಲ್ಲ. ಅವು ಕೋಗಿಲು ಲೇಔಟ್ ಸಮೀಪದಲ್ಲಿ ಇಲ್ಲ ಮತ್ತು ಅಲ್ಲಿ ಅಗತ್ಯವಾದಷ್ಟು ಶೌಚಾಲಯ, ಇತರೆ ಸೂಕ್ತ ಉಪಚಾರದ ವ್ಯವಸ್ಥೆ ಹೊಂದಿಲ್ಲ’ ಎಂದು ಆಕ್ಷೇಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಸರ್ಕಾರ ಕೋರ್ಟ್‌ಗೆ ಸಲ್ಲಿಸಿರುವ ಫೋಟೊಗಳು ಬೇರೆಯದೇ ಕತೆಯನ್ನು ಹೇಳುತ್ತವೆ. ಸಂತ್ರಸ್ತರಿಗೆ ಯಾವುದೇ ಸಮಸ್ಯೆಗಳಿದ್ದರೂ ಅವುಗಳನ್ನು ಅಮಿಕಸ್ ಕ್ಯೂರಿ ಗಮನಕ್ಕೆ ತರಬಹುದು. ಅವರು ಕ್ರಮಕ್ಕೆ ಪರಿಹಾರ ಸೂಚಿಸುತ್ತಾರೆ’ ಎಂದು ಹೇಳಿತು. ಅಂತೆಯೇ, ಆಕ್ಷೇಪಣೆ ಸಲ್ಲಿಸುವಂತೆ ಅರ್ಜಿದಾರರಿಗೆ ಸೂಚಿಸಿ ವಿಚಾರಣೆಯನ್ನು ಜುಲೈ 13ಕ್ಕೆ ಮುಂದೂಡಿತು.

ವ್ಯಾಪಾರದ ಲೆಕ್ಕ....

ಪ್ರಜಾವಾಣಿ ಚಿತ್ರ
ರಂಜು ಪಿ.

ನಗರದ ಬಿಇಎಲ್ ರಸ್ತೆಯಲ್ಲಿ ಬುಧವಾರ ನೇರಳೆ ಹಣ್ಣು ಮಾರುವ ಹುಡುಗನೊಬ್ಬ ಗ್ರಾಹಕರಿಲ್ಲದ ವೇಳೆ ಪುಸ್ತಕದಲ್ಲಿ ಬರೆಯುತ್ತಾ ಕುಳಿತಿದ್ದ ದೃಶ್ಯ

ಸಂಕ್ಷಿಪ್ತ ಸುದ್ದಿ

‘ಮೂಲಸೌಕರ್ಯ ಕಲ್ಪಿಸಿ’

ಬೆಂಗಳೂರು: ‘ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಸಚಿವರ ನಿವಾಸವಿರುವ ಸದಾಶಿವನಗರದ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುವ 500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು’ ಎಂದು ಹೋರಾಟಗಾರ ಗಂಡಸಿ ಸದಾನಂದಸ್ವಾಮಿ ಒತ್ತಾಯಿಸಿದ್ದಾರೆ. ‘ಭದ್ರತಾ ಕೇಂದ್ರಗಳ ಬಳಿ ಕಂಟೇನರ್ ಮಾದರಿಯಲ್ಲಿ ಸಣ್ಣ ಕಚೇರಿ, ವಿಶ್ರಾಂತಿ ಕೊಠಡಿ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಬೇಕು’ ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ನೀರಿನ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಸಾರ್ವಜನಿಕರ ಅನುಕೂಲಕ್ಕಾಗಿ ಜೂನ್ 11ರಂದು ಬೆಳಿಗ್ಗೆ 9.30ರಿಂದ 11 ಗಂಟೆವರೆಗೆ ನೀರಿನ ಅದಾಲತ್ ನಡೆಸಲಿದೆ. ಹೆಚ್ಚಿನ ಮಾಹಿತಿಗಾಗಿ ದಕ್ಷಿಣ 1- 9900983569, ದಕ್ಷಿಣ 2-9845444037, ದಕ್ಷಿಣ 3- 9972001265, ದಕ್ಷಿಣ 4-9845444036, ಕೇಂದ್ರ 1-9900944041, ಕೇಂದ್ರ 2-9686572469, ಕೇಂದ್ರ 3-9845444081, ಕೇಂದ್ರ 4-9008380605, ಪೂರ್ವ 1-9980410376, ಪೂರ್ವ 2-8197382595, ಪೂರ್ವ 3-9535544974, ಪೂರ್ವ 4-9632861112.

ಕುಂದು ಕೊರತೆಗಳಿಗೆ ಸಂಬಂಧಿಸಿ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಕ್ಕೆ ಕರೆಮಾಡಿ ದೂರು ದಾಖಲಿಸಬಹುದು. ಅಲ್ಲದೆ 8762228888ಕ್ಕೆ ದೂರು ಸಲ್ಲಿಸಬಹುದು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಬಾಣಸವಾಡಿ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕಾರಣ ಜೂನ್ 11ರಂದು ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ಹೊರಮಾವು, ಲಿಂಗರಾಜಪುರ, ಹೆಣ್ಣೂರು, ಹೊಯ್ಸಳ ನಗರ, ಎನ್‌ಆರ್‌ಐ ಲೇಔಟ್, ಡಿ.ಜೆ.ಹಳ್ಳಿ, ಸುಬ್ಬಣ್ಣಪಾಳ್ಯ, ಎಚ್‌ಬಿಆರ್ ಲೇಔಟ್, ಖಿನ್ನಾ ರಸ್ತೆ, ಕಮ್ಮನಹಳ್ಳಿ ಮುಖ್ಯ ರಸ್ತೆ, ಒಎಂಬಿಆರ್ ಲೇಔಟ್, ಬಾಬೂಸಾಪಾಳ್ಯ, ದೊಡ್ಡಗುಬ್ಬಿ, ಎಡಿಎಂಸಿ ಪ್ರದೇಶ, ಪಿಲ್ಲಾರೆಡ್ಡಿ ನಗರ, ಡಾಕ್ಟರ್ಸ್ ಲೇಔಟ್, ಬಿಳಿಶಿವಲೆ, ಬಂಜಾರ ಲೇಔಟ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಡಬಲ್ ಡೆಕರ್ ಯೋಜನೆಗೆ ಮನವಿ

ಅನುಮತಿ ನೀಡುವಂತೆ ಖಟ್ಟರ್‌ಗೆ ಸಿ.ಎಂ ಶಿವಕುಮಾರ್ ಅಹವಾಲು ಸಲ್ಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರಲಾಲ್ ಖಟ್ಟರ್ ಅವರನ್ನು ನವದೆಹಲಿಯಲ್ಲಿ ಬುಧವಾರ ಭೇಟಿ ಮಾಡಿ ಅಹವಾಲು ಸಲ್ಲಿಸಿದರು.

ಮೆಟ್ರೊ ಮೂರನೇ ಹಂತದ ಯೋಜನೆಯಲ್ಲಿ 44.65 ಕಿ.ಮೀ ಉದ್ದದ ಡಬಲ್ ಡೆಕರ್ ಮೇಲ್ಸೇತುವೆ ನಿರ್ಮಾಣಕ್ಕೆ ಬಿಎಂಆರ್‌ಸಿಎಲ್ ಮುಂದಾಗಿದೆ. ಇದಕ್ಕೆ ಕೇಂದ್ರ ಸರ್ಕಾರ 2024ರ ಸೆಪ್ಟೆಂಬರ್‌ನಲ್ಲಿ ಅನುಮತಿ ನೀಡಿತ್ತು. ಈ ಯೋಜನೆಯ ವೆಚ್ಚ ₹9,700 ಕೋಟಿಯನ್ನು ಕರ್ನಾಟಕ ಸರ್ಕಾರವೇ ಭರಿಸಲಿದೆ. ಈ ಯೋಜನೆಯಲ್ಲಿ ಸಣ್ಣ ಬದಲಾವಣೆ ಮಾಡಲು ಬಿಎಂಆರ್‌ಸಿಎಲ್‌ನ 118ನೇ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಈ ಪರಿಷ್ಕೃತ ಯೋಜನೆ ಆರಂಭಿಸಲು ಕೇಂದ್ರ ಅನುಮತಿ ನೀಡಬೇಕು ಎಂದು ಶಿವಕುಮಾರ್ ಕೋರಿದರು.

ಮೆಟ್ರೊ ಎರಡನೇ ಹಂತದ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಅನುಮತಿ ನೀಡಬೇಕು ಎಂದೂ ಮನವಿ ಮಾಡಿದರು. ₹26,405 ಕೋಟಿ ಮೊತ್ತದ ಯೋಜನೆಗೆ ಕೇಂದ್ರ ಸರ್ಕಾರ 2014ರಲ್ಲಿ ಅನುಮತಿ ನೀಡಿತ್ತು. 72.095 ಕಿ.ಮೀ ಉದ್ದ ಹಾಗೂ 61 ನಿಲ್ದಾಣಗಳನ್ನು ಒಳಗೊಂಡಿರುವ ಈ ಯೋಜನೆಯ ಅಂದಾಜು ವೆಚ್ಚ ಈಗ ₹40,425.02 ಕೋಟಿಗೆ ಏರಿದೆ. ಆದಷ್ಟು ಬೇಗ ಈ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಅನುಮತಿ ನೀಡಬೇಕು ಎಂದು ವಿನಂತಿಸಿದರು.

ಮೆಟ್ರೊ ಮೂರನೇ ಎ ಹಂತಕ್ಕೆ ಶೀಘ್ರ ಅನುಮತಿ ನೀಡಬೇಕು ಎಂದು ಅವರು ಆಗ್ರಹಿಸಿದರು. ಈ ಯೋಜನೆ ಸರ್ಜಾಪುರದಿಂದ ಹೆಬ್ಬಾಳದವರೆಗೆ ಒಟ್ಟು 37.804 ಕಿ.ಮೀ (14.28 ಕಿ.ಮೀ ಸುರಂಗ ಹಾಗೂ 23.524 ಕಿ.ಮೀ ಮೇಲ್ಸೇತುವೆ) ಉದ್ದವಿದ್ದು, ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಕೆಲವು ಮಾರ್ಪಾಡು ಮಾಡಲಾಗಿದೆ. ₹25,999 ಕೋಟಿ ಅಂದಾಜು ವೆಚ್ಚದ ಪರಿಷ್ಕೃತ ಯೋಜನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಏಪ್ರಿಲ್‌ನಲ್ಲಿ ಸಲ್ಲಿಸಲಾಗಿದೆ ಎಂದು ಅವರು ಗಮನ ಸೆಳೆದರು.

‘ಬೆಂಗಳೂರು- ಮೈಸೂರು, ಬೆಂಗಳೂರು- ಕನಕಪುರ, ಬೆಂಗಳೂರು- ತುಮಕೂರು, ಬೆಂಗಳೂರು- ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು- ಕೋಲಾರ ನಡುವೆ ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ (ಆರ್‌ಆರ್‌ಟಿಎಸ್) ಜಾರಿಗೆ ಅನುಮತಿ ನೀಡಬೇಕು’ ಎಂದೂ ಅವರು ಮನವಿ ಮಾಡಿದರು.

ಕರ್ನಾಟಕ ಸರ್ಕಾರದ ನವದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಕಾರ್ಯದರ್ಶಿ ರಾಜೇಂದ್ರ ಚೋಳನ್ ಇದ್ದರು.

‘ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆ ಸೇಡು ತೀರಿಸಿಕೊಳ್ಳುವ ವೇದಿಕೆಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯನ್ನು ವೈಯಕ್ತಿಕ ಸೇಡು ತೀರಿಸಿಕೊಳ್ಳುವ ವೇದಿಕೆಯನ್ನಾಗಿ ಬಳಕೆ ಮಾಡಲು ಅವಕಾಶ ನೀಡಲಾಗದು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಖ್ಯಾತ ಮಹಿಳಾ ಪೈಲಟ್ (ಮೈಕ್ರೋ ಲೈಟ್) ಆದ್ರೆ ದೀಪಿಕಾ ಮಾಬೆನ್ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವೊಂದನ್ನು ರದ್ದುಪಡಿಸಿದೆ.

‘ವಂಚನೆ ಹಾಗೂ ಸಹಿ ನಕಲು ಮಾಡಿ ವಿಮಾನಯಾನ ಪರವಾನಗಿ ನವೀಕರಣ ಮಾಡಿಸಿಕೊಂಡ ಆರೋಪದಡಿ ನನ್ನ ವಿರುದ್ಧ ನಗರದ 24ನೇ ಎಸಿಎಂಎಂ ಕೋರ್ಟ್‌ನಲ್ಲಿರುವ ಕ್ರಿಮಿನಲ್ ಪ್ರಕರಣದ ವಿಚಾರಣೆ ರದ್ದುಪಡಿಸಬೇಕು’ ಎಂದು ಕೋರಿ ಮೈಸೂರಿನ ಆದ್ರೆ ದೀಪಿಕಾ ಮಾಬೆನ್ (47) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಅಪರಾಧ ಪ್ರಕರಣಗಳ ವಿಚಾರಣಾ ನ್ಯಾಯಾಲಯವನ್ನು ವಾಯುಯಾನಕ್ಕೆ ಸಂಬಂಧಿಸಿದಂತಹ ತಾಂತ್ರಿಕ ವಿವಾದಗಳನ್ನು ನಿರ್ಣಯಿಸುವ ಸ್ಥಳವಾಗಿ ಪರಿವರ್ತಿಸಲು ಸಾಧ್ಯವಿಲ್ಲ. ವೈಯಕ್ತಿಕ ಮತ್ತು ವೃತ್ತಿಪರ ದ್ವೇಷದಿಂದ ದಾಖಲಿಸಲಾಗಿರುವ ಈ ಕ್ರಿಮಿನಲ್ ಮೊಕದ್ದಮೆ ಕಾನೂನು ಪ್ರಕ್ರಿಯೆಯ ದುರುಪಯೋಗ’ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ಸ್ಪಷ್ಟ ವಿವರಣೆ ಇಲ್ಲದ, ವಿಳಂಬಿತ ದೂರುಗಳ ಆಧಾರದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲು ಅನುಮತಿ ನೀಡಿದರೆ ಅದು ಅಪರಾಧಿಕ ನ್ಯಾಯ ಪ್ರಕ್ರಿಯೆಯ ದುರುಪಯೋಗಕ್ಕೆ ದಾರಿ ಮಾಡಿಕೊಡುತ್ತದೆ. ವೈಯಕ್ತಿಕ ದ್ವೇಷದ ಸಾಧನವಾಗಿ ಮೌಲ್ಯವನ್ನು ಕುಗ್ಗಿಸುತ್ತದೆ

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಮುಖ್ಯಾಂಶಗಳು

- ಪೈಲಟ್ ಮಾಬೆನ್ ವಿರುದ್ಧದ ಪ್ರಕರಣ ರದ್ದು
- ಡಿಜಿಸಿಎ ತನಿಖೆ ಅಬಾಧಿತ

‘ಪರವಾನಗಿ ನವೀಕರಣ ನಡೆದಿದ್ದು 2014ರಲ್ಲಿ. ಆದರೆ, ದೂರು ನೀಡಿರುವುದು 2017-18ರಲ್ಲಿ. ಮನೆಯ ಕಪಾಟು ಸ್ವಚ್ಛಗೊಳಿಸುವಾಗ ನಕಲಿ ಸಹಿ ಇರುವುದು ಕಣ್ಣಿಗೆ ಬಿತ್ತು ಎಂಬ ದೂರುದಾರೆ ವಿನಿತಾ ಅವರ ಪರ ವಾದವನ್ನು ಒಪ್ಪಲು ಆಗದು. ದೂರುದಾರರು ಮತ್ತು ಅರ್ಜಿದಾರರು ಇಬ್ಬರೂ ಒಂದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೂ 4 ವರ್ಷ ಮೌನವಾಗಿರುವುದನ್ನು ನೋಡಿದರೆ, ಮಾಬೆನ್ ಅವರು ಜಾಗತಿಕ ಹಾರಾಟದ ಸಾಹಸಯಾತ್ರೆಗೆ ಸಜ್ಜಾಗುತ್ತಿದ್ದಾಗ ಅವರ ತೇಜೋವಧೆ ಮಾಡಲು ಈ ದೂರು ನೀಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ’ ಎಂದು ಹೇಳಿದೆ.

‘ಪರವಾನಗಿ ನವೀಕರಣದ ವಿವಾದವು ಡಿಜಿಸಿಎ (ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ) ನಿಯಂತ್ರಣಕಕ್ಕೆ ಒಳಪಟ್ಟಿದೆ. ಆದ್ದರಿಂದ, ಪರವಾನಗಿ ನವೀಕರಣದ ತಾಂತ್ರಿಕ ಅಂಶಗಳ ಕುರಿತಂತೆ ಡಿಜಿಸಿಎ ನಡೆಸುತ್ತಿರುವ ಸ್ವತಂತ್ರ ತನಿಖೆಗೆ ಮುಂದುವರೆಸಬಹುದು’ ಎಂದು ನ್ಯಾಯಪೀಠ ತಿಳಿಸಿದೆ.

ಮಾಬೆನ್ ಪರ ವಾದ ಮಂಡಿಸಿದ್ದ ಪದಾಂಕಿತ ಹಿರಿಯ ವಕೀಲೆ ಜಯ್ನಾ ಕೊಠಾರಿ, ‘ಮಾಬೆನ್ 2015ರಲ್ಲಿ ತಮ್ಮ ಪತಿಯಿಂದ ವಿಚ್ಛೇದನ ಪಡೆದಿದ್ದು, ಅವರ ಮಾಜಿ ಪತಿಯು ವಿನಿತಾ ಅವರೊಂದಿಗೆ ಸಂಬಂಧ ಹೊಂದಿದ್ದಾರೆ. ಮಾಜಿ ಪತಿಯ ಬಗ್ಗೆ ಇಬ್ಬರ ನಡುವಿನ ವೃತ್ತಿಪರ ಪೈಪೋಟಿ ಮತ್ತು ವೈಯಕ್ತಿಕ ವಿವಾದ ದೂರುಗಳಿಗೆ ಕಾರಣವಾಗಿದೆ. ಅಪರಾಧ ನಡೆದ ಮೂರು ವರ್ಷಗಳ ನಂತರ ಪೊಲೀಸ್ ದೂರು ದಾಖಲಿಸಲಾಗಿದೆ. ವಿಳಂಬಕ್ಕೆ ಯಾವುದೇ ಕಾರಣವನ್ನು ನೀಡಲಾಗಿಲ್ಲ’ ಎಂದು ವಿವರಿಸಿದ್ದರು.

ಪಿಂಚಣಿ ಅದಾಲತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಅವರ ಕಚೇರಿಯಲ್ಲಿ ಜೂನ್ 29 ಮತ್ತು ಜುಲೈ 7ರಂದು ಬೆಳಿಗ್ಗೆ 11.30ಕ್ಕೆ ಪ್ರಾದೇಶಿಕ ಮಟ್ಟದ ಪಿಂಚಣಿ ಅದಾಲತ್ ನಡೆಯಲಿದೆ.

ಪಿಂಚಣಿದಾರರು ಕುಂದುಕೊರತೆಗಳು ಇದ್ದಲ್ಲಿ, ಜೂನ್ 22ರ ಒಳಗೆ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ ಅಂಚೆ ವೃತ್ತ, ಬೆಂಗಳೂರು–560001 ಇಲ್ಲಿಗೆ ದೂರು ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಿಡಬ್ಲ್ಯುಎಸ್‌ಎಸ್‌ಬಿಯ ಕಲಂ 77ರ ಸಾಂವಿಧಾನಿಕ ಸಿಂಧುತ್ವ ಎತ್ತಿಹಿಡಿದ ಹೈಕೋರ್ಟ್

‘ಪೈಪ್‌ಲೈನ್: ಭೂ ಸ್ವಾಧೀನ ಅಗತ್ಯವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ವ್ಯಕ್ತಿಗಳ ಜಮೀನನ್ನು ಸ್ವಾಧೀನಪಡಿಸಿಕೊಳ್ಳದೇ ಮತ್ತು ಯಾವುದೇ ಪರಿಹಾರ ನೀಡದೆ ಒಳಚರಂಡಿ ಪೈಪ್‌ಲೈನ್ ಅಳವಡಿಸುವುದಕ್ಕೆ ಬೆಂಗಳೂರು ಜಲ ಮಂಡಳಿಗೆ ಅಧಿಕಾರ ನೀಡುವ ಬಿಡಬ್ಲ್ಯುಎಸ್‌ಎಸ್‌ಬಿ ಕಾಯ್ದೆಯ ಕಲಂ 77ರ ಸಾಂವಿಧಾನಿಕ ಸಿಂಧುತ್ವವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ತಮ್ಮ ಜಮೀನಿನಲ್ಲಿ ಪೈಪ್‌ಲೈನ್ ಅಳವಡಿಸುವುದನ್ನು ಪ್ರಶ್ನಿಸಿ ಟಿ.ಎನ್.ಚಂದ್ರಶೇಖರ ಗೌಡ ಮತ್ತಿತರರು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಬೆಂಗಳೂರಿನಂತಹ ಬೃಹತ್ ಮಹಾನಗರದ ಸಾರ್ವಜನಿಕ ಆರೋಗ್ಯ ಮತ್ತು ಪರಿಸರ ಸಂರಕ್ಷಣೆಗೆ ಒಳಚರಂಡಿ ವ್ಯವಸ್ಥೆ ಅತ್ಯಗತ್ಯ. ಇಲ್ಲಿನ ನಾಗರಿಕರ ಜನಜೀವನ ಜಲಮಂಡಳಿಯ ಕಾರ್ಯನಿರ್ವ-ಹಣೆಯ ಮೇಲೆಯೇ ಅವಲಂಬಿ-ತವಾಗಿದೆ. ಹಾಗಾಗಿ, ಸಾರ್ವಜನಿಕ ಹಿತಾಸಕ್ತಿ ಮತ್ತು ನಗರದ ನೈರ್ಮಲ್ಯದ ದೃಷ್ಟಿಯಿಂದ ಜಲಮಂಡಳಿಗೆ ಇಂತಹ ವಿಶೇಷ ಅಧಿಕಾರ ಇರಬೇಕಾದ್ದು ಅನಿವಾರ್ಯ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಪ್ರತಿ ಬಾರಿಯೂ ಪೈಪ್ ಲೈನ್ ಹಾದು ಹೋಗುವ ವ್ಯಾಪ್ತಿ ಪ್ರದೇಶದಲ್ಲಿ ಭೂಸ್ವಾಧೀನ ಪ್ರಕ್ರಿಯೆ ನಡೆಸಬೇಕು ಎಂದಾದರೆ ನಗರದ ಸಂಪೂರ್ಣ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳು ಆಡಳಿತಾತ್ಮಕವಾಗಿ ಸ್ಥಗಿತಗೊಳ್ಳು-ತ್ತವೆ. ಹಾಗಾಗಿ, ಪ್ರತಿ ಬಾರಿ ಪೈಪ್ ಅಳವಡಿಸುವಾಗ ಕಡ್ಡಾಯವಾಗಿ ಭೂಸ್ವಾಧೀನ ಪ್ರಕ್ರಿಯೆ ನಡೆಸುವ ಅಗತ್ಯ ಇಲ್ಲ. ‘ಸಾಧ್ಯವಾದಷ್ಟು ಕಡಿಮೆ ಹಾನಿಯನ್ನು ಉಂಟು ಮಾಡಬೇಕು ಮತ್ತು ಉಂಟಾದ ಹಾನಿಗೆ ಪೂರ್ಣ ಪರಿಹಾರವನ್ನು ಕಡ್ಡಾಯಗೊಳಿಸಬೇಕು ಎಂಬ ಕಾಯ್ದೆಯ ನಿಬಂಧನೆಗಳನ್ನು ಉಲ್ಲೇಖಿಸಿದೆ’ ಎಂದು ಪೀಠ ತಿಳಿಸಿದೆ.

‘ಬೆಂಗಳೂರು ಜಲ ಮಂಡಳಿ ಕಾಯ್ದೆ–1964ರ ಕಲಂ 77ರ ಪ್ರಕಾರ, ಜಮೀನಿನ ಒಡೆತನವು ಮೂಲ ಮಾಲೀಕರ ಬಳಿಯೇ ಇರುತ್ತದೆ. ಜಲಮಂಡಳಿ ಕೇವಲ ಪೈಪ್‌ಲೈನ್ ಅಳವಡಿಸಲು ಮತ್ತು ಅದನ್ನು ನಿರ್ವಹಿಸುವ ಬಳಕೆಯ ಹಕ್ಕನ್ನು ಮಾತ್ರ ಹೊಂದಿರುತ್ತದೆ. ಆದ್ದರಿಂದ, ಜಲಮಂಡಳಿಯ ಕ್ರಮಗಳು ಕಾನೂನು ಬದ್ಧವಾಗಿಯೇ ಇವೆ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವೇನು?

ಬೆಂಗಳೂರು ಉತ್ತರ ತಾಲ್ಲೂಕಿನ ಹೆಣ್ಣೂರು ಮತ್ತು ನಾಗವಾರ ವ್ಯಾಪ್ತಿಯ ಜಮೀನುಗಳ ಕೆಲ ಮಾಲೀಕರು ತಮ್ಮ ಜಮೀನುಗಳಲ್ಲಿ ಜಲಮಂಡಳಿ ವತಿಯಿಂದ ಕೈಗೊಳ್ಳಲಾಗಿದ್ದ ಪೈಪ್‌ಲೈನ್ ಅಳವಡಿಕೆ ಕಾಮಗಾರಿಯ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಈ ಅರ್ಜಿ ಸಲ್ಲಿಸಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land

General

FOR SALE: Agricultural land, 1.38 acres, Sy.No:108/2, Shivanahalli, Jigani Hobli, Anekal Taluk, Bengaluru Dist. Owner: Ramakrishna Mission, Belur Math, Kolkata. Contact (10AM-1PM): 9480993407 / rkmission.halli@gmail.com

BUSINESS

Business to Business

Finance

GOLDEN OPPORTUNITY Property Investors Fully Secured Layout Project Best Returns 1year Project. Genuine's Only. 9902678314

PERSONAL

Announcements

I, KEKA MUKERJEE spouse of 656434N Rank Ex-Sgt GOPAL MUKHERJEE resident of No.12, 1st Main Ayyappa Nagar Kodigehalli Bengaluru-560036 Karnataka Have corrected my Date of Birth from 06-01-1969 to 03-01-2026 vide affidavit dated 09-06-2026 and notary Mr.Manjunath.T (20053)Bengaluru.

Change of Name

SMT. G. VIJAYALAKSHMI, wife of Sri V. Gurumurthy, aged about 58 years, R/at No. 838, 1st Floor, Opposite to Ishanya India Foundation, J.P.Nagar 2nd Phase, Bengaluru- 560078, G.VIJAYALAKSHMI, VIJAYALAKSHMI.G and NATARATAN VIJAYALAKSHMI all refer to one and the same person, which is myself. Vide affidavit dated 08.06.2026, Sworn before Advocate and Notary A Manjunath, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

I M.C.SHEKAR S/o M.Bheemasena Rao , No 551,1st cross, 15th Main, BSK I Stage Bangalore 560050 have changed my Name to Mankal Chandra Shekar vide affidavit dtd 8.6.2026 before Notary /Bangalore

CHANGE OF NAME
I, **SWATI RAMNARAYAN SHANDILYA** W/o Mobin Kurien, R/at No.B3,Shilpitha Cascade, 6th G Cross, Balaji Layout, Kaggadasapura, Bengaluru- 93, have changed my name to **SWATI SHANDILYA** vide affidavit dt:10-06-2026 sworn before notary S.I.Balaguru, Bengaluru. Henceforth I shall be called as **SWATI SHANDILYA** only

I, **THARUN S V**, S/o. S V Narayana, R/at No.37, Sri Rama Mandira Road, Gowda Muniswamy Garden, Ejipura, Bengaluru-560047 here by declare that **"SANGISETTI VENKATA THARUN"** and **"THARUN S V"** both the names belongs to me only, Henceforth i shall be called in future as **THARUN S V** only. vide affidavit dt: 09.06.2026 before notary B M Chandrashekar, Bangalore.

ರೌಡಿ ನಂಟು: ಅಧಿಕಾರಿಗಳ ವಿರುದ್ಧ ಕ್ರಮ

ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಗೃಹ ಸಚಿವ ಪ್ರಿಯಾಂಕ್ ಎಚ್ಚರಿಕೆ

ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಪಾಲ್ಗೊಳ್ಳಲು ಬಂದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಪೊಲೀಸ್ ಅಧಿಕಾರಿಗಳು ಸ್ವಾಗತಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೌಡಿಗಳ ಜನ್ಮ ದಿನಾಚರಣೆಯಲ್ಲಿ ಪಾಲ್ಗೊಳ್ಳುವುದು, ಸುತ್ತಾಟ ನಡೆಸುವುದು, ಅವರೊಂದಿಗೆ ನಂಟು ಹೊಂದಿರುವುದು ಕಂಡುಬಂದರೆ ಅಂಥ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದರು.

ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಬುಧವಾರ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ರೌಡಿಗಳೊಂದಿಗೆ ಕೆಲವು ಪೊಲೀಸ್ ಅಧಿಕಾರಿಗಳು ಸಂಪರ್ಕ ಇಟ್ಟುಕೊಂಡಿದ್ದಾರೆ ಎಂಬ ಮಾಹಿತಿಯಿದೆ. ಅಂತಹವರನ್ನು ಪತ್ತೆಹಚ್ಚಿ ಕ್ರಮ ತೆಗೆದುಕೊಳ್ಳಲಾಗುವುದು. ಈ ಸಂಬಂಧ ಸಭೆಯಲ್ಲೂ ಸೂಚನೆ ನೀಡಿದ್ದೇನೆ’ ಎಂದು ಹೇಳಿದರು.

‘ನಗರದಲ್ಲಿ ವಾಹನ ದಟ್ಟಣೆಯಿಂದ ತೀವ್ರ ಸಮಸ್ಯೆ ಎದುರಾಗುತ್ತಿದೆ. ದಟ್ಟಣೆ ಸಮಸ್ಯೆ ತಡೆಗಟ್ಟಲು ಶೀಘ್ರದಲ್ಲೇ ಕೆಲವು ಕ್ರಮಗಳನ್ನು ಜಾರಿಗೆ ತರಲಾಗುವುದು. ಸುಗಮ ಸಂಚಾರ ವ್ಯವಸ್ಥೆಗೆ ಜಿಬಿಎ ಹಾಗೂ ಬಿಎಂಆರ್‌ಸಿಎಲ್ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಖಾಸಗಿ ಸಂಸ್ಥೆಗಳ ಸಲಹೆಯನ್ನೂ ಪಡೆದುಕೊಂಡು ವಾಹನ ದಟ್ಟಣೆ ತಗ್ಗಿಸಲಾಗುವುದು’ ಎಂದರು.

‘ಸೈಬರ್ ಅಪರಾಧ ಪ್ರಕರಣಗಳಲ್ಲಿ ವಂಚಕರ ಪತ್ತೆ ಕಾರ್ಯಾಚರಣೆಯನ್ನು ಮತ್ತಷ್ಟು ಚುರುಕುಗೊಳಿಸಲಾಗುವುದು. ಜತೆಗೆ, ಬೆಂಗಳೂರನ್ನು ಮಾದಕ ವಸ್ತು ಮುಕ್ತವನ್ನಾಗಿ ಮಾಡಲು ಎಲ್ಲ ಹಂತದ ಅಧಿಕಾರಿಗಳು ಶ್ರಮಿಸಬೇಕೆಂದು ಸಭೆಯಲ್ಲಿ ಸೂಚನೆ ನೀಡಿದ್ದೇನೆ’ ಎಂದರು.

‘ಹೊರ ರಾಜ್ಯಗಳ ಮೂಲಕ ಕರ್ನಾಟಕಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಮಾದಕ ವಸ್ತು ಪೂರೈಕೆ ಆಗುತ್ತಿದೆ. ಪೂರೈಕೆಯನ್ನೇ ಸ್ಥಗಿತಗೊಳಿಸಿದರೆ ರಾಜ್ಯದಲ್ಲಿ ಮಾದಕ ವಸ್ತುಗಳ ಮಾರಾಟ ಪ್ರಕರಣಗಳನ್ನು ಕಡಿಮೆ ಮಾಡಲು ಸಾಧ್ಯವಾಗಲಿದೆ. ಶೀಘ್ರದಲ್ಲೇ ನೀಲನಕ್ಷೆ ತಯಾರಿಸಲಾಗುವುದು’ ಎಂದರು.

‘ನಗರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡದಂತೆ ಎಚ್ಚರಿಕೆಯಿಂದ ಪೊಲೀಸರು ಕೆಲಸ ಮಾಡಬೇಕು. ಭ್ರಷ್ಟಾಚಾರದ ಆರೋಪ ಬಂದರೆ ವಿಚಾರಣೆ ನಡೆಸಿ ಅಂತಹ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಅಮಾನತು ಮಾಡಲಾಗುವುದು. ಇಲಾಖೆಗೆ ಅಗೌರವ ತರುವ ಕೆಲಸವನ್ನು ಯಾರೂ ಮಾಡಬಾರದು’ ಎಂದು ಎಚ್ಚರಿಕೆ ನೀಡಿದರು.

ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಹೆಚ್ಚುವರಿ ಪೊಲೀಸ್ ಕಮಿಷನರ್ ರಮೇಶ್ ಬಾನೋತ್, ವಂಶಿಕೃಷ್ಣ, ಕುಲದೀಪ್ ಕುಮಾರ್ ಜೈನ್ ಹಾಗೂ ಎಲ್ಲ ವಿಭಾಗದ ಡಿಸಿಪಿಗಳು–ಎಸಿಪಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ದ್ವೇಷ ಭಾಷಣ: ಕ್ರಮಕ್ಕೆ ಸೂಚನೆ

‘ಮಹಿಳೆಯರು ಮತ್ತು ಮಕ್ಕಳ ರಕ್ಷಣೆ ಜತೆಗೆ ದ್ವೇಷ ಭಾಷಣ ಮಾಡುವ ಯಾವುದೇ ಧರ್ಮದ ವ್ಯಕ್ತಿಯಾದರೂ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದ್ದಾರೆ.

‘ಉದ್ಯಮಿಗಳು ಹೂಡಿಕೆ ಮಾಡಬೇಕಾದರೆ ನಗರದಲ್ಲಿ ಸುರಕ್ಷಿತ ವಾತಾವರಣ ನಿರ್ಮಾಣ ಮಾಡಬೇಕು. ಸುರಕ್ಷತೆಗೆ ಇನ್ನಷ್ಟು ಆದ್ಯತೆ ನೀಡಿ ಕೆಲಸ ಮಾಡಬೇಕು’ ಎಂದು ಸಭೆಯಲ್ಲಿ ಆದೇಶಿಸಿದರು.

ಇತ್ತೀಚೆಗೆ ಸೈಬರ್ ವಂಚನೆ ಪ್ರಕರಣಗಳು ಅಧಿಕವಾಗುತ್ತಿವೆ. ಸೈಬರ್ ಪ್ರಕರಣಗಳನ್ನು ತಡೆಗಟ್ಟಲು ಎಷ್ಟೇ ಕ್ರಮ ಕೈಗೊಂಡರೂ ಸಾಧ್ಯವಾಗುತ್ತಿಲ್ಲ. ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಎಕ್ಸ್, ಇನ್‌ಸ್ಟಾಗ್ರಾಂ ಸೇರಿದಂತೆ ಇತರೆ ಜಾಲತಾಣಗಳ ನಿಯಮಗಳ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ನಡೆಸಿ, ಅದರಲ್ಲಿರುವ ಲೋಪದೋಷಗಳ ಬಗ್ಗೆ ಉಲ್ಲೇಖಿಸಿ ಬದಲಾವಣೆಗೆ ಮನವಿ ಮಾಡಿ ಎಂದು ಸಭೆಯಲ್ಲಿದ್ದ ಅಧಿಕಾರಿಗಳಿಗೆ ಸಚಿವರು ನಿರ್ದೇಶನ ನೀಡಿದರು.

ವಿಳಂಬ ಧೋರಣೆ ಸಲ್ಲದು: ಸಚಿವರ ಎಚ್ಚರಿಕೆ

ಸಾರ್ವಜನಿಕರಿಂದ ದೂರು ಬಂದ ಮೇಲೆ ಪರಿಶೀಲಿಸಿ, ಪ್ರಕರಣ ದಾಖಲು ಮಾಡಿಕೊಳ್ಳಬೇಕು. ಪ್ರಕರಣ ದಾಖಲಾದ ನಂತರ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬೇಕು. ದೋಷಾರೋಪ ಪಟ್ಟಿ ಸಲ್ಲಿಸುವುದನ್ನು ಉದ್ದೇಶ ಪೂರ್ವಕವಾಗಿ ವಿಳಂಬ ಮಾಡುವ ಅಥವಾ ಪ್ರಾಸಿಕ್ಯೂಷನ್‌ನಲ್ಲಿ ತಾರತಮ್ಯ ಎಸಗುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಸಚಿವರು ಎಚ್ಚರಿಸಿದರು.

ಮೂರು ತಾಸು ಸಭೆ

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ನಗರ ಪೊಲೀಸ್ ಘಟಕದ ಹಿರಿಯ ಅಧಿಕಾರಿಗಳ ಜತೆಗೆ ಬುಧವಾರ ಮೊದಲ ಬಾರಿಗೆ ಸಭೆ ನಡೆಸಿದರು. ಮೂರು ತಾಸು ನಡೆದ ಸಭೆಯಲ್ಲಿ ಅವರು, ಅಧಿಕಾರಿಗಳಿಗೆ ಹಲವು ಸೂಚನೆಗಳನ್ನು ನೀಡಿ, ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶನ ನೀಡಿದರು.

ಅಪರಾಧ ಸುದ್ದಿಗಳು

ಕಳ್ಳತನ: ಆರೋಪಿ ಬಂಧನ

ಬೆಂಗಳೂರು: ಎಚ್‌ಬಿಆರ್ ಲೇಔಟ್‌ನಲ್ಲಿ ಬಾಲ್ಕನಿಯ ಮೂಲಕ ಮನೆಯೊಳಗೆ ನುಗ್ಗಿ ಚಿನ್ನದ ಆಭರಣ ದೋಚಿದ್ದ ಆರೋಪಿಯನ್ನು ಕೆ.ಜಿ ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಜಿ ಹಳ್ಳಿ ಟ್ಯಾನರಿ ಮುಖ್ಯರಸ್ತೆ ನಿವಾಸಿ ಮುದಾಸೀರ್ (25) ಬಂಧಿತ. ಆರೋಪಿಯಿಂದ 34 ಗ್ರಾಂ ಚಿನ್ನದ ಆಭರಣ ಹಾಗೂ 172 ಗ್ರಾಂ ಬೆಳ್ಳಿಯ ಸಾಮಗ್ರಿ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮೇ 29ರಂದು ದೂರುದಾರರು, ಮನೆಯ ಎರಡನೇ ಮಹಡಿ ಬಾಲ್ಕನಿಯ ಬಾಗಿಲು ತೆರೆದು ಮಲಗಿದ್ದರು. ಬಾಲ್ಕನಿಯ ಮೂಲಕ ಒಳಕ್ಕೆ ನುಗ್ಗಿದ್ದ ಆರೋಪಿ ಕಪಾಟಿನಲ್ಲಿದ್ದ ಆಭರಣವನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದ.

ಮನೆ ಮಾಲೀಕರು ಕೆ.ಜಿ ಹಳ್ಳಿ ಠಾಣೆಗೆ ದೂರು ನೀಡಿದ್ದರು. ಆ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು. ಕೆ.ಜಿ ಹಳ್ಳಿ ರೈಲ್ವೆ ನಿಲ್ದಾಣದ ಬಳಿ, ಅನುಮಾನಾಸ್ಪದವಾಗಿ ಓಡಾಟ ನಡೆಸುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ವಿಚಾರಣೆ ವೇಳೆ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ. ಟ್ಯಾನರಿ ರಸ್ತೆಯ ಮನೆಯಲ್ಲಿ ಬಚ್ಚಿಟ್ಟಿದ್ದ ಆಭರಣಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಅಪಘಾತ: ಯುವಕ ಸಾವು

ಬೆಂಗಳೂರು: ಬಾಣಸವಾಡಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ತಡರಾತ್ರಿ ಸಂಭವಿಸಿದ ಅಪಘಾತದಲ್ಲಿ ಯುವಕ ಮೃತಪಟ್ಟಿದ್ದಾರೆ.

ಸಂತೋಷ್ ಡ್ಯಾನಿಯಲ್ (19) ಮೃತಪಟ್ಟ ಯುವಕ. ಸಂತೋಷ್ ಅವರು ಆಹಾರ ಪದಾರ್ಥಗಳ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದರು.

ಸಂತೋಷ್ ಡ್ಯಾನಿಯಲ್ ಆರ್.ಎಸ್. ಪಾಳ್ಯದಲ್ಲಿ ನೆಲಸಿದ್ದರು. ಸ್ನೇಹಿತೆ ಜೀವಿತಾ(21) ಅವರೊಂದಿಗೆ ಮಂಗಳವಾರ ತಡರಾತ್ರಿ ದ್ವಿಚಕ್ರ ವಾಹನದಲ್ಲಿ ತೆರಳುವಾಗ ಕಮ್ಮನಹಳ್ಳಿ ಮುಖ್ಯ ರಸ್ತೆಯ ಆರ್.ಕೆ.ವಿ ಹಣ್ಣಿನ ಅಂಗಡಿ ಬಳಿ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದು, ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಜೀವಿತಾ ಅವರಿಗೂ ಸಣ್ಣಪುಟ್ಟ ಗಾಯವಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ. ಸಂತೋಷ್ ಡ್ಯಾನಿಯಲ್ ಮದ್ಯ ಸೇವಿಸಿ, ಅತಿವೇಗದಿಂದ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದರು. ಈ ಕಾರಣಕ್ಕೆ ವಾಹನ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಹೇಳಿದರು.

₹25 ಲಕ್ಷ ದೋಚಿದ್ದ ನೇಪಾಳದ ದಂಪತಿ ಸೆರೆ

ಪವನ್ ಬಿಸ್ತಾ

ಸೀತಾ ಬಿಸ್ತಾ

ಬೆಂಗಳೂರು: ಉದ್ಯಮಿ ಮನೆಯಲ್ಲಿ ₹25 ಲಕ್ಷ ದೋಚಿದ್ದ ನೇಪಾಳದ ದಂಪತಿಯನ್ನು ಬಂಧಿಸುವಲ್ಲಿ ಅಮೃತಹಳ್ಳಿ ಠಾಣೆಯ ಪೊಲೀಸರು ಯಶಸ್ವಿ ಆಗಿದ್ದಾರೆ. ಪವನ್ ಬಿಸ್ತಾ ಹಾಗೂ ಸೀತಾ ಬಿಸ್ತಾ ಬಂಧಿತರು.

ನಗರದ ಅರ್ಕಾವತಿ ಲೇಔಟ್‌ನಲ್ಲಿ ಇರುವ ಗುತ್ತಿಗೆದಾರರೊಬ್ಬರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಆರೋಪಿಗಳು, ಮೇ 27ರಂದು ಮನೆಯ ಕಪಾಟಿನಲ್ಲಿದ್ದ ₹25 ಲಕ್ಷ ನಗದು ದೋಚಿ ಪರಾರಿ ಆಗಿದ್ದರು. ಉದ್ಯಮಿ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಯಿತು. ಕೆಂಗೇರಿಯ ಶಿರ್ಕೆ ವೃತ್ತದ ಬಳಿ ವಾಸವಿದ್ದ ದಂಪತಿಯನ್ನು ಬಂಧಿಸಿ, ₹25 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ.

ಉದ್ಯಮಿಯ ಮನೆಯಲ್ಲಿ ಆರೋಪಿ ಪವನ್ ಬಿಸ್ತಾ ಒಂದು ತಿಂಗಳಿನಿಂದ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡಿಕೊಂಡಿದ್ದರೆ, ಅವರ ಪತ್ನಿ ಸೀತಾ ಬಿಸ್ತಾ ಮನೆಗೆಲಸ ಮಾಡಿಕೊಂಡಿದ್ದರು. ಕೆಲಸಗಾರರಿಗೆ ಕೊಡಬೇಕಿದ್ದ ₹25 ಲಕ್ಷವನ್ನು ಮನೆಯ ಕಪಾಟಿನಲ್ಲಿ ಉದ್ಯಮಿ ಇಟ್ಟಿದ್ದರು. ಮೇ 27ರಂದು ಮನೆ ಮಾಲೀಕರು ಕೆಲಸದ ನಿಮಿತ್ತ ಹೊರಗೆ ತೆರಳಿದ್ದರು. ಅದೇ ಸಮಯದಲ್ಲಿ ಆರೋಪಿಗಳು ನಗದು ದೋಚಿ ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದರು.

ಕೆಲಸ ಮುಗಿಸಿ ಮಾಲೀಕರು ಮನೆಗೆ ಬಂದು ನೋಡಿದಾಗ ಕೆಲಸಗಾರರು ಇರಲಿಲ್ಲ. ಕಪಾಟು ತೆರೆದು ನೋಡಿದಾಗ ನಗದು ಇರಲಿಲ್ಲ. ತಕ್ಷಣವೇ ಉದ್ಯಮಿ ಅಮೃತಹಳ್ಳಿ ಠಾಣೆಗೆ ದೂರು ನೀಡಿದ್ದರು ಎಂದು ಮೂಲಗಳು ಹೇಳಿವೆ. ‘ಮನೆಗೆ ತೆರಳುವ ಮಾರ್ಗದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲಿಸಿದಾಗ ಕೆಲಸಗಾರರೇ ಕೃತ್ಯ ಎಸಗಿರುವುದು ಸಾಬೀತಾಯಿತು. ಬಳಿಕ ಮೊಬೈಲ್ ಲೊಕೇಷನ್ ಆಧರಿಸಿ ಆರೋಪಿಗಳಿದ್ದ ಸ್ಥಳವನ್ನು ಪತ್ತೆಹಚ್ಚಿ ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

ರೇಣುಕಸ್ವಾಮಿ ಕೊಲೆ ಪ್ರಕರಣ ಪ್ರಾಸಿಕ್ಯೂಷನ್ ಅರ್ಜಿ ವಜಾ

ಬೆಂಗಳೂರು: ‘ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಸಹ ಆರೋಪಿಗಳಾದ ಸ್ಟೋನಿ ಬ್ರೂಕ್ ರೆಸ್ಟೋರೆಂಟ್ ಮಾಲೀಕ ವಿನಯ್ ಹಾಗೂ ಮೊದಲನೇ ಆರೋಪಿ ಪವಿತ್ರಾ ಗೌಡ ಅವರ ಸಹಾಯಕ ಪವನ್ ಸೇರಿದಂತೆ ಐವರಿಗೆ ಮಂಜೂರು ಮಾಡಲಾಗಿರುವ ಜಾಮೀನು ರದ್ದುಪಡಿಸಬೇಕು’ ಎಂದು ಕೋರಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ತಿರಸ್ಕರಿಸಿದೆ.

ಜಾಮೀನು ರದ್ದು ಕೋರಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿದೆ.

‘ಪ್ರಕರಣದ ಆರೋಪಿಗಳಾದ ವಿನಯ್, ಪವನ್, ರಾಘವೇಂದ್ರ, ನಂದೀಶ್ ಮತ್ತು ಧನರಾಜ್ ಅವರಿಗೆ ನಗರದ ಸೆಷನ್ಸ್ ನ್ಯಾಯಾಲಯ 2024ರ ಡಿಸೆಂಬರ್ 24ರಂದು ಮಂಜೂರು ಮಾಡಿರುವ ಜಾಮೀನು ರದ್ದುಪಡಿಸಬೇಕು’ ಎಂದು ಪ್ರಾಸಿಕ್ಯೂಷನ್ ಈ ಅರ್ಜಿಗಳನ್ನು ಸಲ್ಲಿಸಿತ್ತು.

ವಿನಯ್, ಪವನ್, ಧನರಾಜ್, ರಾಘವೇಂದ್ರ ಪರ ಹೈಕೋರ್ಟ್ ವಕೀಲರಾದ ಆರ್.ರಂಗನಾಥ ರೆಡ್ಡಿ ಮತ್ತು ನಂದೀಶ್ ಪರ ರಾಮಸಿಂಗ್ ವಾದ ಮಂಡಿಸಿದ್ದರು.

ಪಶ್ಚಿಮ ನಗರ ಪಾಲಿಕೆಯಿಂದ ವಿಶೇಷ ಕಾರ್ಯಕ್ರಮ, 3 ತಿಂಗಳಲ್ಲಿ ಅನುಷ್ಠಾನ: ಆಯುಕ್ತ ರಾಜೇಂದ್ರ

ಮಾದರಿ ವಾರ್ಡ್: ಬೀದಿನಾಯಿ ಕಡಿತ ಶೂನ್ಯಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದಿ ನಾಯಿ ಕಡಿತ ಪ್ರಕರಣಗಳನ್ನು ಶೂನ್ಯಗೊಳಿಸಿ, ಪಶುಪಾಲನೆಯಲ್ಲಿ ಮಾದರಿಯಾದ ನಾಲ್ಕು ವಾರ್ಡ್‌ಗಳನ್ನು ಮೂರು ತಿಂಗಳಲ್ಲಿ ರೂಪಿಸುವ ವಿಶೇಷ ಕಾರ್ಯಕ್ರಮ ಆಯೋಜಿಸಲು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಅವರು ಬುಧವಾರ ಸೂಚಿಸಿದರು.

ಪಾಲಿಕೆ ವ್ಯಾಪ್ತಿಯ ಪಶುಪಾಲನಾ ಇಲಾಖೆಯ ಪ್ರಾಣಿ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ಕೇಂದ್ರ (ಎಬಿಸಿ) ಹಾಗೂ ಆ್ಯಂಟಿ ರೇಬಿಸ್ ಲಸಿಕೆ (ಎಆರ್‌ವಿ) ಮೇಲ್ವಿಚಾರಣೆ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಬೀದಿ ನಾಯಿ ದತ್ತು ವಿಶೇಷ ಕಾರ್ಯಕ್ರಮ ಉತ್ತಮವಾಗಿದೆ. ಪಶುಪಾಲನಾ ಇಲಾಖೆಯ ಮಾದರಿ ವಾರ್ಡ್ ನಿರ್ಮಾಣ ವಿಶೇಷ ಕಾರ್ಯಕ್ರಮಕ್ಕೆ ಚಾಲನೆ ನೀಡಬೇಕು. ಮೊದಲ ಹಂತದಲ್ಲಿ ನಾಲ್ಕು ವಾರ್ಡ್‌ಗಳನ್ನು ಇಲಾಖೆಗಳು ಹಾಗೂ ಎನ್‌ಜಿಒಗಳ ಸಹಯೋಗದೊಂದಿಗೆ ಮಾದರಿ ವಾರ್ಡ್‌ಗಳನ್ನಾಗಿಸಿ ಎಂದು ಸೂಚಿಸಿದರು.

ಸುಮನಹಳ್ಳಿ ಎಬಿಸಿ ಕೇಂದ್ರದ ಸಾಮರ್ಥ್ಯವನ್ನು ದ್ವಿಗುಣಗೊಳಿಸಿ, ಈ ಸಮುಚ್ಚಯದಲ್ಲಿರುವ ಘನತ್ಯಾಜ್ಯ ನಿರ್ವಹಣೆ ಘಟಕವನ್ನು ಬೇರೆಡೆಗೆ ಸ್ಥಳಾಂತರಿಸಬೇಕು. ಸಜ್ಜೆಪಾಳ್ಯ ಗ್ರಾಮದ ಸರ್ವೆ ನಂ.3ರಲ್ಲಿ 500 ಬೀದಿ ನಾಯಿಗಳಿಗೆ ನಿರ್ಮಿಸಲಾಗುತ್ತಿರುವ ಬೀದಿ ನಾಯಿಗಳ ಆಶ್ರಯ ತಾಣದ ಕಾಮಗಾರಿಗೆ ವೇಗ ನೀಡಬೇಕು. ಪಾಲಿಕೆಯಾದ್ಯಂತ ಅನಧಿಕೃತ ಮಾಂಸದ ಮಳಿಗೆಗಳನ್ನು ಮುಚ್ಚಿಸಲು ಹಾಗೂ ಮಾಂಸದ ಮಳಿಗೆಗಳ ಸ್ವಚ್ಛತೆಯನ್ನು ಕಾಪಾಡಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪಶುಪಾಲನಾ ವಿಭಾಗದ ಮುಖ್ಯ ಪಶು ವೈದ್ಯಾಧಿಕಾರಿಗಳಾದ ಡಾ. ವೆಂಕಟೇಶ್ ಕೆ.ವಿ., ಶ್ರೀರಂಗರಾಜು ಇದ್ದರು.

28ರಿಂದ ಪೋಲಿಯೊ ಲಸಿಕೆ

‘ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಜೂನ್ 28ರಿಂದ ಜುಲೈ 1ರವರೆಗೆ ಪಲ್ಸ್ ಪೋಲಿಯೊ ಕಾರ್ಯಕ್ರಮ ನಡೆಯಲಿದ್ದು, ಅಗತ್ಯ ಪ್ರಚಾರ, ಮಾಹಿತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಶೇ 100ರಷ್ಟು ಲಸಿಕಾಕರಣ ಆಗಬೇಕು’ ಎಂದು ಪಾಲಿಕೆಯ ಹೆಚ್ಚುವರಿ ಅಭಿವೃದ್ಧಿ ಆಯುಕ್ತೆ ಕವಿತಾ ರಾಜಾರಾಂ ಅಧಿಕಾರಿಗಳಿಗೆ ಸೂಚಿಸಿದರು.

ಮಾದರಿ ವಾರ್ಡ್ ವಿಶೇಷ

- ಬೀದಿ ನಾಯಿ ಕಡಿತ ಪ್ರಕರಣಗಳು ಶೂನ್ಯ
- ನಾಯಿ ಮರಿಗಳು ಶೂನ್ಯ
- ಶೇ 100ರಷ್ಟು ಬೀದಿ ನಾಯಿಗಳಿಗೆ ಎಬಿಸಿ ಕಾರ್ಯ
- ಶೇ 100ರಷ್ಟು ಬೀದಿ ನಾಯಿಗಳಿಗೆ ರೇಬಿಸ್ ಲಸಿಕೆ
- ಶೇ 100ರಷ್ಟು ಶಾಲಾ, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಲ್ಲಿ ಅರಿವು ಕಾರ್ಯಕ್ರಮ
- ಶೇ 100ರಷ್ಟು ಪರವಾನಗಿ ಹೊಂದಿದ ಮಾಂಸದ ಮಳಿಗೆ

ಮುದ್ದುಪ್ರಾಣಿ ಸ್ನೇಹಿ ಉದ್ಯಾನ

ಸಾಕು ಪ್ರಾಣಿಗಳ ವಿಹಾರಕ್ಕೆ ವ್ಯವಸ್ಥೆ ಇರುವ ‘ಮುದ್ದುಪ್ರಾಣಿ ಸ್ನೇಹಿ ಉದ್ಯಾನ’ಗಳನ್ನು ನಾಲ್ಕು ವಿಧಾನಸಭಾ ಕ್ಷೇತ್ರದಲ್ಲಿ ತಲಾ ಒಂದರಂತೆ ನಿರ್ಮಿಸಲು ಡಾ. ಕೆ.ವಿ. ರಾಜೇಂದ್ರ ಸೂಚಿಸಿದರು.

ಮೂರು ಸಂಚಾರಿ ಪಶುಚಿಕಿತ್ಸಾಲಯ/ರೆಸ್ಕ್ಯೂ ವಾಹನ ಕಾರ್ಯಾರಂಭಿಸಬೇಕು. ಪ್ರತಿ ದಿನ ಎರಡೂ ವಲಯಗಳಿಂದ 35 ನಾಯಿಗಳ ಶಸ್ತ್ರಚಿಕಿತ್ಸೆ, ಪ್ರತಿ ದಿನ 150 ಬೀದಿ ನಾಯಿಗಳಿಗೆ ಲಸಿಕೆ ಹಾಕುವ ಗುರಿ ಸಾಧಿಸಬೇಕು ಎಂದು ಆದೇಶಿಸಿದರು.

ಮೂಲಸೌಕರ್ಯಕ್ಕಾಗಿ ನಗರಸಭೆಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ‘ತೋಟದಗುಡ್ಡದಹಳ್ಳಿ 8ನೇ ವಾರ್ಡ್ ಬಡಾವಣೆಗೆ ಮೂಲಸೌಲಭ್ಯ ಕಲ್ಪಿಸಬೇಕು’ ಎಂದು ಆಗ್ರಹಿಸಿ ನಿವಾಸಿಗಳು ಮಾದನಾಯಕನಹಳ್ಳಿ ನಗರಸಭೆಗೆ ಬುಧವಾರ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

‘ನೀರು, ರಸ್ತೆ, ಚರಂಡಿ, ಸ್ವಚ್ಛತೆ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು ಸ್ಪಂದಿಸಿಲ್ಲ. ಕಸ ವಿಲೇವಾರಿ ಸಮರ್ಪಕವಾಗಿಲ್ಲ. ಎಂಜಿನಿಯರ್‌ಗಳಾದ ಶ್ವೇತಾ, ಕೊಟ್ರೇಶ್ ಸಮಸ್ಯೆ ಬಗೆಹರಿಸುತ್ತಿಲ್ಲ’ ಎಂದು ನಿವಾಸಿ ಸಂಪತ್ ಕುಮಾರ್ ದೂರಿದರು.

‘ಮಳೆ ಬಂದಾಗ ಮೋರಿ ಕಟ್ಟಿಕೊಂಡು ನೀರು ಮನೆಗಳಿಗೆ ನುಗ್ಗುತ್ತಿದೆ. ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಿದ್ದು, ಸಂಚಾರ ಕಷ್ಟಕರವಾಗಿದೆ’ ಎಂದು ನಿವಾಸಿ ಶ್ರೀನಿವಾಸ್ ಮೂರ್ತಿ ಬೇಸರ ವ್ಯಕ್ತಪಡಿಸಿದರು.

ಗೃಹಿಣಿ ಸರೋಜ ಮಾತನಾಡಿ, ‘ಕೊಳವೆಬಾವಿಗಳು ಕೆಟ್ಟು ಮೂರು ತಿಂಗಳಾಗಿದೆ. ದೂರು ನೀಡಿದರೂ ಇದುವರೆಗೂ ಸರಿಪಡಿಸಿಲ್ಲ. ನೀರಿಲ್ಲದೆ ಟ್ಯಾಂಕರ್‌ಗಳನ್ನು ಅವಲಂಬಿಸಿದ್ದೇವೆ’ ಎಂದರು.

ಕಸ: ₹10,000 ಕೋಟಿ ಕಿಕ್ ಬ್ಯಾಕ್– ಆರೋಪ

ಒಂದನೇ ಪುಟದಿಂದ...

ಬೆಂಗಳೂರಿನಲ್ಲಿ ಪ್ರತಿ ವರ್ಷ ಕಸ ಸಂಗ್ರಹ ಮತ್ತು ಸಾಗಣೆಗೆ ₹514 ಕೋಟಿ, ಸಂಸ್ಕರಣೆ ಮತ್ತು ವಿಲೇವಾರಿಗೆ ₹380 ಕೋಟಿ ಖರ್ಚು ಮಾಡಲಾಗುತ್ತಿದೆ. 11 ಸಾವಿರ ಪೌರ ಕಾರ್ಮಿಕರ ವೇತನಕ್ಕಾಗಿ ವರ್ಷಕ್ಕೆ ₹444 ಕೋಟಿ ಖರ್ಚಾಗುತ್ತಿದೆ. ಎಲ್ಲ ಸೇರಿ ವರ್ಷಕ್ಕೆ ಒಟ್ಟು ₹1,344 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ಈವರೆಗೆ ರಾಜ್ಯದ ಗುತ್ತಿಗೆದಾರರಿಗೆ ಈ ಕೆಲಸವನ್ನು ನೀಡಲಾಗುತ್ತಿತ್ತು. ಇದೇ ಮೊದಲ ಬಾರಿಗೆ ಭಾರಿ ಮೊತ್ತದ ಟೆಂಡರ್ ಅನ್ನು ದೆಹಲಿಯ ಕಂಪನಿಗೆ ನೀಡಲಾಗುತ್ತಿದೆ. ಪ್ರತಿ ವರ್ಷ ಟೆಂಡರ್ ಕರೆಯಲಾಗುತ್ತಿತ್ತು. ಈ ಬಾರಿ 30 ವರ್ಷ ಹಾಗೂ ಇನ್ನೂ ವಿಸ್ತರಣೆಯ ಅವಕಾಶ 5 ವರ್ಷ ಸೇರಿ ಒಟ್ಟು 35 ವರ್ಷಗಳಿಗೆ ಟೆಂಡರ್ ನೀಡಲಾಗಿದೆ ಎಂದು ದೂರಿದರು.

ಬೆಂಗಳೂರು ಉತ್ತರ ಮತ್ತು ದಕ್ಷಿಣಕ್ಕೆ ಎರಡು ಪ್ಯಾಕೇಜ್ ಮಾಡಲಾಗಿದೆ. ಇದಕ್ಕೂ ಮುನ್ನ ಸರ್ಕಾರಿ ಸ್ವಾಮ್ಯದ ರೈಟ್ಸ್ ಕಂಪನಿಯಿಂದ ಸಲಹೆ ಪಡೆದು, ಬಳಿಕ ಆ ಸಲಹೆಯನ್ನು ಕಸದ ಬುಟ್ಟಿಗೆ ಹಾಕಲಾಗಿದೆ. ಮಾನ್ಯತೆಯೇ ಇಲ್ಲದ ಕಂಪನಿಗೆ ಸಲಹೆಗಾಗಿ ಅವಕಾಶ ನೀಡಲಾಗಿದೆ. ಈಗ ಕಸದ ಟೆಂಡರ್ ಅನ್ನು ಎಂಎಸ್‌ಡಬ್ಲ್ಯು ಕಂಪನಿಗೆ ನೀಡಿ, ₹1,500 ಕೋಟಿ ಸಾಲ ಪಡೆಯಲು ಕೂಡ ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಜಮೀನನ್ನು ಕೂಡ ಸರ್ಕಾರವೇ ನೀಡುತ್ತದೆ ಎಂದರು.

ದೆಹಲಿಯ ಸೂಚನೆ: ‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮೊದಲೇ ಸಂಪುಟಕ್ಕೆ ತಂದು ಅನುಮೋದನೆ ಪಡೆಯಲಾಗಿದೆ. ಅನುಮೋದನೆ ನೀಡಬೇಕು ಎಂದು ಸಿದ್ದರಾಮಯ್ಯ ಅವರಿಗೆ ದೆಹಲಿಯಿಂದ ಸೂಚನೆ ಬಂದಿತ್ತು. ಸಚಿವ ಸಂಪುಟ ಸಭೆಗೆ ಈ ಕಡತ ಬಂದಾಗ 10 ಸಚಿವರು ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿದ್ದರು. ಇದರಿಂದ ಜಿಬಿಎ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆ ಆಗುತ್ತದೆ ಎಂಬುದಾಗಿ ಆತಂಕ ವ್ಯಕ್ತಪಡಿಸಿದ್ದರು. ಅದಕ್ಕೆ ಸಿದ್ದರಾಮಯ್ಯ ಅವರು ಮೇಲಿನಿಂದ ಬಂದ ಸೂಚನೆ ಎಂದು ಸಮಜಾಯಿಷಿ ನೀಡಿದ್ದರು’ ಎಂದು ಅಶೋಕ ಹೇಳಿದರು.

ಸಿದ್ದರಾಮಯ್ಯ ಅವಧಿಯಲ್ಲಿ ಟೆಂಡರ್ ಪರಿಶೀಲನೆಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ನೇತೃತ್ವದ ಸಮಿತಿ ರಚಿಸಿದರೆ, ಈಗಿನ ಮುಖ್ಯಮಂತ್ರಿ ಶಿವಕುಮಾರ್ ಅದನ್ನು ರದ್ದು ಮಾಡಿ, ಅಂಜುಂ ಪರ್ವೇಜ್ ಹಾಗೂ ಪಿ.ಸಿ. ಜಾಫರ್ ನೇತೃತ್ವದ ಸಮಿತಿ ರಚಿಸಿ ಕೇವಲ ಏಳು ದಿನಗಳ ಕಾಲಾವಕಾಶ ನೀಡಿದ್ದಾರೆ ಎಂದರು.

ಇದೇ ಕಾರಣಕ್ಕೆ ಬೆಂಗಳೂರಿನ ಹೊಣೆ ವಹಿಸಿಕೊಳ್ಳಲು ಸಚಿವರ ಮಧ್ಯೆ ಪೈಪೋಟಿ ಏರ್ಪಟ್ಟಿದೆ. ಕೂಡಲೇ ಟೆಂಡರ್ ರದ್ದು ಮಾಡಬೇಕು ಎಂದು ಅಶೋಕ ಆಗ್ರಹಿಸಿದರು.

ಮಾಫಿಯಾಕ್ಕೆ ಅಶೋಕ ಏಜೆಂಟ್

ಒಂದನೇ ಪುಟದಿಂದ...

ಟೆಂಡರ್‌ನಲ್ಲಿ ₹10 ಸಾವಿರ ಕೋಟಿ ಕಿಕ್ ಬ್ಯಾಕ್ ಪಡೆಯಲಾಗಿದೆ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, ‘ಅವರಿಗೆ ಏನೇನು ಕಸ ಬೇಕೋ ಲಾರಿಯಲ್ಲಿ ತುಂಬಿ ಕಳುಹಿಸಿಕೊಡೋಣ. ಈ ಹಿಂದೆ ಎಚ್‌.ಡಿ. ಕುಮಾರಸ್ವಾಮಿ ಇದನ್ನೇ ಮಾತನಾಡಿದ್ದರು. ಬೆಂಗಳೂರಿನಲ್ಲಿ ದೊಡ್ಡ ಕಸದ ಲಾಬಿ ಇದೆ. ಅವರ ಕಾಲದಲ್ಲಿ ಯಾಕೆ ಕಸದ ಟೆಂಡರ್ ಮಾಡಲು ಆಗಲಿಲ್ಲ? ಈ ಹಿಂದೆ 14-15 ಜನರಿಗೆ ಕಸದಿಂದ ಇಂಧನ ಉತ್ಪಾದನೆಗೆ ಅವಕಾಶ ನೀಡಿದ್ದೆವು. ಒಬ್ಬರೂ ಯಶಸ್ವಿಯಾಗಿರಲಿಲ್ಲ. ನಾನು ಈ ನಿರ್ಧಾರ ಕೈಗೊಳ್ಳುವ ಮುನ್ನ ದೆಹಲಿ, ಹೈದರಾಬಾದ್, ಚೆನ್ನೈಗೆ ಹೋಗಿ ಅಧ್ಯಯನ ಮಾಡಿದ್ದೇನೆ’ ಎಂದರು.

‘ಯಾವ ತನಿಖೆ ಬೇಕಾದರೂ ಮಾಡಿಸಲಿ’

‘ಈಗ ಕಸ ವಿಲೇವಾರಿಗೆ ₹6 ಸಾವಿರ ಕೋಟಿ ಹೂಡಿಕೆ ಮಾಡುತ್ತಾರೆ. ನಮ್ಮಲ್ಲಿ ಎಲ್ಲೂ ಜಾಗ ಲಭ್ಯವಾಗಲಿಲ್ಲ. ಹೀಗಾಗಿ ದೊಡ್ಡಬಳ್ಳಾಪುರದಲ್ಲಿ ಜಾಗ ಖರೀದಿ ಮಾಡಲು ತೀರ್ಮಾನಿಸಲಾಗಿದೆ. ಬೇರೆ ಕಡೆ ಯಾರಾದರೂ ಜಾಗ ಕೊಡಲು ಸಿದ್ಧರಿದ್ದರೆ ಮುಂದೆ ಬರಬಹುದು. ಅರವಿಂದ ಲಿಂಬಾವಳಿ ಅವರು ಕಸ ಸಾಗಿಸುವುದನ್ನೇ ನಿಲ್ಲಿಸಿದ್ದರು. ಶಾಸಕರ ಒತ್ತಡದ ಮೇರೆಗೆ ₹800 ಕೋಟಿ ಅನುದಾನವನ್ನು ನೀಡಿದ್ದೇವೆ. ಕಸದಿಂದ ಅನಿಲ ಹಾಗೂ ವಿದ್ಯುತ್ ಉತ್ಪಾದನೆ ಆಗಬೇಕು. ಬಿಜೆಪಿಯವರು ಯಾವ ತನಿಖೆ ಬೇಕಾದರೂ ಮಾಡಲಿ. ಎಲ್ಲಾದರೂ ವರದಿ ನೀಡಲಿ. ₹36 ಸಾವಿರ ಕೋಟಿ ಅಲ್ಲ, ಕೇವಲ ₹10 ಕೋಟಿ ಹಣ ದುರ್ಬಳಕೆಯಾದರೂ ತನಿಖೆ ಮಾಡಿಸಲಿ. ಎದುರಿಸಲು ನಾನು ಸಿದ್ಧ’ ಎಂದರು.

ದೇಶದ ಇತಿಹಾಸದಲ್ಲಿ ಕಸದ ಹೆಸರಿನಲ್ಲಿ ಲೂಟಿ ಮಾಡಿರುವ ಹಗರಣ ಇದೇ ಮೊದಲು. ಇದು ಹೈಕಮಾಂಡ್‌ಗೆ ಕಪ್ಪ ಕಾಣಿಕೆ ಸಲ್ಲಿಸುವ ಟೆಂಡರ್ ಆಗಿದೆ

ಆರ್.ಅಶೋಕ, ವಿರೋಧಪಕ್ಷದ ನಾಯಕ

ಟನ್ ಟಿಪ್ಪಿಂಗ್‌ಗೆ ಶೇ 950 ಅಧಿಕ ಶುಲ್ಕ

ಈಗ ಪ್ರತಿ ಟನ್ ಟಿಪ್ಪಿಂಗ್ ಶುಲ್ಕವಾಗಿ ₹260 ನೀಡಲಾಗುತ್ತಿದೆ. ಹೊಸ ಟೆಂಡರ್‌ನಲ್ಲಿ ₹2,400 ನೀಡಲು ಪ್ರಸ್ತಾವಿಸಲಾಗಿದೆ. ಶೇ 950 ರಷ್ಟು ಅಧಿಕವಾಗಿದೆ ಎಂದು ಅಶೋಕ ದೂರಿದರು.

ಹಳೆ ವೆಚ್ಚದಲ್ಲೇ ಮುಂದುವರಿಸಿದರೆ 30 ವರ್ಷಕ್ಕೆ ₹6,117 ಕೋಟಿ ಆಗುತ್ತದೆ. ಹೊಸ ಟೆಂಡರ್‌ನಿಂದ ಈ ಖರ್ಚು ₹39,437 ಕೋಟಿ ಆಗುತ್ತದೆ. ಹೆಚ್ಚುವರಿಯಾಗಿ ₹33,320 ಕೋಟಿ ವೆಚ್ಚವಾಗುತ್ತದೆ. ಟೆಂಡರ್ ಪ್ರಕಾರ, ದಕ್ಷಿಣದ ಪ್ಯಾಕೇಜ್‌ನಲ್ಲಿ ಶೇ 19.43 ಹಾಗೂ ಉತ್ತರ ಪ್ಯಾಕೇಜ್‌ನಲ್ಲಿ ಶೇ 19.25 ಅಧಿಕ ಮೊತ್ತ ನಮೂದಾಗಿದೆ. ಎರಡೂ ಪ್ಯಾಕೇಜ್ ಸೇರಿ ಒಟ್ಟಾಗಿ ಶೇ 19.33 ಹೆಚ್ಚಾಗಿದೆ ಎಂದರು.

ಮೊದಲೆರಡು ಬಾರಿ ಟೆಂಡರ್ ಕರೆದು ವಿಫಲವಾಗಿ ಮೂರನೇ ಬಾರಿಗೆ ದೆಹಲಿಯ ಎಂಎಸ್‌ಡಬ್ಲ್ಯು ಸೊಲ್ಯೂಷನ್ಸ್ ಲಿಮಿಟೆಡ್ ಅಥವಾ ರಾಮ್‌ಕಿ ಕಂಪನಿಗೆ (ಮಾತೃ ಸಂಸ್ಥೆ) ನೀಡಲಾಗಿದೆ. ಈ ಟೆಂಡರ್ ಪ್ರಕಾರ, ಒಂದು ಟನ್ ಸಂಸ್ಕರಣೆಯ ಖರ್ಚು ಶೇ 430 ಹೆಚ್ಚಾಗಲಿದೆ. ಈಗ ಟನ್‌ಗೆ ₹2,151 ಆಗಿದ್ದರೆ, 30 ವರ್ಷದ ನಂತರ ₹9,297 ಆಗುತ್ತದೆ. ಕಾನೂನು ಪ್ರಕಾರ ಪತ್ರಿಕೆಗಳಲ್ಲಿ ಜಾಹೀರಾತು ನೀಡಬೇಕಿದ್ದರೂ, ಅದನ್ನು ಮಾಡದೆ ಟೆಂಡರ್ ಕರೆದು ಅಕ್ರಮ ಎಸಗಲಾಗಿದೆ ಎಂದು ಅವರು ದೂರಿದರು.

ಆರ್ಥಿಕ ಇಲಾಖೆ ತಕರಾರು

ಎರಡೂ ಪ್ಯಾಕೇಜ್‌ಗಳನ್ನು ಒಂದೇ ಕಂಪನಿಗೆ ನೀಡಿರುವುದು, 35 ವರ್ಷಗಳ ದೀರ್ಘ ಅವಧಿ ಮುಂತಾದ ಅಂಶಗಳ ಬಗ್ಗೆ ಹಣಕಾಸು ಇಲಾಖೆ ಆಕ್ಷೇಪ ವ್ಯಕ್ತಪಡಿಸಿದೆ. ಅವಧಿಯನ್ನು 10 ವರ್ಷಕ್ಕೆ ಇಳಿಸಿ, ಹೆಚ್ಚಿನ ಮೊತ್ತವನ್ನು ಶೇ 2.5 ಕ್ಕೆ ಇಳಿಸಬೇಕು. ಇಲ್ಲವಾದರೆ ಜಿಬಿಎಗೆ ಮುಂದೆ ಹೊರೆಯಾಗುತ್ತದೆ ಎಂದು ಹಣಕಾಸು ಇಲಾಖೆ ಸಲಹೆ ನೀಡಿದೆ. ಅಲ್ಲದೇ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರು ಮುಖ್ಯಮಂತ್ರಿಗೆ ಪತ್ರ ಬರೆದು, ಇದರಲ್ಲಿನ ಲೋಪಗಳನ್ನು ಎತ್ತಿ ತೋರಿಸಿದ್ದಾರೆ ಎಂದು ಅಶೋಕ ಹೇಳಿದರು.

ರಾಮ್‌ಕಿ ಕಂಪನಿಯ ಮೇಲೆ ವಂಚನೆಯ ಆರೋಪವಿದೆ. ಅದು ನಿಯಮಗಳನ್ನು ಉಲ್ಲಂಘಿಸಿದೆ ಎಂದು ವಿಶ್ವ ಬ್ಯಾಂಕ್ ಹೇಳಿತ್ತು. ಹೀಗಾಗಿ ಇದನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. 2016ರಲ್ಲಿ ಬಿಬಿಎಂಪಿಯಿಂದಲೇ ರಾಮ್‌ಕಿ ಕಂಪನಿಯ ಗುತ್ತಿಗೆ ರದ್ದು ಮಾಡಲಾಗಿತ್ತು. ಇಷ್ಟಿದ್ದರೂ ಇದೇ ಕಂಪನಿಗೆ ಮುಖ್ಯಮಂತ್ರಿ ಶಿವಕುಮಾರ್ ಮತ್ತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಟೆಂಡರ್ ನೀಡಿದ್ದಾರೆ ಎಂದು ದೂರಿದರು.

ಮುಖ್ಯ ಜೀವವಿಮಾ ಸಲಹೆಗಾರರ ಕ್ಷೇಮಾಭಿವೃದ್ಧಿ ಸಂಘವು ನಗರದಲ್ಲಿ ಈಚೆಗೆ ಆಯೋಜಿಸಿದ್ದ ಗುರು–ಶಿಷ್ಯರ ಸಮ್ಮೇಳನದಲ್ಲಿ ಸಂಘದ ಅಧ್ಯಕ್ಷ ನರಸಿಂಹಯ್ಯ ಬಿ., ಕಾರ್ಯದರ್ಶಿ ಎಚ್.ಎಂ. ವಿರುಪಾಕ್ಷಪ್ಪ, ಸಂಘದ ಬೆಂಗಳೂರು–01 ವಿಭಾಗದ ಅಧ್ಯಕ್ಷ ಹರಿನಾಥ ರೆಡ್ಡಿ, ಕಾರ್ಯದರ್ಶಿ ಮೋಹನ್‌ಕುಮಾರ್, ಖಜಾಂಚಿ ಡಿ.ಪುಟ್ಟರಾಜು ಮೊದಲಾದವರು ಭಾಗವಹಿಸಿದ್ದರು.

ಘರ್ಷಣೆ: 8 ವಿದ್ಯಾರ್ಥಿಗಳಿಗೆ ಗಾಯ

ಪ್ರಜಾವಾಣಿ ವಾರ್ತೆ

ಕುಂದಾಣ (ದೇವನಹಳ್ಳಿ): ತಾಲ್ಲೂಕಿನ ಕುಂದಾಣದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಂಗಳವಾರ ತಡರಾತ್ರಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವೆ ಘರ್ಷಣೆ ಸಂಭವಿಸಿ, ಎಂಟಕ್ಕೂ ಹೆಚ್ಚು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ.

ಒಂದು ವಿದ್ಯಾರ್ಥಿಗಳ ಗುಂಪು, ಬೆಲ್ಟ್‌ಗಳಿಂದ ಮತ್ತೊಂದು ಗುಂಪಿನ ಮೇಲೆ ಹಲ್ಲೆ ನಡೆಸಿದೆ. ವಸತಿ ನಿಲಯದಲ್ಲಿ ಕೆಲವು ವಿದ್ಯಾರ್ಥಿಗಳು ತಮ್ಮ ಮಾತು ಕೇಳುತ್ತಿಲ್ಲ. ಬಟ್ಟೆ ಒಗೆದು ಕೊಡುತ್ತಿಲ್ಲ, ಹೋಂವರ್ಕ್ ಮಾಡುತ್ತಿಲ್ಲ ಎಂಬ ಕಾರಣಕ್ಕೆ ಇತರ ವಿದ್ಯಾರ್ಥಿಗಳ ವಸತಿ ಕೊಠಡಿಗಳಿಗೆ ನುಗ್ಗಿ ಹಲ್ಲೆ ನಡೆಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ವಿಶ್ವನಾಥಪುರ ಪೊಲೀಸರು ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಪಾಂಡುರಂಗ ಅವರು ಘಟನೆಯ ಕುರಿತು ಮಾಹಿತಿ ಸಂಗ್ರಹಿಸಿದರು.

ಯೋಜನೆ ಅನುಷ್ಠಾನದಲ್ಲಿ ಕೊಂಡಿಯಾಗಿ: ಡಿಕೆಶಿ ಕರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನಿಮ್ಮ ಶಕ್ತಿ ಅದಮ್ಯ. ನೀವು ಮನಸ್ಸು ಮಾಡಿದರೆ ಅಭಿವೃದ್ಧಿ ರಥ ಮುನ್ನುಗ್ಗುತ್ತದೆ. ಹೀಗಾಗಿ ಕರ್ನಾಟಕದ ಸರ್ವತೋಮುಖ ಪ್ರಗತಿಗೆ ಕೈಜೋಡಿಸಿ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಐಎಎಸ್, ಐಪಿಎಸ್ ಹಾಗೂ ಐಎಫ್‌ಎಸ್ ಅಧಿಕಾರಿಗಳಿಗೆ ಕರೆ ನೀಡಿದರು.

ಕರ್ನಾಟಕ ಭವನದಲ್ಲಿ ಅಧಿಕಾರಿಗಳ ಜತೆ ಬುಧವಾರ ರಾತ್ರಿ ಏರ್ಪಡಿಸಿದ್ದ ಔತಣಕೂಟ, ಸಂವಾದದಲ್ಲಿ ಅವರು ಈ ಮನವಿ ಮಾಡಿದರು.

‘ನಿಮ್ಮಲ್ಲಿ ಅಪಾರ ಜ್ಞಾನ ಸಂಪತ್ತಿದೆ. ಸಾಮರ್ಥ್ಯ ಇದೆ. ನಿಮ್ಮಲ್ಲಿರುವ ಅಗಾಧ ಪ್ರತಿಭೆಯನ್ನು ಕರ್ನಾಟಕದ ಪ್ರಗತಿಗೆ ವಿನಿಯೋಗಿಸಿ. ನಿಮಗೆ ಬೇಕಾದ ಸಹಕಾರವನ್ನು ಸರ್ಕಾರ ನೀಡಲಿದೆ’ ಎಂದು ಅವರು ತಿಳಿಸಿದರು.

‘ಕೇಂದ್ರ ಸರ್ಕಾರದ ಅನೇಕ ಯೋಜನೆಗಳ ಲಾಭ ರಾಜ್ಯಕ್ಕೆ ದೊರೆಯುವಂತೆ ಮಾಡುವಲ್ಲಿ ನಿಮ್ಮ ಸಹಕಾರ ಬಹು ಮುಖ್ಯ. ಕರ್ನಾಟಕದಲ್ಲಿರುವ ನಿಮ್ಮದೇ ಸಹೋದ್ಯೋಗಿಗಳ ಜತೆ ನಿರಂತರ ಸಂಪರ್ಕ, ಸಮಾಲೋಚನೆ ನಡೆಸಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ. ಬಾಕಿ ಇರುವ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಿ’ ಎಂದರು.

‘ನೀವು 35 ವರ್ಷ ಸೇವೆಯಲ್ಲಿರುತ್ತೀರಿ. ನಾವು ರಾಜಕಾರಣಿಗಳು ಐದು ವರ್ಷಕ್ಕೊಮ್ಮೆ ಹಗ್ಗಜಗ್ಗಾಟ ನಡೆಸುತ್ತೇವೆ. ಆದರೆ, ಒಂದು ಸರ್ಕಾರಕ್ಕೆ ಉತ್ತಮ ಹೆಸರು ತರುವ ಶಕ್ತಿ ನಿಮ್ಮ ಕೈಯಲ್ಲೇ ಇದೆ. ನಾನು ಅಧಿಕಾರಕ್ಕಾಗಿ ಅಧಿಕಾರ ಮಾಡುವವನಲ್ಲ. ಏನಾದರೂ ಸಾಧನೆ ಮಾಡಬೇಕೆಂಬ ಛಲಕ್ಕೆ ಅಧಿಕಾರ ಬಳಸುವವನು. ನಿಮ್ಮ ಸಹಕಾರ ಇದ್ದರೆ ಸಾಧನೆ ಅಸಾಧ್ಯವಲ್ಲ’ ಎಂದರು.

ಡಾ.ಮನಮೋಹನ್ ಸಿಂಗ್ ವಿಶ್ವವಿದ್ಯಾಲಯ: ವಿಚಾರ ಸಂಕಿರಣದಲ್ಲಿ ಕಾಂತರಾಜ ಆತಂಕ

ಹೊರಗುತ್ತಿಗೆ: ಸಮಾನತೆ ಆಶಯಕ್ಕೆ ಕಂಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೊರಗುತ್ತಿಗೆ ನೇಮಕಾತಿ ಪದ್ಧತಿಯು ಸಾಮಾಜಿಕ ನ್ಯಾಯ ಮತ್ತು ಸಂವಿಧಾನದ ಸಮಾನತೆಯ ಆಶಯಕ್ಕೆ ಕಂಟಕ ತರುತ್ತದೆ’ ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್. ಕಾಂತರಾಜ ಆತಂಕ ವ್ಯಕ್ತಪಡಿಸಿದರು.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯವು ಬುಧವಾರ ಇಲ್ಲಿ ಆಯೋಜಿಸಿದ್ದ ‘ಸಮಕಾಲೀನ ಭಾರತದಲ್ಲಿ ಸಾಂವಿಧಾನಿಕ ಸಂರಕ್ಷಣೆ ಮತ್ತು ಸಾಮಾಜಿಕ ಪರಿವರ್ತನೆ’ ಕುರಿತ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ರಾಜ್ಯದಲ್ಲಿ ಶೇ 40ರಷ್ಟು ಹುದ್ದೆಗಳನ್ನು ಹೊರಗುತ್ತಿಗೆ ಮೂಲಕವೇ ತುಂಬುತ್ತಿದ್ದು, ಮೀಸಲಾತಿ ನಿಯಮ ಪಾಲಿಸದಿರುವುದರಿಂದ ದಲಿತ ಮತ್ತು ಹಿಂದುಳಿದ ವರ್ಗಗಳ ಜನರಿಗೆ ವಂಚನೆಯಾಗಿದೆ’ ಎಂದು ಹೇಳಿದರು.

‘ಸಾಮಾಜಿಕ ಸಮಾನತೆಯ ಉದ್ದೇಶದಿಂದ ಸಂವಿಧಾನದಲ್ಲಿ ಖಾತರಿಪಡಿಸಲಾಗಿರುವ ಮೀಸಲಾತಿ ಸೌಲಭ್ಯದ ಅನುಷ್ಠಾನಕ್ಕೆ ಸಂಬಂಧಿಸಿ ಸದ್ಯ ಮುನ್ನೆಲೆಗೆ ಬಂದಿರುವ ಒಳಮೀಸಲಾತಿ, ಕೆನೆಪದರ ಪ್ರಸ್ತಾಪ ಮತ್ತು ಮತಾಂತರಗೊಂಡವರ ಹಕ್ಕುಗಳ ಬಗ್ಗೆಯೂ ಚರ್ಚೆಯಾಗಬೇಕು’ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ವಿಧಾನ ಪರಿಷತ್ತಿನ ಸದಸ್ಯ ರಮೇಶ್ ಬಾಬು, ‘ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದವರಿಗೂ ಮೀಸಲಾತಿ ಸೌಲಭ್ಯ ಕಲ್ಪಿಸಿದ್ದು, ಜಾತಿಗಣತಿಗೂ ಚಾಲನೆ ದೊರೆತಿರುವುದು ಆಶಾದಾಯಕ’ ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ರಮೇಶ್ ಬಿ. ‘ವಿದ್ಯಾರ್ಥಿಗಳು ಸಂವಿಧಾನದ ಆಶಯಗಳ ಬಗ್ಗೆ ಗಂಭೀರ ಅಧ್ಯಯನ ನಡೆಸಬೇಕು’ ಎಂದರು.

ವಿಶ್ವವಿದ್ಯಾಲಯದ ಒಬಿಸಿ ಮತ್ತು ಅಲ್ಪಸಂಖ್ಯಾತರ ಘಟಕ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಿಂಡಿಕೇಟ್ ಸದಸ್ಯ ಶಿವಕುಮಾರ್, ಘಟಕದ ವಿಶೇಷಾಧಿಕಾರಿ ಪ್ರೊ.ಎಂ.ನಿರ್ಮಲಾ, ಉಪನ್ಯಾಸಕ ನಾಗರಾಜ್ ಆರ್.ಕೆ. ಪಾಲ್ಗೊಂಡಿದ್ದರು.



ಸೆಂಟ್ರಲ್ ಕಾಲೇಜಿನಲ್ಲಿ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯವು ಬುಧವಾರ ಏರ್ಪಡಿಸಿದ್ದ ವಿಚಾರ ಸಂಕಿರಣಕ್ಕೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್. ಕಾಂತರಾಜ ಚಾಲನೆ ನೀಡಿದರು

ಸಂವಾದ ಗೋಷ್ಠಿ

‘ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ಅಂಚಿನಲ್ಲಿರುವ ಸಮುದಾಯಗಳ ಸಾಂವಿಧಾನಿಕ ಹಕ್ಕುಗಳ ರಕ್ಷಣೆ’ ಕುರಿತ ಸಂವಾದದಲ್ಲಿ ಕೆ.ಕಿರಣ್ ಗಾಜನೂರ್ ಮತ್ತು ಆರ್.ವಿ. ಚಂದ್ರಶೇಖರ್ ಪಾಲ್ಗೊಂಡರು. ಡಿ.ಕೆ. ಚಿತ್ತಯ್ಯ ಪೂಜಾರ್ ಅಧ್ಯಕ್ಷತೆ ವಹಿಸಿದ್ದರು. ‘ಸಾಮಾಜಿಕ ಪರಿವರ್ತನೆಯಲ್ಲಿ ಸಮಕಾಲೀನ ಸವಾಲುಗಳು’ ಕುರಿತ ಸಂವಾದದಲ್ಲಿ ಎಚ್.ಆರ್. ಜಯಪಾಲ್ ಮತ್ತು ಕುಸುಮಾ ಹರಿಪ್ರಸಾದ್ ಪಾಲ್ಗೊಂಡರು. ಪ್ರೊ.ಕೆ.ವೈ. ನಾರಾಯಣಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಶ್ರೀಮಂತನಾಗಬೇಕಾದರೆ ದೂರದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ಕಾಲದ ಅಂಚಿನಲ್ಲಿ ನಿಂತು ಭವಿಷ್ಯದ ಕಡೆ ನೋಡುತ್ತಿರಬೇಕು
ರಾಬರ್ಟ್ ಕಿಯೊಸಾಕಿ, ಲೇಖಕ

ದುಡ್ಡಿನಂಥಾ ಮಾತು

ಇ–ಕಾಮರ್ಸ್, ಕ್ವಿಕ್–ಕಾಮರ್ಸ್

ಅವಕಾಶ ಎಷ್ಟು ದೊಡ್ಡದು?

• ಸಂದೀಪ್ ಅಭಾಂಗೆ

ಹದಿನೈದು ವರ್ಷಗಳ ಹಿಂದೆ ಭಾರತದಲ್ಲಿ ವಸ್ತುಗಳನ್ನು ಖರೀದಿಸುವುದು ಸರಳವಾಗಿತ್ತು. ದಿನಸಿ ವಸ್ತುಗಳು ಬೇಕಿದ್ದರೆ ಜನ ನೆರೆಯ ಕಿರಾಣಿ ಅಂಗಡಿಗೆ ಹೋಗುತ್ತಿದ್ದರು. ಟಿ.ವಿ ಬೇಕಿದ್ದರೆ ಎಲೆಕ್ಟ್ರಾನಿಕ್ಸ್ ಅಂಗಡಿಗೆ ಹೋಗುತ್ತಿದ್ದರು. ಮದುವೆಗೆ ಜವಳಿ ಬೇಕಿದ್ದವರು ಸನಿಹದ ಮಾರುಕಟ್ಟೆಗೆ ತೆರಳುತ್ತಿದ್ದರು.

ಆನ್‌ಲೈನ್ ಖರೀದಿ ಆಗಲೂ ಇತ್ತು, ಆದರೆ ಅದು ಸಣ್ಣ ಮಟ್ಟದಲ್ಲಿತ್ತು. ಆಗ ಬಹುತೇಕರು ಡಿಜಿಟಲ್ ಪಾವತಿಗಳನ್ನು ನಂಬುತ್ತಿರಲಿಲ್ಲ, ಇಂಟರ್ನೆಟ್ ಲಭ್ಯತೆ ಸೀಮಿತವಾಗಿತ್ತು, ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸುವ ಜಾಲ ಆಗಷ್ಟೇ ಬೆಳೆಯುತ್ತಿತ್ತು. 2009ರಲ್ಲಿ ಭಾರತದ ಇ–ವಾಣಿಜ್ಯ ವೇದಿಕೆಯ ಗಾತ್ರ 4 ಬಿಲಿಯನ್ ಅಮೆರಿಕನ್ ಡಾಲರ್‌ಗಿಂತ (2009ರಲ್ಲಿನ ಡಾಲರ್ ಮೌಲ್ಯದ ಪ್ರಕಾರ ಅಂದಾಜು ₹19 ಸಾವಿರ ಕೋಟಿ) ಕಡಿಮೆ ಇತ್ತು. ಆನ್‌ಲೈನ್ ಮೂಲಕ ಖರೀದಿ ಅಪರೂಪವಾಗಿತ್ತು, ಅದು ಸಹಜವಾಗಿರಲಿಲ್ಲ.

ಆದರೆ ಇಂದು ಜಗತ್ತು ಆ ರೀತಿ ಇಲ್ಲ. ಮೂರು ಬೆಳವಣಿಗೆಗಳು ಸರಿಸುಮಾರು ಒಂದೇ ಬಾರಿಗೆ ಆದ ಪರಿಣಾಮವಾಗಿ ಪರಿವರ್ತನೆ ಶುರುವಾಯಿತು: ಸ್ಮಾರ್ಟ್‌ಫೋನ್‌ಗಳು ಅಗ್ಗವಾಗಿದ್ದು, ಮೊಬೈಲ್ ಇಂಟರ್ನೆಟ್ ಕೈಗೆಟಕುವಂತಾಗಿದ್ದು, ಯುಪಿಐ ವ್ಯವಸ್ಥೆ ಶುರುವಾಗಿದ್ದು ಆ ಮೂರು ಬೆಳವಣಿಗೆಗಳು. ಈ ಮೂರೂ ಬೆಳವಣಿಗೆಗಳು ಒಟ್ಟಾಗಿ ಜನರ ಖರೀದಿ ಪ್ರವೃತ್ತಿಯನ್ನು ಬದಲಾಯಿಸಿದವು. ಉತ್ಪನ್ನಗಳನ್ನು ಆನ್‌ಲೈನ್ ಮೂಲಕ ಖರೀದಿಸುವುದು ಜನರಿಗೆ ಸುಲಭದ ಕೆಲಸವಾಯಿತು.

ಬದಲಾವಣೆಯ ಪ್ರಮಾಣವು ಗಣನೀಯ. ದೇಶದ ಇ–ವಾಣಿಜ್ಯ ಮಾರುಕಟ್ಟೆಯ ಗಾತ್ರವು ಈಗ ಅಂದಾಜು 125 ಬಿಲಿಯನ್ ಡಾಲರ್ (ಅಂದಾಜು ₹11.90 ಲಕ್ಷ ಕೋಟಿ) ಆಗಿದೆ. ಇದು 2030ರ ವೇಳೆಗೆ 345 ಬಿಲಿಯನ್ ಡಾಲರ್ (₹32.85 ಲಕ್ಷ ಕೋಟಿ) ಮಟ್ಟಕ್ಕೆ ಬೆಳೆಯಬಹುದು ಎಂದು ಉದ್ಯಮದ ಪ್ರಮುಖರು ಅಂದಾಜಿಸುತ್ತಿದ್ದಾರೆ. ಈ ವರ್ಷದಲ್ಲಿ ಮಾರುಕಟ್ಟೆಯು ಶೇ 12.4ರಷ್ಟು ಬೆಳವಣಿಗೆ ಕಾಣುವ ಅಂದಾಜು ಇದೆ. ಹೀಗಿದ್ದರೂ ಆನ್‌ಲೈನ್ ಮೂಲಕ ನಡೆಯುವ ರಿಟೇಲ್ ವಹಿವಾಟು ದೇಶದ ಒಟ್ಟು ರಿಟೇಲ್ ವಹಿವಾಟಿನ ಶೇ 10ಕ್ಕಿಂತ ಕಡಿಮೆ ಇದೆ. ಅಂದರೆ ಇಲ್ಲಿ ಬೆಳವಣಿಗೆಗೆ ಬಹಳಷ್ಟು ಅವಕಾಶ ಇದೆ.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ, ವರ್ಷಗಳಲ್ಲಿ ಆಗಬಹುದಾದ ಡಿಜಿಟಲ್ ಪರಿವರ್ತನೆಯು ಕೆಲವು ತಿಂಗಳುಗಳಲ್ಲಿ ಆಗಿಹೋಯಿತು. ಆನ್‌ಲೈನ್ ಮೂಲಕ ಏನನ್ನೂ ಖರೀದಿಸದೆ ಇದ್ದವರು ದಿನಸಿ, ಔಷಧಗಳನ್ನು ಕೂಡ ಆನ್‌ಲೈನ್ ಮೂಲಕ ಖರೀದಿಸಲಾರಂಭಿಸಿದರು. ಈ ರೀತಿ ಖರೀದಿಸುವುದು ಬಹುಬೇಗ ಹವ್ಯಾಸದಂತಾಯಿತು. ಹೆಚ್ಚಿನ ಜನ ಆನ್‌ಲೈನ್ ಮೂಲಕ ಖರೀದಿ ಆರಂಭಿಸಿದರು ಎಂಬುದಷ್ಟೇ ಅಲ್ಲ, ಆನ್‌ಲೈನ್ ಖರೀದಿ ವಹಿವಾಟು ದೇಶದ ದೊಡ್ಡ ನಗರಗಳ ಆಚೆಗೂ ವಿಸ್ತರಿಸಿತು ಎಂಬುದು ಇಲ್ಲಿ ಮುಖ್ಯ.

2020ರ ನಂತರ ಆನ್‌ಲೈನ್ ಖರೀದಿ ಜಗತ್ತು ಪ್ರವೇಶಿಸಿದ ಪ್ರತಿ ಐವರಲ್ಲಿ ಮೂವರು ಮೂರನೆಯ ಹಂತದ ಪಟ್ಟಣಗಳು ಹಾಗೂ ಅದಕ್ಕಿಂತ ಸಣ್ಣ ಪಟ್ಟಣಗಳಿಗೆ ಸೇರಿದವರು ಎಂದು 'ಬೇನ್–ಫ್ಲಿಪ್‌ಕಾರ್ಟ್' ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ. ಡಿಜಿಟಲ್ ವೇದಿಕೆಗಳ ಮೂಲಕ ಖರೀದಿ ಬೆಂಗಳೂರು, ದೆಹಲಿ, ಮುಂಬೈಗೆ ಸೀಮಿತವಲ್ಲ. ಅದು ದೇಶದ ಎಲ್ಲೆಡೆಗಳಿಗೆ ವ್ಯಾಪಿಸುತ್ತಿದೆ. ಇತ್ತ ಗ್ರಾಹಕರ ಆಯ್ಕೆಗಳು ಕೂಡ ಬೆಳೆದವು. ಜನರು ಪ್ರೀಮಿಯಂ ವರ್ಗದ ಉತ್ಪನ್ನಗಳಿಗೆ ವೆಚ್ಚ ಮಾಡುವುದು ಕೂಡ ಜಾಸ್ತಿ ಆಯಿತು.

ಇ–ವಾಣಿಜ್ಯವು ರಿಟೇಲ್ ಮಾರುಕಟ್ಟೆ ಕಂಡ ದಶಕದ ಅತಿದೊಡ್ಡ ಬದಲಾವಣೆ ಎಂದು ಅನ್ನಿಸಲಾರಂಭಿಸಿದ ಹೊತ್ತಿನಲ್ಲೇ, ಇನ್ನೊಂದು ಬದಲಾವಣೆಯೂ ಆಯಿತು. ಕ್ವಿಕ್–ಕಾಮರ್ಸ್ ವಲಯವು ಬಹಳಷ್ಟು ಬದಲಾವಣೆಗಳನ್ನು ತಂದಿತು. ಉತ್ಪನ್ನವು ಗ್ರಾಹಕರನ್ನು ತಲುಪಲು ಒಂದು ಅಥವಾ ಎರಡು ದಿನ ಕಾಯುವ ಬದಲು ಗ್ರಾಹಕರು 10ರಿಂದ 30 ನಿಮಿಷಗಳಲ್ಲಿ ಅದನ್ನು ಪಡೆಯಬಹುದಾಯಿತು.

ಕಲೆ: ಸಂತೋಷ್ ಸಸಿಹಿತ್ಲು

ಈಗ ಗ್ರಾಹಕರು ಕ್ವಿಕ್–ಕಾಮರ್ಸ್ ವೇದಿಕೆಗಳನ್ನು ತುರ್ತು ಖರೀದಿಗಳಿಗಾಗಿ ಮಾತ್ರವೇ ಬಳಸುತ್ತಿಲ್ಲ. ಇಂದು ಗ್ರಾಹಕರು ವೈಯಕ್ತಿಕ ಆರೈಕೆ ಉತ್ಪನ್ನಗಳು, ಸೌಂದರ್ಯ ವರ್ಧಕಗಳು, ಪ್ಯಾಕ್ ಮಾಡಿರುವ ಆಹಾರ ಉತ್ಪನ್ನಗಳು, ಎಲೆಕ್ಟ್ರಾನಿಕ್ ಉಪಕರಣಗಳು ಮತ್ತು ಮನೆಬಳಕೆಯ ಅಗತ್ಯ ವಸ್ತುಗಳನ್ನು ಕೂಡ ಕ್ವಿಕ್–ಕಾಮರ್ಸ್ ವೇದಿಕೆಗಳ ಮೂಲಕ ಖರೀದಿಸುತ್ತಿದ್ದಾರೆ. ನಗರಗಳಲ್ಲಿ ಹಲವರು ತಮ್ಮ ವಾರದ ಖರೀದಿಗಳಲ್ಲಿ ಬಹುಪಾಲನ್ನು ಕ್ವಿಕ್–ಕಾಮರ್ಸ್ ಮೂಲಕವೇ ನಡೆಸುತ್ತಿದ್ದಾರೆ.

ಜಗತ್ತಿನಲ್ಲಿ ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿರುವ ಕ್ವಿಕ್–ಕಾಮರ್ಸ್ ಮಾರುಕಟ್ಟೆಗಳಲ್ಲಿ ಭಾರತವೂ ಸೇರಿದೆ. ಈ ವಲಯವು ವಾರ್ಷಿಕ ಶೇ 40ಕ್ಕಿಂತ ಹೆಚ್ಚಿನ ಪ್ರಮಾಣದ ಬೆಳವಣಿಗೆ ಕಾಣುತ್ತಿದೆ ಎಂದು ಅಂದಾಜಿಸಲಾಗಿದೆ. ಇದು ಸಾಂಪ್ರದಾಯಿಕವಾದ ಇತರ ಯಾವುದೇ ರಿಟೇಲ್ ವಹಿವಾಟಿನ ಬೆಳವಣಿಗೆ ಪ್ರಮಾಣಕ್ಕಿಂತ ಹೆಚ್ಚು. ಡಿಜಿಟಲ್ ವೇದಿಕೆಗಳ ಮೂಲಕ ಆಗುವ ದಿನಸಿ ಖರೀದಿಯಲ್ಲಿ ಕ್ವಿಕ್–ಕಾಮರ್ಸ್ ವೇದಿಕೆಗಳ ಪಾಲು ಈಗ ಶೇ 66ಕ್ಕಿಂತ ಜಾಸ್ತಿಯಾಗಿದೆ ಎಂದು ವರದಿಯೊಂದು ಹೇಳುತ್ತಿದೆ.

ದೇಶದ ಕ್ವಿಕ್–ಕಾಮರ್ಸ್ ಮಾರುಕಟ್ಟೆಯು ಈ ವರ್ಷದಲ್ಲಿ ₹47 ಸಾವಿರ ಕೋಟಿಗೆ ತಲುಪಬಹುದು ಎಂದು ಸ್ಟ್ಯಾಟಿಸ್ಟಾ ಅಂದಾಜು ಹೇಳಿದೆ. ಈ ದಶಕದ ಮುಂದಿನ ವರ್ಷಗಳಲ್ಲಿಯೂ ಈ ವಲಯದ ಬೆಳವಣಿಗೆ ಮುಂದುವರಿಯಲಿದೆ ಎಂದು ಹೇಳಿದೆ.

ಈ ವಲಯದಲ್ಲಿ ಸ್ಪರ್ಧೆ ತೀವ್ರವಾಗುತ್ತಿದೆ. ಇ–ವಾಣಿಜ್ಯ ಕಂಪನಿಗಳು, ಆಹಾರ ವಸ್ತುಗಳನ್ನು ಗ್ರಾಹಕರಿದ್ದಲ್ಲಿಗೆ ತಲುಪಿಸುವ ಕಂಪನಿಗಳು ಹಾಗೂ ರಿಟೇಲ್ ವಹಿವಾಟಿನಲ್ಲಿರುವ ದೊಡ್ಡ ಕಂಪನಿಗಳು ಈ ವಲಯದಲ್ಲಿ ತೀವ್ರ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತಿವೆ. ಇದರಿಂದ ಸ್ಪರ್ಧಾತ್ಮಕತೆ ಹೆಚ್ಚುತ್ತದೆ. ಅದರ ಜೊತೆಯಲ್ಲೇ ಈ ಹೂಡಿಕೆಗಳು ಈ ವಲಯದ ದೀರ್ಘಾವಧಿ ಸಾಮರ್ಥ್ಯದ ಬಗ್ಗೆ ಕಂಪನಿಗಳಿಗಿರುವ ವಿಶ್ವಾಸವನ್ನೂ ಹೇಳುತ್ತಿವೆ.

ಬೆಳವಣಿಗೆಯ ಎಲ್ಲ ಪಯಣಗಳಲ್ಲೂ ಅಡ್ಡಿಗಳು ಇರುತ್ತವೆ ಎಂಬುದು ನಿಜ. ಈಗ ಕಚ್ಚಾ ತೈಲದ ಬೆಲೆ ಏರಿಕೆ ಹಾಗೂ ಜಾಗತಿಕ ಅನಿಶ್ಚಿತತೆಗಳು ಹೊಸ ಸವಾಲುಗಳಾಗಿ ನಿಂತಿವೆ. ತೈಲ ಬೆಲೆ ಏರಿಕೆಯು ಸರಕು ಸಾಗಣೆ ವೆಚ್ಚ, ಹಣದುಬ್ಬರ ಹಾಗೂ ಗ್ರಾಹಕರಿಂದ ಆಗುವ ಖರೀದಿಯ ಮೇಲೆ ಪರಿಣಾಮ ಬೀರುತ್ತದೆ.

ಇ–ವಾಣಿಜ್ಯ ಹಾಗೂ ಕ್ವಿಕ್–ಕಾಮರ್ಸ್ ಕಂಪನಿಗಳಿಗೆ ಸಾಗಣೆ ವೆಚ್ಚವು ಬಹುಮುಖ್ಯ. ಇಂಧನ ಬೆಲೆ ಹೆಚ್ಚಳವು ವಿತರಣಾ ವೆಚ್ಚವನ್ನು ಜಾಸ್ತಿ ಮಾಡಿ, ಲಾಭದ ಪ್ರಮಾಣವನ್ನು ತಗ್ಗಿಸಬಹುದು. ಹಣದುಬ್ಬರ ಏರಿಕೆಯಿಂದಾಗಿ ಗ್ರಾಹಕರು ಖರ್ಚು ಮಾಡುವ ಮುನ್ನ ಹೆಚ್ಚು ಆಲೋಚಿಸುವಂತಾಗಬಹುದು. ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತಾ ಕ್ರಮಗಳ ಬಗ್ಗೆ ನೀತಿ ನಿರೂಪಕರಲ್ಲಿ ನಡೆಯುತ್ತಿರುವ ಚರ್ಚೆಗಳು ಮುಂದಿನ ದಿನಗಳಲ್ಲಿ ಉತ್ಪನ್ನಗಳನ್ನು ತಲುಪಿಸುವ ವೆಚ್ಚ ಹೆಚ್ಚಿಸಬಹುದು.

ಇವೆಲ್ಲ ಗಂಭೀರ ಸಂಗತಿಗಳೇ ಆದರೂ, ಅವುಗಳನ್ನು ನಿರ್ದಿಷ್ಟ ಹಿನ್ನೆಲೆಯಿಲ್ಲದೆ ಅರ್ಥ ಮಾಡಿಕೊಳ್ಳಲು ಯತ್ನಿಸಬಾರದು. ದೇಶದ ಡಿಜಿಟಲ್ ರಿಟೇಲ್ ಪರಿವರ್ತನೆಯ ದೀರ್ಘಾವಧಿಯ ಚಾಲಕ ಶಕ್ತಿಗಳು ಗಟ್ಟಿಮುಟ್ಟಾಗಿಯೇ ಇವೆ. ಸ್ಮಾರ್ಟ್‌ಫೋನ್ ಬಳಕೆ ಹೆಚ್ಚುತ್ತಿದೆ, ಇಂಟರ್ನೆಟ್ ಲಭ್ಯತೆ ಜಾಸ್ತಿ ಆಗುತ್ತಿದೆ, ಡಿಜಿಟಲ್ ಪಾವತಿಗಳು ನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾಗಿವೆ, ಸಾಗಣೆ ಮೂಲಸೌಕರ್ಯ ಸುಧಾರಣೆ ಕಾಣುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಗ್ರಾಹಕರು ತಮಗಾಗುವ ಅನುಕೂಲಕ್ಕೆ ಹೆಚ್ಚಿನ ಬೆಲೆ ನೀಡುತ್ತಿದ್ದಾರೆ.

ಹೂಡಿಕೆದಾರರಿಗೆ ಇದು ಮುಖ್ಯ. ತಾತ್ಕಾಲಿಕ ಸವಾಲುಗಳು ತ್ರೈಮಾಸಿಕದ ಹಣಕಾಸಿನ ಫಲಿತಾಂಶದ ಮೇಲೆ ಪರಿಣಾಮ ಬೀರಬಲ್ಲವು. ಆದರೆ ಅವು ಉದ್ಯಮದ ದೀರ್ಘಾವಧಿಯ ದಿಕ್ಕನ್ನು ಬದಲಿಸಲಾರವು. ಉತ್ಪನ್ನಗಳನ್ನು ಗ್ರಾಹಕರಲ್ಲಿಗೆ ತಲುಪಿಸುವ ಕ್ಷಮತೆಯನ್ನು ಸುಧಾರಿಸಿಕೊಳ್ಳುವ, ಗ್ರಾಹಕರನ್ನು ಹಿಡಿದಿಟ್ಟುಕೊಳ್ಳುವ, ಗ್ರಾಹಕರು ತನ್ನಲ್ಲಿಗೆ ಮತ್ತೆ ಮತ್ತೆ ಬರುವಂತೆ ಮಾಡುವ, ಸ್ಥಿರತೆಯಿಂದ ಲಾಭದ ಕಡೆ ಸಾಗುವ ಕಂಪನಿಗಳು, ವಿಪರೀತದ ರಿಯಾಯಿತಿಗಳನ್ನು ನೀಡುವ ಕಂಪನಿಗಳಿಗಿಂತಲೂ ಹೆಚ್ಚಿನ ಮೌಲ್ಯವನ್ನು ದೀರ್ಘಾವಧಿಯಲ್ಲಿ ಹೂಡಿಕೆದಾರರಿಗೆ ಸೃಷ್ಟಿಸಿಕೊಡುವ ಸಾಧ್ಯತೆ ಜಾಸ್ತಿ ಇರುತ್ತದೆ.

ಸಣ್ಣ ಹೂಡಿಕೆದಾರರ ಮುಂದಿರುವ ಅವಕಾಶಗಳು ವಾಸ್ತವಿಕವಾಗಿವೆ. ಹಾಗೆಯೇ ಅವರು ಹುಷಾರಾಗಿ ಕಂಪನಿಗಳನ್ನು ಆಯ್ಕೆ ಮಾಡಿಕೊಳ್ಳುವ ಅಗತ್ಯವೂ ಇದೆ. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕಂಪನಿಗಳೇ ಇಲ್ಲಿ ಜಯಗಳಿಸುತ್ತವೆ ಎನ್ನಲಾಗದು. ಆದರೆ ಬೆಳವಣಿಗೆಯನ್ನು ಸುಸ್ಥಿರ ಲಾಭವನ್ನಾಗಿ ಪರಿವರ್ತಿಸಿ, ಗ್ರಾಹಕರ ನಿಷ್ಠೆಯನ್ನು ಹಾಗೂ ಕಾರ್ಯಾಚರಣೆ ಶಿಸ್ತನ್ನು ಕಾಯ್ದುಕೊಂಡ ಕಂಪನಿಗಳು ಜಯ ಗಳಿಸಬಹುದು. ಆಫ್‌ಲೈನ್ ಅಂಗಡಿಗಳಿಂದ ಆನ್‌ಲೈನ್ ವೇದಿಕೆಗಳಿಗೆ, ಅಲ್ಲಿಂದ ತಕ್ಷಣವೇ ಉತ್ಪನ್ನಗಳನ್ನು ತಲುಪಿಸುವ ವೇದಿಕೆಗಳ ಕಡೆಗಿನ ಪಯಣವು ಇನ್ನೂ ಪೂರ್ಣಗೊಂಡಿಲ್ಲ...

ಲೇಖಕ ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ವಿಶ್ಲೇಷಕ

ಸಣ್ಣ ಹೂಡಿಕೆದಾರರಿಗೆ ಅವಕಾಶ

ಸಣ್ಣ ಹೂಡಿಕೆದಾರರು ಈ ವಲಯದಲ್ಲಿ ಅವಕಾಶವನ್ನು ಶಿಸ್ತು ಮತ್ತು ತಾಳ್ಮೆಯ ಮೂಲಕ ತಮ್ಮದಾಗಿಸಿಕೊಳ್ಳುವುದು ಸೂಕ್ತ. ಸಣ್ಣ ಹೂಡಿಕೆದಾರರು ಹಣಕಾಸಿನ ಸ್ಥಿತಿ ಬಲಿಷ್ಠವಾಗಿರುವ, ಲಾಭದಾಯಕತೆಯಲ್ಲಿ ಸುಧಾರಣೆ ಕಾಣುತ್ತಿರುವ ಕಂಪನಿಗಳ ಮೇಲೆ ಗಮನ ನೀಡಬೇಕು.

ವೈವಿಧ್ಯವನ್ನು ತನ್ನದಾಗಿಸಿಕೊಂಡಿರುವ, ಗ್ರಾಹಕರ ಬೇಡಿಕೆ ಆಧರಿಸಿ ಪ್ರಯೋಜನ ಪಡೆಯುವ ಕಂಪನಿಗಳ ಮೇಲೆ ಹೂಡಿಕೆ ಮಾಡುವ ಫಂಡ್‌ಗಳು ಅಥವಾ ಡಿಜಿಟಲ್ ಆರ್ಥಿಕತೆಯ ಮೇಲೆ ಗಮನ ನೀಡುವ ಫಂಡ್‌ಗಳು, ಒಂದೇ ಕಂಪನಿಯ ಮೇಲೆ ಅವಲಂಬನೆ ಹೊಂದುವುದಕ್ಕಿಂತ ಹೆಚ್ಚು ಉತ್ತಮ ಆಯ್ಕೆಯನ್ನು ಹೂಡಿಕೆದಾರರಿಗೆ ನೀಡಬಹುದು.

ಸರಳವಾದ ಮಾರ್ಗವನ್ನು ಬಯಸುವ ಹೂಡಿಕೆದಾರರಿಗೆ, ವೈವಿಧ್ಯಮಯ ಹೂಡಿಕೆಯನ್ನು ಹೊಂದಿರುವ ಫಂಡ್‌ಗಳಲ್ಲಿನ ವ್ಯವಸ್ಥಿತ ಹೂಡಿಕೆ ಯೋಜನೆಗಳು (ಎಸ್‌ಐಪಿ) ಈ ವಲಯದ ಬೆಳವಣಿಗೆಯಲ್ಲಿ ಭಾಗಿಯಾಗಲು ವಾಸ್ತವಿಕ ಮಾರ್ಗವಾಗಬಹುದು.

ದೇಶದ ಇ–ವಾಣಿಜ್ಯ ಮಾರುಕಟ್ಟೆಯು 2030ರ ವೇಳೆಗೆ 345 ಬಿಲಿಯನ್ ಡಾಲರ್ ಗಾತ್ರಕ್ಕೆ ಬೆಳೆಯುವ ಅಂದಾಜು ಇದೆ. ಕ್ವಿಕ್–ಕಾಮರ್ಸ್ ಕ್ಷೇತ್ರವು ಮಹಾನಗರಗಳ ಆಚೆಗೂ, ಸಣ್ಣ ನಗರಗಳಿಗೂ ವಿಸ್ತರಿಸಿಕೊಳ್ಳುತ್ತಿದೆ. 2020ರ ನಂತರ ಆನ್‌ಲೈನ್ ಖರೀದಿ ಪ್ರವೃತ್ತಿ ಬೆಳೆಸಿಕೊಂಡ ಸರಿಸುಮಾರು ಶೇ 60ರಷ್ಟು ಮಂದಿ ಮೂರನೆಯ ಹಂತದ ನಗರಗಳು ಹಾಗೂ ಸಣ್ಣ ಪಟ್ಟಣಗಳಿಗೆ ಸೇರಿದವರು. ಇದು ಅವಕಾಶವು ದೇಶದಾದ್ಯಂತ ಹೇಗೆ ವಿಸ್ತರಿಸುತ್ತಿದೆ ಎಂಬುದನ್ನು ಹೇಳುತ್ತಿದೆ.

ಸಾಲ ಏಕೆ? ಕಾರಣ ಏನು?

ಕುಟುಂಬದ ವೆಚ್ಚ, ಅನಿರೀಕ್ಷಿತ ವೈದ್ಯಕೀಯ ವೆಚ್ಚ, ಮನೆಯ ದುರಸ್ತಿಯಂತಹ ತುರ್ತು ಅಗತ್ಯಗಳಿಗಾಗಿ ಶೇ 48ರಷ್ಟು ಜನರು ವೈಯಕ್ತಿಕ ಸಾಲ ಮಾಡುತ್ತಿದ್ದಾರೆ.

ಶೇ 36ರಷ್ಟು ಜನರು ಜೀವನ ಶೈಲಿಗಾಗಿ ಮತ್ತು ಶೇ 16ರಷ್ಟು ಜನರು ವ್ಯವಹಾರದ ಉದ್ದೇಶಕ್ಕಾಗಿ ಸಾಲ ಮಾಡುತ್ತಿದ್ದಾರೆ ಎಂದು ಪೈಸಾ ಬಜಾರ್‌ನ 'ದ ಪರ್ಸನಲ್ ಲೋನ್ ಸ್ಟೋರಿ' ಸಮೀಕ್ಷಾ ವರದಿ ಇತ್ತೀಚೆಗೆ ತಿಳಿಸಿದೆ.

ಬೆಂಗಳೂರು, ಮೈಸೂರು, ತುಮಕೂರು ಸೇರಿದಂತೆ ದೇಶದ ಪ್ರಮುಖ ನಗರಗಳಿಂದ ಈ ಮಾಹಿತಿಯನ್ನು ಸಂಗ್ರಹಿಸಿದೆ.

ಸರ್ಕಾರಿ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಿಂತಲೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಂದ (ಎನ್‌ಬಿಎಫ್‌ಸಿ) ಸಾಲ ಪಡೆಯುವವರ ಪ್ರಮಾಣ ಹೆಚ್ಚಿದೆ. ಎನ್‌ಬಿಎಫ್‌ಸಿಗಳಲ್ಲಿ ತ್ವರಿತವಾಗಿ ಸಾಲಕ್ಕೆ ಅನುಮೋದನೆ ನೀಡುವುದು, ಕಡಿಮೆ ದಾಖಲೆಗಳು, ಡಿಜಿಟಲ್ ಪ್ರಕ್ರಿಯೆಯಿಂದಾಗಿ ಸಾಲ ತೆಗೆದುಕೊಳ್ಳುವ ಪ್ರಮಾಣ ಹೆಚ್ಚಳವಾಗಿದೆ.







ಮಾಹಿತಿ ಸಂಗ್ರಹ: ಗಂಜಿ ಆದಿಶೇಷ

ಕಮ್ಮಿನ್ಸ್

ಬ್ರೋಕರೇಜ್ ಮಾತು

ಜಾಗತಿಕ ಮಟ್ಟದ ತಂತ್ರಜ್ಞಾನ ಕಂಪನಿ ಕಮ್ಮಿನ್ಸ್‌ನ ಷೇರಿನ ಬೆಲೆ ₹6,600ಕ್ಕೆ ತಲುಪಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಕಂಪನಿಯ ಪ್ರಮುಖ ವ್ಯವಹಾರವು ಜನರೇಟರ್ (ಪವರ್‌ಜೆನ್) ಆಗಿದೆ. ಹೆಚ್ಚಿನ ಸಾಮರ್ಥ್ಯದ ಎಚ್‌ಎಚ್‌ಪಿ ಮತ್ತು ಎಚ್‌ಎಚ್‌ಪಿ-ಯೇತರ ವರ್ಗದಿಂದ ಹೆಚ್ಚಿನ ಬೇಡಿಕೆ ಇದೆ. ಡೇಟಾ ಕೇಂದ್ರಗಳ ಸ್ಥಾಪನೆಯು ಕಂಪನಿಯ ಮತ್ತಷ್ಟು ಬೆಳವಣಿಗೆಗೆ ಕಾರಣವಾಗಿದೆ.

ಗಣಿಗಾರಿಕೆ, ಸಾಗರ ಮತ್ತು ರೈಲ್ವೆಗಳಲ್ಲಿ ಕೈಗಾರಿಕಾ ವಿಭಾಗವು ಆರೋಗ್ಯಕರ ಬೆಳವಣಿಗೆ ಇದೆ. ಲ್ಯಾಟಿನ್ ಅಮೆರಿಕ, ಯುರೋಪ್ ಮತ್ತು ಆಫ್ರಿಕಾ ಸೇರಿದಂತೆ ವಿವಿಧ ದೇಶಗಳಿಂದ ಬೇಡಿಕೆ ಇದೆ.

2025–26ರಿಂದ 2027–28ರವರೆಗೆ ಕಂಪನಿಯ ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಶೇ 18ರಷ್ಟು ಇರಬಹುದು. ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನ (ಇಬಿಐಟಿಡಿಎ) ಶೇ 20ರಷ್ಟು ಮತ್ತು ತೆರಿಗೆ ನಂತರದ ಲಾಭ ಶೇ 21ರಷ್ಟು ಇರಲಿದೆ ಎಂದು ಅಂದಾಜಿಸಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಮೌಲ್ಯ ₹5,608.75ರಷ್ಟಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ಅಧ್ಯಯನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

Second Language ENGLISH
Unit-2 PROSE

There's a Girl by the Tracks!

4. Baleshwar was impulsive in taking a decision because----------------

(Fill in the blank appropriately).(para-3)

Ans: He had just seen a young woman lying next to the track

Expln:- He could not believe that he has just seen-a young woman lying next to tracks. Meanwhile he also heard gasps and screams emanating from his compartment" There is a girl by tracks". His own sighting of girl lying by track unconscious and panic screams by co passengers made Mr Baleshwar Misha react impulsively.

5. The dictionary says 'callous' means 'unconcerned'. In this situation, who do you think were callous towards the accident.

Ans: When Mr Baleshwar Mishra pulled emergency stop chain, the train screeched to slow down but did not stop. It picked up speed again and disappeared. The first callousness was shown by the train driver and guard who had mandatory duty to enquire why emergency chain was pulled and mitigate the emergency by using their wireless communication equipment to control room. Then when Mr Baleshwar called the co-passengers to help the girl lying by the tracks,

none of them responded being wary of getting involved. The co-passengers of Mr Baleshwar were also callous.

6. 'Baleshwar rushed to help the girl.' His movement has been described with verbs like 'shoved'. Identify two more such verbs / verbal phrases in paragraph (5).

Ans: Jumped off, started to sprint back.

Share your responses

1. Where did Baleshwar find Roma at last?

Ans: Mr Baleswar was far away from Roma. After running for several minutes, he found her sprawled by the side of the tracks.

2. "Behenji, aap theek hai?" But there was no response and no help in sight. Why was it so? Read paragraph 6 and answer

Ans: The fall had resulted in gash behind Ms Roma's head and blood oozing out of it, as a result she had lost her consciousness. Hence there was no response to Mr Baleshwar's words. Mr Baleswar and Ms Roma were alone somewhere between two stations five kilometers apart in Thane district, hence no help was insight.

1. **Fill in the table with appropriate details.**

Name	Age	Education	State they belong to	Profession	Reason for boarding the train
Roma					
Baleshawar Mishra					

Ans:-

Name	Age	Education	State they belong to	Profession	Reason for boarding the train
Roma	*21*	*B Com*	*Pune, Maharashtra*	*Executive in a call centre*	*Returning home*
Baleshawar Mishra	*20*	*High School dropout*	*Mirzapur, Uttar Pradesh*	*Unemployed*	*Returning home, after spending day with a friend having lunch and watching movies*

Check your understanding

1.Who volunteered to help Baleshwar?

Ans: A middle aged Gujarati speaking driver of a tempo truck, volunteered to help Mr Baleshwar.

2. **"Roma stirred and her eyes fluttered open." What could have made her react so?**

Ans: Ms Roma was woken up by jerks given by lurching of the vehicle in which she was being carried to the hospital

3. **Some details of Roma's brother are given paragraph 14 Read and fill in the columns appropriately**

Name	Job	Place	Vehicle

Ans:-

Name	Job	Place	Vehicle
Dinesh Talreja	*Marketing*	*Retail outlet, Ulhasnagar*	*Motor cycle*

Share your responses

1)``Oh, I couldn't thank him," Baleshwar thought. Who do you think he couldn't think?

Ans: Mr Baleshwar meant the Gujarati speaking middle aged driver of tempo truck who helped all he could, had gone away quietly.

2) Why did Baleshwar revisit the spot where Roma had fallen?

(Contd……)

Biology

REPRODUCTION

Reproduction in flowering plants

36. Label the following parts in the given figure. a) male gametes, b) egg cell, c) nuclei, d) synergid, and e) pollen tube.



Ans:-



37. In the given diagram, write the names of the parts 1 - 7.



Ans:- 1. Scutellum
2. Coleoptile
3. Plumule
4. Epiblast
5. Radicle
6. Root cap
7. Coleorhiza

38. Mention some of the differences between the Parthenocarpy and Apomixis and also mention some of their benefits.

Ans:- Parthenocarpy – is the formation of seedless fruits, embryo is absent and it has no role in reproduction.

Apomixis - is the formation of seeds asexually. an embryo is formed asexually, it takes part in reproduction.

Benefits

Parthenocarpy - is economically important since irritant seeds are absent.

Apomixis – can maintain hybrid vigour indefinitely.

39. In the diagram given, show the path of a pollen tube from the pollen on the stigma into the embryo sac. Name the components of egg apparatus.

Ans:- **(a)**



b) Components of Embryo Sac.
Oospore or egg and two synergids.

40. Fill in the blanks

1. An example for plant that gives floral reward by providing safe place to lay insect eggs is ________.
Ans:- Amorphophallus (or Yucca).
2. The genetic mechanism which prevents self-pollen from fertilizing the ovules by inhibiting pollen germination or pollen tube growth in the pistil is known as ________.
Ans:- Self-incompatibility
3. The removal of anthers from the flower bud before the anther dehiscence in bisexual flower is referred as ____________.
Ans:- Emasculation.
4. The early stages of embryo development are called ________.
Ans:- cleavage and the germinal stage
5. An example for albuminous seed is _________.
Ans:- Castor
6. The presence of residual persistent nucellus in some seeds is called__________
Ans:- Perisperm
7. In the grass family the cotyledon of embryo is called __________
Ans:- scutellum

ಚಟಿಕೆ ಸುದ್ದಿ

ಇದೇ 13ಕ್ಕೆ ಡಿಸಿ, ಸಿಇಒಗಳ ಜೊತೆ ಸಿ.ಎಂ ಸಭೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ಇದೇ 13ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಗತಿ ಪರಿಶೀಲನೆ ಸಭೆ ನಡೆಸಲಿದ್ದಾರೆ.

ಎಲ್ಲ ಇಲಾಖೆಗಳ ಮುಖ್ಯಸ್ಥರು, ಜಿಲ್ಲಾ ಮಟ್ಟದ ಅಧಿಕಾರಿಗಳು ಅಗತ್ಯ ಮಾಹಿತಿಗಳೊಂದಿಗೆ ಈ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕು ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ತಿಳಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಈ ಸಭೆ ನಡೆಯಲಿದೆ. ಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ಜಿಲ್ಲಾಮಟ್ಟದ ಅಧಿಕಾರಿಗಳ ಜೊತೆ ಮುಂಗಾರು ಮಳೆ, ಪ್ರವಾಹ, ಬೆಳೆ ಹಾನಿ, ರಸಗೊಬ್ಬರ, ಬಿತ್ತನೆ ಬೀಜ ಕೊರತೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು, ಸಲಹೆ ಸೂಚನೆಗಳನ್ನು ನೀಡಲಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

'ಪಿಟಿಸಿಎಲ್ ಕಾಯ್ದೆ ಅನ್ವಯ ಸಲ್ಲ'

ಬೆಂಗಳೂರು: 'ಗ್ರೋ ಮೋರ್ ಫುಡ್' (ಜಿಎಂಎಫ್) ಯೋಜನೆಯಡಿ ಹಂಚಿಕೆ ಮಾಡಲಾದ ಭೂಮಿಯನ್ನು 'ಮಂಜೂರಾತಿ ಭೂಮಿ' ಎಂದು ಪರಿಗಣಿಸಲು ಸಾಧ್ಯವಿಲ್ಲ. ಇಂತಹ ಭೂಮಿಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಮೀನುಗಳ ಪರಭಾರೆ ನಿಷೇಧ (ಪಿಟಿಸಿಎಲ್) ಕಾಯ್ದೆ ಅನ್ವಯ ಆಗುವುದಿಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ಎಚ್.ಆರ್.ಸುರೇಶ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. 'ಜಿಎಂಎಫ್ ಯೋಜನೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಮೀಸಲಾದ ಕಲ್ಯಾಣ ಯೋಜನೆಯಲ್ಲ. ಸಾಮಾನ್ಯ ಜನರಿಗೆ ಆಹಾರ ಉತ್ಪಾದನೆ ಹೆಚ್ಚಿಸುವ ಉದ್ದೇಶದಿಂದ ರೂಪಿಸಲಾದ ವಿಶೇಷ ಯೋಜನೆಯಾಗಿದೆ' ಎಂದು ಪೀಠ ಹೇಳಿದೆ.

ಈ ಪ್ರಕರಣದಲ್ಲಿ ಜಿಎಂಎಫ್ ಯೋಜನೆಯಡಿ ಜಮೀನು ಪಡೆದುಕೊಂಡು ವಾರಸುದಾರರು ಎಂದು ಅರ್ಜಿ ಸಲ್ಲಿಸಿದ್ದವರ ಪರ ಆದೇಶ ಮಾಡಿದ್ದ ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ಏಕಸದಸ್ಯ ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ₹10 ಲಕ್ಷ ದಂಡ ವಿಧಿಸಿತ್ತು. ಇದನ್ನು ಮಾರ್ಪಾಡು ಮಾಡಿರುವ ನ್ಯಾಯಪೀಠ, ದಂಡದ ಮೊತ್ತವನ್ನು ₹50 ಸಾವಿರಕ್ಕೆ ಇಳಿಕೆ ಮಾಡಿ ಆದೇಶಿಸಿದೆ.

₹1.37 ಕೋಟಿ ಮೌಲ್ಯದ ಚಿನ್ನ ಜಪ್ತಿ

ದೇವನಹಳ್ಳಿ: ಕ್ಯಾಪ್ಸೂಲ್‌ಗಳಲ್ಲಿ ಪೇಸ್ಟ್ ರೂಪದಲ್ಲಿ ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದುದ್ದನ್ನು ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬುಧವಾರ ಪತ್ತೆ ಹಚ್ಚಿದ್ದು, ₹1.37 ಕೋಟಿ ಮೌಲ್ಯದ ಚಿನ್ನವನ್ನು ಜಪ್ತಿ ಮಾಡಿದ್ದಾರೆ.

ದುಬೈನಿಂದ ವಿಮಾನ ನಿಲ್ದಾಣಕ್ಕೆ ಬಂದ ಪ್ರಯಾಣಿಕರೊಬ್ಬರನ್ನು ಅನುಮಾನದ ಮೇಲೆ ತಪಾಸಣೆ ನಡೆಸಿದಾಗ ನಾಲ್ಕು ಕ್ಯಾಪ್ಸೂಲ್‌ಗಳಲ್ಲಿ 899 ಗ್ರಾಂ ಚಿನ್ನವನ್ನು ಪೇಸ್ಟ್ ರೂಪದಲ್ಲಿ ಸಾಗಣೆ ಮಾಡುತ್ತಿರುವುದು ಪತ್ತೆಯಾಗಿದೆ. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ.

ಐಎಎಸ್ ಅಧಿಕಾರಿ ವರ್ಗಾವಣೆ

ಬೆಂಗಳೂರು: ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಅಂಜುಂ ಪರ್ವೇಜ್ ಅವರಿಗೆ ಲೋಕೋಪಯೋಗಿ ಇಲಾಖೆಯ ಎಸಿಎಸ್ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಕಂದಾಯ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರಿಗೆ ಗೃಹ ಇಲಾಖೆ ಎಸಿಎಸ್ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಐಎಎಸ್ ಅಧಿಕಾರಿ ಮೋಹನ್ ರಾಜ್ ಅವರನ್ನು ಗೃಹ ಇಲಾಖೆ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ.

ಸಾರಿಗೆ ಇಲಾಖೆ ಆಯುಕ್ತ ಆರ್. ಸೆಲ್ವಮಣಿ ಅವರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸ್ವಚ್ಛ ಭಾರತ್ ಮಿಷನ್ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಹುದ್ದೆಯ ನಿರೀಕ್ಷೆಯಲ್ಲಿರುವ ಎಂ. ಮಹೇಶ್ ಅವರನ್ನು ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾಯಿಸಲಾಗಿದೆ.

ಸಹಕಾರ ಸೊಸೈಟಿಗಳ ರಿಜಿಸ್ಟ್ರಾರ್ ಎಂ.ವಿ. ವೆಂಕಟೇಶ್ ಅವರಿಗೆ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಖುಷ್ಬೂ ಜಿ.ಚೌಧರಿ ಅವರಿಗೆ ಕರ್ನಾಟಕ ಹೂಡಿಕೆ ವೇದಿಕೆಯ ಸಿಇಒ, ಎನ್‌ಜಿಇಎಫ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಮತ್ತು ಮೈಸೂರು ಲ್ಯಾಂಪ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

'ನೂರು ದಿನಗಳಲ್ಲಿ ಡಿಜಿಟಲೀಕರಣ'

ಕೆಐಎಡಿಬಿ ಅಧಿಕಾರಿಗಳಿಗೆ ಸಚಿವ ಎಂ.ಬಿ. ಪಾಟೀಲ ಕಟ್ಟುನಿಟ್ಟಿನ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ನಡೆಸುವ ಭೂಸ್ವಾಧೀನ ಮತ್ತು ನಿವೇಶನ ಮಂಜೂರಾತಿಯವರೆಗಿನ ಎಲ್ಲ ಪ್ರಕ್ರಿಯೆಯೂ ಇನ್ನು ಮುಂದೆ ಡಿಜಿಟಲ್ ರೂಪದಲ್ಲಿ ನಡೆಯಲಿದ್ದು, ಇದಕ್ಕೆ ಪೂರಕ ಕೆಲಸಗಳನ್ನು ನೂರು ದಿನಗಳಲ್ಲಿ ಮುಗಿಸಬೇಕು' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಖನಿಜ ಭವನದಲ್ಲಿ ಬುಧವಾರ ಇಲಾಖೆಯ 2ನೇ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ನೂರು ದಿನಗಳಲ್ಲಿ ಮಾಡಬೇಕಾದ ಕೆಲಸಗಳ ಬಗ್ಗೆ ಸ್ಪಷ್ಟಪಡಿಸಿದರು. ಎಲ್ಲವನ್ನೂ ಡಿಜಿಲೀಕರಣಗೊಳಿಸುವುದರಿಂದ ಇದರಿಂದ ರೈತರು ಮತ್ತು ಉದ್ಯಮಿಗಳು ಸೇರಿ ಎಲ್ಲರಿಗೂ ಅನುಕೂಲವಾಗಲಿದೆ ಎಂದೂ ಅವರು ಹೇಳಿದರು.

'ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆಯುಳ್ಳ ಇ-ಗವರ್ನೆನ್ಸ್ ಇಲಾಖೆಯ ಮೂಲಕವೇ ರಾಜ್ಯದ ಹಳೆಯ ಮತ್ತು ಹೊಸ ಕೈಗಾರಿಕಾ ಪ್ರದೇಶಗಳಲ್ಲಿರುವ ನಿವೇಶನಗಳ ಪ್ರತಿ ವಿವರವನ್ನೂ ಡಿಜಿಟಲೀಕರಿಸಲಾಗುವುದು. ಪ್ರತೀ ನಿವೇಶನಕ್ಕೆ ಸಂಬಂಧಿಸಿ ಒಟ್ಟು 77 ಕಾಲಂಗಳಲ್ಲಿ ಮಾಹಿತಿ ಇರಲಿದೆ' ಎಂದರು.

'ಕೈಗಾರಿಕಾ ನಿವೇಶನದ ಮಂಜೂರಾತಿ, ಅದರ ಸ್ಥಿತಿ-ಗತಿ, ಅಲ್ಲಿರುವ ಕೈಗಾರಿಕೆ, ಹೂಡಿಕೆ ಪ್ರಮಾಣ, ಹೂಡಿಕೆದಾರರಿಗೆ ಕೊಟ್ಟಿರುವ ಕಾಲಾವಕಾಶ, ಉದ್ಯೋಗಸೃಷ್ಟಿ, ರೈತರಿಗೆ ಕೊಟ್ಟಿರುವ ಪರಿಹಾರ, ನ್ಯಾಯಾಲಯದ ಪ್ರಕರಣಗಳ ವಿವರಗಳು ಕ್ಷಣಾರ್ಧದಲ್ಲಿ ಸಿಗಲಿವೆ. ಹಳೇ ದಾಖಲೆಗಳನ್ನು ಕಾಪಾಡುವ ಕಷ್ಟವೂ ತಪ್ಪಲಿದ್ದು, ಪ್ರತಿ ಮಾಹಿತಿಯೂ ಶಾಶ್ವತವಾಗಿರಲಿದೆ' ಎಂದರು.

'ಎಷ್ಟೋ ಪ್ರಕರಣಗಳಲ್ಲಿ ದಾಖಲೆಗಳು ಸರಿಯಾಗಿಲ್ಲದೆ ಒಂದೊಂದೇ ಜಮೀನಿಗೆ ಎರಡೆರಡು ಬಾರಿ ಪರಿಹಾರ ಕೊಡಲಾಗಿದೆ. ಇನ್ನು ಸಂಪೂರ್ಣ ಪಾರದರ್ಶಕತೆ ಬರಲಿದ್ದು, ಹೂಡಿಕೆದಾರರು ತಾವು ಇರುವೆಡೆಯೇ ಮಾಹಿತಿ ಪಡೆದುಕೊಳ್ಳಬಹುದು. ಮಧ್ಯವರ್ತಿಗಳ ಕಾಟವಿರುವುದಿಲ್ಲ' ಎಂದು ಹೇಳಿದರು.

'ಹಳೇ ಕೈಗಾರಿಕಾ ಪ್ರದೇಶಗಳಲ್ಲಿರುವ ನಿವೇಶನಗಳ ಹಂಚಿಕೆ ಮಾಹಿತಿಯನ್ನು ಒಂದು ತಿಂಗಳಲ್ಲಿ ಸ್ಕ್ಯಾನ್ ಮಾಡಬೇಕು. ದತ್ತಾಂಶವನ್ನು ಇ- ಆಡಳಿತ ಇಲಾಖೆ ಜತೆ ಹಂಚಿಕೊಂಡು ಮಂಡಳಿಗೆ ಬೇಕಾಗುವಂತೆ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗುವುದು. ಬಳಿಕ ಅದನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯ ಇ- ಸ್ವತ್ತು ತಂತ್ರಾಂಶದ ಜತೆ ಜೋಡಣೆ ಮಾಡಲಾಗುತ್ತದೆ. ಇ- ಖಾತಾ ಕೊಡುವುದು ಸೇರಿ ಇತರ ಪ್ರಕ್ರಿಯೆಗಳಿಗೂ ಅನುಕೂಲವಾಗಲಿದೆ' ಎಂದರು.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್, ಆಯುಕ್ತೆ ಖುಷ್ಬೂ ಗೋಯಲ್, ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋವಿಂದ ರೆಡ್ಡಿ, ಸಚಿವರ ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ ಪಾಲ್ಗೊಂಡಿದ್ದರು.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದರು. ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಆಯುಕ್ತೆ ಖುಷ್ಬೂ ಗೋಯಲ್ ಉಪಸ್ಥಿತರಿದ್ದರು

ಅಂಕಿ ಅಂಶಗಳು

- **224** ಒಟ್ಟು ಕೈಗಾರಿಕಾ ಪ್ರದೇಶಗಳು
- **92,824** ಎಕರೆ ಅಭಿವೃದ್ಧಿಪಡಿಸಿದ ಜಮೀನು
- **41,314** ಎಕರೆ ಹಂಚಿಕೆ ಮಾಡಿದ್ದು
- **63,225** ಎಕರೆ ಹಂಚಿಕೆ ಮಾಡಬಹುದಾದ ಜಮೀನು
- **25,422** ನಿವೇಶನ ಪಡೆದ ಸಂಸ್ಥೆಗಳು

'ಸಾರ್ವಜನಿಕರ ದತ್ತಾಂಶ ಬಳಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆ ಬಳಿ ಸಾರ್ವಜನಿಕರಿಗೆ ಸಂಬಂಧಿಸಿದ ಅಪಾರ ಪ್ರಮಾಣದ ಡಿಜಿಟಲ್ ದತ್ತಾಂಶ ಲಭ್ಯವಿದೆ. ಈ ದತ್ತಾಂಶ ಸಂಗ್ರಹಿಸಿಡುವುದಕ್ಕಿಂತ ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ಬಳಸಿಕೊಳ್ಳುವ ವ್ಯವಸ್ಥೆ ರೂಪಿಸಬೇಕು ಎಂದು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ಸಲಹೆ ನೀಡಿದರು.

ಇ–ಆಡಳಿತ ಇಲಾಖೆ ವ್ಯಾಪ್ತಿಯ ಸಂಸ್ಥೆಗಳಾದ ಇ–ಆಡಳಿತ ಕೇಂದ್ರ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಹಾಗೂ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ ಕಾರ್ಯಚಟುವಟಿಕೆ ಪರಿಶೀಲನಾ ಸಭೆಯಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ಸರ್ಕಾರದ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಒದಗಿಸುವ ಸಂದರ್ಭದಲ್ಲಿ ಇಲಾಖೆಗಳಲ್ಲಿರುವ ಡಿಜಿಟಲ್ ದತ್ತಾಂಶವನ್ನು ಸಮರ್ಪಕವಾಗಿ ಬಳಸುವುದರಿಂದ ಅರ್ಹ ಫಲಾನುಭವಿಗಳನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಇದರಿಂದ ಸಾರ್ವಜನಿಕರು ಒಂದೇ ಮಾಹಿತಿಯನ್ನು ಹಲವು ಬಾರಿ ಸಲ್ಲಿಸುವ ಅನಿವಾರ್ಯತೆಯೂ ಕಡಿಮೆಯಾಗುತ್ತದೆ ಎಂದರು.

ಸರ್ಕಾರದ ಯೋಜನೆಗಳಿಗೆ ಮೀಸಲಿಡುವ ಪ್ರತಿಯೊಂದು ರೂಪಾಯಿಯೂ ಅರ್ಹ ಫಲಾನುಭವಿಗಳಿಗೆ ತಲುಪಬೇಕು. ಯಾವುದೇ ಕಾರಣಕ್ಕೂ ಸರ್ಕಾರದ ಹಣ ಅನರ್ಹ ಫಲಾನುಭವಿಗಳಿಗೆ ಹೋಗದಂತೆ ತಂತ್ರಜ್ಞಾನ ಆಧರಿತ ವ್ಯವಸ್ಥೆ ರೂಪಿಸಬೇಕು. ವಿವಿಧ ಇಲಾಖೆಗಳ ದತ್ತಾಂಶ ಏಕೀಕರಣ, ಕೃತಕ ಬುದ್ಧಿಮತ್ತೆ, ಜಿಐಎಸ್ ಹಾಗೂ ಡಿಜಿಟಲ್ ಆಡಳಿತ ವ್ಯವಸ್ಥೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸೋರಿಕೆ ರಹಿತ ಮತ್ತು ಗುರಿ-ಆಧಾರಿತ ಸೇವಾ ವಿತರಣೆಗೆ ಆದ್ಯತೆ ನೀಡಬೇಕು ಎಂದು ಪ್ರಿಯಾಂಕ್ ಸೂಚಿಸಿದರು.

ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಇ–ಆಡಳಿತ ಕೇಂದ್ರ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಹಾಗೂ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್‌ಗಳ ಕಾರ್ಯಚಟುವಟಿಕೆ ಪರಿಶೀಲನಾ ಸಭೆ ನಡೆಸಿದರು.

ಪುತ್ರಿ ಮೇಲೆ ಅತ್ಯಾಚಾರ ತಂದೆಗೆ 20 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 16 ವರ್ಷದ ಪುತ್ರಿಯ ಮೇಲೆ ಅತ್ಯಾಚಾರ ಎಸಗಿದ್ದ ತಂದೆಗೆ 20 ವರ್ಷ ಜೈಲು ಶಿಕ್ಷೆ, ದಂಡ ವಿಧಿಸಿ ನಗರದ ಒಂದನೇ ತ್ವರಿತ ವಿಶೇಷ ನ್ಯಾಯಾಲಯವು (ಎಫ್‌ಟಿಎಸ್‌ಸಿ) ಬುಧವಾರ ಆದೇಶಿಸಿದೆ.

ಮನೋಜ್ ವಿಶ್ವಕರ್ಮ (40) ಶಿಕ್ಷೆಗೆ ಒಳಗಾದ ಅಪರಾಧಿ.

ನಗರದ ಬಡಾವಣೆಯೊಂದರಲ್ಲಿ ಅಪರಾಧಿಯು ಪತ್ನಿ ಹಾಗೂ ನಾಲ್ವರು ಮಕ್ಕಳೊಂದಿಗೆ ವಾಸವಿದ್ದ. 2023ರ ಜೂನ್ 6ರಂದು ಬಾಲಕಿಯ ಅಜ್ಜಿ ನಿಧನರಾಗಿದ್ದರು. ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಕುಟುಂಬದವರೊಂದಿಗೆ ಸ್ವಗ್ರಾಮಕ್ಕೆ ಬಾಲಕಿ ತೆರಳಿದ್ದಳು. ಅದೇ ದಿನ ಸಂಜೆ ಅಪರಾಧಿ ನಗರಕ್ಕೆ ವಾಪಸ್ ಬಂದಿದ್ದ. ಮರುದಿನ ಬಾಲಕಿ ಒಬ್ಬಳೇ ಮನೆಗೆ ವಾಪಸ್ ಆಗಿದ್ದಳು. ಅಂದು ರಾತ್ರಿ ಮದ್ಯಪಾನ ಮಾಡಿಕೊಂಡು ಮನೆಗೆ ಬಂದಿದ್ದ ಅಪರಾಧಿ, ಪುತ್ರಿಯ ಮೇಲೆ ಅತ್ಯಾಚಾರ ಎಸಗಿದ್ದ. ಸಂತ್ರಸ್ತೆ ನಡೆದುಕೊಂಡು ಮಹಾಲಕ್ಷ್ಮಿಲೇಔಟ್ ಠಾಣೆಗೆ ತೆರಳಿ, ದೂರು ನೀಡಿದ್ದಳು. ಅಂದಿನ ತನಿಖಾಧಿಕಾರಿಗಳಾದ ಕೆ.ಎಸ್. ಸತೀಶ್ ಹಾಗೂ ಡಿ.ಎಲ್.ರಾಜು ಅವರು ಪೋಕ್ಸೊ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶೆ ಎಸ್.ಸುಜಾತಾ ಅವರು ಅಪರಾಧಿಗೆ ಶಿಕ್ಷೆ ಹಾಗೂ ದಂಡ ವಿಧಿಸಿದ್ದಾರೆ. ಅಲ್ಲದೇ ಸಂತ್ರಸ್ತ ಬಾಲಕಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ₹2 ಲಕ್ಷ ಪರಿಹಾರ ನೀಡಬೇಕು ಎಂದು ಆದೇಶಿಸಿದ್ದಾರೆ. ಪ್ರಾಸಿಕ್ಯೂಷನ್ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಪಿ.ಕೃಷ್ಣವೇಣಿ ವಾದ ಮಂಡಿಸಿದ್ದರು.

ತಮಿಳುನಾಡು ಸಿ.ಎಂ. ನಾಳೆ ಕೊಲ್ಲೂರಿಗೆ

ಉಡುಪಿ: ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರು ಕೊಲ್ಲೂರು ಶ್ರೀಮೂಕಾಂಬಿಕಾ ದೇವಸ್ಥಾನಕ್ಕೆ ಇದೇ 12 ರಂದು ಭೇಟಿ ನೀಡಲಿದ್ದಾರೆ.

ವಿಜಯ್ ಅವರು, ವಿಶೇಷ ವಿಮಾನದ ಮೂಲಕ ಬಜಪೆಯ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮಧ್ಯಾಹ್ನ 12.30ಕ್ಕೆ ತಲುಪಲಿದ್ದು, ಇಲ್ಲಿಂದ ರಸ್ತೆ ಮಾರ್ಗವಾಗಿ ಕೊಲ್ಲೂರಿಗೆ ತೆರಳಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ದೇವಸ್ಥಾನಕ್ಕೆ ಭೇಟಿ ನೀಡಲಿರುವ ಅವರು, ವಿಶೇಷ ಪೂಜೆ ಹಾಗೂ ದೇವರ ದರ್ಶನ ಮುಗಿಸಿ ಮರಳಲಿದ್ದಾರೆ.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು
Adikavi Shri Maharshi Valmiki University, Raichur
Krishna Tunga Campus, Mantralaya Road (N.H. 167), Yergera -584133
Website:https://raichuruniversity.ac.in

ಸಂ:ಅಶ್ರೀಮವಾವಿರಾ/ಆಡಳಿತ/ ಟೆಂಡರ್EXAM/2026-27/ಜಾಪ್ರ ದಿ:02.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು–584133 ಇವರ ವತಿಯಿಂದ "ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಅವಶ್ಯಕವಿರುವ ಕೇಂದ್ರೀಕೃತ ಲೈವ್ ವೀಕ್ಷಣೆ ಸೌಲಭ್ಯ ಒದಗಿಸುವ ಪ್ರಾಯೋಗಿಕ ಯೋಜನೆಯನ್ನು (Pilot Project) ಅನುಷ್ಠಾನಗೊಳಿಸುವ ಕುರಿತು"ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಶುಲ್ಕ ಹಾಗೂ ಇಎಂಡಿಮತ್ತು ಕೊನೆಯ ದಿನಾಂಕ ಇ–ಪೋರ್ಟಲ್ ಪ್ರಕಾರ. ಹೆಚ್ಚಿನ ಮಾಹಿತಿಯನ್ನು https://kppp.karnataka.gov.in/RU/2026-27/SE0015, ರಿಂದ ಪಡೆಯಬಹುದು.

ವಿ.ಸೂ: ಟೆಂಡರ್‌ನಲ್ಲಿ ಯಾವುದೇ ಬದಲಾವಣೆಯಾದಲ್ಲಿ ಇ–ಟೆಂಡರ್ ಜಾಲತಾಣದಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕುಲಸಚಿವರು,
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

DIP/RCR/114/KSMC&A/116/2026-27

ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
ಟ್ರೇಡ್ ಸೆಂಟರ್, ಓಲ್ಡ್ ನಂ. 29/4, ನ್ಯೂ ನಂ. 116/2, ಮೊದಲನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 001
ದೂರವಾಣಿ: 080–22266540/541, e-mail:kstidcl.bgl@gmail.com

ಸಂಖ್ಯೆ:ಕೆಎಸ್‌ಟಿಐಡಿಸಿಎಲ್/ಆಡಳಿತ/ಹೊ.ಟೆ.ಪಾರ್ಕ್/2026–27 ದಿನಾಂಕ:10.06.2026

ದಿನಾಂಕ ಮುಂದುವರೆಸಿದ ಇ–ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿ., ಬೆಳಗಾವಿ / ಬೆಂಗಳೂರು ಈ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಕಸಬಾ ಹೋಬಳಿಯ ಅರಳೇಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 28ರಲ್ಲಿರುವ 30 ಎಕರೆ ಭೂಮಿಯಲ್ಲಿ ಹೊಸದುರ್ಗ ಜವಳಿ ಪಾರ್ಕ್ (Textile Park) ಅಭಿವೃದ್ಧಿಪಡಿಸಲು "ವಹಿವಾಟು ಸಲಹಾ ಸೇವೆಗಳ" (Transaction Advisory Services) ಆಯ್ಕೆಗಾಗಿ ಟೆಂಡರ್ ಮೂಲಕ ಯೋಜನೆಯ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ 2026–27 ನೇ ಸಾಲಿಗೆ ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಈಗಾಗಲೆ ಕರೆಯಲಾಗಿದ್ದ ಇ–ಟೆಂಡರ್‌ನ ದಿನಾಂಕವನ್ನು ಮುಂದುವರೆಸಲಾಗಿದೆ. ಟೆಂಡರ್ ಅರ್ಜಿ ಹಾಕಲು ಅಂತಿಮ **ದಿನಾಂಕ:30.06.2026 ಸಂಜೆ 5.30 ಘಂಟೆಯವರೆಗೆ** ಹಾಗೂ ಆರ್ಥಿಕ ಲಕೋಟೆ ತೆರೆಯುವ **ದಿನಾಂಕ:02.07.2026 ಬೆಳಿಗ್ಗೆ 11.00 ಘಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಅಥವಾ **https://kppp.karnataka.gov.in** ಗೆ ಸಂಪರ್ಕಿಸಿ.
ಹೆಚ್ಚಿನ ಮಾಹಿತಿಗೆ ಕೆ.ಎಸ್.ಟಿ.ಐ.ಡಿ.ಸಿ.ಎಲ್. ನಿಗಮದ ಸ್ಥಿರ ದೂರವಾಣಿ ಸಂಖ್ಯೆ:080–22266540 ಇದಕ್ಕೆ ಸಂಪರ್ಕಿಸಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಟಿ.ಐ.ಡಿ.ಸಿ.ಎಲ್.

ವಾಸಾಸಂಇ/ವಾಪ್ರ/ಜಿಎ/1096/2026–27

ಪುರಸಭೆ ಕಾರ್ಯಾಲಯ ಸವಣೂರ
ಕರ್ನಾಟಕ ಸರಕಾರ
ಶಿಗ್ಗಾಂವ ರಸ್ತೆ, ಸವಣೂರ–581 118. ಜಿ॥ ಹಾವೇರಿ
Ph. No: 08378-241623, Website: http://savanurtown.mrc.gov.in,
E-mail: itstaff_ulb_savanur@yahoo.co.in

ಸಂ.ಪುಸಸ/ಎಸ್ಎಫ್‌ಸಿ ವಿ.ಅ/ಟೆಪ್ರ/ವಹಿ/2026–27 ದಿನಾಂಕ: 09–06–2026

ಕೆಪಿಪಿಇ-ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ

ಸನ್ 2022–23 ನೇ ಸಾಲಿನ ಎಸ್ಎಫ್ ವಿಶೇಷ ಅನುದಾನದಡಿ **224.00 ಲಕ್ಷಗಳು** ಮೊತ್ತದ ಪ್ಯಾಕೇಜ್ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 2000 ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕೆಪಿಪಿಇ ಪೋರ್ಟಲ್ ಮುಖಾಂತರ ಕರ್ನಾಟಕ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ KW-4 ನಂತೆ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಕಾಮಗಾರಿಯ ವಿವರ, ಇ.ಎಂ.ಡಿ. ಟೆಂಡರ್ ಫಾರ್ಮ ಫೀ ಮತ್ತು ಗುತ್ತಿಗೆದಾರರ ದರ್ಜೆಗಳ ಬಗ್ಗೆ ಹಾಗೂ ಇತರೆ ಯಾವುದೇ ಹೆಚ್ಚಿನ ಮಾಹಿತಿ ಬೇಕಾದಲ್ಲಿ **https://kppp. karnataka.gov.in** ನ ಇ–ಕೆಪಿಪಿಇ ವೆಬ್‌ಸೈಟ್‌ನಲ್ಲಿ **ದಿನಾಂಕ: 10–06–2026** ರ ನಂತರ ವೀಕ್ಷಿಸಿ ತಿಳಿದುಕೊಳ್ಳಬಹುದು ಹಾಗೂ ಕಚೇರಿ ವೇಳೆಯಲ್ಲಿ ಪುರಸಭೆಯ ತಾಂತ್ರಿಕ ವಿಭಾಗದಲ್ಲಿ ಕೇಳಿ ತಿಳಿದುಕೊಳ್ಳಬಹುದು ಟೆಂಡರ್‌ಗಳ ವಿವರಗಳು ಈ ಕೆಳಗಿನಂತಿವೆ.

TABLE

Sl. No.	Name of work	Amount put to tender (Rs. in lakhs)	Earnest Money Deposit (Rs. in lakhs)	Tender Processing Fee (Rs.)	Period of completion (including Monsoon)
1	2	3	4	5	6
1	Development of Roads and Drains in Savanur TMC Under SFC SPL Grant 2022-23 **DMA/2026-27/OW/WORK INDENT57447**	Rs. 187.35 (Excluding GST)	Rs. 2.81	As per KPPP-portal	12 Months

1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸಲ್ಲಿಸಲು ಕೊನೆಯ **ದಿನಾಂಕ: 08–07–2026 ಸಂಜೆ 5.30 ಗಂಟೆವರೆಗೆ.**
2) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 10–07–2026 ಮುಂಜಾನೆ 10.30 ಗಂಟೆ ನಂತರ** ಆನ್‌ಲೈನ್ ಮೂಲಕ.
3) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 13–07–2026 ಮುಂಜಾನೆ 11.00 ಗಂಟೆ ನಂತರ** ಆನ್‌ಲೈನ್ ಮೂಲಕ.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಸವಣೂರ
ಸಹಿ/– ಮಾನ್ಯ ಆಡಳಿತಾಧಿಕಾರಿಗಳು, ಪುರಸಭೆ, ಸವಣೂರ

ವಾ.ಸಾ.ಇ./ಹಾವೇರಿ/149/2026–27/ದೇಶಪಾಂಡೆಪಬ್ಲಿಸಿಟಿ

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org

ಸಂಖ್ಯೆ:ಎ3/ಬಬಪಾ/ಇ-ಟೆಂಡರ್/ಹೊರಗುತ್ತಿಗೆ/ಸಿಆರ್–1/2026–27 ದಿನಾಂಕ: 08–06–2026

ಇ–ಟೆಂಡರ್ ಪ್ರಕಟಣೆ

ಉಪ ನಿರ್ದೇಶಕರು, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು ಇವರು **ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಒಪ್ಪಂದದ ಒಂದು ವರ್ಷ ಅವಧಿಗೆ** ವಿವಿಧ ವೃಂದದ ಸಿಬ್ಬಂದಿಗಳ ಸೇವೆಯನ್ನು ಒದಗಿಸುವ ಬಗ್ಗೆ ಸೂಕ್ತ ಸಂಸ್ಥೆಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ ಹಾಗೂ ಟೆಂಡರ್ ಫೀಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **23–06–2026 ರಂದು ಸಂಜೆ 4.00 ಗಂಟೆವರೆಗೆ.** ತಾಂತ್ರಿಕ ಬಿಡ್‌ನ್ನು ದಿನಾಂಕ: **25–06–2026 ರಂದು ಸಂಜೆ 4.30 ಗಂಟೆ ನಂತರ ತೆರೆಯಲಾಗುವುದು.** ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: **27–06–2026 ರಂದು ಬೆಳಿಗ್ಗೆ 11.30 ಗಂಟೆ ನಂತರ ತೆರೆಯಲಾಗುವುದು.**

ಸಹಿ/– ಉಪ ನಿರ್ದೇಶಕರು

ವಾಸಾಸಂಇ/ವಾ.ಪ್ರ/1067/ಅಡ್ವರ್ಟೋರ್/2026–27

ಸಾರ್ವಜನಿಕ ಸೂಚನೆ
(ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಸಂಹಿತೆ, 2016ರ ಸೆಕ್ಷನ್ 130(1)(b) & 130(2)ರ ಅಡಿಯಲ್ಲಿ)

ಮೆ। ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್‌ನ (CIN: U18101KA2002PLC030185) ವೈಯಕ್ತಿಕ ಜಾಮೀನುದಾರರಾದ ಶ್ರೀಮತಿ ನುಜ್ಹತ್ ಆಯಿಶಾ ನಸೀರ್, ಶ್ರೀ ನಸೀರ್ ಅಹ್ಮದ್ ಮತ್ತು ಶ್ರೀ ಅವೈಜ಼್ ಅಹ್ಮದ್ ಅವರ ಸಾಲದಾತರ ಗಮನಕ್ಕೆ

ಪ್ರಸ್ತುತ ವಿವರಗಳು

1.	ಸಾಲಗಾರರ/ವೈಯಕ್ತಿಕ ಜಾಮೀನುದಾರರ ಹೆಸರು ಮತ್ತು ವಿಳಾಸ	**1. ಶ್ರೀಮತಿ ನುಜ್ಹತ್ ಆಯಿಶಾ ನಸೀರ್** ನಂ. 391, 2ನೇ ಕ್ರಾಸ್, 2ನೇ ಸ್ಟೇಜ್, 80 ಅಡಿ ರಸ್ತೆ, ಆರ್.ಎಮ್.ವಿ. ಬಡಾವಣೆ, ಬೆಂಗಳೂರು 560094 **2. ಶ್ರೀ ನಸೀರ್ ಅಹ್ಮದ್** ನಂ. 391, 2ನೇ ಕ್ರಾಸ್, 2ನೇ ಸ್ಟೇಜ್, 80 ಅಡಿ ರಸ್ತೆ, ಆರ್.ಎಮ್.ವಿ. ಬಡಾವಣೆ, ಬೆಂಗಳೂರು 560094 **3. ಶ್ರೀ ಅವೈಜ಼್ ಅಹ್ಮದ್** ನಂ. 391, 2ನೇ ಕ್ರಾಸ್, 2ನೇ ಸ್ಟೇಜ್, 80 ಅಡಿ ರಸ್ತೆ, ಆರ್.ಎಮ್.ವಿ. ಬಡಾವಣೆ, ಬೆಂಗಳೂರು 560094
2.	ಸಾಲಗಾರರ/ವೈಯಕ್ತಿಕ ಜಾಮೀನುದಾರರ ವಿಷಯದಲ್ಲಿ ಆದೇಶ ಮತ್ತು ದಿವಾಳಿತನದ ಆರಂಭದ ದಿನಾಂಕದ ವಿವರಗಳು	1. ಶ್ರೀಮತಿ ನುಜ್ಹತ್ ಆಯಿಶಾ ನಸೀರ್: CP (IB) No.06/BB/2021 on 08th June 2026 2. ಶ್ರೀ ನಸೀರ್ ಅಹ್ಮದ್: CP (IB) No.07/BB/2021 on 08th June 2026 3. ಶ್ರೀ ಅವೈಜ಼್ ಅಹ್ಮದ್: CP (IB) No.08/BB/2021 on 08th June 2026
3.	ದಿವಾಳಿತನ ಟ್ರಸ್ಟಿಯಾಗಿ (Bankruptcy Trustee) ನಿಯೋಜಿಸಲ್ಪಟ್ಟಿರುವ ಇನ್ಸಾಲ್ವೆನ್ಸಿ ವೃತ್ತಿಪರರ ಹೆಸರು, ನೋಂದಾವಣಾ ಸಂಖ್ಯೆ, ಈಮೇಲ್ ಐಡಿ ಹಾಗೂ ವಿಳಾಸ – ವ್ಯವಹಾರದ ಸಲುವಾಗಿ	**ಶ್ರೀ ರವೀಂದ್ರ ಬೆಲೆಯೂರ್** IBBI/IPA-001/IP-P00189 / 2017-18/10368 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 560011 ಟೆಲಿ: +91 80 26540193 Process Email ID: bankruptcy.trustee.pgs.scott@beleyur.com ಈಮೇಲ್: ravi@beleyur.com
4.	ಕ್ಲೇಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	25ನೇ ಜೂನ್,2026

ಈ ಮೂಲಕ ನೋಟೀಸು ನೀಡಲಾಗುತ್ತಿದೆ: ಏನೆಂದರೆ ಮೆ। ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್‌ನ ವೈಯಕ್ತಿಕ ಜಾಮೀನುದಾರರಾದ ಶ್ರೀಮತಿ ನುಜ್ಹತ್ ಆಯಿಶಾ ನಸೀರ್, ಶ್ರೀ ನಸೀರ್ ಅಹ್ಮದ್ ಮತ್ತು ಶ್ರೀ ಅವೈಜ಼್ ಅಹ್ಮದ್ ಇವರ ವಿರುದ್ಧ ದಿವಾಳಿತನ ಪ್ರಕ್ರಿಯೆಯನ್ನು ಆರಂಭಿಸುವಂತೆ 8ನೇ ಜೂನ್ 2026ರಂದು (ಆದೇಶದ ಪ್ರತಿಯನ್ನು 10ನೇ ಜೂನ್ 2026ರಂದು ಸ್ವೀಕರಿಸಲಾಗಿದೆ) ಮಾನ್ಯ ನ್ಯಾಶನಲ್ ಕಂಪನಿ ಲಾ ಟ್ರೈಬ್ಯೂನಲ್, ಬೆಂಗಳೂರು ಆದೇಶಿಸಿದೆ.

ಮೆ। ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್‌ನ ವಿಷಯದಲ್ಲಿ ವೈಯಕ್ತಿಕ ಜಾಮೀನುದಾರರಾದ ಈ ಮೇಲಿನವರ ಸಾಲದಾತರು, 25ನೇ ಜೂನ್ 2026ರಂದು ಇಲ್ಲವೆ ಮುಂಚಿತವಾಗಿ ತಮ್ಮ ಕ್ಲೇಮುಗಳನ್ನು ಆಧಾರಗಳ ಸಮೇತ ನಿಗದಿತ ಪ್ರಪತ್ರದಲ್ಲಿ, ದಿವಾಳಿತನ ಟ್ರಸ್ಟಿಯವರಿಗೆ ಮೇಲೆ ಕಲಂ 3ರಲ್ಲಿ ತಿಳಿಸಿದ ವಿಳಾಸಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗುತ್ತಿದೆ.

ಸುಳ್ಳಾದ ಅಥವಾ ದಾರಿತಪ್ಪಿಸುವಂತಹ ಕ್ಲೇಮುಗಳನ್ನು ಸಲ್ಲಿಸಿದಲ್ಲಿ ಅಂತಹವರು ದಂಡರ್ಹರಾಗುತ್ತಾರೆ.

ಸಹಿ/– ರವೀಂದ್ರ ಬೆಲೆಯೂರ್
ದಿನಾಂಕ: 10.06.2026
ಸ್ಥಳ: ಬೆಂಗಳೂರು
ನೋಂದಣಿ ಸಂ. IBBI/IPA-001/IP-P00189/2017-18/10368

ವಿಶೇಷ ತಹಶೀಲ್ದಾರ್ ರವರ ನ್ಯಾಯಾಲಯ,
ಬೆಂಗಳೂರು ದಕ್ಷಿಣ ತಾಲ್ಲೂಕು ಕಂದಾಯಭವನ, ನೆಲ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009.
ಇ–ಮೇಲ್:tahasildar.bangaloresouth@gmail.com

ಸಂಖ್ಯೆ: ಎಂಎಸ್‌ಸಿ/ರೇರಾ/ಸಿ.ಆರ್.62/2025–26 ದಿನಾಂಕ:08.06.2026

ನೋಟೀಸ್

ವಿಷಯ:– Krishna Enterprises (Housing & Infrastructures) India Pvt. Ltd. ರವರಿಂದ ರೇರಾ ಪ್ರಾಧಿಕಾರದ ಆದೇಶದಂತೆ ಬಾಕಿ ಮೊತ್ತ 82,41,723/– ತಹಲ್‌ವರೆಗಿನ ಬಡ್ಡಿ ರೂಪಾಯಿ ಮೊತ್ತವನ್ನು ಭೂಕಂದಾಯ ಬಾಕಿಯಂತೆ ವಸೂಲು ಮಾಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ ರೇರಾ ನ್ಯಾಯಾಲಯದ ಆದೇಶ : ಸಂಖ್ಯೆ: ರೇರಾ/ಕಂದಾಯ/ಆಡಳಿತ/4688/2024–25/832 ದಿನಾಂಕ: 04.11.2020ರ ಆದೇಶದಂತೆ (KRISHNA Enterprises (Housing & Infrastructures) India Pvt Ltd. GPA Holder, ಬಿ.ಎಂ. ಐಯ್ಯಣ್ಣ ಬಿನ್ ಬಿ.ಪಿ.ಮಾಚಯ್ಯ, ಆರ್. ಚಂದ್ರಶೇಖರ್ ಬಿನ್ ಲೇ.ರಾಮಯ್ಯ, ಐ.ಎಂ.ದೇವಪ್ಪ ಬಿನ್ ಐ.ಜೆ ಮಾಚಯ್ಯ. ಇವರುಗಳು ರೇರಾ ಪ್ರಾಧಿಕಾರದ ಬಾಕಿ ಮೊಬಲಗನ್ನು ಭೂ ಕಂದಾಯ ಬಾಕಿಯಂತೆ ವಸೂಲು ಮಾಡುವ ಸಂಬಂಧ ಈ ಪ್ರಾಧಿಕಾರದಿಂದ ನಮೂನೆ–37ರ ಮುಖೇನ ನೋಟೀಸ್ ನೀಡಲಾಗಿದ್ದರೂ ಸಹ ಸದರಿ ಬಾಕಿದಾರರು **ರೇರಾ ಪ್ರಾಧಿಕಾರದ ನ್ಯಾಯಾಲಯದ ಆದೇಶದಂತೆ ದಂಡ/ಪರಿಹಾರದ ಮೊತ್ತ ರೂ. 82,41,723/– ತಹಲ್‌ವರೆಗಿನ ಬಡ್ಡಿ ಸೇರಿದ ನಿಗದಿತ ಮೊಬಲಗನ್ನು ಕಟ್ಟಲು** ವಿಫಲಾಗಿರುತ್ತಾರೆ.

ಆದ್ದರಿಂದ KRISHNA Enterprises (Housing & Infrastructures) India Pvt Ltd. GPA Holder, ಬಿ.ಎಂ. ಐಯ್ಯಣ್ಣ ಬಿನ್ ಬಿ.ಪಿ.ಮಾಚಯ್ಯ, ಆರ್. ಚಂದ್ರಶೇಖರ್ ಬಿನ್ ಲೇ.ರಾಮಯ್ಯ, ಐ.ಎಂ. ದೇವಪ್ಪ ಬಿನ್ ಐ.ಜೆ ಮಾಚಯ್ಯ.
ಸ್ವತ್ತಿನ ವಿವರ: ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡತೋಗೂರು ಗ್ರಾಮದ ಸ.ನಂ 13/9 ರಲ್ಲಿ 1–16 ಎ/ಗುಂ ಬಾಬ್ತು ಬಾಕಿದಾರರ ಕಛೇರಿಯನ್ನು **ದಿನಾಂಕ: 29.06.2026** ರಂದು ಬಹಿರಂಗ ಹರಾಜು ಮಾಡಲಾಗುವುದು.

ಸಹಿ/–
ವಿಶೇಷ ತಹಶೀಲ್ದಾರ್,
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು.

:ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ:
ಕಾರ್ಯನಿರ್ವಾಹಕ ಇಂಜಿನೀಯರವರ ಕಾರ್ಯಾಲಯ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ವಿಭಾಗ ನಂ: 02, ಬಾಗಲಕೋಟೆ–587102.
ದೂರವಾಣಿ ಸಂಖ್ಯೆ: 08354–297054 E-mail: eebtda2@gmail.com

ಟೆಂಡರ್ ಪ್ರಕಟಣೆ ಸಂಖ್ಯೆ:ಕಾನಿಇಂ/ಬಾ.ಪ.ಅ.ಪ್ರಾ/ವಿ–2/ಪಿಬಿ–01/ಟೆ.ಪ್ರಸಂಖ್ಯೆ–02/2026–27/640 ದಿನಾಂಕ:09.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–02
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತವು ರೂ 68.56 ಲಕ್ಷಗಳಿಂದ 143.21 ಲಕ್ಷಗಳಿರುತ್ತದೆ

ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ:20.06.2026 ಸಂಜೆ 05.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 22.06.2026 ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ), ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 24.06.2026 ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ.) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354–297054 ಸಂಪರ್ಕಿಸಬಹುದಾಗಿದೆ.

ಸೂಚನೆ: ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳಲ್ಲಿ ಬದಲಾವಣೆ ಕುರಿತು ಮತ್ತು ಇನ್ನಿತರೆ ತಿದ್ದುಪಡೆಗಳು/ಮಾರ್ಪಾಡುಗಳನ್ನು "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವುದು. ಮತ್ತು ಸದರಿ ವಿಷಯ ಕುರಿತು ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ., ವಿಭಾಗ ನಂ: 02, ಬಾಗಲಕೋಟೆ.

DIPR/BGK/RO-NO-/84/KSMCA/2026-27

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರ – ನೋಂದಾಯಿತ ಸ್ವಾಯತ್ತ ಸಂಸ್ಥೆ ಹಾಗೂ ಎನ್.ಎ.ಬಿ.ಹೆಚ್. ನಿಂದ ಮಾನ್ಯತೆ ಹೊಂದಿದ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069 ದೂ.: 080 22977400 / 500 / 600 / 216 / 217 / 276
ಇ–ಮೇಲ್: director.sjicr@gmail.com ವೆಬ್‌ಸೈಟ್: www.jayadevacardiology.com

ನಂ. : SJICR/TS/24/2026-27 ದಿನಾಂಕ: 10.06.2026

ಟೆಂಡರ್ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇವರು, ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ಸೇವೆಗಳಿಗೆ ದ್ವಿ ಬಿಡ್ ವ್ಯವಸ್ಥೆಯಲ್ಲಿ ಟೆಂಡರ್ ಆಹ್ವಾನಿಸಿದೆ:

ಕ್ರ. ಸಂ.	ಟೆಂಡರ್ ಪ್ರಕಟಣೆ / ಇಂಡೆಂಟ್ ನಂ.	ಸೇವೆಗಳ ಹೆಸರು
1	SJICR/2026-27/SE0056 dt. 10-06-2026	ಕಲಬುರಗಿಯ ಸರ್ದಾರ್ ವಲ್ಲಭಭಾಯಿ ಪಟೇಲ್ ರಸ್ತೆಯಲ್ಲಿರುವ ಎಸ್‌ಜೆಐಸಿಆರ್ ಸಂಸ್ಥೆಗೆ ವೈದ್ಯಕೀಯ ಅನಿಲಗಳ (ಆಮ್ಲಜನಕ) – ಐಪಿ ಪೂರೈಕೆ.
2	SJICR/2026-27/SE0057 dt. 10-06-2026	ಕಲಬುರಗಿಯ ಸರ್ದಾರ್ ವಲ್ಲಭಭಾಯಿ ಪಟೇಲ್ ರಸ್ತೆಯಲ್ಲಿರುವ 371 ಹಾಸಿಗೆಗಳ ಎಸ್‌ಜೆಐಸಿಆರ್ ಆಸ್ಪತ್ರೆಯ ಕಟ್ಟಡದ ಒಳಗೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ತಿಗಣೆಗಳು, ಜಿರಳೆಗಳು, ಹಲ್ಲಿಗಳು, ಜೇನುನೊಣಗಳು ಮತ್ತು ಇಲಿಗಳ ನಿಯಂತ್ರಣಕ್ಕಾಗಿ ಕೀಟನಾಶಕ/ನಿವಾರಕ ಚಿಕಿತ್ಸೆ ಒದಗಿಸುವುದು.
3	SJICR/2026-27/SE0058 dt. 10-06-2026	ಕಲಬುರಗಿಯ ಸರ್ದಾರ್ ವಲ್ಲಭಭಾಯಿ ಪಟೇಲ್ ರಸ್ತೆಯಲ್ಲಿರುವ ಎಸ್‌ಜೆಐಸಿಆರ್‌ನಲ್ಲಿ ಅಳವಡಿಸಲಾಗಿರುವ ವೈದ್ಯಕೀಯ ಅನಿಲ ಉಪಕರಣಗಳು, ವೈದ್ಯಕೀಯ ಅನಿಲಗಳ ಆಂತರಿಕ ಪೂರೈಕೆಗಾಗಿ ಇರುವ ಪೈಪ್‌ಲೈನ್ ಮತ್ತು ಇತರ ಸಂಬಂಧಿತ ಕೆಲಸಗಳ ಕಾರ್ಯಾಚರಣೆ ಮತ್ತು ನಿರ್ವಹಣೆ.
4	SJICR/2026-27/SE0059 dt. 10-06-2026	ಕೆಳಗಿನವುಗಳ ಕಾರ್ಯಾಚರಣೆ ಮತ್ತು ನಿರ್ವಹಣೆ: ಎ. ಸಿಂಕ್ರೊನೈಸೇಶನ್ ಪ್ಯಾನಲ್ ಮತ್ತು ಸಂಬಂಧಿತ ಉಪಕರಣಗಳನ್ನು ಹೊಂದಿರುವ 2x750 ಕೆವಿಎ ಸಾಮರ್ಥ್ಯದ ಡಿಜಿ ಸೆಟ್. ಬಿ. ಕಾಂಪ್ಯಾಕ್ಟ್ ಆರ್‌ಎಂಯು ಹೊಂದಿರುವ 11 ಕೆವಿ ಎಚ್‌ಟಿ ಬ್ರೇಕರ್ ಪ್ಯಾನಲ್. ಸಿ. 2 x 1000 ಕೆವಿಎ ಟ್ರಾನ್ಸ್‌ಫಾರ್ಮರ್ 11 ಕೆವಿಎ / 433 ವೋಲ್ಟ್ಸ್ ಎಂವಿ ಪ್ಯಾನಲ್ ಮತ್ತು ಕೇಬಲ್‌ಗಳನ್ನು ಹೊಂದಿರುವ ವಿದ್ಯುತ್ ಸಬ್‌ಸ್ಟೇಷನ್. ಡಿ. ಕಲಬುರಗಿಯ ಎಸ್‌ಜೆಐಸಿಆರ್‌ನಲ್ಲಿ ಆಂತರಿಕ ವಿದ್ಯುದ್ದೀಕರಣ ಮತ್ತು ವಿದ್ಯುತ್ ಸ್ಥಾಪನೆಗಳ ನಿಯತಕಾಲಿಕ ಸೇವೆಗಳು.
5	SJICR/2026-27/SE0060 dt. 10-06-2026	ಕಲಬುರಗಿಯ ಸರ್ದಾರ್ ವಲ್ಲಭಭಾಯಿ ಪಟೇಲ್ ರಸ್ತೆಯಲ್ಲಿರುವ ಎಸ್‌ಜೆಐಸಿಆರ್‌ನಲ್ಲಿ ಅಳವಡಿಸಲಾಗಿರುವ ಕೇಂದ್ರೀಕೃತ ಎಚ್‌ವಿಎಸಿ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ಸಮಗ್ರ ನಿರ್ವಹಣಾ ಒಪ್ಪಂದ.
6	SJICR/2026-27/SE0061 dt. 10-06-2026	ಕಲಬುರಗಿಯ ಸರ್ದಾರ್ ವಲ್ಲಭಭಾಯಿ ಪಟೇಲ್ ರಸ್ತೆಯಲ್ಲಿರುವ ಎಸ್‌ಜೆಐಸಿಆರ್ ಆವರಣದಲ್ಲಿ ಅಲಂಕಾರಿಕ ಮರಗಳು, ಎಲೆಗಳು, ಹೂವುಗಳು, ಪೊದೆಗಳು, ನೆಲದ ಹೊದಿಕೆಗಳು, ಒಳಾಂಗಣ ಮತ್ತು ಹೊರಾಂಗಣ ಸಸ್ಯಗಳು ಸೇರಿದಂತೆ ಲ್ಯಾಂಡ್‌ಸ್ಕೇಪ್ ಪ್ರದೇಶದ ನಿರ್ವಹಣೆ.
7	SJICR/2026-27/SE0062 dt. 10-06-2026	ಕಲಬುರಗಿಯ ಸರ್ದಾರ್ ವಲ್ಲಭಭಾಯಿ ಪಟೇಲ್ ರಸ್ತೆಯಲ್ಲಿರುವ ಎಸ್‌ಜೆಐಸಿಆರ್‌ನಲ್ಲಿ ಬಾಯ್ಲರ್ ಉಪಕರಣಗಳು ಮತ್ತು ಸಂಬಂಧಿತ ಕೆಲಸಗಳ ಕಾರ್ಯಾಚರಣೆ ಮತ್ತು ನಿರ್ವಹಣೆ.

1. ಟೆಂಡರುದಾರರು ದಸ್ತಾವೇಜುಗಳನ್ನು **https://kppp.karnataka.gov.in**ನಿಂದ **13.06.2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಇ–ಪೋರ್ಟಲ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **09.07.2026ರ ಸಂಜೆ 4:00 ಗಂಟೆ**ಯವರೆಗೆ.
2. ಪ್ರೀ–ಬಿಡ್ ಸಭೆಯ ದಿನಾಂಕ: **23.06.2026** ರಂದು **ಬೆಳಗ್ಗೆ 11:30 ಗಂಟೆ**ಗೆ.
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.07.2026** ರಂದು **ಸಂಜೆ 4:00 ಗಂಟೆ**ಗೆ.
4. ಇ.ಎಂ.ಡಿ: ಟೆಂಡರ್ ದಸ್ತಾವೇಜಿನಲ್ಲಿ ನಮೂದಿಸಿದಂತೆ.
5. ಟೆಂಡರ್ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಯಾವುದೇ ಕಾರಣವನ್ನು ನೀಡದೆ, ಟೆಂಡರ್ ಅನ್ನು ಭಾಗಶಃ ಅಥವಾ ಪೂರ್ಣವಾಗಿ ಸ್ವೀಕರಿಸುವ / ತಿರಸ್ಕರಿಸುವ / ರದ್ದುಗೊಳಿಸುವ ಹಕ್ಕನ್ನು ಟೆಂಡರ್ ಸ್ವೀಕೃತಿ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

ಸಹಿ/–,
ಮುಖ್ಯ ಆಡಳಿತ ಅಧಿಕಾರಿ (ಪ್ರ)

ವಾಸಾಸಂಇ/ವಾಪ್ರ/ಎಲ್‌ಸಿ/1100/2026–27

ವೋಟ್ ಮಾಡಿ
ನಿಮ್ಮ ನೆಚ್ಚಿನ ನಟ, ನಟಿ, ಸಿನಿಮಾ ಹಾಗೂ ಹಾಡಿಗೆ ವೋಟ್ ಮಾಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಛಾಯಾಚಿತ್ರಗ್ರಹಣದಲ್ಲಿ ದಿಗ್ಗಜರ ಪೈಪೋಟಿ

4ನೇ ಆವೃತ್ತಿ ಜೂನ್ 19ಕ್ಕೆ

CASAGRAND building aspirations Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿ ಜೂನ್ 19ರಂದು ನಡೆಯಲಿದೆ. ಈಗಾಗಲೇ 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ವೋಟ್ ಮಾಡುವ ಮುಖಾಂತರ ಆಯ್ಕೆ ಮಾಡಲಿದ್ದಾರೆ. ಜನಮೆಚ್ಚಿದ ನಟ, ನಟಿ, ಸಿನಿಮಾ ಹಾಗೂ ಹಾಡು ವಿಭಾಗದಲ್ಲಿ ಜನರು ಹಾಕುವ ವೋಟ್ ವಿಜೇತರನ್ನು ತೀರ್ಮಾನಿಸಲಿದೆ. ಇದೀಗ 'ಅತ್ಯುತ್ತಮ ಛಾಯಾಚಿತ್ರಗ್ರಹಣ' ವಿಭಾಗದಲ್ಲಿ ನಾಮನಿರ್ದೇಶನಗೊಂಡವರನ್ನು ಪರಿಚಯಿಸುವ ಸಮಯ.



ಸತ್ಯ ಹೆಗಡೆ

'ಎಕ್ಕ' ಸಿನಿಮಾಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. 'ದುನಿಯಾ', 'ಜಾಕಿ' ಸೇರಿದಂತೆ ಸಾಕಷ್ಟು ಸೂಪರ್ ಹಿಟ್ ಚಿತ್ರಗಳ ಹಿಂದೆ ಇವರ ಕ್ಯಾಮೆರಾದ ಮ್ಯಾಜಿಕ್ ಇದೆ. ಚಿತ್ರರಂಗದಲ್ಲಿ ಮೂರು ದಶಕಗಳನ್ನು ಪೂರೈಸಿದ್ದು, ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾದವರು. ಇಂದು ಚಿತ್ರರಂಗದಲ್ಲಿ ಸಕ್ರಿಯರಾಗಿರುವ ಅನೇಕ ಯುವ ಛಾಯಾಚಿತ್ರಗ್ರಾಹಕರಿಗೆ ಗುರುವೂ ಹೌದು. 'ಮನಸಾರೆ', 'ಮೈನಾ', 'ಜಂಗ್ಲಿ' ಮೊದಲಾದ ಚಿತ್ರಗಳಲ್ಲಿ ಇವರು ಕಟ್ಟಿಕೊಟ್ಟ ಫ್ರೇಮ್‌ಗಳನ್ನು ನೋಡುವುದೇ ಚೆಂದ. ಈತನಕ ಸುಮಾರು 40 ಚಿತ್ರಗಳಿಗೆ ಛಾಯಾಚಿತ್ರಗ್ರಾಹಕರಾಗಿ ಕೆಲಸ ಮಾಡಿದ್ದಾರೆ.

ಸಂತೋಷ್ ರೈ ಪಾತಾಜೆ

'ಮನದ ಕಡಲು' ಚಿತ್ರದ ಛಾಯಾಚಿತ್ರಗ್ರಹಣಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಮೂಲತಃ ದಕ್ಷಿಣ ಕನ್ನಡದ ಪುತ್ತೂರಿನವರು. ಚಿತ್ರರಂಗಕ್ಕೆ ಬಂದು 25 ವರ್ಷಗಳು ಕಳೆದಿವೆ. 'ಮಠ' ಚಿತ್ರದಿಂದ ಪ್ರಾರಂಭಿಸಿ 'ಪರಮಾತ್ಮ', 'ಚಮಕ್', 'ಗಾಳಿಪಟ-2' ಸೇರಿದಂತೆ 30ಕ್ಕೂ ಹೆಚ್ಚು ಚಿತ್ರಗಳಿಗೆ ಛಾಯಾಚಿತ್ರಗ್ರಹಣ ಮಾಡಿದ್ದಾರೆ. ತೆಲುಗಿನಲ್ಲಿ ನಾನಿ ನಟನೆಯ 'ಪೈಸಾ' ಸೇರಿದಂತೆ ನಾಲ್ಕು ಸಿನಿಮಾಗಳಿಗೆ ಕೆಲಸ ಮಾಡಿದ್ದಾರೆ. ತುಳು ಚಿತ್ರರಂಗದಲ್ಲಿಯೂ ಕೆಲಸ ಮಾಡಿರುವ ಇವರಿಗೆ ರಾಜ್ಯ ಚಲನಚಿತ್ರ ಪ್ರಶಸ್ತಿ ಸೇರಿದಂತೆ ಕೆಲ ಪ್ರಶಸ್ತಿಗಳು ಲಭಿಸಿವೆ.

ಸಂತೋಷ್ ಆಚಾರ್ಯ ಗುಂಪಲಾಜೆ

ತುಳು ಮತ್ತು ಕನ್ನಡ ಭಾಷೆಗಳಲ್ಲಿ ತೆರೆಕಂಡ 'ದಸ್ಕತ್' ಚಿತ್ರದ ಕ್ಯಾಮೆರಾ ಹಿಂದಿನ ಶ್ರಮಕ್ಕಾಗಿ ನಾಮನಿರ್ದೇಶಿತರು. ಮೂಲತಃ ದಕ್ಷಿಣ ಕನ್ನಡದವರು. ಪ್ರಸ್ತುತ ತುಳು ಮತ್ತು ಕನ್ನಡ ಚಿತ್ರರಂಗದಲ್ಲಿ ಛಾಯಾಚಿತ್ರಗ್ರಾಹಕ. 'ಕನಸು ಮಾರಾಟಕ್ಕಿದೆ', 'ಹೌದೋ ಹುಲಿಯಾ' ಸೇರಿದಂತೆ ಕೆಲವಷ್ಟು ಸಿನಿಮಾಗಳಿಗೆ ಇವರ ಕ್ಯಾಮೆರಾ ಶ್ರಮವಿದೆ. ತುಳುವಿನಲ್ಲಿ 'ಸೋಡಾ ಶರ್ಬತ್', 'ಕಟ್ಟೆಮಾರ್'ನಂಥ ಸಿನಿಮಾಗಳ ಛಾಯಾಚಿತ್ರಗ್ರಹಣದಿಂದ ಜನಪ್ರಿಯರಾಗಿದ್ದಾರೆ. ಒಂದಷ್ಟು ವೆಬ್‌ಸಿರೀಸ್‌ಗಳಿಗೂ ಕೆಲಸ ಮಾಡಿದ್ದಾರೆ.



ಅಭಿಲಾಷ್ ಕಳತಿ

'ಬ್ರ್ಯಾಟ್' ಚಿತ್ರಕ್ಕಾಗಿ ನಾಮನಿರ್ದೇಶನಗೊಂಡಿರುವ ಇವರು, ಬೆಂಗಳೂರಿನವರು. ಚಿತ್ರರಂಗಕ್ಕೆ ಕಾಲಿಟ್ಟು 10 ವರ್ಷಗಳು ಕಳೆದಿವೆ. ಫಿಲ್ಮ್ ಮೇಕಿಂಗ್ ಕೋರ್ಸ್ ಮುಗಿಸಿಕೊಂಡು ಜಾಹೀರಾತು ಕ್ಷೇತ್ರಕ್ಕೆ ಕಾಲಿಟ್ಟ ಇವರು, ಮೊದಲು ನಿರ್ದೇಶನ ತಂಡದಲ್ಲಿ ಕೆಲಸ ಮಾಡುತ್ತಾರೆ. ದುನಿಯಾ ಸೂರಿ ತಂಡದಲ್ಲಿದ್ದು, ಬಳಿಕ ಛಾಯಾಚಿತ್ರಗ್ರಹಣದತ್ತ ಗಮನ ಹರಿಸುತ್ತಾರೆ. ಸತ್ಯ ಹೆಗಡೆ ಅವರ ಜೊತೆ ಸಹಾಯಕನಾಗಿ ಸೇರಿಕೊಂಡು, 'ಕಥಾ ವಿಚಿತ್ರ' ಎಂಬ ಸಿನಿಮಾದಿಂದ ಸ್ವತಂತ್ರ ಛಾಯಾಚಿತ್ರಗ್ರಾಹಕನಾಗುತ್ತಾರೆ. ನಂತರ 'ನಿನ್ನ ಸನಿಹಕ್ಕೆ', 'ಡೊಳ್ಳು', 'ಬಾನ ದಾರಿಯಲ್ಲಿ' ಮುಂತಾದ ಸಿನಿಮಾಗಳಿಗೆ ಕ್ಯಾಮೆರಾ ಹಿಡಿದಿದ್ದಾರೆ.

ಅರವಿಂದ್ ಕಶ್ಯಪ್

'ಕಾಂತಾರ: ಅಧ್ಯಾಯ-1' ಚಿತ್ರಕ್ಕಾಗಿ ನಾಮನಿರ್ದೇಶಿತರು. ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ' ಚಿತ್ರದ ಛಾಯಾಚಿತ್ರಗ್ರಹಣದಿಂದ ದೇಶದ ಗಮನ ಸೆಳೆದ ಇವರು, ಒಂದು ದಶಕದಿಂದ ಚಿತ್ರರಂಗದಲ್ಲಿ ಸಕ್ರಿಯ. 'ದಯವಿಟ್ಟು ಗಮನಿಸಿ', 'ಬೆಲ್ ಬಾಟಂ', 'ಅವನೇ ಶ್ರೀಮನ್ನಾರಾಯಣ', '777 ಚಾರ್ಲಿ' ಸೇರಿದಂತೆ ಕೆಲವಷ್ಟು ಪ್ರಮುಖ ಸಿನಿಮಾಗಳ ಕ್ಯಾಮೆರಾ ಹಿಂದಿನ ಶಕ್ತಿ ಇವರು. ತೆಲುಗು, ಮಲಯಾಳ ಚಿತ್ರಗಳಿಗೂ ಕೆಲಸ ಮಾಡಿದ್ದಾರೆ.

ಅದ್ವೈತ್ ಗುರುಮೂರ್ತಿ

'ಏಳುಮಲೆ' ಚಿತ್ರಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ನಿರ್ದೇಶಕ ಹೇಮಂತ್ ರಾವ್ ಗರಡಿಯಲ್ಲಿ ಪಳಗಿರುವ ಇವರು, ವಿಭಿನ್ನ ರೀತಿಯ ಫ್ರೇಮ್‌ಗಳನ್ನು ಕಟ್ಟಿಕೊಡುವಲ್ಲಿ ಸಿದ್ಧಹಸ್ತರು. 'ಕವಲುದಾರಿ', 'ಯೂ ಟರ್ನ್'ನಿಂದ ಹಿಡಿದು ನೀಲಿ ಬಾನಂಚಿನ 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರಗಳವರೆಗೆ ಇವರ ಕ್ಯಾಮೆರಾ ಮಾಂತ್ರಿಕತೆ ಹರಡಿಕೊಂಡಿದೆ. 'ಉಪ್ಪಿನ ಕಾಗದ'ದಂಥ ಕಲಾತ್ಮಕ ಚಿತ್ರಗಳಲ್ಲಿಯೂ ತಮ್ಮ ಕ್ಯಾಮೆರಾ ಕೌಶಲ ತೋರಿಸಿರುವ ಅದ್ವೈತ್, ಸದ್ಯಕ್ಕೆ '666 ಆಪರೇಷನ್ ಡ್ರೀಮ್ ಥಿಯೇಟರ್' ಸಿನಿಮಾಕ್ಕೆ ಕ್ಯಾಮೆರಾ ಹಿಡಿದಿದ್ದಾರೆ. ಈತನಕ 19 ಸಿನಿಮಾಗಳಿಗೆ ಛಾಯಾಚಿತ್ರಗ್ರಹಣ ಮಾಡಿದ್ದಾರೆ.

ಲವಿತ್

'ಅನ್‌ಲಾಕ್ ರಾಘವ' ಚಿತ್ರದ ಕ್ಯಾಮೆರಾ ಕೆಲಸಕ್ಕಾಗಿ ನಾಮನಿರ್ದೇಶಿತರು. 'ರಾಮಾ ರಾಮಾ ರೇ' ತಂಡದಿಂದ ಬಂದ ಇವರು ನಿರ್ದೇಶಕ ಸತ್ಯಪ್ರಕಾಶ್ ತಂಡದ ಪ್ರಮುಖ ಸದಸ್ಯ. ಅವರ ಎಲ್ಲ ಸಿನಿಮಾಗಳಿಗೂ ಇವರದ್ದೇ ಛಾಯಾಚಿತ್ರಗ್ರಹಣ. 'ವಿದ್ಯಾಪತಿ', 'ಶುಗರ್‌ಲೆಸ್', 'ವೀರಂ' ಮುಂತಾದ ಸಿನಿಮಾಗಳಲ್ಲಿಯೂ ಕೆಲಸ ಮಾಡಿದ್ದಾರೆ.

ಸ್ಕೇಟಿಂಗ್ ಕೃಷ್ಣ

's/o ಮುತ್ತಣ್ಣ' ಚಿತ್ರದ ಛಾಯಾಚಿತ್ರಗ್ರಹಣಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಚಿತ್ರರಂಗಕ್ಕೆ ಕಾಲಿಟ್ಟು 16 ವರ್ಷಗಳಾಗಿವೆ. ಪುನೀತ್ ರಾಜ್‌ಕುಮಾರ್ ಅವರ ಪೂರ್ಣಿಮಾ ಎಂಟರ್‌ಪ್ರೈಸಸ್‌ನಲ್ಲಿ ಲೈಟ್ ಬಾಯ್ ಆಗಿ ಕೆಲಸಕ್ಕೆ ಸೇರಿಕೊಂಡ ಇವರು ಹಂತಹಂತವಾಗಿ ಛಾಯಾಚಿತ್ರಗ್ರಹಣ ಕಲಿತು ಸ್ವತಂತ್ರ ಛಾಯಾಚಿತ್ರಗ್ರಾಹಕರಾದವರು. ಮೂಲತಃ ಮಂಡ್ಯದವರು. ಈ ತನಕ 7 ಸಿನಿಮಾಗಳಿಗೆ ಕ್ಯಾಮೆರಾ ಹಿಡಿದಿದ್ದಾರೆ. ತಮಿಳು, ತೆಲುಗು ಸಿನಿಮಾಗಳಲ್ಲಿಯೂ ಕೆಲಸ ಮಾಡಿರುವ ಇವರು, ಸದ್ಯ ಪ್ರಣಂ ದೇವರಾಜ್ ಅವರ 'ಎಂಜಿಆರ್' ಚಿತ್ರಕ್ಕೆ ಛಾಯಾಚಿತ್ರಗ್ರಹಣ ಮಾಡುತ್ತಿದ್ದಾರೆ. ಜತೆಗೊಂದು ತಮಿಳು ಸಿನಿಮಾದಲ್ಲಿಯೂ ಕೆಲಸ ಮಾಡುತ್ತಿದ್ದಾರೆ.

Fashion Partner: TRENDS | Mobility Partner: Akshaya Motors | Banking Partner: ಕೆನರಾ ಬ್ಯಾಂಕ್ Canara Bank Together We Can | Wardrobe Partner: MALLESHWARAM Sudarshan Silks | Mobile Partner: HUMAN MOBILE DEVICES HMD | Knowledge Partner: GM UNIVERSITY DAVANAGERE
Travel Partner: ಅಡಿಗಾಸ್ ಯಾತ್ರಾ | Associate Sponsors: Amruth ಅಮೃತ್ ಆರ್ಗ್ಯಾನಿಕ್ ಫರ್ಟಿಲೈಸರ್ಸ್, ಒಡ್ಕರ್, The Janatha Co-operative Bank Ltd., Malleswaram, Bangalore, Bindu | Audit Partner: EY | Television Partner: Z ಕನ್ನಡ

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪತ್ರ ಚಳವಳಿ

'ಟಾಟಾ ಪವರ್ ಕಂಪನಿಗೆ ವಿದ್ಯುತ್ ವಿತರಣಾ ಚಟುವಟಿಕೆ ಅನುಮತಿ ಬೇಡ'

ಪ್ರಜಾವಾಣಿ ವಾರ್ತೆ

ಹಾವೇರಿ: 'ರಾಜ್ಯದಲ್ಲಿ ವಿದ್ಯುತ್ ವಿತರಣಾ ಚಟುವಟಿಕೆಗಳನ್ನು ನಡೆಸಲು ಟಾಟಾ ಪವರ್ ಕಂಪನಿಗೆ ಅನುಮತಿ ನೀಡಬಾರದು' ಎಂದು ಆಗ್ರಹಿಸಿ ಜಿಲ್ಲೆಯ ರೈತರು ಬುಧವಾರದಿಂದ ಪತ್ರ ಚಳವಳಿ ಆರಂಭಿಸಿದ್ದಾರೆ.

2008ರ ಜೂನ್ 10ರಂದು ನಗರದಲ್ಲಿ ನಡೆದಿದ್ದ ಗೋಲಿಬಾರ್‌ನಲ್ಲಿ ಇಬ್ಬರು ರೈತರು ಮೃತಪಟ್ಟ ಘಟನೆಯನ್ನು ಸ್ಮರಿಸಿ ಬುಧವಾರ 'ರೈತರ ಹುತಾತ್ಮ ದಿನ' ಆಚರಿಸಲಾಯಿತು. ಇದೇ ಸಂದರ್ಭದಲ್ಲಿಯೇ ರೈತರು, ವಿದ್ಯುತ್ ಖಾಸಗೀಕರಣ ವಿರುದ್ಧ ಪತ್ರ ಚಳವಳಿಗೆ ಚಾಲನೆ ನೀಡಿದರು.

'ವಿದ್ಯುತ್ ವಿತರಣಾ ಚಟುವಟಿಕೆಗಳನ್ನು ಖಾಸಗಿ ಕಂಪನಿಗೆ ಪರವಾನಗಿ ನೀಡಬಾರದು' ಎಂದು ಒತ್ತಾಯಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿ ಅವರಿಗೆ ಅಂಚೆ ಮೂಲಕ 200 ಪತ್ರಗಳನ್ನು ರವಾನಿಸಿದರು. 'ಇನ್ನಷ್ಟು ರೈತರು ನಿತ್ಯ ಆಯೋಗಕ್ಕೆ ಪತ್ರಗಳನ್ನು ಕಳುಹಿಸಲಿದ್ದಾರೆ' ಎಂದು ರೈತ ಮುಖಂಡರು ತಿಳಿಸಿದರು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

'ರಾಜ್ಯ ಸರ್ಕಾರದ ಅಧೀನದಲ್ಲಿರುವ ಎಲ್ಲ ವಿದ್ಯುತ್ ವಿತರಣಾ ಚಟುವಟಿಕೆಗಳನ್ನು ಟಾಟಾ ಪವರ್ ಕಂಪನಿಗೆ ನೀಡುವ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿ, ಆಕ್ಷೇಪಣೆಯನ್ನೂ ಆಹ್ವಾನಿಸಲಾಗಿದೆ. ಹೀಗಾಗಿ ಈ ಪತ್ರಗಳ ಮೂಲಕ ಆಕ್ಷೇಪಣೆ ಸಲ್ಲಿಸುತ್ತಿದ್ದೇವೆ. ಯಾವುದೇ ಕಾರಣಕ್ಕೂ ಪರವಾನಗಿ ನೀಡಬಾರದು. ಒಂದು ವೇಳೆ ನೀಡಿದರೆ, ರಾಜ್ಯವ್ಯಾಪಿ ಹೋರಾಟ ನಡೆಸುತ್ತೇವೆ' ಎಂದು ರೈತರು ಪತ್ರದಲ್ಲಿ ಎಚ್ಚರಿಕೆ ನೀಡಿದ್ದಾರೆ.

ಸಂಘಟನೆಯ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ್ ಬಳ್ಳಾರಿ ಮಾತನಾಡಿ, 'ವಿದ್ಯುತ್ ಚಟುವಟಿಕೆ ಖಾಸಗೀಕರಣ ಮಾಡಿದರೆ, ಮೊಬೈಲ್ ಸೇವಾ ಕಂಪನಿಗಳ ರೀತಿ ಕರೆನ್ಸಿ ಹಾಕಿಸಿ ವಿದ್ಯುತ್ ಬಳಸುವ ಸ್ಥಿತಿ ಬರುತ್ತದೆ. ರೈತರ ಕೊಳವೆಬಾವಿಗೂ ವಿದ್ಯುತ್ ಸಿಗದ ಪರಿಸ್ಥಿತಿ ಎದುರಾಗುತ್ತದೆ. ಹೀಗಾಗಿ, ಖಾಸಗೀಕರಣ ಕೈಬಿಡಬೇಕು' ಎಂದರು.

'ರೈತರ ಹುತಾತ್ಮ ದಿನಾಚರಣೆ' ಅಂಗವಾಗಿ ಬುಧವಾರ ಹಾವೇರಿಯಲ್ಲಿ ರೈತರು ಪ್ರತಿಭಟನಾ ಸಭೆ ನಡೆಸಿದರು.

ಅತ್ಯಾಚಾರ ಆರೋಪಿಗಳು ನ್ಯಾಯಾಂಗ ಬಂಧನಕ್ಕೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಬಂಧಿತರಾಗಿರುವ ಆರೋಪಿಗಳನ್ನು ಪೊಲೀಸರು ಬುಧವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಬಂಧಿತರನ್ನು ನಗರದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. 9 ಜನ ಆರೋಪಿಗಳನ್ನು ಜಿಲ್ಲಾ ಕಾರಾಗೃಹಕ್ಕೆ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ 16 ವರ್ಷದ ಬಾಲಕನನ್ನು ಬಾಲಮಂದಿರಕ್ಕೆ ಕಳುಹಿಸಲಾಯಿತು. ಇದಕ್ಕೂ ಮುನ್ನ ಆರೋಪಿಗಳ ವೈದ್ಯಕೀಯ ಪರೀಕ್ಷೆ ನಡೆಸಲಾಯಿತು.

ಸಹಾಯದ ನೆಪದಲ್ಲಿ ಮಹಿಳೆಗೆ ತಂಪುಪಾನೀಯ ನೀಡಿ ಪ್ರಜ್ಞೆತಪ್ಪಿಸಿ ಸಾಮೂಹಿಕ ಅತ್ಯಾಚಾರ ಎಸಗಲಾಗಿತ್ತು. ಈ ಕೃತ್ಯವನ್ನು ವಿಡಿಯೊ ಚಿತ್ರೀಕರಣ ಮಾಡಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡಲಾಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೆತ್ತಿಕೊಂಡ ಪೊಲೀಸರು ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದರು. ಕೃತ್ಯ ನಡೆದ ಸ್ಥಳಕ್ಕೆ ಕರೆದೊಯ್ದು ಮಹಜರು ನಡೆಸಿ ಸಾಕ್ಷ್ಯ ಸಂಗ್ರಹಿಸಿದ್ದಾರೆ.

'ಕೂಲಿ ಕೆಲಸ ಮಾಡಿಕೊಂಡಿದ್ದ 10 ಆರೋಪಿಗಳಲ್ಲಿ ಇಬ್ಬರು ವಿವಾಹಿತರು. ಮದ್ಯ ವ್ಯಸನಿಗಳಾಗಿದ್ದ ಆರೋಪಿಗಳಲ್ಲಿ ಬಹುತೇಕರು ಮಹಿಳೆಗೆ ಪರಿಚಿತರು. ಸಹಾಯ ಮಾಡುವುದಾಗಿ ಮಹಿಳೆಯನ್ನು ನಂಬಿಸಿ ಕೃತ್ಯ ಎಸಗಿದ್ದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಇಲಾಖೆ ಮೂಲಗಳು ತಿಳಿಸಿವೆ.

ರಸಗೊಬ್ಬರಕ್ಕಾಗಿ ಚಪ್ಪಲಿಗಳ ಕ್ಯೂ!

ಪ್ರಜಾವಾಣಿ ವಾರ್ತೆ

ಸೇಡಂ (ಕಲಬುರಗಿ ಜಿಲ್ಲೆ): ಮುಂಗಾರು ಬಿತ್ತನೆ ಚುರುಕುಗೊಂಡಿರುವ ಬೆನ್ನಲ್ಲೇ ರಸಗೊಬ್ಬರ ಪಡೆಯಲು ರೈತರು ಇನ್ನಿಲ್ಲದ ಕಷ್ಟಪಡುತ್ತಿದ್ದಾರೆ. ಸೇಡಂ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಸಹಕಾರಿ ಸಂಘ ಕಚೇರಿ ಎದುರು ರಸಗೊಬ್ಬರ ಪಡೆಯಲು ರೈತರು ತಮ್ಮ ಚಪ್ಪಲಿಗಳನ್ನು ಸರತಿ ಸಾಲಿನಲ್ಲಿ ಇಟ್ಟು ಕಾಯ್ದ ಪ್ರಸಂಗ ನಡೆದಿದೆ.

'ರಸಗೊಬ್ಬರ ವಿತರಿಸಲಾಗುತ್ತದೆ' ಎಂದು ಮಾಹಿತಿ ತಿಳಿದ ರೈತರು ಮಂಗಳವಾರ ಮುಂಜಾವಿನಿಂದಲೇ ಕಚೇರಿ ಎದುರು ದೌಡಾಯಿಸಿದ್ದರು. ಕಚೇರಿ ತೆರೆಯುವ ಮುನ್ನವೇ ಸರತಿಯಲ್ಲಿ ಚಪ್ಪಲಿ ಇಟ್ಟ ರೈತರು, ಕಚೇರಿ ಬಾಗಿಲು ತೆರೆಯುವುದಕ್ಕೆ ಕಾಯ್ದಿದ್ದಾರೆ. ಇಷ್ಟಾಗಿಯೂ ರೈತರಿಗೆ ಸಮರ್ಪಕ ಗೊಬ್ಬರ ಪೂರೈಕೆಯಾಗಿಲ್ಲ ಎಂಬ ದೂರುಗಳು ಕೇಳಿ ಬಂದಿವೆ.

'ಮುಂದಿನ ದಿನಗಳಲ್ಲಿ ರಸಗೊಬ್ಬರ ಬರಲಿದ್ದು, ರೈತರು ಆತಂಕ ಪಡುವ ಅಗತ್ಯವಿಲ್ಲ' ಎಂದು ಅಧಿಕಾರಿಗಳು ಮನವೊಲಿಸಿದ ನಂತರ ರೈತರು ಚಪ್ಪಲಿ ಹಾಕಿಕೊಂಡು ಮನೆಯತ್ತ ಹೆಜ್ಜೆ ಹಾಕಿದ್ದಾರೆ. ರೈತರ ಸಂಖ್ಯೆ ಹೆಚ್ಚಿರುವ ಕಡೆ ಪೊಲೀಸ್ ಬಂದೋಬಸ್ತ್‌ನಲ್ಲಿ ರಸಗೊಬ್ಬರ ವಿತರಿಸಲಾಗುತ್ತಿದೆ.

ಪ್ರತಿ ಯೂನಿಟ್‌ಗೆ ₹9.08ರಂತೆ ರಾಷ್ಟ್ರೀಯ ಗ್ರಿಡ್‌ಗೆ ಮಾರಾಟ: ಜಾರ್ಜ್

ವಿದ್ಯುತ್ ಮಾರಾಟ: ₹423 ಕೋಟಿ ಗಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಯೂನಿಟ್‌ಗೆ ₹9.08ರಂತೆ ಎರಡೂವರೆ ತಿಂಗಳಲ್ಲಿ ₹423 ಕೋಟಿ ಮೊತ್ತದ ವಿದ್ಯುತ್ ಅನ್ನು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ (ಪಿಸಿಕೆಎಲ್) ಮೂಲಕ ರಾಷ್ಟ್ರೀಯ ಗ್ರಿಡ್‌ಗೆ ಮಾರಾಟ ಮಾಡಲಾಗಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಎರಡನೇ ಬಾರಿಗೆ ಇಂಧನ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಬುಧವಾರ ಇಲ್ಲಿ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಅವರು, ಮುಂಗಾರಿಗೆ ಸಿದ್ಧತೆ, ಕುಸುಮ್ ಯೋಜನೆ, ಮುಖ್ಯಮಂತ್ರಿ ಸೌರ ಕೃಷಿ ಯೋಜನೆ ಸೇರಿದಂತೆ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ಕೆ.ಜೆ. ಜಾರ್ಜ್

ಹಗಲಿನ ವೇಳೆ ಕಡಿಮೆ ದರಕ್ಕೆ ವಿದ್ಯುತ್ ಖರೀದಿಸಲಾಗಿದೆ. ಅಲ್ಲದೆ ರಾತ್ರಿ ವೇಳೆ ಜಲ ಮತ್ತು ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗಿದೆ.

ಈ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆಯನ್ನು ಸಮರ್ಥವಾಗಿ ಎದುರಿಸುವ ಜತೆಗೆ ಈ ಸಾಧನೆ ಮಾಡಿದ್ದೇವೆ. ವಿದ್ಯುತ್ ಉತ್ಪಾದನೆ, ಗ್ರಿಡ್ ನಿರ್ವಹಣೆ ಮತ್ತು ಇಂಧನ ಮಾರುಕಟ್ಟೆಯಲ್ಲಿನ ವ್ಯಾವಹಾರಿಕ ಜಾಣ್ಮೆಯಿಂದಾಗಿ ಇದು ಸಾಧ್ಯವಾಗಿದೆ' ಎಂದರು.

ಮುಂಗಾರಿಗೆ ಸಿದ್ಧತೆ: ಮಳೆ ಮತ್ತು ಗಾಳಿಯಿಂದ ಹಾನಿಯಾದಾಗ ತ್ವರಿತವಾಗಿ ದುರಸ್ತಿ ಕಾರ್ಯಗಳನ್ನು ಕೈಗೊಂಡು, ವಿದ್ಯುತ್ ಪೂರೈಕೆಗೆ ಯಾವುದೇ ರೀತಿಯ ಸಮಸ್ಯೆ ಆಗದಂತೆ ಎಚ್ಚರವಹಿಸಬೇಕು ಎಂದು ಜಾರ್ಜ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಈ ಕುರಿತು ಮಾಹಿತಿ ನೀಡಿದ ಅಧಿಕಾರಿಗಳು, 'ಎಸ್ಕಾಂಗಳ ವ್ಯಾಪ್ತಿಯಲ್ಲಿ ಹಾನಿಗೊಳಗಾದ 33,400 ಕಂಬಗಳು, 1,441 ವಿದ್ಯುತ್ ಪರಿವರ್ತಕಗಳು ಮತ್ತು 343.56 ಕಿ.ಮೀ. ವಿದ್ಯುತ್ ಮಾರ್ಗಗಳನ್ನು ಬದಲಾಯಿಸಲಾಗಿದೆ. 20,012 ಲೈನ್‌ಮೆನ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಮಳೆಗಾಲದ ಕಾರಣ ಹೆಚ್ಚುವರಿಯಾಗಿ 4,883 ಲೈನ್‌ಮೆನ್‌ಗಳನ್ನು ನೇಮಿಸಲಾಗಿದೆ. 99,530 ಕಂಬಗಳು, 12,733 ವಿದ್ಯುತ್ ಪರಿವರ್ತಕಗಳ ದಾಸ್ತಾನು ಇದೆ' ಎಂದರು.

ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ರಾಮ್ ಪ್ರಸಾತ್ ಮನೋಹರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್, ಪಿಸಿಕೆಎಲ್ ವ್ಯವಸ್ಥಾಪಕ ನಿರ್ದೇಶಕ ಕೋದಂಡಪಾಣಿ, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ, ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

5 ಜಿಲ್ಲೆಗಳ ರೈತರೊಂದಿಗೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕಾಡಾನೆ– ಮಾನವ ಸಂಘರ್ಷ ತೀವ್ರವಾಗಿರುವ ಕೊಡಗು, ಮೈಸೂರು, ಹಾಸನ, ಚಾಮರಾಜನಗರ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ರೈತರೊಂದಿಗೆ ರಾಜ್ಯಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಬಿಜೆಪಿ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ರವಿ ಕಾಳಪ್ಪ ತಿಳಿಸಿದರು.

ಪ್ರತಿ ತಿಂಗಳೂ ಕಾಡಾನೆ ದಾಳಿಗೆ ಸಿಲುಕಿ ಜನರು ಸಾಯುತ್ತಿದ್ದಾರೆ. ಆದರೆ, ಸರ್ಕಾರ ಮಾತ್ರ ಏನೂ ಮಾಡದೆ ನಿಷ್ಕ್ರಿಯವಾಗಿದೆ. ಇದನ್ನು ಖಂಡಿಸಿ ಈ ಐದು ಜಿಲ್ಲೆಗಳ ರೈತರೊಂದಿಗೆ ಬೆಂಗಳೂರು ಚಲೊ, ವಿಧಾನಸೌಧ ಮುತ್ತಿಗೆ, ಇಲ್ಲವೇ ಆಯಾ ಜಿಲ್ಲೆಗಳ ಬಂದ್‌ಗೆ ಕರೆ ನೀಡಲು ಚಿಂತನೆ ನಡೆಸಲಾಗುತ್ತಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೊಂದಿಗೆ ಚರ್ಚಿಸಿ ಪ್ರತಿಭಟನೆ ದಿನ ಅಂತಿಮಗೊಳಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮಡಿಕೇರಿಯಲ್ಲಿ ಭಾರಿ ಮಳೆ

ಮಡಿಕೇರಿ: ನಗರದಲ್ಲಿ ಬುಧವಾರ ಎರಡು ತಾಸು ಭಾರಿ ಮಳೆ ಸುರಿಯಿತು. ಒಂದೆರಡು ಬಾರಿ ಸಿಡಿಲು ಅಪ್ಪಳಿಸಿತು. ಇತ್ತೀಚಿನ ದಿನಗಳಲ್ಲಿ ಮಡಿಕೇರಿಯಲ್ಲಿ ಇಷ್ಟೊಂದು ಬಿರುಸಿನ ಮಳೆ ಸುರಿದಿರಲಿಲ್ಲ.

ಭಾರಿ ಮಳೆಯಿಂದ ನಗರದ ರಸ್ತೆಗಳೆಲ್ಲವೂ ರಾಡಿಯಾಗಿವೆ. ಎರಡು ಕಡೆ ವಿದ್ಯುತ್ ತಂತಿಗಳು ತುಂಡಾಗಿ ಬಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಈಗ ಸುರಿದ ಮಳೆಯು ಭತ್ತ ಸೇರಿದಂತೆ ಇತರ ಬೆಳೆಗಳಿಗೆ ಅನುಕೂಲಕರವಾಗಲಿದೆ. ನಾಪೋಕ್ಲು ವ್ಯಾಪ್ತಿಯಲ್ಲೂ ಉತ್ತಮ ಮಳೆ ಸುರಿದಿದೆ.

ದುತ್ತರಗಿ ಟ್ರಸ್ಟ್: ರಂಗ ಪ್ರಶಸ್ತಿಗೆ ಆಯ್ಕೆ

ಬಾಗಲಕೋಟೆ: 'ಪಿ.ಬಿ.ದುತ್ತರಗಿ ಟ್ರಸ್ಟ್‌ನ ಮೂರು ವರ್ಷಗಳ ವಾರ್ಷಿಕ ಗೌರವ ಮತ್ತು ರಂಗ ಗೌರವ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

'ವಾರ್ಷಿಕ ಗೌರವ ಪ್ರಶಸ್ತಿಯು ₹25 ಸಾವಿರ ನಗದು ಮತ್ತು ರಂಗಗೌರವ ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ' ಎಂದು ಟ್ರಸ್ಟ್‌ನ ಸದಸ್ಯ ಕಾರ್ಯದರ್ಶಿ ಸಂತೋಷ ಭೋವಿ ತಿಳಿಸಿದ್ದಾರೆ.

2022-23ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿಗೆ ಕೊಪ್ಪಳ ಜಿಲ್ಲೆಯ ವಿರೂಪಾಕ್ಷಪ್ಪ ಗಾಯದ, ರಂಗಗೌರವ ಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆಯ ಕುಸುಮಾ ಕಂದಗಲ್ಲ, ಅರುಣ ಕೃಷ್ಣಾಜಿ ಥೋರತ ಆಯ್ಕೆಯಾಗಿದ್ದಾರೆ.

2023-24ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆಯ ಬೇಬಿಜಾನ್ ಕಂದಗಲ್ಲ, ರಂಗಗೌರವ ಪ್ರಶಸ್ತಿಗೆ ರಾಯಚೂರು ಜಿಲ್ಲೆಯ ಭೀಮರಾಯ ಭಂಡಾರಿ ಮತ್ತು ಗದಗ ಜಿಲ್ಲೆಯ ವೀರಭದ್ರಪ್ಪ ಬಡಿಗೇರ ಆಯ್ಕೆಯಾಗಿದ್ದಾರೆ.

2024-25ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆಯ ಅನಂತ ಬಬಲೇಶ್ವರ, ರಂಗಗೌರವ ಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆಯವರಾದ ಬಸವರಾಜ ಮಠ, ಬಂಗಾರೆವ್ವ ಚಿಮಲ ಆಯ್ಕೆಯಾಗಿದ್ದಾರೆ.



ವಿರೂಪಾಕ್ಷಪ್ಪ

ಕುಸುಮಾ ಕಂದಗಲ್ಲ

ಅರುಣ

ಬೇಬಿಜಾನ್

ಭೀಮರಾಯ

ವೀರಭದ್ರಪ್ಪ ಬಡಿಗೇರ

ಅನಂತ



ಬಸವರಾಜ ಮಠ

ಬಂಗಾರೆವ್ವ ಚಿಮಲ

ನಿಧನ ವಾರ್ತೆ

ಹನುಮಂತಯ್ಯ

ಶ್ರೀರಂಗಪಟ್ಟಣ (ಮಂಡ್ಯ): ಸ್ವಾತಂತ್ರ್ಯ ಹೋರಾಟಗಾರ, ಪಟ್ಟಣದ ಗೋವಿಂದಪ್ಪ ಬೀದಿ ನಿವಾಸಿ ಹನುಮಂತಯ್ಯ(99) ಮಂಗಳವಾರ ರಾತ್ರಿ ನಿಧನರಾದರು.



14ನೇ ವಯಸ್ಸಿನಲ್ಲಿ ಶಾಲೆ ತೊರೆದು ಸ್ವಾತಂತ್ರ್ಯ ಚಳವಳಿಗೆ ಧುಮುಕಿದ್ದ ಅವರು, 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಪಾಲ್ಗೊಂಡಿದ್ದರು. ಪೊಲೀಸರು ಅವರನ್ನು ಬಂಧಿಸಿ ಮಂಡ್ಯ ಕಾರಾಗೃಹದಲ್ಲಿ 15 ದಿನ ಇಟ್ಟಿದ್ದರು.

ಅವರಿಗೆ ಮೂವರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ಬಾಬುರಾಯನಕೊಪ್ಪಲು ಬಳಿಯ ಕಾವೇರಿ ನದಿ ತೀರದ ಸಾರ್ವಜನಿಕ ಸ್ಮಶಾನದಲ್ಲಿ ಬುಧವಾರ ಮಧ್ಯಾಹ್ನ ಪೊಲೀಸ್ ಗೌರವದೊಡನೆ ಅಂತ್ಯಕ್ರಿಯೆ ನಡೆಯಿತು. ತಹಶೀಲ್ದಾರ್ ಚೇತನಾ ಯಾದವ್ ಪುಷ್ಪ ನಮನ ಸಲ್ಲಿಸಿದರು.

ವಿಜಯನಗರ: ವಿದೇಶಿಯರ ಸಂಖ್ಯೆ 69,304 • ಹಂಪಿಯದ್ದೇ ಸಿಂಹಪಾಲು

5 ವರ್ಷದಲ್ಲಿ 1.53 ಕೋಟಿ ಪ್ರವಾಸಿಗರು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಐದು ವರ್ಷಗಳ ಹಿಂದೆ ಬಳ್ಳಾರಿಯಿಂದ ಪ್ರತ್ಯೇಕಗೊಂಡು ರಚನೆಗೊಂಡ ವಿಜಯನಗರ ಜಿಲ್ಲೆಗೆ 2021 ರಿಂದ 2025ರ ನಡುವೆ ಒಟ್ಟು 1.53 ಕೋಟಿ ಪ್ರವಾಸಿಗರು ಭೇಟಿ ನೀಡಿದ್ದಾರೆ. ಈ ಪೈಕಿ 69,304 ವಿದೇಶಿ ಪ್ರವಾಸಿಗರು ಸೇರಿದ್ದಾರೆ ಎಂದು ಪ್ರವಾಸೋದ್ಯಮ ಇಲಾಖೆ ತಿಳಿಸಿದೆ.

ಹಂಪಿಗೆ ಈ ಐದು ವರ್ಷಗಳಲ್ಲಿ ಭೇಟಿ ನೀಡಿದವರ ಸಂಖ್ಯೆ 39.36 ಲಕ್ಷ. ತುಂಗಭದ್ರಾ ಅಣೆಕಟ್ಟೆಗೆ 42.51 ಲಕ್ಷ ಮಂದಿ ಭೇಟಿ ನೀಡಿದ್ದಾರೆ. ಮೈಲಾರಕ್ಕೆ 19.97 ಲಕ್ಷ, ಕೊಟ್ಟೂರಿಗೆ 19.54 ಲಕ್ಷ, ಕುರವತ್ತಿಗೆ 13.82 ಲಕ್ಷ, ಹಂಪಿ ಮೃಗಾಲಯಕ್ಕೆ 6.68 ಲಕ್ಷ, ಉಜ್ಜಯಿನಿಗೆ 3.90 ಲಕ್ಷ, ಉಚ್ಚಂಗಿದುರ್ಗಕ್ಕೆ 2.91 ಲಕ್ಷ, ಬಾಗಳಿಗೆ 2.75 ಲಕ್ಷ ಮಂದಿ ಪ್ರವಾಸಿಗರು ಭೇಟಿ ನೀಡಿದ್ದಾರೆ.

ಹಂಪಿ ಕಲ್ಲಿನ ರಥ

ಅಂಕಸಮುದ್ರ ಪಕ್ಷಿಧಾಮವನ್ನು 1.45 ಲಕ್ಷ, ದರೋಜಿ ಕರಡಿಧಾಮವನ್ನು 35,440, ಗುಡೇಕೋಟೆ ಕರಡಿಧಾಮವನ್ನು 16,230, ಜರಿಮಲೆಯನ್ನು 14,457 ಮಂದಿ ವೀಕ್ಷಿಸಿದ್ದಾರೆ.

'ಹಂಪಿ ಪರಿಸರದಲ್ಲಿ ಚಿರತೆ, ಕರಡಿಗಳು ಓಡಾಟ ನಿಜ. ಆದರೆ, ಈಚಿನ ವರ್ಷಗಳಲ್ಲಿ ಪ್ರವಾಸಿಗರಿಗೆ ಅವುಗಳಿಂದ ತೊಂದರೆ ಆಗಿಲ್ಲ. ಪ್ರವಾಸಿಗರು ನಿಶ್ಚಿಂತೆಯಿಂದ ಹಂಪಿಗೆ ಹಾಗೂ ಜಿಲ್ಲೆಯ ಇತರ ತಾಣಗಳಿಗೆ ಭೇಟಿ ನೀಡಬಹುದು' ಎಂದು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ 'ಪ್ರಜಾವಾಣಿ'ಗೆ ತಿಳಿಸಿದರು.

ಟಿಕೆಟ್ ಲೆಕ್ಕದಲ್ಲಿ ಅಂದಾಜು

ಪ್ರವೇಶ ಟಿಕೆಟ್ ಆಧಾರದಲ್ಲಿ ಪ್ರವಾಸಿಗರನ್ನು ಲೆಕ್ಕ ಹಾಕಲಾಗುತ್ತದೆ. ಹಂಪಿ ಸ್ಮಾರಕಗಳ ವೀಕ್ಷಣೆಗೆ ಬಂದವರು, ಮೃಗಾಲಯ, ದರೋಜಿ ಧಾಮದಂತಹ ಸ್ಥಳಗಳಿಗೆ ಭೇಟಿ ನೀಡಿದವರ ಸಂಖ್ಯೆಯನ್ನು ನಿಖರವಾಗಿ ತಿಳಿಸಬಹುದು. ಹಂಪಿ ವಿರೂಪಾಕ್ಷ ದೇವಸ್ಥಾನಕ್ಕೆ ಸೋಮವಾರ, ಹುಣ್ಣಿಮೆ, ಅಮಾವಾಸ್ಯೆ ದಿನಗಳಲ್ಲಿ ಸಾವಿರಾರು ಮಂದಿ ಭೇಟಿ ನೀಡುತ್ತಾರೆ. ಅದನ್ನು ಪ್ರವಾಸಿಗರ ಲೆಕ್ಕಕ್ಕೆ ಸೇರಿಸಿಲ್ಲ. ತುಂಗಭದ್ರಾ ಅಣೆಕಟ್ಟೆಯ ಲೆಕ್ಕ ನಿಖರವಾದುದಲ್ಲ. ಒಂದು ಅಂದಾಜಿನಲ್ಲಿ ಮಾಡಲಾದ ಲೆಕ್ಕ ಅದು. ಹೀಗಾಗಿ ತುಂಗಭದ್ರಾಕ್ಕಿಂತ ಹಂಪಿಗೇ ಬರುವ ಪ್ರವಾಸಿಗರ ಸಂಖ್ಯೆಯೇ ಅಧಿಕ. ಭಕ್ತರನ್ನೂ ಸೇರಿಸಿದರೆ ವಾರ್ಷಿಕ 25 ಲಕ್ಷಕ್ಕೂ ಅಧಿಕ ಮಂದಿ ಹಂಪಿಗೆ ಭೇಟಿ ನೀಡುತ್ತಾರೆ ಎಂದು ಪ್ರವಾಸೋದ್ಯಮ ಇಲಾಖೆಯ ಮೂಲಗಳು ತಿಳಿಸಿವೆ.

ನಾಮಪತ್ರ: ಆದೇಶ ರದ್ದತಿಗೆ ಆಗ್ರಹ

ರಾಜ್ಯಸಭಾ ಚುನಾವಣೆ: ಕಾಂಗ್ರೆಸ್ ನಿಯೋಗದಿಂದ ಆಯೋಗ ಭೇಟಿ • ಚುನಾವಣಾಧಿಕಾರಿ ಕ್ರಮದ ವಿರುದ್ಧ ಆಕ್ರೋಶ

ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕರಿಸಿ ಆದೇಶ ರದ್ದುಗೊಳಿಸುವಂತೆ ಆಗ್ರಹಿಸಿ ಕೆ.ಸಿ.ವೇಣುಗೋಪಾಲ್ ನೇತೃತ್ವದಲ್ಲಿ ಕಾಂಗ್ರೆಸ್ ನಿಯೋಗ ಬುಧವಾರ ಚುನಾವಣಾ ಆಯೋಗಕ್ಕೆ ಭೇಟಿ ನೀಡಿ ಮನವಿ ಸಲ್ಲಿಸಿತು — ಪಿಟಿಐ ಚಿತ್ರ

ನವದೆಹಲಿ (ಪಿಟಿಐ): 'ಮಧ್ಯಪ್ರದೇಶ ವಿಧಾನಸಭೆಯಿಂದ ರಾಜ್ಯಸಭಾ ಸ್ಥಾನಕ್ಕೆ ಸ್ಪರ್ಧಿಸಲು ಮುಂದಾಗಿದ್ದ ಕಾಂಗ್ರೆಸ್‌ನ ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ಚುನಾವಣಾ ಅಧಿಕಾರಿ ತಿರಸ್ಕರಿಸಿರುವುದು ಮಹಾಪ್ರಮಾದ. ಆ ಆದೇಶವನ್ನು ತಕ್ಷಣವೇ ರದ್ದುಗೊಳಿಸಬೇಕು' ಎಂದು ಕಾಂಗ್ರೆಸ್ ಬುಧವಾರ ಕೇಂದ್ರ ಚುನಾವಣಾ ಆಯೋಗವನ್ನು ಆಗ್ರಹಿಸಿದೆ.

ನಾಯಕರಾದ ಕೆ.ಸಿ. ವೇಣುಗೋಪಾಲ್, ಜೈರಾಮ್ ರಮೇಶ್, ಅಭಿಷೇಕ್ ಸಿಂಘ್ವಿ, ವಿವೇಕ್ ತಂಖಾ, ರಣದೀಪ್ ಸುರ್ಜೇವಾಲಾ, ದೀಪಾ ದಾಸ್‌ಮುನ್ಶಿ ಅವರನ್ನು ಒಳಗೊಂಡ ಕಾಂಗ್ರೆಸ್ ನಿಯೋಗವು ಮೀನಾಕ್ಷಿ ಅವರೊಂದಿಗೆ ಆಯೋಗದ ಅಧಿಕಾರಿಗಳನ್ನು ಭೇಟಿ ಮಾಡಿ ಚುನಾವಣಾ ಅಧಿಕಾರಿಯ ನಿರ್ಧಾರವನ್ನು ರದ್ದುಗೊಳಿಸಬೇಕು ಎಂದು ಒತ್ತಾಯಿಸಿದೆ.

'ಇದು ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಕೃತ್ಯ. ನಮಗೆ ಸಾಂವಿಧಾನಿಕ ಸಂಸ್ಥೆಗಳ ಮೇಲೆ ಇನ್ನೂ ನಂಬಿಕೆಯಿದ್ದು, ಅದಕ್ಕಾಗಿಯೇ ಈ ಹೋರಾಟ ನಡೆಸುತ್ತಿದ್ದೇವೆ' ಎಂದು ಚುನಾವಣಾ ಆಯೋಗದ ಕಚೇರಿಯಿಂದ ಹೊರಬಂದ ಮೀನಾಕ್ಷಿ ಅವರು ಸುದ್ದಿಗಾರರಿಗೆ ತಿಳಿಸಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಅಭಿಷೇಕ್ ಸಿಂಘ್ವಿ, 'ಕಾಂಗ್ರೆಸ್ ನಿಯೋಗದ ವತಿಯಿಂದ ಆಯೋಗಕ್ಕೆ ವಿವರವಾದ ಮನವಿ ಸಲ್ಲಿಸಲಾಯಿತು. ಚುನಾವಣಾ ಅಧಿಕಾರಿಯ ಆದೇಶವು ವ್ಯತಿರಿಕ್ತವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 33ಎ ಪ್ರಕಾರ ಎರಡು ವರ್ಷಗಳಿಗಿಂತ ಹೆಚ್ಚು ಶಿಕ್ಷೆ ವಿಧಿಸಬಹುದಾದ ಪ್ರಕರಣಗಳನ್ನು, ಅದರಲ್ಲೂ ಆರೋಪಗಳನ್ನು ಹೊರಿಸಲಾದ ಪ್ರಕರಣಗಳನ್ನು ಮಾತ್ರ ಬಹಿರಂಗಪಡಿಸಿದರೆ ಸಾಕು. ಆರೋಪಗಳನ್ನು ಹೊರಿಸುವುದು ನ್ಯಾಯಾಂಗದ ಪ್ರಕ್ರಿಯೆ. ಅದರ ಅರಿವಿಲ್ಲದೆ, ವಿನಾಕಾರಣ ನಾಮಪತ್ರ ತಿರಸ್ಕರಿಸಲಾಗಿದೆ' ಎಂದು ದೂರಿದರು.

'ಚುನಾವಣಾ ಅಧಿಕಾರಿಯ ಆದೇಶವು ಪಕ್ಷಪಾತದಿಂದ ಕೂಡಿದ್ದು, ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೂಲ ರಚನೆಗೆ ಧಕ್ಕೆ ತಂದಿದೆ. ಹೀಗಾಗಿ ಕೂಡಲೇ ಈ ನಿರ್ಧಾರವನ್ನು ರದ್ದುಪಡಿಸುವಂತೆ ಕೋರಿದ್ದೇವೆ' ಎಂದು ಅವರು ವಿವರಿಸಿದರು.

ಕಾನೂನುಬಾಹಿರ ಕ್ರಮ: 'ಮೀನಾಕ್ಷಿ ನಟರಾಜನ್ ಅವರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ಅಸ್ತಿತ್ವದಲ್ಲಿಲ್ಲ. ಹೀಗಾಗಿ ಚುನಾವಣಾ ಅಧಿಕಾರಿಯ ಕ್ರಮ ಕಾನೂನುಬಾಹಿರ. ಯಾವುದೇ ಖಾಸಗಿ ದೂರಿನ ಕುರಿತು ಸಂಬಂಧಪಟ್ಟ ನ್ಯಾಯಾಧೀಶರು ಗಮನಕ್ಕೆ ತೆಗೆದುಕೊಳ್ಳುವವರೆಗೆ ಕ್ರಿಮಿನಲ್ ಪ್ರಕರಣ ಅಸ್ತಿತ್ವಕ್ಕೆ ಬರುವುದಿಲ್ಲ' ಎಂದು ಸಿಂಘ್ವಿ ಅವರು ಇದಕ್ಕೂ ಮುನ್ನ 'ಎಕ್ಸ್'ನಲ್ಲಿ ತಿಳಿಸಿದ್ದರು.

'ಈ ಪ್ರಕರಣದಲ್ಲಿ ಖಾಸಗಿ ದೂರಿನ ಮೇರೆಗೆ ನ್ಯಾಯಾಲಯ ನೋಟಿಸ್ ಜಾರಿ ಮಾಡಿದೆ. ನ್ಯಾಯಾಲಯವು ಇನ್ನೂ ಅವರ ವಾದವನ್ನು ಆಲಿಸಿ, ನಿರ್ಧರಿಸಬೇಕು. ಹೀಗಿರುವಾಗ ಬಹಿರಂಗಪಡಿಸಬೇಕಾದ ಕ್ರಿಮಿನಲ್ ಪ್ರಕರಣದ ಪ್ರಶ್ನೆ ಎಲ್ಲಿಂದ ಬರುತ್ತದೆ' ಎಂದು ಅವರು ಕೇಳಿದ್ದಾರೆ.

'ಆಯೋಗವು ತನ್ನ ಆಡಳಿತಾತ್ಮಕ ಮತ್ತು ಉನ್ನತ ಅಧಿಕಾರ ಬಳಸಿ ಈ ಆದೇಶವನ್ನು ರದ್ದುಗೊಳಿಸುತ್ತದೆ ಎಂದು ನಾನು ಭಾವಿಸುತ್ತೇನೆ' ಎಂದರು.

ತುರ್ತು ಸಭೆ : ನಾಮಪತ್ರ ತಿರಸ್ಕೃತಗೊಂಡ ವಿಷಯದ ಗದ್ದಲದ ನಡುವೆಯೇ ಕಾಂಗ್ರೆಸ್, ತನ್ನ ಎಲ್ಲ ಪ್ರಧಾನ ಕಾರ್ಯದರ್ಶಿಗಳು, ಉಸ್ತುವಾರಿಗಳು ಮತ್ತು ರಾಜ್ಯ ಘಟಕದ ಮುಖ್ಯಸ್ಥರ ತುರ್ತು ಸಭೆಯನ್ನು ಗುರುವಾರ ಕರೆದಿದೆ.

'ದಾಖಲೆ ಕೊಟ್ಟವರು ಕಾಂಗ್ರೆಸ್ಸಿಗರು'

ಭೋಪಾಲ್: 'ಕಾಂಗ್ರೆಸ್ ಅಭ್ಯರ್ಥಿ ಮೀನಾಕ್ಷಿ ನಟರಾಜನ್ ಅವರಿಗೆ ಸಂಬಂಧಿಸಿದ ಪ್ರಕರಣದ ಬಗ್ಗೆ ಅಗತ್ಯ ದಾಖಲೆಗಳನ್ನು ತೆಲಂಗಾಣದ ಕಾಂಗ್ರೆಸ್ ನಾಯಕರೇ ಒದಗಿಸಿದ್ದಾರೆ' ಎಂದು ಮಧ್ಯಪ್ರದೇಶದ ಸಚಿವ ಕೈಲಾಶ್ ವಿಜಯವರ್ಗೀಯ ಹೇಳಿದರು.

ಮೀನಾಕ್ಷಿ ಅವರ ನಾಮಪತ್ರ ತಿರಸ್ಕೃತಗೊಂಡಿರುವುದು ಪ್ರಜಾಪ್ರಭುತ್ವದ ಕೊಲೆ ಎಂದು ಕಾಂಗ್ರೆಸ್ ನಾಯಕರು ಮಾಡಿದ ಆರೋಪವನ್ನು ಅವರು ತಳ್ಳಿಹಾಕಿದರು.

'ಮೀನಾಕ್ಷಿ ಅವರ ವಿರುದ್ಧದ ಪ್ರಕರಣಗಳ ಬಗ್ಗೆ ನಮಗೆ ಯಾವುದೇ ಮಾಹಿತಿ ಇರಲಿಲ್ಲ. ತೆಲಂಗಾಣದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದೆ. ಈ ಕುರಿತು ಮಾಹಿತಿಯನ್ನು ಕಾಂಗ್ರೆಸ್ ಸದಸ್ಯರೇ ರವಾನಿಸಿದ್ದಾರೆ' ಎಂದು ಅವರು ವಿವರಿಸಿದರು.

ಬಿಆರ್‌ಎಸ್ ಆರೋಪ: ಮೀನಾಕ್ಷಿ ಅವರ ವಿರುದ್ಧ ಪ್ರಕರಣದ ಮಾಹಿತಿ ಸೋರಿಕೆಯು ಕಾಂಗ್ರೆಸ್‌ನಿಂದಲೇ ಆಗಿರುವ ಸಾಧ್ಯತೆ ಹೆಚ್ಚಿದೆ. ಕಾಂಗ್ರೆಸ್‌ನಲ್ಲಿನ ಆಂತರಿಕ ತಿಕ್ಕಾಟವೇ ಇದಕ್ಕೆ ಕಾರಣವಿರಬಹುದು ಎಂದು ತೆಲಂಗಾಣದ ವಿರೋಧ ಪಕ್ಷದ ಬಿಆರ್‌ಎಸ್ ಆರೋಪಿಸಿದೆ.

'ಮುಖ್ಯಮಂತ್ರಿ ರೇವಂತ ರೆಡ್ಡಿ ಅವರ ಕನಸಿನ ಯೋಜನೆಗಳಾದ ಮೂಸಿ ನದಿಯ ಸೌಂದರ್ಯೀಕರಣ, ಖಮ್ಮಂ ನಗರದಲ್ಲಿನ ತೆರವು ಕಾರ್ಯಾಚರಣೆ, ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿನ ಅರಣ್ಯನಾಶದಂತಹ ವಿವಾದಾತ್ಮಕ ಕ್ರಮಗಳನ್ನು ಮೀನಾಕ್ಷಿ ನಟರಾಜನ್ ಅವರು ಈ ಹಿಂದೆ ಬಹಿರಂಗವಾಗಿ ವಿರೋಧಿಸಿದ್ದರು. ಇದು ರಾಜ್ಯ ಸರ್ಕಾರವನ್ನು ಮುಜುಗರಕ್ಕೀಡು ಮಾಡಿತ್ತು' ಎಂದು ಬಿಆರ್‌ಎಸ್ ನಾಯಕ ಎಂ. ಕ್ರಿಶಾಂಕ್ ಹೇಳಿದ್ದಾರೆ.

ಏನಿದು ವಿವಾದ: ತೆಲಂಗಾಣದಲ್ಲಿ ಮಹಿಳೆಯೊಬ್ಬರು ಕಾಂಗ್ರೆಸ್ ನಾಯಕರೊಬ್ಬರ ವಿರುದ್ಧ 2022ರಲ್ಲಿ ಕಿರುಕುಳ ಮತ್ತು ಬೆದರಿಕೆ ಆರೋಪ ಮಾಡಿದ್ದರು. ಈ ಕುರಿತು ದೂರು ನೀಡಿದ್ದರು. ಆದರೂ ಕಾಂಗ್ರೆಸ್ ನಾಯಕತ್ವ ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಂಡಿಲ್ಲ ಎಂದು ಮಹಿಳೆ ಆರೋಪಿಸಿದ್ದರು. ದೂರುದಾರರ ಪ್ರಕಾರ, ಅವರು ಈ ವಿಷಯವನ್ನು ಕಾಂಗ್ರೆಸ್ ನಾಯಕಿ ಮೀನಾಕ್ಷಿ ನಟರಾಜನ್ ಬಳಿಯೂ ಪ್ರಸ್ತಾಪಿಸಿದ್ದರು ಎನ್ನಲಾಗಿದೆ.

ಸ್ಥಿರ ಸರ್ಕಾರದ ಮಹತ್ವ ಜನರಿಗೆ ಗೊತ್ತಾಗಿದೆ: ಮೋದಿ

ಎನ್‌ಡಿಎಯ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು 'ಜಾಲ್‌ಮುರಿ' ನೀಡಿದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): 'ದೇಶದ ಜನರು ರಾಜಕೀಯ ಸ್ಥಿರತೆಯ ಮತ್ತು ಸ್ಥಿರ ಸರ್ಕಾರದ ಮಹತ್ವವನ್ನು ಅರ್ಥಮಾಡಿಕೊಂಡಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

'ವಿಕಸಿತ ಭಾರತದ ಕನಸು ಒಬ್ಬ ವ್ಯಕ್ತಿ ಅಥವಾ ಪಕ್ಷಕ್ಕೆ ಸೇರಿದ್ದಲ್ಲ. ಅದು ದೇಶದ ಪ್ರತಿ ಪ್ರಜೆಯ ಸಂಕಲ್ಪ' ಎಂದು ಅವರು ಬಣ್ಣಿಸಿದರು.

ದೇಶದ ದೀರ್ಘಾವಧಿಯ ಚುನಾಯಿತ ಪ್ರಧಾನಿ ಎಂಬ ದಾಖಲೆ ಪೂರೈಸಿದ ಮೋದಿ ಅವರು, ತನ್ನ ನೇತೃತ್ವದ ಎನ್‌ಡಿಎ ಸರ್ಕಾರ 12 ವರ್ಷ ಪೂರೈಸಿದ ಸಂದರ್ಭದಲ್ಲಿ ನಡೆದ ಎನ್‌ಡಿಎ ಉನ್ನತ ಮಟ್ಟದ ಸಭೆಯಲ್ಲಿ ಮಾತನಾಡಿದರು.

'ಜನರು ದೇವರ ಪ್ರತಿನಿಧಿ': 'ಜನರು ದೇವರನ್ನು ಪ್ರತಿನಿಧಿಸುತ್ತಾರೆ. ರಾಷ್ಟ್ರಮಟ್ಟದಲ್ಲಿ ರಾಜಕೀಯ ಸ್ಥಿರತೆಯ ಮಹತ್ವವನ್ನು ಅವರು ಅರಿತಿದ್ದಾರೆ. ಹೀಗಾಗಿಯೇ ಅವರು ನನಗೆ ಇಷ್ಟು ದೀರ್ಘಾವಧಿ ಸೇವೆ ಸಲ್ಲಿಸಲು ಅವಕಾಶ ನೀಡಿದ್ದಾರೆ. ಅದು ಅವರ ಪ್ರಬುದ್ಧತೆಯಾಗಿದೆ' ಎಂದು ಹೇಳಿದರು.

'2014ಕ್ಕೂ ಮೊದಲು ಹಲವು ದಶಕಗಳ ಕಾಲ ಅಸ್ಥಿರತೆ ಆವರಿಸಿತ್ತು. ಆದರೆ ಈಗ ಜನರು ಸ್ಥಿರ ಸರ್ಕಾರದ ಕೆಲಸವನ್ನು ನೋಡುತ್ತಿದ್ದಾರೆ ಮತ್ತು ಅದನ್ನು ಮೆಚ್ಚುತ್ತಿದ್ದಾರೆ' ಎಂದು ಅವರು ತಿಳಿಸಿದರು.

'ವಿಶ್ವಾಸ ಬಲಪಡಿಸಿದ್ದೇವೆ': 'ಎನ್‌ಡಿಎ ತನ್ನ 12 ವರ್ಷಗಳ ಆಡಳಿತದಲ್ಲಿ ದೇಶವನ್ನು ಕಾಂಗ್ರೆಸ್‌ನ ದುಷ್ಟ ಬಲೆಯಿಂದ ಮುಕ್ತಗೊಳಿಸಿದೆ. 2014ರಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದಾಗ, ಜನಸಾಮಾನ್ಯರಲ್ಲಿ ಹೊಸ ಭರವಸೆ ಉದಯವಾಗಿದೆ ಎಂದು ನಾನು ಹೇಳಿದ್ದೆ. ಜನರ ಆ ವಿಶ್ವಾಸವನ್ನು ನಾವು ಬಲಪಡಿಸಿದ್ದೇವೆ' ಎಂದು ಹೇಳಿದರು.

'ಜಾಲ್‌ಮುರಿ' ಸವಿದ ಪ್ರಧಾನಿ: ಎನ್‌ಡಿಎಯ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬಂಗಾಳಿ ಕುರುಕಲು 'ಜಾಲ್‌ಮುರಿ' (ಖಾರಾ ಮಂಡಕ್ಕಿಯ ಮಿಶ್ರಣ) ಸವಿದು ಗಮನ ಸೆಳೆದರು.

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಪ್ರಚಾರದ ವೇಳೆಯಲ್ಲಿ ಅವರು ಈ ತಿನಿಸು ಸವಿದಿದ್ದರು. ಅದನ್ನು ನಾಟಕ ಎಂದು ಟಿಎಂಸಿ ವಾಗ್ದಾಳಿ ನಡೆಸಿತ್ತು. ನಂತರ ಮೋದಿ ಅವರು ಟಿಎಂಸಿಗೆ 'ಜಾಲ್' (ಖಾರಾ) ಅನುಭವ ವಾಗುತ್ತಿದೆ ಎಂದು ವ್ಯಂಗ್ಯವಾಡಿದ್ದರು.

ಮೋದಿ ನಾಯಕತ್ವ ಎನ್‌ಡಿಎ ನಿರ್ಣಯ: ಸಮಾವೇಶದಲ್ಲಿ ಪ್ರಧಾನಿ ಮೋದಿ ಅವರಿಗೆ ಅಭಿನಂದಿಸಿದ ಎನ್‌ಡಿಎ ನಾಯಕರು, ಮೋದಿ ಅವರ ನಾಯಕತ್ವದಲ್ಲಿ ವಿಕಸಿತ ಭಾರತದ ಗುರಿಯತ್ತ ಕೆಲಸ ಮಾಡುವುದನ್ನು ಮುಂದುವರಿಸಲು ನಿರ್ಣಯಿಸಿದರು.

ಮೋದಿ ಅವರ ದಾರ್ಶನಿಕ ನಾಯಕತ್ವ ಮತ್ತು ಸಾರ್ವಜನಿಕ ಸೇವೆಗೆ ದಣಿವರಿಯದ ಸಮರ್ಪಣೆಯನ್ನು ಶ್ಲಾಘಿಸಿದ ಎನ್‌ಡಿಎ, ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್ ಅಡಿಯಲ್ಲಿ ಉತ್ಸಾಹದಿಂದ ಕೆಲಸ ಮಾಡಲು ಬದ್ಧ ಎಂದು ನಿರ್ಣಯ ಕೈಗೊಂಡಿತು.

ದೀರ್ಘಾವಧಿ ಪ್ರಧಾನಿ: ಗಣ್ಯರ ಶ್ಲಾಘನೆ

ಚುನಾಯಿತ ಪ್ರಧಾನಿಯಾಗಿ ದೀರ್ಘಾವಧಿಯ ದಾಖಲೆ ನಿರ್ಮಿಸಿದ ನರೇಂದ್ರ ಮೋದಿ ಅವರಿಗೆ ಕೇಂದ್ರ ಸಚಿವ ಸಂಪುಟದ ಸದಸ್ಯರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ರಾಜ್ಯಪಾಲರು, ವಿದೇಶಗಳ ಗಣ್ಯರು ಬುಧವಾರ ಶುಭಕೋರಿದರು. ಕೇಂದ್ರ ಸಚಿವ ಸಂಪುಟದ ಸದಸ್ಯರು ಮೋದಿ ಅವರನ್ನು ಶ್ಲಾಘಿಸುವ ನಿರ್ಣಯವನ್ನು ಬುಧವಾರ ಅಂಗೀಕರಿಸಿದರು. ಸಂಪುಟ ಸದಸ್ಯರು ಎದ್ದು ನಿಂತು ಚಪ್ಪಾಳೆ ತಟ್ಟಿ ಪ್ರಧಾನಿಯನ್ನು ಪ್ರಶಂಸಿಸಿದರು.

ಚಿಟಿಕೆ ಸುದ್ದಿ

'ನೀಟ್: ನ್ಯಾಯಸಮ್ಮತ ಮರು ಪರೀಕ್ಷೆಗೆ ಕ್ರಮ'

ನವದೆಹಲಿ (ಪಿಟಿಐ): ಜೂನ್ 21ರಂದು ನಡೆಯಲಿರುವ ನೀಟ್–ಯುಜಿ ಮರು ಪರೀಕ್ಷೆಯನ್ನು ಲೋಪರಹಿತವಾಗಿ, ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆಸುವ ಕುರಿತು ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಆರೋಗ್ಯ ಮತ್ತು ಶಿಕ್ಷಣ ಸಚಿವಾಲಯವು ಸಂಸದೀಯ ಸಮಿತಿಗೆ ಬುಧವಾರ ಭರವಸೆ ನೀಡಿದೆ.

ನೀಟ್ ಪರೀಕ್ಷೆ ರದ್ದು ಹಾಗೂ ಪ್ರಶ್ನೆಪತ್ರಿಕೆ ಸೋರಿಕೆ ಆದ ಕುರಿತು ಎರಡೂ ಸಚಿವಾಲಯಗಳ ಕಾರ್ಯದರ್ಶಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಸಂಬಂಧಿಸಿದ ಸಂಸದೀಯ ಸಮಿತಿಯು ನೋಟಿಸ್ ನಿಡಿತ್ತು. ಅಲ್ಲದೆ, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಹಾಗೂ ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೂ ನೋಟಿಸ್ ಜಾರಿಗೊಳಿಸಿತ್ತು.

ಕೇರಳಂ: 15ರಿಂದ ಸ್ತ್ರೀಯರಿಗೆ ಉಚಿತ ಬಸ್ ಪ್ರಯಾಣ

ತಿರುವನಂತಪುರ (ಪಿಟಿಐ): ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೇವೆ ಒದಗಿಸುವ 'ಇಂದಿರಾ ಗ್ಯಾರಂಟಿ' ಜೂನ್ 15ರಿಂದ ಲಭ್ಯವಾಗಲಿದೆ ಎಂದು ಕೇರಳಂ ಮುಖ್ಯಮಂತ್ರಿ ವಿ.ಡಿ. ಸತೀಶನ್ ಬುಧವಾರ ಹೇಳಿದ್ದಾರೆ.

ಸಚಿವ ಸಂಪುಟ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಸತೀಶನ್ ಅವರು, 'ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಸಾಮಾನ್ಯ ಸೇವೆಗಳಲ್ಲಿ ಎಲ್ಲಾ ವಯಸ್ಸಿನ ಮಹಿಳೆಯರಿಗೆ ಉಚಿತ ಪ್ರಯಾಣ ಲಭ್ಯವಾಗಲಿದೆ. ಪ್ರಿಯದರ್ಶಿನಿ ಎಂದು ಕರೆಯಲಾಗುವ ಈ ಯೋಜನೆಗೆ ವಾರ್ಷಿಕ ಸುಮಾರು ₹800 ಕೋಟಿಗಳ ಅಗತ್ಯವಿದೆ' ಎಂದು ಹೇಳಿದ್ದಾರೆ.

ಕೆಎಸ್‌ಆರ್‌ಟಿಸಿಯ ಆದಾಯ ಗಳಿಕೆ ಹೆಚ್ಚಿಸಿ, ಆರ್ಥಿಕ ಸ್ಥಿತಿ ಸುಧಾರಿಸಿದ ನಂತರ, ಇತರ ಸೇವೆಗಳಿಗೂ ರಿಯಾಯಿತಿ ನೀಡುವ ಬಗ್ಗೆ ಪರಿಗಣಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಮಹಾರಾಷ್ಟ್ರ: ಹಲವೆಡೆ ಹುಸಿ ಬಾಂಬ್ ಬೆದರಿಕೆ

ಮುಂಬೈ(ಪಿಟಿಐ): ಮಹಾರಾಷ್ಟ್ರದ ನಾಗ್ಪುರದಲ್ಲಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕೇಂದ್ರ ಕಚೇರಿ, ಮುಖ್ಯಮಂತ್ರಿ ಕಚೇರಿ, ಮುಂಬೈ ಮತ್ತು ಪುಣೆಯಲ್ಲಿರುವ ಮೇಯರ್ ಕಚೇರಿಗಳನ್ನು ಗುರಿಯಾಗಿಸಿಕೊಂಡು ಬುಧವಾರ ಪ್ರತ್ಯೇಕ ಹುಸಿ ಬಾಂಬ್ ಬೆದರಿಕೆ ಸಂದೇಶಗಳನ್ನು ಕಳುಹಿಸಲಾಗಿದೆ.

'ಆರ್‌ಎಸ್‌ಎಸ್‌ನ ಕೇಂದ್ರ ಕಚೇರಿಯಲ್ಲಿ ಬಾಂಬ್ ಇರಿಸಲಾಗಿದೆ ಎಂದು ನಾಗ್ಪುರ ಮೇಯರ್ ನೀತಾ ಠಾಕ್ರೆ ಅವರಿಗೆ ಇ–ಮೇಲ್ ಮೂಲಕ ಸಂದೇಶ ಕಳುಹಿಸಲಾಗಿದೆ. ಬಳಿಕ ಬಾಂಬ್ ನಿಷ್ಕ್ರಿಯ ದಳ ಸ್ಥಳಕ್ಕೆ ಧಾವಿಸಿ, ಶೋಧ ಕಾರ್ಯಾಚರಣೆ ನಡೆಸಿದೆ. ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ಖಾಲಿಸ್ತಾನಿ ರಾಷ್ಟ್ರೀಯ ಸೇನೆ ಎಂದು ಗುರುತಿಸಿಕೊಂಡಿರುವ ಗುಂಪೊಂದು ಈ ಸಂದೇಶವನ್ನು ಕಳುಹಿಸಿದೆ ಎನ್ನಲಾಗಿದೆ.

ರಾಮನ್ ಆನೆ ಸರ್ಕಾರದ ವಶಕ್ಕೆ

ಮುಖ್ಯಾಂಶಗಳು
- ಸುಪ್ರೀಂ ಕೋರ್ಟ್‌ನಿಂದ ನಿರ್ದೇಶನ
- ಅಮೃತಾನಂದಮಯಿ ಮಠಕ್ಕೆ ಸೇರಿದ 'ರಾಮನ್' ಆನೆ
- ವ್ಯಕ್ತಿಯೊಬ್ಬರ ವಶದಲ್ಲಿದ್ದ ಆನೆ

ನವದೆಹಲಿ (ಪಿಟಿಐ): ಕೇರಳಂನ ಅತ್ಯಂತ ಎತ್ತರದ ಆನೆ (10.53 ಅಡಿ) 'ರಾಮನ್' ಅನ್ನು ಸುಪರ್ದಿಗೆ ಪಡೆದು ಸಲಹುವಂತೆ ಕೇರಳಂ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ಮಾತಾ ಅಮೃತಾನಂದಮಯಿ ಮಠಕ್ಕೆ ಸೇರಿದ 'ರಾಮನ್' ಆನೆಯನ್ನು ಕೃಷ್ಣನ್‌ಕುಟ್ಟಿ ಎಂಬವರಿಗೆ ಹಸ್ತಾಂತರ ಮಾಡಿರುವುದನ್ನು ಪ್ರಶ್ನಿಸಿ ಜಯಕೃಷ್ಣನ್ ಮೆನನ್ ಅವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ದೀಪಾಂಕರ್ ದತ್ತಾ ಮತ್ತು ನ್ಯಾ. ಸತೀಶ್ ಚಂದ್ರ ಶರ್ಮಾ ಇದ್ದ ಪೀಠವು ವಿಚಾರಣೆ ನಡೆಸಿತು.

'ರಾಮನ್ ಆನೆಯನ್ನು ಮೆರವಣಿಗೆಗಳು, ಸಂಪ್ರದಾಯಗಳು ಸೇರಿದಂತೆ ವಾಣಿಜ್ಯ ಉದ್ದೇಶಗಳಿಗೆ ಬಳಸಲಾಗುತ್ತಿದೆ. ಹೀಗಾಗಿ ಸರ್ಕಾರ ಅದನ್ನು ಸೂಕ್ತ ಪುನರ್‌ವಸತಿ ಕೇಂದ್ರದಲ್ಲಿ ಇಡಬೇಕು' ಎಂದು ಪೀಠ ಆದೇಶ ನೀಡಿತು.

ವನ್ಯಜೀವಿ ಸಂರಕ್ಷಣಾ ಕಾಯ್ದೆಯ ನಿಯಮ ಮೀರಿ ಆನೆಯನ್ನು ತನ್ನ ವಶದಲ್ಲಿ ಇಟ್ಟುಕೊಂಡಿದ್ದ ಕೃಷ್ಣನ್‌ಕುಟ್ಟಿ ಅವರಿಗೆ ನ್ಯಾಯಾಲಯ ₹2,000 ದಂಡ ವಿಧಿಸಿತು.

'ಮೂಕಪ್ರಾಣಿಗಳ ಬಗೆಗಿನ ಕರ್ತವ್ಯ ಪಾಲಿಸುವಲ್ಲಿ ನಾವು ವಿಫಲವಾಗಿದ್ದೇವೆ. ಇಂತಹ ಉಲ್ಲಂಘನೆ ನೋಡಿಕೊಂಡು ಕುರುಡಾಗಿರಲು, ಮೂಕಪ್ರೇಕ್ಷಕರಾಗಿರಲು ಸಾಧ್ಯವಿಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು.

ಸರ್ಕಾರದ ವಶಕ್ಕೆ 'ರಾಮನ್' ಆನೆಯನ್ನು ನೀಡುವ ತನ್ನ ಆದೇಶ ತಾತ್ಕಾಲಿಕವಾಗಿದ್ದು, ಅಂತಿಮ ಆದೇಶಕ್ಕೆ ಅನ್ವಯವಾಗಿರುತ್ತದೆ ಎಂದು ಪೀಠ ತಿಳಿಸಿದೆ. 'ಕಾನೂನುಬದ್ಧವಾಗಿಯೇ ಆನೆಯನ್ನು ನನಗೆ ಹಸ್ತಾಂತರಿಸಲಾಗಿದೆ. 10–12 ವರ್ಷದಿಂದ ಅದರ ನಿರ್ವಹಣೆ ಮಾಡುತ್ತಿದ್ದೇನೆ' ಎಂದು ಕೃಷ್ಣನ್‌ಕುಟ್ಟಿ ಅವರು ವಾದ ಮಂಡಿಸಿದ್ದಾರೆ.

ಟಿಎಂಸಿಗೆ ಸುಶ್ಮಿತಾ ದೇವ್ ರಾಜೀನಾಮೆ

ಸುಶ್ಮಿತಾ ದೇವ್

ನವದೆಹಲಿ (ಪಿಟಿಐ): ಟಿಎಂಸಿ ರಾಜ್ಯಸಭಾ ಸದಸ್ಯೆ ಸುಶ್ಮಿತಾ ದೇವ್ ಅವರು ಪಕ್ಷಕ್ಕೆ ಮತ್ತು ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ಬುಧವಾರ ರಾಜೀನಾಮೆ ಸಲ್ಲಿಸಿದರು.

ವಿಧಾನಸಭಾ ಸೋಲಿನ ಬೆನ್ನಲ್ಲೇ ಪಕ್ಷದಲ್ಲಿ ಆಂತರಿಕ ಬಂಡಾಯ ಭುಗಿಲೆದ್ದಿದ್ದು, ಸುಶ್ಮಿತಾ ಅವರ ರಾಜೀನಾಮೆಯು ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷಕ್ಕೆ ಮತ್ತೊಂದು ಆಘಾತವನ್ನು ತಂದಿದೆ.

ರಾಜ್ಯಸಭಾ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಭೇಟಿ ಮಾಡಿ ಸುಶ್ಮಿತಾ ಅವರು ರಾಜೀನಾಮೆ ಸಲ್ಲಿಸಿದರು. ಬಳಿಕ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿದರು.

> ಟಿಎಂಸಿ ಭಿನ್ನಮತೀಯ ಶಾಸಕರ ಸಂಖ್ಯೆ 58ರಿಂದ 64ಕ್ಕೆ ಏರಿಕೆಯಾಗಿದೆ. ನಮ್ಮದೇ ನಿಜವಾದ ಟಿಎಂಸಿ. ನಾವು ಕಾಂಗ್ರೆಸ್ ಜೊತೆಗೆ ವಿಲೀನವಾಗುವುದಿಲ್ಲ
> **ರುತಬ್ರತಾ ಬ್ಯಾನರ್ಜಿ,** ಬಂಡಾಯ ಶಾಸಕ

ಮಮತಾ ಬ್ಯಾನರ್ಜಿ ಮತ್ತು ಅವರ ಭವಿಷ್ಯದ ರಾಜಕೀಯ ಯೋಜನೆಗಳ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿ, 'ವೈಯಕ್ತಿಕ, ರಾಜಕೀಯ ಕಾರಣಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ' ಎಂದರು.

ಬಿಜೆಪಿ ಸೇರ್ಪಡೆಯಾಗಲಿದ್ದಾರೆ ಎಂಬ ವರದಿ ಬಗ್ಗೆ ಪ್ರತಿಕ್ರಿಯಿಸಿ, 'ನಾನು ಅಂಥ ನಿರ್ಧಾರ ಕೈಗೊಂಡರೆ ತಿಳಿಸುತ್ತೇನೆ' ಎಂದರು.

'ನಮ್ಮ ಆಲೋಚನೆಗಳನ್ನು ಬದಲಾಯಿಸಲು ಮತ್ತು ಯಾವ ರೀತಿಯ ರಾಜಕಾರಣ ಬೇಕು ಎಂದು ನಿರ್ಧರಿಸಲು ಪ್ರತಿಯೊಬ್ಬರಿಗೂ ಹಕ್ಕಿದೆ' ಎಂದರು.

ಕಾಂಗ್ರೆಸ್ ಪಕ್ಷದಲ್ಲಿದ್ದ ಸುಶ್ಮಿತಾ ದೇವ್, ಕೆಲವು ವರ್ಷಗಳ ಹಿಂದಷ್ಟೇ ಟಿಎಂಸಿ ಸೇರಿದ್ದರು. ಇದಕ್ಕೂ ಮೊದಲು ಸುಖೇಂದು ಶೇಖರ್ ರಾಯ್ ಅವರು ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ರಾಹುಲ್, ಅಭಿಷೇಕ್ ಬ್ಯಾನರ್ಜಿ ಭೇಟಿ

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರು ಬುಧವಾರ ಭೇಟಿಯಾಗಿ ಮಾತುಕತೆ ನಡೆಸಿದರು.

ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ವನ್ನು ಬಲಪಡಿಸುವ ಪ್ರಯತ್ನಗಳು ನಡೆಯುತ್ತಿರುವಾಗಲೇ ಉಭಯ ಪಕ್ಷಗಳ ನಾಯಕರು ಭೇಟಿಯಾಗಿದ್ದಾರೆ.

ಇದಕ್ಕೂ ಮುನ್ನ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮತ್ತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಮಂಗಳವಾರ ಭೇಟಿಯಾಗಿದ್ದರು.

ಪೋಕ್ಸೊ ಅಪರಾಧಿ ಖುಲಾಸೆ

ನವದೆಹಲಿ (ಪಿಟಿಐ): ಪೋಕ್ಸೊ ಕಾಯ್ದೆಯಡಿಯಲ್ಲಿ ಶಿಕ್ಷೆಗೆ ಗುರಿಯಾಗಿದ್ದ ವ್ಯಕ್ತಿಯನ್ನು, ಸುಪ್ರೀಂ ಕೋರ್ಟ್ ಸಂವಿಧಾನದ 142ನೇ ವಿಧಿಯಡಿಯಲ್ಲಿ ವಿಶೇಷ ಅಧಿಕಾರವನ್ನು ಬಳಸಿಕೊಂಡು ಖುಲಾಸೆಗೊಳಿಸಿದೆ.

ಸಂತ್ರಸ್ತೆಗೆ 18 ವರ್ಷ ದಾಟಿದ ಬಳಿಕವೇ ಆರೋಪಿಯು ಸಂತ್ರಸ್ತೆಯನ್ನು ಮದುವೆಯಾಗಿರುವುದು ದೃಢಪಟ್ಟಿದೆ ಎಂದು ಸುಪ್ರೀಂ ಕೋರ್ಟ್ ಈ ತೀರ್ಪು ಪ್ರಕಟಿಸಿದೆ.

ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಮತ್ತು ಅತುಲ್ ಎಸ್.ಚಂದೂರ್‌ಕರ್ ಅವರು, 'ಅರ್ಜಿದಾರರು ಮತ್ತು ಸಂತ್ರಸ್ತೆ ದಂಪತಿಯಾಗಿ ಸಮಾಜದಲ್ಲಿ ಜೀವನ ನಡೆಸಲು ಮುಕ್ತರು' ಎಂದು ಹೇಳಿದ್ದಾರೆ.

ಪ್ರಕರಣ ಏನು?: ಸಂತ್ರಸ್ತೆಯು 12ನೇ ತರಗತಿಯಲ್ಲಿದ್ದಾಗಲೇ ವ್ಯಕ್ತಿಯೊಬ್ಬನನ್ನು ಪ್ರೀತಿಸುತ್ತಿದ್ದರು. ಲೈಂಗಿಕ ಸಂಪರ್ಕ ಬೆಳೆಸಿ, ಮದುವೆಯಾಗಲು ನಿರಾಕರಿಸಿದ ಬಳಿಕ ಆತನ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು. ಬಳಿಕ ಮಹಿಳೆ ಮತ್ತೊಬ್ಬನನ್ನು ಮದುವೆಯಾಗಿದ್ದರು. ಹಿಂದಿನ ಸಂಬಂಧದ ಬಗ್ಗೆ ತಿಳಿದ ಆತ, ಆಕೆಯನ್ನು ಬಿಟ್ಟುಹೋಗಿದ್ದ.

ಈ ಮಧ್ಯೆ ಪ್ರಿಯಕರ ಜಾಮೀನಿನ ಮೇಲೆ ಜೈಲಿನಿಂದ ಹೊರಬಂದಿದ್ದ. ಸಂತ್ರಸ್ತೆ ಮತ್ತು ಆತನ ಭೇಟಿಯಾಗಿ ತಮ್ಮ ನಡುವಿನ ವ್ಯಾಜ್ಯವನ್ನು ಇತ್ಯರ್ಥಪಡಿಸಿಕೊಂಡು ಮದುವೆಯಾಗಿದ್ದರು. ಬಳಿಕ ಪತಿ ವಿರುದ್ಧದ ಪೋಕ್ಸೊ ಪ್ರಕರಣವನ್ನು ಕೈಬಿಡುವಂತೆ ಮಹಿಳೆ ಮದ್ರಾಸ್ ಹೈಕೋರ್ಟ್ ಮೊರೆಹೋಗಿದ್ದರು. ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿತ್ತು. ಬಳಿಕ ದಂಪತಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ನ್ಯೂಸ್‌ಕ್ಲಿಕ್, ಪುರಕಾಯಸ್ಥ ವಿರುದ್ಧದ ಎಫ್‌ಐಆರ್, ತನಿಖೆ ರದ್ದು

ಪ್ರಜಾವಾಣಿ ವಾರ್ತೆ

ಪ್ರಬೀರ್ ಪುರಕಾಯಸ್ಥ

ನವದೆಹಲಿ: 'ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ'ಯ (ಎಫ್‌ಇಎಂಎ) ನಿಬಂಧನೆಗಳನ್ನು ಉಲ್ಲಂಘಿಸಿದ ಆರೋಪದಡಿ ಸುದ್ದಿ ಪೋರ್ಟಲ್ 'ನ್ಯೂಸ್‌ಕ್ಲಿಕ್' ಹಾಗೂ ಅದರ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಹಾಗೂ ಜಾರಿ ನಿರ್ದೇಶನಾಲಯ (ಇ.ಡಿ) ನಡೆಸುತ್ತಿರುವ ತನಿಖೆಯನ್ನು ದೆಹಲಿ ಹೈಕೋರ್ಟ್ ರದ್ದುಗೊಳಿಸಿ ಆದೇಶಿಸಿದೆ.

'ಸುದ್ದಿ ಪೋರ್ಟಲ್ ಹಾಗೂ ಅದರ ಪ್ರಧಾನ ಸಂಪಾದಕರ ವಿರುದ್ಧದ ಎಫ್‌ಐಆರ್ ಅನ್ನು ಪರಿಗಣಿಸಿದಲ್ಲಿ, ಅದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗಲಿದೆ' ಎಂದು ನ್ಯಾಯಮೂರ್ತಿ ನೀನಾ ಬನ್ಸಲ್ ಕೃಷ್ಣ ನೇತೃತ್ವದ ಏಕಸದಸ್ಯ ಪೀಠವು ಹೇಳಿದೆ.

ಈ ಕುರಿತು ಮೇ 29ರಂದು ಪೀಠವು ತೀರ್ಪು ನೀಡಿದೆ. ದೆಹಲಿ ಪೊಲೀಸ್‌ನ ಆರ್ಥಿಕ ಅಪರಾಧಗಳ ವಿಭಾಗ (ಇಒಡಬ್ಲ್ಯು) ದಾಖಲಿಸಿದ್ದ ಎಫ್‌ಐಆರ್‌ಅನ್ನು ವಜಾಗೊಳಿಸಿರುವುದರಿಂದ, ಇ.ಡಿ ದಾಖಲಿಸಿರುವ ಇಸಿಐಆರ್(ಜಾರಿ ನಿರ್ದೇಶನಾಲಯ ಪ್ರಕರಣದ ಮಾಹಿತಿ ವರದಿ) ಕೂಡ ಸ್ವಯಂಚಾಲಿತವಾಗಿ ರದ್ದಾಗಲಿದೆ ಎಂದು ನ್ಯಾಯಮೂರ್ತಿ ನೀನಾ ಬನ್ಸಲ್ ಕೃಷ್ಣ ಅವರು ತೀರ್ಪಿನಲ್ಲಿ ಹೇಳಿದ್ದಾರೆ.

ಅಮೆರಿಕ ಮೂಲದ ವರ್ಲ್ಡ್ ವೈಡ್ ಮೀಡಿಯಾ ಹೋಲ್ಡಿಂಗ್ಸ್ ಎಲ್‌ಎಲ್‌ಸಿ ಮೂಲಕ 'ನ್ಯೂಸ್‌ಕ್ಲಿಕ್' 9.59 ಕೋಟಿ ವಿದೇಶಿ ನೇರ ಬಂಡವಾಳ(ಎಫ್‌ಡಿಐ) ಸ್ವೀಕರಿಸಿತ್ತು. ಈ ಹಣಕಾಸು ವ್ಯವಹಾರ ನಡೆಸುವ ವೇಳೆ, 'ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ'ಯ (ಎಫ್‌ಇಎಂಎ) ನಿಬಂಧನೆಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಲಾಗಿತ್ತು.

ಈ ಕುರಿತು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ನೀಡಿದ ದೂರಿನನ್ವಯ 'ನ್ಯೂಸ್‌ಕ್ಲಿಕ್' ಹಾಗೂ ಪ್ರಬೀರ್ ಪುರಕಾಯಸ್ಥ ವಿರುದ್ಧ 2020ರ ಆಗಸ್ಟ್‌ನಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.

ಈ ಎಫ್‌ಐಆರ್ ಆಧಾರದಲ್ಲಿ ಇಸಿಐಆರ್ ದಾಖಲಿಸಿದ್ದ ಜಾರಿ ನಿರ್ದೇಶನಾಲಯವು 2021ರ ಫೆಬ್ರುವರಿಯಲ್ಲಿ ನ್ಯೂಸ್‌ಕ್ಲಿಕ್ ಕಚೇರಿ ಹಾಗೂ ಅದರ ಸಂಪಾದಕರ ನಿವಾಸಗಳ ಮೇಲೆ ದಾಳಿ ನಡೆಸಿತ್ತು.

ಹಡಗಿನ ಮೇಲೆ ದಾಳಿ: ಮೂವರು ಭಾರತೀಯರಿಗಾಗಿ ಶೋಧ

ದುಬೈ/ನವದೆಹಲಿ(ಪಿಟಿಐ/ರಾಯಿಟರ್ಸ್): ಒಮಾನ್ ಕರಾವಳಿ ಸಮೀಪ ತೈಲ ಟ್ಯಾಂಕರ್ ಮೇಲೆ ದಾಳಿ ನಡೆದ ಬಳಿಕ ಮೂವರು ಭಾರತೀಯ ನಾವಿಕರು ನಾಪತ್ತೆಯಾಗಿದ್ದು, ಅವರಿಗಾಗಿ ಶೋಧ ಕಾರ್ಯ ಮುಂದುವರಿದಿದೆ ಎಂದು ವಿದೇಶಾಂಗ ಸಚಿವಾಲಯ ಬುಧವಾರ ಹೇಳಿದೆ.

'ವಾಣಿಜ್ಯ ಹಡಗು ಸೆಟ್ಟಿಬೆಲ್ಲೊ ಮೇಲೆ ನಡೆದ ದಾಳಿಯನ್ನು ಭಾರತ ಖಂಡಿಸುತ್ತದೆ. ಒಮಾನ್‌ನಲ್ಲಿರುವ ನಮ್ಮ ರಾಯಭಾರ ಕಚೇರಿಯು ಪರಿಸ್ಥಿತಿಯನ್ನು ನಿಕಟವಾಗಿ ಗಮನಿಸುತ್ತಿದೆ. ಒಮಾನ್ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಶೋಧ ಮತ್ತು ರಕ್ಷಣಾ ಕಾರ್ಯ ಮುಂದುವರಿಸಲಾಗಿದೆ' ಎಂದು ಸಚಿವಾಲಯ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಹೇಳಲಾಗಿದೆ. ಒಮಾನ್ ಕರಾವಳಿಯಲ್ಲಿ ಹಡಗಿನ ಮೇಲೆ ಕ್ಷಿಪಣೆ ದಾಳಿ ನಡೆದ ನಂತರ, ಪಲಾವು ದೇಶದ ಧ್ವಜ ಹೊತ್ತ ತೈಲ ಟ್ಯಾಂಕರ್‌ನಲ್ಲಿದ್ದ 24 ಭಾರತೀಯರ ಪೈಕಿ 21 ಸಿಬ್ಬಂದಿಯನ್ನು ಒಮಾನಿ ಅಧಿಕಾರಿಗಳ ನೆರವಿನಿಂದ ರಕ್ಷಿಸಲಾಗಿದೆ ಎಂದು ಭಾರತೀಯ ಕರಾವಳಿ ಕಾವಲುಪಡೆ (ಐಸಿಜಿ) ಮಂಗಳವಾರ ಹೇಳಿತ್ತು.

ಮಣಿಪುರ ಪ್ರಕ್ಷುಬ್ಧ: ಆರು ನಾಗಾಗಳ ಮೃತದೇಹ ಪತ್ತೆ

ಇಂಫಾಲ: ಕಾಂಗ್ಪೋಕ್ಪಿ ಜಿಲ್ಲೆಯಲ್ಲಿ ಮೂವರು ಚರ್ಚ್ ಮುಖಂಡರ ಹತ್ಯೆಯ ನಂತರ ಬಂಡುಕೋರರು ಅಪಹರಿಸಿದ್ದ ನಾಗಾ ಬುಡಕಟ್ಟು ಸಮುದಾಯದ 6 ಮಂದಿಯನ್ನು ಹತ್ಯೆ ಮಾಡಲಾಗಿದ್ದು, ಮೃತದೇಹಗಳನ್ನು ಬುಧವಾರ ಪತ್ತೆಹಚ್ಚಲಾಗಿದೆ ಎಂದು ಮಣಿಪುರ ಪೊಲೀಸರು ತಿಳಿಸಿದ್ದಾರೆ.

ಬಂಡುಕೋರರು ಮೇ 13ರಂದು ಒಟ್ಟು 20 ಮಂದಿಯನ್ನು ಸೇನಾಪತಿ ಜಿಲ್ಲೆಯ ಲೈಲಾನ್ ವೈಫೇಯಿ ಗ್ರಾಮದಿಂದ ಅಪಹರಿಸಿದ್ದರು. ಇವರಲ್ಲಿ ಕುಕಿ ಸಮುದಾಯದ 14 ಮಂದಿಯನ್ನು ಮಂಗಳವಾರ ಬಿಡುಗಡೆ ಮಾಡಲಾಗಿತ್ತು. ಇನ್ನುಳಿದ 6 ಮಂದಿಯನ್ನು ಹತ್ಯೆ ಮಾಡಲಾಗಿದೆ.

ಒತ್ತೆಯಾಳುಗಳ ಬಿಡುಗಡೆಗೆ ನಾಗಾಲ್ಯಾಂಡ್ ಮತ್ತು ಮೇಘಾಲಯದ ಮುಖ್ಯಮಂತ್ರಿಗಳು ಅವಿರತ ಪ್ರಯತ್ನ ನಡೆಸಿದ್ದರು. 14 ಮಂದಿಯ ಬಿಡುಗಡೆ ಬೆನ್ನಲ್ಲೇ, ಉಳಿದವರನ್ನೂ ಬಿಡುಗಡೆ ಮಾಡಬಹುದು ಎಂಬ ಆಶಾಭಾವನೆ ಮೂಡಿತ್ತು. ಆದರೆ, ಇದು ಹುಸಿಯಾಗಿದೆ.

ಮಣಿಪುರ ಪೊಲೀಸ್, ಸಿಆರ್‌ಪಿಎಫ್, ಅಸ್ಸಾಂ ರೈಫಲ್ಸ್ ಸಿಬ್ಬಂದಿ ಸೇರಿ ಒಟ್ಟು 450 ಸಿಬ್ಬಂದಿ ಸತತ 24 ಗಂಟೆ ಶೋಧ ಕಾರ್ಯಾಚರಣೆ ನಡೆಸಿ ಮೃತದೇಹಗಳನ್ನು ಪತ್ತೆಹಚ್ಚಿದ್ದಾರೆ ಎಂದು ಮೂಲಗಳು ತಿಳಿಸಿವೆ. ಡಿಎನ್‌ಎ ಮತ್ತು ಮರಣೋತ್ತರ ಪರೀಕ್ಷೆಗಾಗಿ ಮೃತದೇಹಗಳನ್ನು ಇಂಫಾಲ್‌ನ ಆರ್‌ಐಎಂಎಸ್ ಆಸ್ಪತ್ರೆಯಲ್ಲಿ ಇರಿಸಲಾಗಿದೆ.

ಮೂರು ದಿನಗಳ ದೆಹಲಿ ಭೇಟಿ ವೇಳೆ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ದೆಹಲಿಯ ಅವರ ನಿವಾಸದಲ್ಲಿ ಬುಧವಾರ ಭೇಟಿಯಾದರು. ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಇದೇ ಮೊದಲ ಬಾರಿಗೆ ವಿಜಯ್ ಅವರು ಕಾಂಗ್ರೆಸ್ ಪಕ್ಷದ ವರಿಷ್ಠೆ ಸೋನಿಯಾ ಗಾಂಧಿ ಅವರನ್ನೂ ಭೇಟಿಯಾದರು —ಕಾಂಗ್ರೆಸ್ 'ಎಕ್ಸ್' ಖಾತೆಯಿಂದ ಪಡೆದ ಚಿತ್ರ

ಭಾರತ 2ನೇ ಮನೆ: ಇರಾನ್ ಎಂಜಿನಿಯರ್

ಮೀನಮಾರ್ಗ್ (ಲಡಾಖ್) (ಪಿಟಿಐ): ಜಮ್ಮು–ಕಾಶ್ಮೀರ ಮತ್ತು ಲಡಾಖ್ ನಡುವೆ ವರ್ಷವಿಡೀ ಸಂಪರ್ಕ ಒದಗಿಸುವ ಝೋಜಿಲಾ ಸುರಂಗದ ನಿರ್ಮಾಣದಲ್ಲಿ ಇರಾನ್‌ನ ಎಂಜಿನಿಯರ್ ಯೂಸೆಫ್ ಎಸ್ಫಾಫಪೂರ್ ರಹಿಂಬಾದಿ ಅವರು ಪ್ರಮುಖ ಪಾತ್ರ ವಹಿಸಿದ್ದು, ಭಾರತವನ್ನು ತಮ್ಮ ಎರಡನೇ ಮನೆ ಎಂದು ಬಣ್ಣಿಸಿದ್ದಾರೆ.

ಝೋಜಿಲಾ ಸುರಂಗದ ಅಂತಿಮ ಬಂಡೆ ಸ್ಫೋಟಿಸುವ ಮೂಲಕ ಯೋಜನೆ ಅಂತಿಮ ಹಂತಕ್ಕೆ ತಲುಪಿದೆ. ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿ, 'ಇದೊಂದು ಐತಿಹಾಸಿಕ ಯೋಜನೆ' ಎಂದಿದ್ದಾರೆ. ಅಲ್ಲದೇ, ಎಂಜಿನಿಯರಿಂಗ್ ವ್ಯವಸ್ಥೆಯಲ್ಲಿ ಚೀನಾಗಿಂತಲೂ ಭಾರತ ಮುಂದಿದೆ. ವಿಶೇಷವಾಗಿ ಈ ಯೋಜನೆಯಲ್ಲಿ' ಎಂದಿದ್ದಾರೆ.

ಸ್ಟುಡಿಯೊ ಬಿಟ್ಟು ಗ್ರಾಮೀಣ ಪರಿಸರದಲ್ಲಿ ಚಿತ್ರೀಕರಣಕ್ಕೆ ಒತ್ತು ನೀಡಿದ ನಿರ್ದೇಶಕ

ತಮಿಳು ಚಿತ್ರಕ್ಕೆ ಹೊಸ ಸೂತ್ರವಿತ್ತ ಮಾಂತ್ರಿಕ

ಚೆನ್ನೈ(ಪಿಟಿಐ): ಸ್ಟುಡಿಯೊಗಳಲ್ಲಿ ಸೆಟ್‌ಗಳನ್ನು ಅಳವಡಿಸಿ, ಚಿತ್ರೀಕರಣ ಮಾಡುತ್ತಿದ್ದ ಸಂಪ್ರದಾಯಕ್ಕೆ ಕೊನೆಹಾಡಿ, ತಮಿಳು ಚಿತ್ರಗಳಲ್ಲಿ ಗ್ರಾಮೀಣ ಸೊಗಡು ತುಂಬಿ, ನೈಜತೆಯ ಸ್ಪರ್ಶ ನೀಡುವ ಮೂಲಕ ನಿರ್ದೇಶಕ ಪಿ.ಭಾರತಿರಾಜ ಗಮನ ಸೆಳೆದಿದ್ದರು.

ತಮ್ಮ ಪ್ರಯೋಗಗಳ ಮೂಲಕ ತಮಿಳು ಚಿತ್ರರಂಗಕ್ಕೆ ಹೊಸತನದ ಮೆರುಗು ತಂದಿದ್ದ ಅವರನ್ನು 'ಇಯಕ್ಕೂನಾರ್ ಇಮಯಮ್'(ನಿರ್ದೇಶಕರ ಮೇರು ಶಿಖರ) ಎಂದೇ ಕರೆಯಲಾಗುತ್ತಿತ್ತು. ದಕ್ಷಿಣ ಭಾರತದ ಚಿತ್ರರಂಗದ ದಿಕ್ಕನ್ನೇ ಬದಲಿಸಿದ ಕೀರ್ತಿ ಭಾರತಿರಾಜ ಅವರಿಗೆ ಸಲ್ಲುತ್ತದೆ.

1970ರ ದಶಕದಲ್ಲಿ ಅವರು ಚಿತ್ರರಂಗ ಪ್ರವೇಶಿಸಿದರು. 1977ರಲ್ಲಿ ತೆರೆಕಂಡ ಭಾರತಿರಾಜ ನಿರ್ದೇಶನದ ಚೊಚ್ಚಲ ಚಿತ್ರ '16 ವಯದಿನಿಲೆ' ಇಂತಹ ಹಳೆಯ ಚಿತ್ರೀಕರಣದ ಮಾದರಿಗೆ ಅಂತ್ಯ ಹಾಡಿತ್ತು. ಸ್ಟುಡಿಯೊದ ಬೇಲಿ ದಾಟಿದರು. ಹಳ್ಳಿಗಾಡಿನ ದೂಳು ತುಂಬಿದ ರಸ್ತೆ–ಓಣಿಗಳಲ್ಲಿ ಕ್ಯಾಮೆರಾದ ಮಸೂರಕ್ಕೆ ಕೆಲಸ ನೀಡಿದರು. ಆ ಮೂಲಕ, ಮುಖ್ಯವಾಹಿನಿಯ ಪ್ರೇಕ್ಷಕರಿಗೆ ಗ್ಲಾಮರ್ ಸೋಂಕಿಲ್ಲದ ಹಾಗೂ ಪಕ್ಕಾ ಗ್ರಾಮೀಣ ಪರಿಸರದಲ್ಲಿ ರೂಪಿಸಿದ ಚಿತ್ರಗಳನ್ನು ಪರಿಚಯಿಸಿದರು.

ಕಮಲ್ ಹಾಸನ್, ರಜನಿಕಾಂತ್ ಮತ್ತು ಶ್ರೀದೇವಿ ಭೂಮಿಕೆಯ ಚಿತ್ರವು ಆ ಕಾಲಘಟ್ಟದ ಸಾಂಸ್ಕೃತಿಕ ವಿದ್ಯಮಾನವೇ ಆಗಿತ್ತು. ವಾಣಿಜ್ಯಿಕ ಚಿತ್ರ ತಯಾರಿಕೆಗೆ ಹೊಸ ಭಾಷ್ಯ ಬರೆದಿತ್ತು.

ಅವರು ತಮಿಳು, ತೆಲುಗು ಹಾಗೂ ಹಿಂದಿ ಭಾಷೆಗಳಲ್ಲಿ 40ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿದ್ದರು. ಸಿಗಪ್ಪು ರೋಜಾಕ್ಕಳ್(1978), ಅಲೈಗಳ್ ಓವತ್ತಿಲ್ಲೈ(1981), ಮುದಲ್ ಮರಿಯದೈ(1985), ಕರುತಮ್ಮ(1994) ಅವರ ನಿರ್ದೇಶನದ ಪ್ರಮುಖ ಚಿತ್ರಗಳು.

ಅವರ ನಿರ್ದೇಶಿಸಿದ್ದ ತೆಲುಗು ಚಿತ್ರ 'ಸೀತಾಕೋಕಚಿಲುಕ'(1981) ಭರ್ಜರಿ ಯಶಸ್ಸು ಕಂಡಿತ್ತು. ಅತ್ಯುತ್ತಮ ತೆಲುಗು ಚಿತ್ರಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಯನ್ನೂ ಪಡೆದಿತ್ತು. ಚಿತ್ರ ನಿರ್ದೇಶನದ ವಿಚಾರದಲ್ಲಿ ಭಾರತಿರಾಜ ಅವರು ತಾಂತ್ರಿಕ ಕೌಶಲ, ಕ್ಯಾಮೆರಾ ಬಳಕೆಗೆ ಮಾತ್ರ ಹೆಸರಾಗಿರಲಿಲ್ಲ. ಅವರು ಹೊಸ ಪ್ರತಿಭೆಗಳನ್ನು ಹುಡುಕಿ, ಅವರನ್ನು ನಟನೆಯಲ್ಲಿ ಪಳಗಿಸಿ ಒಬ್ಬ ಉತ್ತಮ ಕಲಾವಿದನನ್ನಾಗಿ ರೂಪಿಸುತ್ತಿದ್ದರು. ಇವರ ಗರಡಿಯಲ್ಲಿ ಬೆಳೆದ ಹಲವಾರು ಕಲಾವಿದರು ಭಾರತದ ಚಿತ್ರರಂಗದಲ್ಲಿ ಹೆಸರು ಮಾಡಿದ್ದಾರೆ.

ಭಾರತಿರಾಜ ಅವರು ಅನೇಕ ನಟ–ನಟಿಯರಿಗೆ ಹೊಸ ಹೆಸರುಗಳನ್ನಿಟ್ಟಿದ್ದರು. ವಿಶೇಷವೆಂದರೆ, ಬಹುತೇಕರ ಹೆಸರುಗಳು 'ಆರ್'ನಿಂದಲೇ ಶುರುವಾಗಿರುತ್ತಿದ್ದವು. ನಟಿಯರಾದ ರಾಧಿಕಾ, ರೇವತಿ, ರಾಧಾ, ರೇಖಾ ಈ ಮಾತಿಗೆ ಉದಾಹರಣೆ. ಕಾರ್ತಿಕ್, ಪಾಂಡಿಯನ್ ಸೇರಿ ಹಲವು ನಟರು, ತಂತ್ರಜ್ಞರನ್ನು ಅವರು ಚಿತ್ರರಂಗಕ್ಕೆ ಪರಿಚಯಿಸಿದ್ದರು. ಅವರ ಸಹಾಯಕ ನಿರ್ದೇಶಕರಾಗಿ ದುಡಿದಿರುವ ಕೆ.ಭಾಗ್ಯರಾಜ, ಆರ್.ಪಾರ್ಥಿಬನ್, ಪಾಂಡ್ಯರಾಜನ್ ಕೂಡ ತಮಿಳು ಚಿತ್ರರಂಗದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ.

ಭಾರತಿರಾಜ (ನಿರ್ದೇಶಕ ಪಾ.ರಂಜಿತ್ ಅವರ 'ಎಕ್ಸ್' ಖಾತೆಯಿಂದ ಪಡೆದ ಚಿತ್ರ)

ನಿರ್ದೇಶಕ ಭಾರತಿರಾಜ ಇನ್ನಿಲ್ಲ

ತಮಿಳು ಚಿತ್ರರಂಗದ ಹೆಸರಾಂತ ನಿರ್ದೇಶಕ, ನಟ ಹಾಗೂ ಚಿತ್ರಕಥೆಗಾರ ಪಿ.ಭಾರತಿರಾಜ(84) ಅವರು ಇಲ್ಲಿನ ತಮ್ಮ ನಿವಾಸದಲ್ಲಿ ಬುಧವಾರ ನಿಧನರಾದರು. ಅವರಿಗೆ ಪತ್ನಿ ಚಂದ್ರಲೀಲಾ ಹಾಗೂ ಮಗಳು ಜನನಿ ಇದ್ದಾರೆ.

ಅವರು ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ಕಳೆದ ವರ್ಷ ಮಾರ್ಚ್‌ನಲ್ಲಿ ಅವರ ಪುತ್ರ, ನಟ–ನಿರ್ದೇಶಕ ಮನೋಜ್ ಅವರು ಮೃತಪಟ್ಟ ಬಳಿಕ, ಭಾರತಿರಾಜ ಅವರ ಆರೋಗ್ಯ ಮತ್ತಷ್ಟು ಕ್ಷೀಣಿಸಿತ್ತು. ಥೇಣಿ ಜಿಲ್ಲೆಯ ಅಲ್ಲಿನಗರಂನಲ್ಲಿ 1941ರ ಜುಲೈ 17ರಂದು ಜನಿಸಿದ್ದರು. ಅವರ ಮೂಲ ಹೆಸರು ಚಿನ್ನಸ್ವಾಮಿ.

2004ರಲ್ಲಿ ಅತ್ಯುನ್ನತ ನಾಗರಿಕ ಪುರಸ್ಕಾರ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದರು. ಆರು ಬಾರಿ ರಾಷ್ಟ್ರ ಪ್ರಶಸ್ತಿ, ನಾಲ್ಕು ಬಾರಿ ಫಿಲ್ಮ್‌ಫೇರ್ ಪ್ರಶಸ್ತಿ (ದಕ್ಷಿಣ) ಹಾಗೂ 6 ಸಲ ತಮಿಳುನಾಡು ರಾಜ್ಯ ಚಲನಚಿತ್ರ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದರು. ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರು ಭಾರತಿರಾಜ ನಿಧನಕ್ಕೆ ಕಂಬನಿ ಮಿಡಿದಿದ್ದು, ಸರ್ಕಾರಿ ಗೌರವದೊಂದಿಗೆ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಘೋಷಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಮನುಷ್ಯರ ಅಂತರ್ಮುಖತೆ ಅವರ ಅಂತಃಮೂರ್ಖತೆಗೆ ಅಳತೆಗೋಲಾಗಬಾರದು.

–ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಮಾನವ ಕಳ್ಳಸಾಗಣೆ–ಲೈಂಗಿಕ ವೃತ್ತಿ ಶೋಷಣೆ ತಪ್ಪಿಸಲು ಸುಪ್ರೀಂ ದಿಕ್ಸೂಚಿ

ಮಾನವ ಕಳ್ಳಸಾಗಣೆ ಮತ್ತು ಲೈಂಗಿಕ ವೃತ್ತಿಗೆ ಸಂಬಂಧಿಸಿದ ವಿಷಯಗಳನ್ನು ಭಿನ್ನವಾಗಿ ನೋಡಲು ಅಗತ್ಯವಾದ ದೃಷ್ಟಿಕೋನವನ್ನು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿರುವ ಮಹತ್ವದ ತೀರ್ಪು ಕಟ್ಟಿಕೊಡುವಂತಿದೆ. ಈ ಎರಡೂ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಕರಣಗಳಿಗೆ ದೇಶದ ಕಾನೂನು ಹಾಗೂ ಕಾನೂನು ಜಾರಿ ವ್ಯವಸ್ಥೆಗಳು ಇದುವರೆಗೆ ಬಹುತೇಕ ಒಂದೇ ದೃಷ್ಟಿಕೋನದಿಂದ ಪ್ರತಿಕ್ರಿಯಿಸುತ್ತಾ ಬಂದಿವೆ. ಇಂಥ ಪ್ರತಿಕ್ರಿಯೆಗಳನ್ನು ರಚನಾತ್ಮಕವಾಗಿ ಪುನರ್ ರೂಪಿಸಲು ಅನುವು ಮಾಡಿಕೊಡುವಂತಿರುವ ತೀರ್ಪು, ಯಾವುದೇ ಸ್ಥಿತಿಯಲ್ಲಿದ್ದರೂ ಮಹಿಳೆಯರ ಹಕ್ಕುಗಳನ್ನು ರಕ್ಷಿಸಬೇಕಾದ ಸರ್ಕಾರದ ಉತ್ತರದಾಯಿತ್ವವನ್ನು ಸ್ಪಷ್ಟಪಡಿಸುವಂತಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಹಾಗೂ ಆರ್. ಮಹದೇವನ್ ಅವರನ್ನೊಳಗೊಂಡ ವಿಭಾಗೀಯ ಪೀಠ ನೀಡಿರುವ ತೀರ್ಪು, ಸ್ವಯಂಪ್ರೇರಿತವಾಗಿ ಲೈಂಗಿಕ ವೃತ್ತಿಯಲ್ಲಿ ತೊಡಗಿರುವ ವಯಸ್ಕ ಕಾರ್ಯಕರ್ತೆಯರ ಹಕ್ಕುಗಳನ್ನು ಗುರ್ತಿಸಿದೆ ಹಾಗೂ ಅವರಿಗೆ ರಕ್ಷಣೆಯನ್ನು ಖಾತರಿಪಡಿಸಿದೆ. 'ಅನೈತಿಕ ಕಳ್ಳಸಾಗಣೆ ತಡೆ ಕಾಯ್ದೆ' (ಐಟಿಪಿಎ) ವಿಫಲವಾಗಿದೆ ಎಂದು ಅಭಿಪ್ರಾಯಪಟ್ಟಿದೆ. ಲೈಂಗಿಕ ಕಾರ್ಯಕರ್ತೆಯರ ಹಕ್ಕುಗಳನ್ನು ಹಾಗೂ ಸುರಕ್ಷತೆಯ ಕುರಿತಂತೆ ಕಾಯ್ದೆಯ ಮೌನವು, ಅವರು ಎದುರಿಸುತ್ತಿರುವ ಸಾಮಾಜಿಕ ಕಳಂಕವನ್ನು ಮತ್ತಷ್ಟು ಗಾಢಗೊಳಿಸುತ್ತಿದೆ ಹಾಗೂ ಅವರ ದುರ್ಬಲತೆಯನ್ನು ಶೋಷಣೆಗೆ ಕಾರಣವಾಗುತ್ತಿದೆ ಎಂದು ನ್ಯಾಯಪೀಠ ಹೇಳಿದೆ. ಲೈಂಗಿಕ ಕಾರ್ಯಕರ್ತೆಯರ ಹಕ್ಕುಗಳ ಅಸ್ತಿತ್ವದಲ್ಲಿದ್ದ ಮಾತ್ರಕ್ಕೆ, ಲೈಂಗಿಕ ವೃತ್ತಿಯನ್ನು ಹಕ್ಕಿನ ರೂಪದಲ್ಲಿ ನೋಡಲು ಸಾಧ್ಯವಾಗುವುದಿಲ್ಲ ಎನ್ನುವ ಮಹತ್ವದ ಅಭಿಪ್ರಾಯವನ್ನೂ ಕೋರ್ಟ್ ದಾಖಲಿಸಿದೆ.

ಐಟಿಪಿಎ ಕಾಯ್ದೆಯು ಮಹಿಳೆಯರು ಇರುವ ಪರಿಸ್ಥಿತಿಯಲ್ಲಿನ ವ್ಯತ್ಯಾಸವನ್ನು ಗಮನಿಸದೆ, ಅವರ ರಕ್ಷಣೆ ಮತ್ತು ಪುನರ್ವಸತಿ ಪ್ರಕ್ರಿಯೆಯಲ್ಲಿ ಒಂದೇ ರೀತಿಯಲ್ಲಿ ವರ್ತಿಸುತ್ತದೆ. ಈ ಕಾಯ್ದೆಯ ಅಡಿಯಲ್ಲಿ ಕಳ್ಳಸಾಗಣೆಗೆ ಒಳಗಾದ ಸಂತ್ರಸ್ತರನ್ನು ಹಾಗೂ ಸ್ವಯಂಪ್ರೇರಣೆಯಿಂದ ಲೈಂಗಿಕ ವೃತ್ತಿಯಲ್ಲಿ ತೊಡಗಿಕೊಂಡವರನ್ನು ಪುನರ್ವಸತಿ ಪ್ರಕ್ರಿಯೆಗೆ ಒಳಪಡಿಸುವ ಮೊದಲು, 'ಸುರಕ್ಷಾ ಬಂಧನ'ದಲ್ಲಿ ಇರಿಸಲಾಗುತ್ತದೆ. ಹೀಗೆ ಬಂಧನದಲ್ಲಿ ಇರಿಸುವ ಮೊದಲು ಪ್ರಾಥಮಿಕ ವಿಚಾರಣೆ ಅಗತ್ಯ ಎಂದು ಕೋರ್ಟ್ ಹೇಳಿದೆ. ಪುನರ್ವಸತಿಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ಲೈಂಗಿಕ ವೃತ್ತಿಯಲ್ಲಿ ತೊಡಗಿದ ವ್ಯಕ್ತಿಯ ಒಪ್ಪಿಗೆಯನ್ನು ಪರಿಗಣಿಸಬೇಕು ಎಂದೂ ಹೇಳಿದೆ. ಕಲ್ಯಾಣ ಕಾರ್ಯಕ್ರಮಗಳು ವೈಯಕ್ತಿಕ ಅಭಿಪ್ರಾಯಗಳನ್ನು ಹತ್ತಿಕ್ಕುವಂತಾಗಬಾರದು ಎನ್ನುವುದು ಕೋರ್ಟ್‌ನ ಮೂಲತತ್ತ್ವವಾಗಿದೆ. ಲೈಂಗಿಕ ಕಾರ್ಯಕರ್ತೆ ಎಂದು ಸ್ವತಃ ಗುರ್ತಿಸಿಕೊಳ್ಳುವವರಿಗೆ ತಮ್ಮ ವೃತ್ತಿಯನ್ನು ಮುಂದುವರಿಸುವ ಹಕ್ಕಿದೆ ಮತ್ತು ಆ ಹಕ್ಕಿನಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು ಎನ್ನುವುದು ನ್ಯಾಯಪೀಠದ ಅಭಿಪ್ರಾಯವಾಗಿದೆ. ಲೈಂಗಿಕ ವೃತ್ತಿನಿರತರನ್ನೂ ಕಳ್ಳಸಾಗಣೆ ವ್ಯಾಪ್ತಿಯಲ್ಲಿ ಐಟಿಪಿಎ ಪರಿಗಣಿಸುವುದರಿಂದ, ಸಂತ್ರಸ್ತರು ರಕ್ಷಣೆಯ ಹೆಸರಿನಲ್ಲಿ ಕಿರುಕುಳಕ್ಕೆ ಒಳಗಾದಂತಾಗುತ್ತದೆ. ಹಾಗಾಗಿ, ಲೈಂಗಿಕ ಕಳ್ಳಸಾಗಣೆ ಮತ್ತು ಲೈಂಗಿಕ ವೃತ್ತಿಯನ್ನು ಏಕರೂಪದಲ್ಲಿ ಪರಿಗಣಿಸುವ ಈಗಿನ ಶಾಸನಾತ್ಮಕ ಚೌಕಟ್ಟನ್ನು ಮರುಪರಿಶೀಲಿಸುವಂತೆ ಕೋರ್ಟ್ ಸರ್ಕಾರಕ್ಕೆ ಸೂಚಿಸಿದೆ.

ಮಾನವ ಕಳ್ಳಸಾಗಣೆ ಮತ್ತು ಸ್ವಯಂಪ್ರೇರಿತ ಲೈಂಗಿಕ ವೃತ್ತಿಯನ್ನು ಪ್ರತ್ಯೇಕಿಸಿ ನೋಡುವ ಅಗತ್ಯವನ್ನು ಒತ್ತಿ ಹೇಳಿರುವ ಸುಪ್ರೀಂ ಕೋರ್ಟ್, ಕಾಯ್ದೆಯಲ್ಲಿನ ಲೋಪಗಳ ಕುರಿತು ಗಮನಸೆಳೆದಿದೆ.

ಮಾನವ ಕಳ್ಳಸಾಗಣೆಗೆ ಸಂಬಂಧಿಸಿದಂತೆ ಸರ್ಕಾರ ಹೊಸ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವ ಅಗತ್ಯವನ್ನು ಪ್ರತಿಪಾದಿಸಿರುವ ಸುಪ್ರೀಂ ಕೋರ್ಟ್, ಕಳ್ಳಸಾಗಣೆಗೆ ಒಳಗಾದ ಸಂತ್ರಸ್ತೆಯರ ಪುನರ್ವಸತಿ, ಸಮಾಜದ ಮುಖ್ಯವಾಹಿನಿಗೆ ಅವರ ಪುನರ್ ಸೇರ್ಪಡೆ ಹಾಗೂ ದೀರ್ಘಕಾಲೀನ ರಕ್ಷಣೆಯ ವ್ಯವಸ್ಥೆಗೆ ಆದ್ಯತೆ ನೀಡಬೇಕು ಎಂದು ಒತ್ತಿ ಹೇಳಿದೆ. ಆಶ್ರಯ ಕೇಂದ್ರಗಳಿಗೆ ಕನಿಷ್ಠ ಮಾನದಂಡಗಳನ್ನು ರೂಪಿಸುವುದು, ಕಾನೂನು ನೆರವು, ಮಾನಸಿಕ ಆರೋಗ್ಯಕ್ಕೆ ನೆರವು, ಶಿಕ್ಷಣ, ವೃತ್ತಿಪರ ತರಬೇತಿ ಹಾಗೂ ಮರುಕಳ್ಳಸಾಗಣೆಯಿಂದ ರಕ್ಷಣೆ ಒದಗಿಸುವ ಭರವಸೆ ಸೇರಿದಂತೆ ಸಂತ್ರಸ್ತರ ರಕ್ಷಣಾ ಯೋಜನೆಯನ್ನು ರೂಪಿಸುವಂತೆ ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಮಹಿಳೆಯರ ಕಳ್ಳಸಾಗಣೆಯು ಬಹು ಶತಕೋಟಿ ಡಾಲರ್‌ಗಳ ಜಾಲವಾಗಿದ್ದು, ದೇಶದ ಒಳಗೂ ಹೊರಗೂ ನಡೆಯುತ್ತಿದೆ. ಪ್ರಬಲ ಹಿತಾಸಕ್ತಿಗಳ ಬೆಂಬಲದೊಂದಿಗೆ ವ್ಯವಸ್ಥಿತ ಜಾಲವು ಈ ಅಪರಾಧ ಕೃತ್ಯಗಳನ್ನು ಎಸಗುತ್ತಿದೆ. ಈ ಜಾಲವನ್ನು ನಿರ್ಮೂಲಗೊಳಿಸಲು ಸಂಘಟಿತ ಹಾಗೂ ದೃಢ ಸಂಕಲ್ಪದ ಪ್ರಯತ್ನಗಳು ಅಗತ್ಯ. ಪ್ರಸ್ತುತ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನವು, ಸಂತ್ರಸ್ತರ ಹಕ್ಕುಗಳು ಮತ್ತು ಮಾನವ ಘನತೆಗೆ ಸಂಬಂಧಿಸಿದಂತೆ ಕಾನೂನಿನಲ್ಲಿರುವ ಓರೆಕೋರೆಗಳನ್ನು ಸರಿಪಡಿಸುವ ಪ್ರಯತ್ನವಾಗಿದೆ. ಆದರೆ, ಸುಪ್ರೀಂ ಕೋರ್ಟ್ ನಿರ್ದೇಶನ ಅನುಷ್ಠಾನಕ್ಕೆ ಬರಲು ರಾಜಕೀಯ ಇಚ್ಛಾಶಕ್ತಿ ಹಾಗೂ ದಕ್ಷ ಆಡಳಿತದ ಸ್ಪಂದನ ಅಗತ್ಯ. ನ್ಯಾಯಪೀಠದ ಆಶಯಗಳು ಕಾರ್ಯಗತಗೊಳ್ಳುವ ಸಾಧ್ಯತೆಯು ಸ್ಪಂದನಶೀಲ ಹಾಗೂ ಸಂವೇದನಾಶೀಲ ಸಮಾಜದ ನಿರ್ಮಾಣಕ್ಕೂ ಸಂಬಂಧಿಸಿದ್ದಾಗಿದೆ.

ಜೀನ್–ಮೀಮ್‌ಗಳ ತಾಂಡವನೃತ್ಯ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

> ತಳಿಸೂತ್ರದಲ್ಲಿ ಅಡಗಿರುವ ಜೀನ್ ತನ್ನ ಸ್ವಾರ್ಥಕ್ಕಾಗಿ ನಮ್ಮನ್ನು ಹೇಗೆಲ್ಲ ಆಡಿಸುತ್ತದೆ ಎಂದು ವಿವರಿಸಿದ 'ದಿ ಸೆಲ್ಫಿಶ್ ಜೀನ್' ಎಂಬ ಜಗದ್ವಿಖ್ಯಾತ ಕೃತಿಗೆ ಇದು 50ನೇ ವರ್ಷ. ಜೀವ ವಿಜ್ಞಾನಿಗಳೂ ಮೆಚ್ಚುವಂತೆ, ಆದರೆ ಆಕ್ಷೇಪವನ್ನೂ ಎತ್ತುವಂತೆ ಮಾಡುತ್ತ ಬಂದ ಈ ಗ್ರಂಥ ಈಗಲೂ ಜನಪ್ರಿಯ ಆಗುಳಿದಿರುವುದು ಹೇಗೆ?

ಆಕಾಶದಲ್ಲಿ ಮುಂಗಾರು ಮೋಡಗಳ ಸೂಚನೆ ಬರುತ್ತಲೇ ನೆಲದ ಮೇಲೆ ನವಿಲಿನ ನಾಟ್ಯವೂ ಆರಂಭವಾಗುತ್ತದೆ. ಮುಂಗಾರು ಮಳೆಗೂ ನವಿಲುಗಳ ಮಿಲನಕ್ಕೂ ಇರುವ ಸಂಬಂಧ ತೀರ ಸರಳವಾಗಿದೆ. ಮಳೆ ಬೀಳುತ್ತಲೇ ಹುಲ್ಲು ಸಸ್ಯಗಳ ನಡುವೆ ಕೀಟಪತಂಗಗಳ ಸಂಖ್ಯೆಯೂ ಹೆಚ್ಚುತ್ತದೆ. ನವಿಲಿನ ಮರಿಗಳಿಗೆ ಸಮೃದ್ಧ ಆಹಾರ ಸಿಗುತ್ತದೆ. ನಿಸರ್ಗವೇ ಹೀಗೆ ಎಲ್ಲವನ್ನೂ ಲೆಕ್ಕಾಚಾರ ಹಾಕಿ, ಅಚ್ಚುಕಟ್ಟಾಗಿ ಜೋಡಿಸಿ ಇಟ್ಟಿದೆ. ಆದರೆ, ಗಂಡು ನವಿಲಿಗೇಕೆ ಗರಿಗಳ ಹೆಚ್ಚುವರಿ ಹೊರೆ? ಮಾರುದ್ದದ ಗರಿಗಳನ್ನು ಎಳೆಯುತ್ತ ನೆಲದ ಮೇಲೆ ಚಲಿಸುವುದೇ ಕಷ್ಟ; ತೋಳ, ಚಿರತೆಗಳು ಬೆನ್ನಟ್ಟಿ ಬಂದರೆ ರೆಕ್ಕೆ ಬಿಚ್ಚಿ ಹಾರಿ ಮರದ ಕೊಂಬೆಯನ್ನು ಏರುವುದು ಇನ್ನೂ ಕಷ್ಟ. ಹೆಣ್ಣನ್ನು ಓಲೈಸಲು ಹೋಗಿ ಜೀವವನ್ನೇ ಬಲಿಕೊಡಬೇಕಾದ ದುರ್ಭರ ಗರಿ ಅದಕ್ಕೆ ಏಕೆ? ಈ ಪ್ರಶ್ನೆಗೂ ಡಾರ್ವಿನ್ 1859ರ ತನ್ನ ವಿಕಾಸ ಸಿದ್ಧಾಂತದಲ್ಲಿ ಉತ್ತರವನ್ನು ನೀಡಿದ್ದಾನೆ. ಎತ್ತರಕ್ಕೆ ಹಾರಿ ವೈರಿಯಿಂದ ಬಚಾವಾಗಲಾರದ ದುರ್ಬಲ ನವಿಲು ಚಿರತೆಗೆ ಆಹಾರವಾಗುತ್ತದೆ (ಅದಕ್ಕೂ ಊಟ ಬೇಕಲ್ಲ?). ಇತ್ತ ಗರಿಯ ಹೊರೆ ಹೊತ್ತುಕೊಂಡೇ ಭರ್‍ರೆಂದು ಮೇಲಕ್ಕೆ ಜಿಗಿದು ಬಚಾವಾಗಿ ಬಂದು, ಹೆಣ್ಣಿನೆದುರು ಎದೆ ಸೆಟೆದು ಕುಣಿಯಬಲ್ಲ ನವಿಲೇ ತನ್ನ ತಳಿಯನ್ನು ಮುಂದುವರಿಸುತ್ತದೆ. 'ಬಲಿಷ್ಠವಾದುದೇ ಬದುಕುಳಿಯುತ್ತದೆ' ಎಂಬುದು ವಿಕಾಸವಾದದ ಮೂಲ ಸಿದ್ಧಾಂತ ತಾನೆ?

ಚಾರ್ಲ್ಸ್ ಡಾರ್ವಿನ್ ಬರೆದ 'ಜೀವ ಸಂಕುಲಗಳ ಉಗಮ' ('ಆನ್ ದಿ ಒರಿಜಿನ್ ಆಫ್ ಸ್ಪೀಶೀಸ್') ಜೀವವಿಜ್ಞಾನದ ಅತ್ಯಂತ ಮಹತ್ವದ ಗ್ರಂಥವೆಂದು ಜಾಗತಿಕ ಮಾನ್ಯತೆ ಪಡೆದಿದೆ. ಆದರೆ, ವಿಕಾಸವಾದದ ಮಹತ್ವವನ್ನು ಜನರಿಗೆ ತಲಪಿಸುವಲ್ಲಿ ಡಾರ್ವಿನ್‌ನ ಗ್ರಂಥವನ್ನೂ ಮೀರಿಸಿದ ಇನ್ನೊಂದು ಗ್ರಂಥವಿದೆ. ಅದರ ಹೆಸರು 'ದಿ ಸೆಲ್ಫಿಶ್ ಜೀನ್' (ಸ್ವಾರ್ಥಿ ಜೀನ್). ಇನ್ನೊಬ್ಬ ಬ್ರಿಟಿಷ್ ಜೀವವಿಜ್ಞಾನಿ ರಿಚರ್ಡ್ ಡಾವ್ಕಿನ್ಸ್ 1976ರಲ್ಲಿ ಬರೆದ ಈ ಗ್ರಂಥ ಇದೀಗ 50ನೇ ವರ್ಷಕ್ಕೆ ಕಾಲಿಟ್ಟಿದ್ದು, ವಿದ್ವತ್ ವಲಯದಲ್ಲಿ ಸಂಚಲನವನ್ನು ಮೂಡಿಸುತ್ತಲೇ ಇದೆ.

ಜಗತ್ತಿನ ಎಲ್ಲ ಜೀವಿಗಳ ತಳಿಸೂತ್ರದಲ್ಲಿ 'ಜೀನ್' (ಗುಣಾಣು) ಎಂಬ ವಂಶವಾಹಿ ಕಣ ಸುರುಳಿಸುತ್ತಿ ಕೂತಿದೆಯಲ್ಲ? ಅದೇ ಜೀವಲೋಕದ ಎಲ್ಲ ಆಗುಹೋಗುಗಳನ್ನು ನಿರ್ಧರಿಸುವ ಪ್ರಧಾನ ಸೂತ್ರಧಾರ ಎಂಬುದು ಡಾವ್ಕಿನ್ಸ್ ಪ್ರತಿಪಾದನೆ. ಇದರ ಮುಖ್ಯಾಂಶ ಹೀಗಿದೆ: ಈ ಜೀನ್ ತನ್ನ ಅಸ್ತಿತ್ವವನ್ನು ಉಳಿಸಿ ಬೆಳೆಸಲೆಂದೇ ಎಲ್ಲ ಜೀವಿಗಳನ್ನೂ ಮನುಷ್ಯರನ್ನೂ ರೋಬಾಟ್‌ಗಳಂತೆ ಬಳಸಿಕೊಳ್ಳುತ್ತದೆ. ಇದು ತನ್ನ ಸ್ವಾರ್ಥಕ್ಕೆಂದೇ ಮೀನುಗಳನ್ನು ನೀರಿನಲ್ಲಿಯೂ ಇಲಿಗಳನ್ನು ಬಿಲದಲ್ಲೂ ಮಂಗಗಳನ್ನು ಮರದ ಮೇಲೂ ಇಟ್ಟಿದೆ. ವಿಕಾಸದ ಮೆಟ್ಟಿಲಿನ ತುದಿಗೇರಿದ ಮನುಷ್ಯನ ಕೈಗೆ ಟೆಲಿಸ್ಕೋಪ್ ಕೊಟ್ಟು ಬ್ರಹ್ಮಾಂಡವನ್ನು ತೋರಿಸುತ್ತದೆ. ಆಚಿನ ಆ ನಿರ್ಜೀವ ಲೋಕದಲ್ಲೂ ಕಾಲೂರುವ ಆಸೆ ಅದಕ್ಕೆ. ಅದಕ್ಕೇ ನಮ್ಮ ಕೈಗೆ ಮೈಕ್ರೊಸ್ಕೋಪ್ ಕೊಟ್ಟು ತನ್ನನ್ನೇ ಬಿಚ್ಚಿ ತೋರಿಸುತ್ತದೆ.

ಹೀಗೆ, ಡಾರ್ವಿನ್ ಸಿದ್ಧಾಂತಕ್ಕೇ ಕೈಕಾಲು ಬಾಲ ಹಚ್ಚಿ, ಜೀನ್‌ನ ವಿಶ್ವರೂಪವನ್ನು 'ಸೆಲ್ಫಿಶ್ ಜೀನ್' ಮೂಲಕ ಡಾವ್ಕಿನ್ಸ್ ತೋರಿಸಿದಾಗ ವಿಜ್ಞಾನಲೋಕವೂ ಈ ಮೋಹಕ ಪ್ರತಿಮಾಶಿಲ್ಪಕ್ಕೆ ತಲೆದೂಗಿತು. ಜನಸಾಮಾನ್ಯರ ಪಾಲಿಗಂತೂ ಇದು ಅಚ್ಚುಮೆಚ್ಚಿನ ಕೃತಿ ಎನಿಸಿತು. ಡಾರ್ವಿನ್ ಸಿದ್ಧಾಂತವನ್ನು ಇಷ್ಟು ಸರಳವಾಗಿ, ರೂಪಕಗಳ ಭಾಷೆಯಲ್ಲಿ ಅದುವರೆಗೆ ಯಾರೂ ಹೇಳಿರಲಿಲ್ಲ. ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ ಮೂಲಕ ಪ್ರಕಟವಾದ ಈ ಗ್ರಂಥ ಜಗತ್ತಿನ 30ಕ್ಕೂ ಹೆಚ್ಚು ಭಾಷೆಗಳಿಗೆ ತರ್ಜುಮೆಯಾಗಿ ಮತ್ತೆ ಮತ್ತೆ ಹೊಸ ಹೊಸ ಅಧ್ಯಾಯಗಳನ್ನು ಸೇರಿಸಿಕೊಳ್ಳುತ್ತ ಇದೀಗ ಐದನೆಯ ಆವೃತ್ತಿಯಲ್ಲಿ ಮತ್ತೆ ಪ್ರಕಟವಾಗಿದೆ.

ಜನರನ್ನು ವಿಜ್ಞಾನದತ್ತ ಸೆಳೆಯುವಲ್ಲಿ ಕಾರ್ಲ್ ಸೇಗನ್‌ನ 'ಕಾಸ್ಮೋಸ್', ಸ್ಟೀಫನ್ ಹಾಕಿಂಗ್‌ನ 'ಎ ಬ್ರೀಫ್ ಹಿಸ್ಟರಿ ಆಫ್ ಟೈಮ್', ರೇಚೆಲ್ ಕಾರ್ಸನ್‌ಳ 'ಸೈಲೆಂಟ್ ಸ್ಪ್ರಿಂಗ್' ಮುಂತಾದ ಅತಿ ಮಹತ್ವದ ಗ್ರಂಥಗಳ ಸಾಲಿಗೆ 'ಸೆಲ್ಫಿಶ್ ಜೀನ್' ಸೇರಿದೆಯಾದರೂ, ಇದಕ್ಕೊಂದು ವಿಶೇಷ ಇದೆ. ವಿಜ್ಞಾನಿಗಳಲ್ಲೂ ಕೆಲವರು ತಲೆ ತೂಗುವಂತೆ, ಇನ್ನು ಕೆಲವರ ತಲೆ ತಿನ್ನುವಂತೆ ಮಾಡಿ, ಅವರೊಂದಿಗೆ ಜಗಳ ಕಾಯುತ್ತಲೇ ಸ್ವಾರ್ಥಿ ಜೀನ್ ಥರಾ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಂಡೇ ಈಗಲೂ ವಿಕಾಸವಾಗುತ್ತಲೇ ಇದೆ. ವಿಜ್ಞಾನದಲ್ಲಷ್ಟೇ ಸಾಹಿತ್ಯ ಕ್ಷೇತ್ರದಲ್ಲೂ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದ ಗ್ರಂಥಕರ್ತ ಡಾವ್ಕಿನ್ಸ್ ಇಂದಿಗೂ ಜೀವವಿಜ್ಞಾನದ ಚರ್ಚೆಗಳಲ್ಲಿ ಅತ್ಯಂತ ಸಕ್ರಿಯರಾಗಿದ್ದು, ವಿಕಾಸ ವಿಜ್ಞಾನದ ಆಧಾರದಲ್ಲಿ ನಿರೀಶ್ವರವಾದದ ಅತಿ ಪ್ರಮುಖ ವಕ್ತಾರರೆನಿಸಿದ್ದಾರೆ.

'ಸ್ವಾರ್ಥಿ ಜೀನ್'ನ ಅತಿ ಪ್ರಮುಖ ಅಂಶಗಳು ಹೀಗಿವೆ: 1. ಜೀನ್ ದೃಷ್ಟಿಯಲ್ಲಿ ಜೀವಿಯ ಶರೀರವೆಂದರೆ, ತನ್ನನ್ನು ಕಾಪಿಟ್ಟುಕೊಳ್ಳುವ ಒಂದು ಯಂತ್ರ ಅಷ್ಟೆ. ನಾವು–ನೀವೆಲ್ಲ ಅದರ ಅತ್ಯಾಧುನಿಕ ಕಾರು. 2. ಜೀವಿಗಳಲ್ಲಿ ದಯೆ, ಕ್ರೌರ್ಯ, ಪರೋಪಕಾರ ಬುದ್ಧಿಗಳೆಂದರೆ ಮತ್ತೇನಲ್ಲ; ಜೀನ್‌ನ ಬದುಕುಳಿಯುವ ಉಪಾಯವೇ ಆಗಿರುತ್ತದೆ. ವಾಂಪೈರ್ ಬಾವಲಿಗಳು ತಾವು ಹೀರಿ ತಂದ ರಕ್ತವನ್ನು ಹಸಿದ ಬೇರೊಂದು ಬಾವಲಿಯ ಬಾಯಿಗೆ ಉಗುಳುವುದು; ಸಿಂಹಿಣಿಯ ಎಳೆಯ ಮರಿಗಳನ್ನು ಬಲಿಷ್ಠ ಸಿಂಹವೊಂದು ಕೊಂದು ಭಕ್ಷಿಸುವುದು – ಇಂಥವೆಲ್ಲ ಕೃತ್ಯಗಳ ಹಿಂದೆ ಸ್ವಾರ್ಥಿ ಜೀನ್ ಕೆಲಸ ಮಾಡುತ್ತಿರುತ್ತದೆ.

ತನ್ನ ಉಳಿವಿಗಾಗಿ ಇಷ್ಟೆಲ್ಲ, ಏನೆಲ್ಲ ಮಾಡಬಲ್ಲ ಜೀನ್ ಅದೇಕೆ ಪ್ರಾಣಿ ಪ್ರಪಂಚದಲ್ಲಿ ಸಲಿಂಗರತಿಯನ್ನು ಉಳಿಸಿಕೊಂಡಿದೆ? ಮನುಷ್ಯರಲ್ಲಂತೂ ಸಲಿಂಗರತಿ ಅಷ್ಟೇ ಅಲ್ಲ, ಬ್ರಹ್ಮಚರ್ಯೆ–ಸನ್ಯಾಸ ಇವೆಲ್ಲ ಏಕಿವೆ? ಜೀನ್‌ಗಳ ಮಟ್ಟಿಗೆ ಇದು ಆತ್ಮಘಾತುಕ ಅಲ್ಲವೆ? ಡಾವ್ಕಿನ್ಸ್ ವಿವರಣೆಯ ಪ್ರಕಾರ, ಅಂಥ ಕೆಲವು ಜೀವಿಗಳು ತಮ್ಮ ವಂಶೋದ್ಧಾರವನ್ನು ಬದಿಗೊತ್ತಿ ಅದೇ ವಂಶದ ಇತರ ಬಂಧುಗಳಲ್ಲಿನ ಜೀನ್ ಸುಭದ್ರವಾಗಿರುವಂತೆ ನೆರವು, ರಕ್ಷಣೆ ನೀಡುತ್ತವೆ. ವಾನರಗಳಲ್ಲಿ ಬಲಿಷ್ಠನ ಜೀನ್‌ಗಳೇ ಪ್ರಸಾರವಾಗುವಂತೆ ಕೆಲವು ಸದಸ್ಯರು ವಂಶೋದ್ಧಾರದ ಪೈಪೋಟಿಯಿಂದ ದೂರವಿದ್ದು ಆತ್ಮರತಿಯಲ್ಲಿ ತೊಡಗುತ್ತವೆ. ಮನುಷ್ಯನೂ ಸೇರಿದಂತೆ ಉನ್ನತ ಜೀವಿಗಳ ಮಿದುಳಲ್ಲಿ ಜೀನ್‌ಗಳನ್ನೇ ಹೋಲುವ 'ಮೀಮ್'ಗಳು ಕ್ರಿಯಾಶೀಲವಾಗಿರುತ್ತವೆ.

ಶರೀರಕ್ಕೆ ಜೀನ್ ಇದ್ದಂತೆ ಮನಸ್ಸಿಗೆ 'ಮೀಮ್' ಇರುತ್ತದೆ ಎಂಬ ಪರಿಕಲ್ಪನೆ ಡಾವ್ಕಿನ್ಸ್‌ನ 'ಸೆಲ್ಫಿಶ್ ಜೀನ್' ಕೃತಿಯಲ್ಲಿ ಮೊದಲು ಪ್ರಕಟವಾಯಿತು. ಮೀಮ್ ಜೀನ್‌ನ 'ಸಾಂಸ್ಕೃತಿಕ ರೂಪ'ವಾಗಿದ್ದು, ಇದನ್ನು ಯಾವ ಸೂಕ್ಷ್ಮದರ್ಶಕದಲ್ಲೂ ಕಾಣಲು ಸಾಧ್ಯವಿಲ್ಲ. ಇದು ಒಂದು ಮಿದುಳಿನಿಂದ ಇನ್ನೊಂದು ಮಿದುಳಿಗೆ, ಅಲ್ಲಿಂದ ಕೋಟ್ಯಂತರ ಮಿದುಳುಗಳಿಗೆ ಸಾಗುತ್ತ, ವಿಕಾಸವಾಗುತ್ತ ಅಥವಾ ಕೆಲವು ಬಾರಿ ಅಲ್ಲಲ್ಲಿ ನಶಿಸುತ್ತ ಹೋಗುತ್ತದೆ. ಅದೊಂಥರಾ ಮಿದುಳಿನ ವೈರಸ್ ಇದ್ದಂತೆ. ವೈರಸ್‌ಗಳಲ್ಲಿ ಒಳ್ಳೆಯವೂ ಕೆಟ್ಟವೂ ಕ್ಷಣಿಕವೂ ಚಿರಾಯುವೂ ಇರುವ ಹಾಗೆ ಮೀಮ್‌ನಲ್ಲೂ ವೈವಿಧ್ಯಮಯ ರೂಪಗಳಿವೆ.

ಡಾರ್ವಿನಿಯನ್ ವಿಕಾಸವಾದಕ್ಕೆ ಪೂರಕವಾಗಿ ಬಂದ ಮೀಮ್ ಪರಿಕಲ್ಪನೆ 'ಸೆಲ್ಫಿಶ್ ಜೀನ್' ಗ್ರಂಥದ ಅತ್ಯಂತ ಪ್ರಬಲ ಅಧ್ಯಾಯವೆನಿಸಿದೆ. ಈಚಿನ ವರ್ಷಗಳಲ್ಲಿ ಅದು 'ಮೆಮೆಟಿಕ್ಸ್' ಹೆಸರಿನಲ್ಲಿ ಸಮಾಜ ವಿಜ್ಞಾನ ಮತ್ತು ಮನೋವಿಜ್ಞಾನದಲ್ಲೂ ಅನೇಕ ಹೊಸ ಜ್ಞಾನಶಾಖೆಗಳಿಗೆ ಮೂಲ ಆಕರವಾಗಿದೆ. ದೇವರ ಪರಿಕಲ್ಪನೆ, ಧರ್ಮಗಳ ಉಗಮ ಮತ್ತು ವಿಕಾಸ ಅಷ್ಟೇ ಅಲ್ಲ, ಮಾನವ ಕುಲದ ಎಲ್ಲ ಬಗೆಯ ಉತ್ಕರ್ಷ ಮತ್ತು ಅಪಸವ್ಯಗಳನ್ನು ಮೀಮ್‌ಗಳ ಮೂಲಕವೇ ನಿರ್ವಚಿಸಲು ಸಾಧ್ಯವಿದೆ. ಈಗಂತೂ ಅದರಿಂದ ಹೊಮ್ಮಿದ 'ವೈರಲ್' ಎಂಬ ಪದ ಎಲ್ಲ ಭಾಷೆಗಳಲ್ಲೂ ಹಬ್ಬಿದೆ.

ಮೀಮ್‌ಗಳ ಓಡಾಟಕ್ಕೆ ಮಾಧ್ಯಮಗಳು ಬೇಕೇ ಬೇಕು. ಮಗು ಹುಟ್ಟುತ್ತಲೇ ಅಮ್ಮನ ಮಾತಿನ ಮೂಲಕ ಮಾತು, ದೇವರನಾಮ, ಹಾಡುಹಸೆ ಏನೆಲ್ಲವನ್ನೂ ತನ್ನೊಳಗೆ ತುಂಬಿಕೊಳ್ಳುತ್ತ ಬೆಳೆಯುತ್ತದೆ. ಮರಿ ಹುಟ್ಟಿದ ಹೊಸದರಲ್ಲಿ ಅದರ ಕರುಳಿನಲ್ಲಿ ಜೀವಪೋಷಕ ಏಕಾಣುಜೀವಿಗಳು ಬೆಳೆಯಲೆಂದು ತಾಯಿ ಆನೆ ತನ್ನ ಕೊಂಚ ಮಲವನ್ನು ಮರಿಗೆ ತಿನ್ನಿಸುತ್ತದೆ. ಜೀನ್ ವರ್ಗಾವಣೆಯ ಅದೇ ಮಾದರಿಯನ್ನು ಮೀಮ್ ವರ್ಗಾವಣೆಯಲ್ಲೂ ಕಾಣಬಹುದು. ಮುಂದೆ ಮಗು ಬೆಳೆದಂತೆ ಏನೆಲ್ಲ ಬಗೆಯ ಮೀಮ್‌ಗಳನ್ನು ತನ್ನ ತಲೆಯಲ್ಲಿ ತುಂಬಿಕೊಳ್ಳುತ್ತ ಹೋಗುತ್ತದೆ. ಹಿಂದೆಲ್ಲ ಒಂದು ಮಿದುಳಲ್ಲಿ ಜನಿಸಿದ ಐಡಿಯಾ ಇತರರ ತಲೆಯಲ್ಲಿ ಹೋಗಲು ತುಂಬ ಸಮಯ ಬೇಕಾಗುತ್ತಿತ್ತು. ಧರ್ಮಪ್ರಸಾರ, ಧರ್ಮವಿರೋಧಿ ಹಿಂಸಾಕೃತ್ಯ ಇವಕ್ಕೆಲ್ಲ ದಶಕಗಳೇ ಬೇಕಾಗುತ್ತಿತ್ತು. 'ಗಣೇಶ ಹಾಲು ಕುಡಿದ' ಎಂಬ ಸಂಗತಿ 1995ರಲ್ಲಿ ನಾಲ್ಕಾರು ಫೋನ್ ಕಾಲ್‌ಗಳ ಮೂಲಕ ಒಂದರ್ಧ ಗಂಟೆಯಲ್ಲೇ ಇಡೀ ದೇಶಕ್ಕೆ ಹಬ್ಬಿ ಮೂಢನಂಬಿಕೆಯ ಸುನಾಮಿಯನ್ನು ಎಬ್ಬಿಸಿದ್ದೇ ಒಂದು ಪವಾಡವೆನಿಸಿತ್ತು. ಭ್ರಷ್ಟಾಚಾರದ ವಿರುದ್ಧ ಅಣ್ಣಾ ಹಜಾರೆ ಆಂದೋಲನ, ಕ್ರೂರ ಅತ್ಯಾಚಾರಿಗಳ ವಿರುದ್ಧ 'ನಿರ್ಭಯಾ' ಆಂದೋಲನ ಇವೆಲ್ಲವೂ ಇತಿಹಾಸವನ್ನೇ ಸೃಷ್ಟಿಸಿ ಮಾಯವಾಗಿವೆ.

ಈಗ ಜೀನ್ ಮತ್ತು ಮೀಮ್ ಎರಡಕ್ಕೂ ಮಿಂಚಿನ ವೇಗ ಸಿಕ್ಕಿಬಿಟ್ಟಿದೆ; ಅಸಲೀ ವೈರಾಣುಗಳ ಜೀನ್‌ಗಳೇ ಬುಲೆಟ್ ಟ್ರೇನ್ ಮೂಲಕ, ಜೆಟ್ ವಿಮಾನಗಳ ಮೂಲಕ ಹೇಗೆ ಏಕಾಏಕಿ ಜಗತ್ತಿಗೆಲ್ಲ ಪಸರಿಸುತ್ತಿವೆ ಎಂಬುದನ್ನು ನಾವು ಕೋವಿಡ್ ಕಾಲದಲ್ಲಿ ನೋಡಿದೆವು. ಮೀಮ್‌ಗಳಿಗಂತೂ ಈಗ ಸಾಮಾಜಿಕ ಮಾಧ್ಯಮವೇ ಸಿಕ್ಕಿದೆ. ಹೊಸ ಫ್ಯಾಶನ್ನು, ಐಪಿಎಲ್, ಅಂಧಭಕ್ತಿ, ದ್ವೇಷಸಂದೇಶ, ಪರಿಸರ ಪ್ರೇಮ, ವಾಸ್ತುವಿಚಾರ, 'ಕೊಕ್ರೋಚ್ ಜನತಾ ಪಾರ್ಟಿ'ಯಂಥ ಹೊಸ ರಾಜಕೀಯ ಪ್ರಣಾಳಿಕೆ ಏನೆಲ್ಲ ಚಿಮ್ಮಿ ಬರುತ್ತಿವೆ. ಹಿರಿಯರನ್ನು ಹಿಂದಿಕ್ಕಿ ಜೆನ್–ಝೀಗಳೇ ಮೀಮ್‌ಗಳಿಗೆ ಚಾಲನೆ ಕೊಡುತ್ತಿವೆ. ಸಾಲದ್ದಕ್ಕೆ ಹೊಸ ಮೀಮ್‌ಗಳನ್ನು ಸೃಷ್ಟಿಸಿ ಹಂಚುವ ಕೆಲಸವನ್ನು ಎಐಗಳೇ ಮಾಡುತ್ತಿವೆ. ಅಂತೂ ಜಗತ್ತಿನ ಅತ್ಯಂತ ಸಮೃದ್ಧ ಸಂಪತ್ತು ಎನ್ನಿಸಿದ ಮನುಷ್ಯನ ಮಿದುಳಿನಲ್ಲಿ ಜಾಗ ಗಿಟ್ಟಿಸಲು ಮೀಮ್‌ಗಳ ತಾಂಡವವೇ ನಡೆಯುತ್ತಿದೆ.

ಈ ಮಧ್ಯೆ ಜೀನ್‌ಗಳ ಗತಿಯೇನು? ಅವಕ್ಕೂ ಭಲೇ ಸಂಕಟ ಒದಗಿದಂತಿದೆ. ಎಂದೋ ಕಣ್ಮರೆಯಾದ ಜೀವಿಗಳಿಗೆ ಮರುಜೀವ ಕೊಡುತ್ತಿದ್ದಾರೆ. ಕ್ರಿಸ್‌ಪಾರ್ ಕತ್ತರಿಯನ್ನು ಹಿಡಿದು ಮನುಷ್ಯನ ಜೀನ್‌ಗಳನ್ನೇ ಎಡಿಟ್ ಮಾಡಲು ಜೀವವಿಜ್ಞಾನಿಗಳು ಕೂತಿದ್ದಾರೆ. ಅದೂ ಸ್ವಾರ್ಥಿ ಜೀನ್‌ನ ಕೈವಾಡವೆ?

ವಾಚಕರ ವಾಣಿ

ಬಸ್‌ಪಾಸ್ ಇದೆ; ಬಸ್‌ಗಳ ಸುಳಿವೇ ಇಲ್ಲ

ರಾಜ್ಯ ಸರ್ಕಾರವು ಎಲ್ಲ ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಉಚಿತವಾಗಿ ಬಸ್‌ಪಾಸ್ ಸೌಲಭ್ಯ ಘೋಷಿಸಿರುವುದು ಸರಿಯಷ್ಟೇ. ಈ ಯೋಜನೆಗೆ ಪೂರಕವಾಗಿ ಬಸ್ ಸಂಪರ್ಕ ಹೆಚ್ಚಿಸುವುದೂ ಸರ್ಕಾರದ ಆದ್ಯತೆಯಾಗಬೇಕಿದೆ. ಇಂದಿಗೂ ಬಹಳಷ್ಟು ಗ್ರಾಮೀಣ ಹಾಗೂ ಅರೆಪಟ್ಟಣ ಪ್ರದೇಶಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ಸಂಚರಿಸುತ್ತಿಲ್ಲ. ಹೀಗಿದ್ದಾಗ ಉಚಿತ ಬಸ್‌ಪಾಸ್ ಸೌಲಭ್ಯವನ್ನು ಪಡೆಯುವುದಾದರೂ ಹೇಗೆ? ಹೊಸ ಮಾರ್ಗಗಳಿಗೆ ಬಸ್‌ಗಳ ನಿಯೋಜನೆ ಮತ್ತು ವಿದ್ಯಾರ್ಥಿಗಳಿಗೆ ಹೆಚ್ಚಿನ ಬಸ್ ಸೌಕರ್ಯ ಒದಗಿಸುವಂತೆ ಡಿಪೊ ವ್ಯವಸ್ಥಾಪಕರಿಗೆ ಕೋರಿದರೆ ಬಸ್‌ಗಳು ಹಾಗೂ ಸಿಬ್ಬಂದಿ ಕೊರತೆಯನ್ನು ಮುಂದಿಡುತ್ತಾರೆ. 'ಶಕ್ತಿ' ಯೋಜನೆ ಜಾರಿಯಲ್ಲಿ ಇರುವುದರಿಂದ ಹೆಚ್ಚು ಬಸ್‌ಗಳ ಸಂಚಾರಕ್ಕೆ ಒತ್ತು ನೀಡಬೇಕಿದೆ. ಇದಕ್ಕೆ ಪೂರಕವಾಗಿ ಅಗತ್ಯ ಸಿಬ್ಬಂದಿ ನೇಮಿಸಿದರೆ ಯೋಜನೆಗಳು ಸಾಫಲ್ಯ ಕಾಣುತ್ತವೆ.

ಎಸ್.ಎಂ. ಚಂದ್ರಮೌಳಿ ಸ್ವಾಮಿ, ಕೂಡ್ಲಿಗಿ

ರೈಲ್ವೆ ಯೋಜನೆ: ಹಳಿ ತಪ್ಪಿದ ಸಮನ್ವಯ

ಕರ್ನಾಟಕದಲ್ಲಿ ಭೂಸ್ವಾಧೀನ ಸಮಸ್ಯೆ, ಅರಣ್ಯ ಇಲಾಖೆಯ ಅನುಮತಿ ಮತ್ತು ಸಮನ್ವಯದ ಕೊರತೆಯಿಂದಾಗಿ ಹಲವು ರೈಲ್ವೆ ಯೋಜನೆಗಳು ನನೆಗುದಿಗೆ ಬಿದ್ದಿವೆ. ಬಾಕಿ ಇರುವ ಮತ್ತು ಪ್ರಗತಿಯಲ್ಲಿರುವ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಕೇಂದ್ರ ಸರ್ಕಾರವು ವಿಶೇಷ ಪ್ಯಾಕೇಜ್ ಘೋಷಿಸಬೇಕಿದೆ. ರೈಲ್ವೆ ಸಚಿವಾಲಯ ಮತ್ತು ರಾಜ್ಯ ಸರ್ಕಾರದ ನಡುವೆ ಸಮನ್ವಯ ಸಾಧಿಸಲು ಹಾಗೂ ಆಡಳಿತಾತ್ಮಕ ಅಡೆತಡೆ ನಿವಾರಿಸಲು ವಿಶೇಷ ನೋಡಲ್ ಅಧಿಕಾರಿಯನ್ನು ನೇಮಿಸಬೇಕಿದೆ. ಉತ್ತರ ಕರ್ನಾಟಕದ ದೀರ್ಘಕಾಲದ ಬೇಡಿಕೆಯಾದ ಶೇಡಬಾಳ-ಅಥಣಿ-ವಿಜಯಪುರ ರೈಲ್ವೆ ಮಾರ್ಗಕ್ಕೆ 'ಪಿಎಂ ಗತಿಶಕ್ತಿ' ಯೋಜನೆಯಡಿ ಮಂಜೂರಾತಿ ನೀಡಿ ಅನುಷ್ಠಾನಗೊಳಿಸಬೇಕು. ಈ ಭಾಗದ ಪ್ರಯಾಣಿಕರಿಗೆ, ಕೃಷಿ ಮತ್ತು ವ್ಯಾಪಾರದ ಅಭಿವೃದ್ಧಿಗೆ ಈ ಮಾರ್ಗ ಜೀವಾಳವಾಗಲಿದೆ.

ಎ.ಎಸ್. ನಿಂಬಾಳಕರ, ಅಥಣಿ

ಸರ್ಕಾರಿ ಶಾಲೆ ಅಪಥ್ಯ ಆಗುವುದೇಕೆ?

ಸರ್ಕಾರಿ ಶಾಲೆಗಳಲ್ಲಿ ವರ್ಷದಿಂದ ವರ್ಷಕ್ಕೆ ಮಕ್ಕಳ ದಾಖಲಾತಿ ಕಡಿಮೆಯಾಗುತ್ತಿದೆ. ಶಾಲೆಗಳ ಉಳಿವಿಗಾಗಿ ರಾಜ್ಯ ಸರ್ಕಾರ, ಶಿಕ್ಷಣ ಇಲಾಖೆ ಮತ್ತು ಶಿಕ್ಷಕರು ಹರಸಾಹಸಪಡುತ್ತಿದ್ದಾರೆ. ಆದರೆ, ಸರ್ಕಾರಿ ಶಾಲೆಗಳನ್ನು ಉಳಿಸಿ ಎನ್ನುವ ಜನಪ್ರತಿನಿಧಿಗಳು ಮತ್ತು ಸರ್ಕಾರಿ ನೌಕರರು ತಮ್ಮ ಮಕ್ಕಳನ್ನು ಪ್ರತಿಷ್ಠಿತ ಖಾಸಗಿ ಶಾಲೆಗಳಿಗೆ ಸೇರಿಸಿ ಓದಿಸುತ್ತಿದ್ದಾರೆ. ಹಾಗಿದ್ದರೆ, ಬಡವರ ಮಕ್ಕಳಿಗಷ್ಟೇ ಈ ಶಾಲೆಗಳು ಬೇಕೇ ಎಂಬ ಪ್ರಶ್ನೆ ಸಹಜ. ಜನಪ್ರತಿನಿಧಿಗಳು ಹಾಗೂ ನೌಕರರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಲ್ಲಿ ಓದಿಸುವ ವಾತಾವರಣ ಸೃಷ್ಟಿಸಬೇಕಿದೆ. ಆಗಷ್ಟೇ ಶಾಲೆಗಳು ಬಲಗೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಸರ್ಕಾರ ಹೊಸ ನಿಯಮಾವಳಿಯನ್ನು ರೂಪಿಸುವ ಅಗತ್ಯವಿದೆ.

ಮಹೇಶ ಅಶೋಕ ಶಿಂಗೆ, ಇಂಗಳಿ

ಬೊಗಸೆ ತುಂಬಾ ಸಿಹಿ–ಕಹಿಯ ಸಮ್ಮಿಲನ

ಮಂಡ್ಯದ ವ್ಯಾಪಾರ ವಹಿವಾಟು ದಿನೇ ದಿನೇ ಕುಸಿಯುತ್ತಿದೆ. ಹೆಸರಿಗೆ ಮಾತ್ರ 'ಸಕ್ಕರೆ ನಗರ'; ವ್ಯಾಪಾರ ವಹಿವಾಟು ಬರೀ ಕಹಿ. ವ್ಯಾಪಾರಸ್ಥರ ಗೋಳನ್ನು ಕೇಳುವವರೇ ಇಲ್ಲದಂತಾಗಿದೆ. ಎರಡು ದಿಕ್ಕುಗಳಿಗೂ ಮಹಾನಗರಗಳಾದ ಬೆಂಗಳೂರು ಮತ್ತು ಮೈಸೂರು ಇವೆ. 'ಶಕ್ತಿ' ಯೋಜನೆಯಿಂದಾಗಿ ಮಹಿಳೆಯರು ಸ್ಥಳೀಯವಾಗಿ ಖರೀದಿಸುವುದು ಕಡಿಮೆಯಾಗಿದೆ. ಮಂಡ್ಯ ಸಕ್ಕರೆ ಕಾರ್ಖಾನೆಯು ತುಕ್ಕು ಹಿಡಿಯುತ್ತಿದೆ. ಇಲ್ಲಿನ ಹೃದಯಭಾಗದಲ್ಲಿದ್ದ ಹಳೆಯ ಮಾರುಕಟ್ಟೆಯು ಹೊಸದಾಗಿ ನಿರ್ಮಾಣಗೊಂಡು ವರ್ಷವೇ ಕಳೆದರೂ ರಾಜಕೀಯ ಕಿತ್ತಾಟದಿಂದಾಗಿ ಇನ್ನೂ ಉದ್ಘಾಟನೆಯಾಗಿಲ್ಲ. ಇದರಿಂದ ವ್ಯಾಪಾರಸ್ಥರ ಬದುಕಿಗೆ ಬರೆ ಬಿದ್ದಿದೆ. ಗಾಯದ ಮೇಲೆ ಹೀಗೆ ಒಂದೊಂದೇ ಬರೆಗಳು ಬೀಳುತ್ತಿದ್ದರೆ ಬದುಕುವುದಾದರೂ ಹೇಗೆ? ಸರ್ಕಾರ ಈ ಸಮಸ್ಯೆಗೆ ಪರಿಹಾರ ಹುಡುಕಬೇಕಿದೆ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಯಾಕಾಗಿ, ಯಾರಿಗಾಗಿ ಸ್ಮಾರ್ಟ್ ಕಾರ್ಡ್?

ರಾಜ್ಯ ಸರ್ಕಾರವು 'ಶಕ್ತಿ' ಯೋಜನೆಯಡಿ ಮಹಿಳೆಯರಿಗೆ ಆಧಾರ್ ಕಾರ್ಡ್ ಮೂಲಕ ಉಚಿತ ಬಸ್ ಪ್ರಯಾಣಕ್ಕೆ ಅನುವು ಮಾಡಿಕೊಟ್ಟಿದೆ. ಈಗೇಕೆ ಸ್ಮಾರ್ಟ್ ಕಾರ್ಡ್‌ನ ಸೊಲ್ಲೆತ್ತುತ್ತಿದೆ? ರಾಜ್ಯದ ಮಹಿಳೆಯರು ಎಂದು ಸಾಬೀತುಪಡಿಸಲು ಆಧಾರ್ ಕಾರ್ಡ್ ಒಂದೇ ಸಾಕಾಗದೆ? ಇಲ್ಲಿ ಶಕ್ತಿ ಕುಂದಿರುವುದು ಆಧಾರ್ ಕಾರ್ಡ್‌ನದೋ ಅಥವಾ ಗ್ಯಾರಂಟಿ ಯೋಜನೆಯದೋ ಎಂಬುದು ತಿಳಿಯದಾಗಿದೆ. ಸ್ಮಾರ್ಟ್ ಕಾರ್ಡ್ ನೀಡುವ ಯೋಜನೆಯು ಜನರ ತೆರಿಗೆ ಹಣದ ದುರುಪಯೋಗವಲ್ಲದೆ ಬೇರೇನಲ್ಲ. ಈ ಕಾರ್ಡ್ ಪಡೆಯಲು ಲಕ್ಷಾಂತರ ಬಡ ಮಹಿಳಾ ಕೂಲಿ ಕಾರ್ಮಿಕರು ದುಡಿಮೆ ಬಿಟ್ಟು ಅಲೆಯುವ ಸ್ಥಿತಿ ತಲೆದೋರಲಿದೆ.

ನಿರ್ಮಲಾ ಎಚ್.ಎಲ್., ಬೆಂಗಳೂರು

ಮೌನ ಮುರಿದು ದೇಶ ಕಟ್ಟುವುದೇ ಸವಾಲು

'ಒಳಗಿನ ಬುದ್ಧ ಎಚ್ಚರಗೊಂಡಾನೆ?' ಲೇಖನವು (ಲೇ: ಜ್ಯೋತಿ, ಪ್ರ.ವಾ., ಜೂನ್ 8) ಭೂತ, ವರ್ತಮಾನ ಮತ್ತು ಭವಿಷ್ಯದ ಬಗ್ಗೆ ಗಾಢವಾಗಿ ಆಲೋಚಿಸುವಂತೆ ಮಾಡುವ ಬರಹ. ವೈಯಕ್ತಿಕ ಪ್ರಗತಿಯಷ್ಟೇ ಸಮಾಜದ ಪ್ರಗತಿಯೂ ಮುಖ್ಯ. ಇದಕ್ಕೆ ನೈತಿಕತೆ ಅಗತ್ಯ. ಇದೇ ಮೂಲಭೂತ ತತ್ತ್ವ. ನಮ್ಮ ಆಕ್ರೋಶ–ಸಿಟ್ಟು ಬಹಳಷ್ಟು ಸಂದರ್ಭಗಳಲ್ಲಿ ಸಾಂದರ್ಭಿಕ, ತಾತ್ಕಾಲಿಕ. ಲಾಭದ ದೃಷ್ಟಿಯಿಂದ ವ್ಯವಸ್ಥೆಯನ್ನು ನೋಡಬಾರದು. ಆದರೆ, ನಾವಿಂದು ಪರಿಸರ ನಾಶ ಮಾಡುತ್ತಿದ್ದೇವೆ. ಸಾಮಾಜಿಕ ಮಾಧ್ಯಮ, ಮೊಬೈಲ್ ಮೂಲಕ ನಿರಂತರವಾಗಿ ಮನರಂಜನೆ ಪಡೆಯುವ ಮೂಲಕ ಸ್ವಹಿತಾಸಕ್ತಿಗೆ ಆದ್ಯತೆ ನೀಡಿ ಸಾಮಾಜಿಕ ಹಿತಾಸಕ್ತಿಯನ್ನು ಕಡೆಗಣಿಸುತ್ತಿದ್ದೇವೆ. ಆಧುನಿಕ ತಂತ್ರಜ್ಞಾನದ ಫಲವಿದು. ಭವಿಷ್ಯ ಬಲಿಯಾಗುವ ಮುನ್ನ ಎಲ್ಲಾ ಕ್ಷೇತ್ರದ ಜನರು ತಮ್ಮೊಳಗಿನ ಮೌನವನ್ನು ಮುರಿದು ಸದೃಢ ಸಮಾಜ ಕಟ್ಟಲು ಮುಂದಾಗಬೇಕಿದೆ.

ಅದಲಗೆರೆ ನಾಗೇಂದ್ರಕುಮಾರ್, ತುಮಕೂರು

ಚಾಟಿ

ಸರ್ಕಾರಕ್ಕೆ ಆರ್ಥಿಕ ಸಂಕಷ್ಟ

ಕುಟುಂಬವು ಆರ್ಥಿಕವಾಗಿ ಸಂಕಷ್ಟಕ್ಕೆ ಒಳಗಾದಾಗಷ್ಟೇ ಮನೆಯಲ್ಲಿರುವ ಬೆಳ್ಳಿ, ಬಂಗಾರ ಮಾರುತ್ತದೆ ಅಥವಾ ಅಡವಿಡುತ್ತದೆ. ಕೇಂದ್ರ ಸರ್ಕಾರದ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿರುವುದರಿಂದ ಅದು ತನ್ನ ಒಡೆತನದಲ್ಲಿನ ಉದ್ದಿಮೆಗಳ ಷೇರು ಮಾರಲು ಮುಂದಾಗಿದೆ.

ಸುರೇಂದ್ರ ರಾವ್ ಟಿ., ಸಾಮಾಜಿಕ ಕಾರ್ಯಕರ್ತ 'ಫೇಸ್‌ಬುಕ್'ನಿಂದ

ಕಿಡಿನುಡಿ

ಭಾರತದ ಪ್ರಜಾಪ್ರಭುತ್ವವನ್ನು ಹಾಳುಗೆಡಹುವ ಮೂಲಕ ದೀರ್ಘಾವಧಿ ಪ್ರಧಾನಿಯಾಗಿ ಮುಂದುವರಿದಿರುವ ನರೇಂದ್ರ ಮೋದಿ ಅವರ ಸಾಧನೆಯ ಬಗ್ಗೆ ಬಿಜೆಪಿ ಸಂಭ್ರಮಿಸುತ್ತಿರುವುದು ಪ್ರಜಾಪ್ರಭುತ್ವ ವಿರುದ್ಧದ ಅತಿದೊಡ್ಡ ಅಣಕವಾಗಿದೆ.

ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಸೋಮವಾರ, 11-6-2001

• ಬೆಂಗಳೂರು ನಗರ ಮೆಟ್ರೊ ರೈಲು ಸಮೀಕ್ಷಾ ವರದಿ ಸಿದ್ಧ

ಬೆಂಗಳೂರು, ಜೂನ್ 10– ಬೆಂಗಳೂರು ನಗರದ ಸಂಚಾರ ಒತ್ತಡ ಹಾಗೂ ವಾಯುಮಾಲಿನ್ಯವನ್ನು ಕಡಿಮೆ ಮಾಡಲು ರೂ. 900 ಕೋಟಿಗಳ ಮೆಟ್ರೊ ರೈಲು ಯೋಜನೆಯ ಸಮೀಕ್ಷಾ ವರದಿ ಸಿದ್ಧವಿದ್ದು, ಇದನ್ನು ರಾಜ್ಯ ಸರ್ಕಾರ, ರೈಲ್ವೆ ಇಲಾಖೆ ಹಾಗೂ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆ ಜಂಟಿಯಾಗಿ ಕಾರ್ಯಗತ ಮಾಡಬೇಕಾಗಿದೆ.

ತೀವ್ರವಾಗಿ ಹೆಚ್ಚುತ್ತಿರುವ ಸಂಚಾರ ಒತ್ತಡದ ಹಿನ್ನೆಲೆಯಲ್ಲಿ ಮೆಟ್ರೊ ರೈಲಿನ ನಿರ್ಮಾಣದ ಅಗತ್ಯ ಬಹಳ ಹೆಚ್ಚಾಗಿದೆ ಎಂದು ಕೇಂದ್ರ ಪ್ರವಾಸೋದ್ಯಮ ಹಾಗೂ ಸಂಸ್ಕೃತಿ ಸಚಿವ ಅನಂತಕುಮಾರ್ ಅವರು ಇಂದು ಇಲ್ಲಿ ಹೇಳಿದರು.

• ಎನ್‌ಡಿಎಗೆ ವಾಪಸಾತಿ ಆಯ್ಕೆ ಮುಕ್ತ: ಮಮತಾ

ಕೋಲ್ಕತ್ತ, ಜೂನ್ 10 (ಪಿಟಿಐ)– ಎನ್‌ಡಿಎಗೆ ತಮ್ಮ ಪಕ್ಷ ವಾಪಸಾಗುವ ವಿಚಾರದ ಬಗೆಗಿನ ಆಯ್ಕೆಗಳನ್ನು ತಾವು ಮುಕ್ತವಾಗಿರಿಸಿಕೊಂಡಿರುವುದಾಗಿ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಇಂದು ರಾತ್ರಿ ಇಂಗಿತ ವ್ಯಕ್ತಪಡಿಸಿದ್ದಾರೆ.

ಅಂತಹ ಸಾಧ್ಯತೆಯನ್ನು ತಾವು ಅಲ್ಲಗಳೆಯುವುದೂ ಇಲ್ಲ ಅಥವಾ ದೃಢಪಡಿಸುವುದೂ ಇಲ್ಲ ಎಂದೂ ಮಮತಾ ಸುದ್ದಿಗಾರರಿಗೆ ತಿಳಿಸಿದರು. 'ವಿಚಾರವೊಂದರ ಆಧಾರದ ಮೇಲೆ ಎನ್‌ಡಿಎ ತೊರೆಯುವ ನಿರ್ಧಾರವನ್ನು ಸರ್ವಾನುಮತದಿಂದ ಕೈಗೊಳ್ಳಲಾಯಿತು' ಎಂದೂ ಅವರು ಸ್ಪಷ್ಟಪಡಿಸಿದರು.

75 ವರ್ಷಗಳ ಹಿಂದೆ

ಸೋಮವಾರ, 11-6-1951

• ಹೈದ್ರಾಬಾದಿನ 5 ಲಕ್ಷ ಗೇಣಿದಾರರಿಗೆ ಭೂಮಿ ಸ್ವಾಮಿತ್ವ

ಹೈದರಾಬಾದ್, ಜೂ. 10– ಹೈದರಾಬಾದ್ ಸಂಸ್ಥಾನದ 1950ರ ಭೂ ಗೇಣಿದಾರ ಮತ್ತು ವ್ಯವಸಾಯ ಭೂ ಶಾಸನದ ಪ್ರಕಾರ ಭೂಮಾಲೀಕರುಗಳಿಗೆ ಸದರಿ ಭೂಮಿಯ ವಾರ್ಷಿಕ ಉತ್ಪನ್ನದ ಮೂರರಷ್ಟು ಬೆಲೆಯನ್ನು ಕೊಡುವುದರ ಮೂಲಕ ಹೈದರಾಬಾದಿನ ಐದು ಲಕ್ಷ ಮಂದಿ ಭೂ ಗೇಣಿದಾರರುಗಳು ಅವರು ವ್ಯವಸಾಯ ಮಾಡುತ್ತಿದ್ದ ಭೂಮಿಯ ನೈಜ ಒಡೆಯರಾದರು.

ಚುರುಮುರಿ

ಅರ್ಧ ಕಚ್ಚಿದ ಆ್ಯಪಲ್ಲು!

• ಗುರು ಪಿ.ಎಸ್.

'ನೋಡ್ರಿ ಇಲ್ಲಿ... ನಮ್ಮ ಸಿಎಂ ಸಾಹೇಬ್ರು, ಸೇಬನ್ನು ಸ್ವಲ್ಪ ಕಚ್ಚಿ, ಉಳಿದಿದ್ದನ್ನ ಜನರತ್ತ ಎಸೆದರಂತೆ' ಪೇಪರ್ ಓದುತ್ತಾ ಹೇಳಿದಳು ಹೆಂಡತಿ.

'ಮುಖ್ಯಮಂತ್ರಿಯಾದ ಮೇಲೆ ಮೊದಲ ಬಾರಿಗೆ ಹುಟ್ಟೂರಿಗೆ ಹೋಗಿದ್ದಾರೆ, ಏನೋ ಅಭಿಮಾನಿಗಳ ಮೇಲಿನ ಪ್ರೀತಿಗೆ ಎಸೆದಿರಬಹುದು ಬಿಡು' ಎಂದೆ.

'ಆ ಅರ್ಧ ಕಚ್ಚಿದ ಸೇಬು ಸಿಕ್ಕವರು ಅದನ್ನ ಹೆಂಗೆಂಗೆ ವ್ಯಾಖ್ಯಾನಿಸಬಹುದು ಅಂತ ಕುತೂಹಲ ಇದೆ ರೀ ನಂಗೆ'.

'ಒಳ್ಳೆ ಕ್ಯೂರ್ಯಾಸಿಟಿ ನಿಂದು, ನೀ ಕೇಳ್ತಾ ಹೋಗು, ನನ್ನ ಕಲ್ಪನಾಶಕ್ತಿಯನ್ನೆಲ್ಲ ಬಳಸಿಕೊಂಡು ನಾನು ಹೇಳ್ತಾ ಹೋಗ್ತೀನಿ...'

'ಮೊದಲಿಗೆ, ಕನಕಪುರದ ಜನ ಏನ್ ಹೇಳಬಹುದು?'

'ಇದು ಅರ್ಧ ತಿಂದ ಸೇಬಲ್ಲ, ಆ್ಯಪಲ್ ಕಂಪನಿ ಲೋಗೊ! ಮುಂದೆ ಕನಕಪುರದಲ್ಲಿ ಐಫೋನ್ ಕಂಪನಿ ಯುನಿಟ್ ಓಪನ್ ಆಗೋ ಸೂಚನೆ ಇದು ಅನ್ನಬಹುದು!'

'ಬೆಂಗಳೂರು ಡೆವಲಪ್ಮೆಂಟ್ ಖಾತೆಯ ಈಗಿನ ಮಿನಿಸ್ಟರ್‌ಗೆ ಈ ಸೇಬು ಸಿಕ್ಕರೆ ಏನ್ ಹೇಳಬಹುದು?'

'ಇದೇನಿದು, ಬಿಡಿಎ, ಬಿಎಂಆರ್‌ಡಿಎ ಇಲ್ಲದ ಬೆಂಗಳೂರು ಅಭಿವೃದ್ಧಿ ಖಾತೆ ಇದ್ದಂಗಿದೆಯಲ್ಲ ಅಂತ ಗೊಣಗಬಹುದು'.

'ಧಾರ್ಮಿಕ ವ್ಯಕ್ತಿಯೊಬ್ಬರು ಈ ಬಗ್ಗೆ ಏನನ್ನಬಹುದು?'

'ಸಾಕ್ಷಾತ್ ಶಿವನ ಅವತಾರದ ಮುಖ್ಯಮಂತ್ರಿ ತಿಂದು ಬಿಟ್ಟಿರುವ ಹಣ್ಣು ಇದಾಗಿರುವುದರಿಂದ ಇದು ಶಿವನ ಪ್ರಸಾದಕ್ಕೆ ಸಮ ಎನ್ನಬಹುದು'.

'ಸೈಂಟಿಸ್ಟ್ ನ್ಯೂಟನ್ ಅವರು ಈ ದೃಶ್ಯ ನೋಡಿದ್ರೆ ಏನ್ ಹೇಳ್ತಿದ್ದಿರಬಹುದು?'

'ಮೇಲಿನಿಂದ ನೇರವಾಗಿ ಕೆಳಗೆ ಬೀಳುವ ಸೇಬು, ಕೆಳಗಿನಿಂದ ಮೇಲೇರಿದವರ ಕೈಗೆ ಸಿಕ್ಕಾಗ ಎದುರು ದಿಕ್ಕಿನಲ್ಲಿ ರಭಸವಾಗಿ ಸಾಗುತ್ತದೆ ಅಂತ ಹೊಸ ನಿಯಮವನ್ನೇ ಬರೀತಿದ್ರು' ಎಂದು ನಕ್ಕೆ.

'ನೀವೋ, ನಿಮ್ಮ ಕಲ್ಪನೆಗಳೋ' ಎನ್ನುತ್ತಾ ಹಣೆ ಚಚ್ಚಿಕೊಂಡಳು.

'ಇದನ್ನೆಲ್ಲ ನೋಡಿ ನಿನಗೇನೂ ನೆನಪಾಗಲಿಲ್ವ' ಎಂದೆ.

'ಸಂಕಷ್ಟದಲ್ಲಿದ್ದ ಸಂತ್ರಸ್ತರತ್ತ ಬಿಸ್ಕತ್ ಎಸೆದವರ ಈಗಿನ ಸ್ಥಿತಿ ಏನಾಗಿದೆ ಅಂತ ನೆನಸ್ಕೊಂಡೆ' ಎಂದಳು ಗಂಭೀರವಾಗಿ.

ಸಂಗತ

ಕುಂದುಕೊರತೆ: ಪ್ರತ್ಯೇಕ ಸಚಿವಾಲಯ ಬೇಕೆ?

ಸ್ಥಳೀಯ ಆಡಳಿತದೊಂದಿಗೆ ಜಿಲ್ಲಾಡಳಿತವೂ ಎಚ್ಚರಗೊಂಡರೆ, ರಾಜಧಾನಿಯಲ್ಲಿ ಕುಂದುಕೊರತೆ ನಿರ್ವಹಣೆಗೆ ಪ್ರತ್ಯೇಕ ಸಚಿವಾಲಯದ ಅಗತ್ಯವೇ ಬೀಳಲಾರದು.

• ದಾಸನೂರು ಕೂಸಣ್ಣ

ನೂತನ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಸಾರ್ವಜನಿಕರ ಕುಂದುಕೊರತೆಗಳ ನಿವಾರಣೆಗೆ ಪ್ರತ್ಯೇಕ ಸಚಿವಾಲಯದ ಅಗತ್ಯ ಪ್ರತಿಪಾದಿಸಿದ್ದಾರೆ. ಸಾರ್ವಜನಿಕ ಆಡಳಿತ ನಿಂತ ನೀರಲ್ಲ. ಅದು ನಿರಂತರ ಬದಲಾವಣೆ ಹೊಂದುತ್ತಿರುತ್ತದೆ ಮತ್ತು ಚಲನಶೀಲವಾಗಿದ್ದು ಆಡಳಿತಾಂಗಗಳನ್ನು ಸದಾ ಸದೃಢವಾಗಿ ಕಟ್ಟುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರ ಚಿಂತನೆಗೆ ಮಹತ್ವವಿದೆ.

ಆದರೆ, ಸಾರ್ವಜನಿಕರ ಬಹುತೇಕ ಕುಂದುಕೊರತೆಗಳು ಈಗಾಗಲೇ ಇರುವ ಇಲಾಖೆಗಳಿಂದಾಚೆಗೆ ಪ್ರತ್ಯೇಕವಾಗಿರುವುದಿಲ್ಲ. ಅವುಗಳು ಸಾಮಾನ್ಯವಾಗಿ ಯಾವುದಾದರೊಂದು ಇಲಾಖೆಯ ವಿಷಯವಾಗಿಯೇ ಇರುತ್ತವೆ. ಹಾಗಾಗಿ, ಹೊಸ ಸಚಿವಾಲಯದ ಅಗತ್ಯದ ಬಗ್ಗೆ ಪ್ರಶ್ನೆ ಎದುರಾಗುತ್ತದೆ.

ಇಂದಿನ ಸಾರ್ವಜನಿಕ ಆಡಳಿತ ಶ್ರೇಣೀಕೃತ ಮಾದರಿಯಲ್ಲಿದೆ. ಶ್ರೇಣೀಕೃತ ತತ್ತ್ವದಲ್ಲಿ ಆಜ್ಞೆಗಳು ಲಂಬಾಕಾರವಾಗಿ ಚಲಿಸಿ, ತಳಹಂತಕ್ಕೆ ಪಸರಿಸುತ್ತವೆ. ಹಾಗಾಗಿ, ಸಕ್ಷಮ ಪ್ರಾಧಿಕಾರ ಮತ್ತು ಅದರ ಹೊಣೆಗಾರಿಕೆಗಳು ಅನುಕ್ರಮವಾಗಿ ಉನ್ನತ ವರಿಷ್ಠಾಧಿಕಾರಿಯ ಮೂಲಕ ಹಾದು, ಕಟ್ಟಕಡೆಯ ನೌಕರನೂ ಅವುಗಳ ಅನುಪಾಲಕನಾಗಿರುತ್ತಾನೆ. ಈ ಸರಪಳಿಯಲ್ಲಿ ಅಧಿಕಾರ ವಿಭಜನೆಯು ಅವರವರ ಹುದ್ದೆಗಳಿಗೆ ತಕ್ಕಂತೆ ಧಾರಣವಾಗಿರುತ್ತದೆ. ಅನುಪಾಲನೆಯನ್ನು ಯಾರೂ ಮುರಿಯುವಂತಿಲ್ಲ. ಪ್ರತಿ ನಾಗರಿಕನೂ ಇಂಥವರ ಮೂಲಕವೇ ಸೇವೆ ಸ್ವೀಕರಿಸಬೇಕೆಂಬ ನಿಯಮಗಳು ಶ್ರೇಣಿ ಆಡಳಿತ ತತ್ತ್ವಗಳಲ್ಲಿವೆ. ನೂತನ ಮುಖ್ಯಮಂತ್ರಿಯವರು ಜನಸ್ಪಂದನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ ಎಂದುಕೊಂಡರೆ, ನಾಗರಿಕರು ಅಲ್ಲಿಗೆ ಹೊತ್ತುತರುವ ಸಮಸ್ಯೆಗಳೆಲ್ಲವೂ ಯಾವುದಾದರೊಂದು ಇಲಾಖೆಗೆ ಸಂಬಂಧಿಸಿರುವಂತಹವೇ ಆಗಿರುತ್ತವೆ. ಇಂತಹ ಸಮಸ್ಯೆಗಳು ಗ್ರಾಮ ಅಥವಾ ವಾರ್ಡ್‌ಗಳನ್ನು ದಾಟಿ ವಿಧಾನಸೌಧಕ್ಕೆ ಬಂದಿವೆ ಎಂದರೆ, ಸ್ಥಾನಿಕ ಆಡಳಿತಗಳಿಂದ ಪರಿಹಾರ ಸಿಕ್ಕಿಲ್ಲ ಎಂದರ್ಥ. ಅಥವಾ ಆ ಸಮಸ್ಯೆಗಳು ಸರ್ಕಾರದ ಮಧ್ಯ ಪ್ರವೇಶ ಬೇಡುತ್ತಿರುತ್ತವೆ.

ಗ್ರಾಮಾಡಳಿತ ಅತಿಮುಖ್ಯ. ಅಲ್ಲಿ ಶಿಕ್ಷಣ, ಪೊಲೀಸ್, ಕಂದಾಯ, ಕೃಷಿ, ಗ್ರಾಮೀಣಾಭಿವೃದ್ಧಿ, ಅರಣ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ದುರ್ಬಲರ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಾರ್ಯಕ್ರಮಗಳು ಪ್ರಾಮಾಣಿಕವಾಗಿ ಅನುಷ್ಠಾನಗೊಂಡಾಗ ಸಮಸ್ಯೆಗಳ ಮಹಾಪೂರ ರಾಜಧಾನಿಗೆ ಬರುವುದಿಲ್ಲ. ಸಚಿವರ ಕಚೇರಿಗೆ ಸ್ವೀಕೃತವಾಗುವ ಅಹವಾಲುಗಳನ್ನು ಸರಿಯಾಗಿ ವಿಂಗಡಿಸಿದಾಗ, ಆಯಾ ಇಲಾಖೆಯಲ್ಲಿರುವ ಜಡತ್ವ ಬೆಳಕಿಗೆ ಬರುತ್ತದೆ.



ರಾಜ್ಯ ಸರ್ಕಾರ ಈಗಾಗಲೇ ಆಡಳಿತದಲ್ಲಿ ಪ್ರಯೋಗಶೀಲತೆ ಮತ್ತು ಮಾಹಿತಿ ತಂತ್ರಜ್ಞಾನವನ್ನು ವ್ಯಾಪಕವಾಗಿ ಅಳವಡಿಸಿಕೊಂಡಿದೆ. ಆದರೂ, ಕಾರ್ಯಕ್ರಮಗಳ ಅನುಷ್ಠಾನ, ಫಲಶ್ರುತಿ ವಿಲೇವಾರಿಯಲ್ಲಿ ಏರುಪೇರಾಗುತ್ತಿದೆ. ಸರ್ಕಾರದ ಅಂಕಿ–ಅಂಶಗಳ ಪ್ರಗತಿಯ ನೆರಳಿನಡಿಯಲ್ಲಿ ಅದರ ಪ್ರಯೋಜನವನ್ನು ಪಡೆಯದವರೂ ಇರುತ್ತಾರೆ. ಅಂತಹ ಕುಟುಂಬಗಳ ಸಬಲೀಕರಣವೇ ಆಡಳಿತದ ಬೀಜಮಂತ್ರ ಆಗಬೇಕು. ಸರ್ವರ ಒಳಿತು ರಾಜ್ಯಾಡಳಿತದ ಆಶಯ ಆಗಬೇಕಿದೆ.

ಗ್ರಾಮಾಡಳಿತ ಪರಿಣಾಮಕಾರಿ ಆಗಿ ನಿರ್ವಹಣೆಯಾದರೆ, ಅಲ್ಲಿಂದ ಹುಟ್ಟುವ ದೂರುಗಳು ಕುಗ್ಗುತ್ತವೆ. ಬೇರುಮಟ್ಟದ ಆಡಳಿತ ವ್ಯವಸ್ಥೆ ಸುಧಾರಣೆಯಾದಾಗ ಅದರ ಅನೇಕ ಲಾಭಗಳನ್ನು ಸರ್ಕಾರ ಪಡೆಯುತ್ತದೆ. ಸಣ್ಣಪುಟ್ಟ ವಿಚಾರಗಳಿಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳು ತಲೆಕೆಡಿಸಿಕೊಳ್ಳುವಂತಹ ವೈರುಧ್ಯಗಳು ಆಡಳಿತಾಂಗದಲ್ಲಿದ್ದಾಗ, ಅಭಿವೃದ್ಧಿ ಕಾರ್ಯಕ್ರಮಗಳ ಫಲಿತಾಂಶ ಫಲಾನುಭವಿಗಳಿಗೆ ಸಿಗುವುದಿಲ್ಲ. ಪ್ರಸ್ತುತ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿದೆ, ಸರ್ಕಾರಗಳನ್ನು ಪ್ರಶ್ನಿಸುವವರೂ ಹೆಚ್ಚಾಗುತ್ತಿದ್ದಾರೆ.ಕುಂದು–ಕೊರತೆಗಳನ್ನು ವಿಚಾರಿಸಲು ಪ್ರತ್ಯೇಕ ಸಚಿವಾಲಯ ಅಥವಾ ಅದಕ್ಕೊಂದು ಸಚಿವ ಹುದ್ದೆ ಸೃಜಿಸಿದರೆ, ಈಗಿರುವ ಸುಮಾರು 40 ಇಲಾಖೆಗಳ ಸಮಸ್ಯೆಯನ್ನು ಹೊಸ ವ್ಯವಸ್ಥೆ ಹೇಗೆ ನಿರ್ವಹಣೆ ಮಾಡುತ್ತದೆನ್ನುವುದು ಕುತೂಹಲಕರ ಸಂಗತಿ. ಒಂದು ವೇಳೆ ಹೊಸ ಸಚಿವಾಲಯ ಅನುಷ್ಠಾನಕ್ಕೆ ಬಂದರೆ, ಸಮಸ್ಯೆಗಳಿಗೆ ಮುಕ್ತಿ ಸಿಗದೆ ಕೊಂಕಣ ಸುತ್ತಿ ಮೈಲಾರಕ್ಕೆ ಬಂದಂತೆ ಆಗಬಾರದು. ಈಗಾಗಲೇ, ಮುಖ್ಯಮಂತ್ರಿಯವರ ಜನಸ್ಪಂದನ ಶಾಖೆ ಪ್ರತಿದಿನವೂ ಸ್ವೀಕರಿಸುವ ಸಾವಿರಾರು ದೂರು–ಮನವಿಗಳನ್ನು ಎಂದಿನಂತೆ ಮಾತ್ರ ಇಲಾಖೆಗಳಿಗೆ ಸಲ್ಲಿಸುತ್ತಿದೆ. ಆ ಅಹವಾಲುಗಳಿಗೆ ಎಷ್ಟರ ಮಟ್ಟಿಗೆ ಪರಿಹಾರ ಸಿಗುತ್ತಿದೆ ಎನ್ನುವುದು ಸಹ ಪರಿಶೀಲನೆಗೆ ಒಳಪಡಬೇಕಾದ ವಿಚಾರವಾಗಿದೆ.

ಸ್ಥಳೀಯ ಸಂಸ್ಥೆಗಳು ಸರಿಯಾದ ದಿಕ್ಕಿನಲ್ಲಿ ಸಾಗಿದರೆ ಅಭಿವೃದ್ಧಿಗೆ ಸಂಬಂಧಿಸಿದ ಬಹಳಷ್ಟು ಸಮಸ್ಯೆಗಳು ಗೌಣವಾಗುತ್ತವೆ. ಗ್ರಾಮಾಧಿಕಾರಿಗಳಿಗಾಗಿ ನಾಗರಿಕರು ಅಲೆದಾಡುವ ಪರಿಸ್ಥಿತಿ ಇಂದಿಗೂ ತಪ್ಪಿಲ್ಲ. ಕಂದಾಯ ಇಲಾಖೆಯನ್ನು ಸರಿದಾರಿಗೆ ತಂದಾಗ ಗ್ರಾಮೀಣರ ಸಮಸ್ಯೆಗಳು ತಗ್ಗುತ್ತವೆ. ಸಚಿವರು ತಮ್ಮ ಇಲಾಖೆಯ ಶ್ರೇಣೀಕೃತ ಆಡಳಿತಾಂಗವನ್ನು ಚೆನ್ನಾಗಿ ಅರಿತರೆ ಮಾತ್ರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಾಣಬಹುದು. ಜನಸಂಖ್ಯೆಯ ಗುಣಾತ್ಮಕ ಬದಲಾವಣೆಗಳು ಸದಾ ಸುಸ್ಥಿರ ಆಯಾಮಗಳ ಸೌಖ್ಯವನ್ನು ಬಯಸುತ್ತಿರುತ್ತದೆ. ಜಿಲ್ಲೆ ಅಭಿವೃದ್ಧಿ–ಆಡಳಿತದ ಘಟಕವಾದರೆ, ಜಿಲ್ಲಾಧಿಕಾರಿ ಅದರ ಕೇಂದ್ರವಾಗಿರುತ್ತಾರೆ. ಜಿಲ್ಲಾಧಿಕಾರಿಗಳೆಲ್ಲರೂ ಕ್ರಿಯಾಶೀಲರಾದರೆ ರಾಜಧಾನಿಯಲ್ಲಿ ಕುಂದುಕೊರತೆಗಳ ಸಚಿವಾಲಯದ ಅವಶ್ಯಕತೆಯೇ ಇರಲಾರದು.

ಶ್ರೇಣೀಕೃತ ಆಡಳಿತದಲ್ಲಿ ಆದೇಶಗಳನ್ನು ಹೊಣೆಗಾರಿಕೆಯಿಂದ ಪ್ರತಿಯೊಂದು ಸ್ತರದ ಸಕ್ಷಮ ಪ್ರಾಧಿಕಾರ ಮತ್ತು ನೌಕರರು ಅನುಷ್ಠಾನಗೊಳಿಸಿದರೆ, ಸಮಸ್ಯೆಗಳು ಇಲ್ಲವಾಗುತ್ತವೆ. ಹೊಣೆಗಾರಿಕೆ ಕ್ಷೀಣವಾದರೆ, ಸರ್ಕಾರ ಕುಂದುಕೊರತೆಗಳ ವರ್ತುಲದಲ್ಲಿ ಸಿಲುಕಿ ಜನಸಾಮಾನ್ಯರ ಸಂಕಷ್ಟ ಮುಂದುವರಿಯುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕುದಿಯುತ್ತಿದೆ ಪಿಒಕೆ

ರಾಜಕೀಯ ಪ್ರಾತಿನಿಧ್ಯ, ವಿದ್ಯುತ್ ಸಬ್ಸಿಡಿ, ಪಾರದರ್ಶಕ ಆಡಳಿತಕ್ಕೆ ಜನರ ಆಗ್ರಹ

ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಅಗ್ನಿಕುಂಡವಾಗಿದೆ. ಮುಜಫ್ಫರಾಬಾದ್ ಮತ್ತು ರಾವಲ್‌ಕೋಟ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಹಿಂಸಾಚಾರ ಭುಗಿಲೆದ್ದಿದೆ. ಪ್ರತಿಭಟನೆ, ಸಂಘರ್ಷ, ಶವಯಾತ್ರೆಗಳ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ರಾಜಕೀಯ ಪ್ರಾತಿನಿಧ್ಯ, ಸಂಘಟನೆಯೊಂದರ ನಿಷೇಧ, ಆಡಳಿತ ಮತ್ತು ಮಾನವ ಹಕ್ಕುಗಳಿಗೆ ಸಂಬಂಧಿಸಿದ ಪ್ರತಿಭಟನೆಗಳು ಹಿಂಸಾಚಾರ ಮತ್ತು ಹತ್ತಾರು ಜೀವಗಳ ಸಾವಿಗೆ ಕಾರಣವಾಗಿವೆ. ಮೂಲಭೂತ ಹಕ್ಕು, ವ್ಯವಸ್ಥಿತ ಸೇವೆಗಳಿಗಾಗಿ ಪ್ರತಿಭಟನೆಗಿಳಿದ ಜನರ ಮೇಲೆ ಪಾಕಿಸ್ತಾನದ ಸೇನೆ ದಮನ ನೀತಿ ಅನುಸರಿಸುತ್ತಿದೆ ಎನ್ನುವ ಖಂಡನೆ ವ್ಯಕ್ತವಾಗಿದೆ

ಪ್ರಜಾವಾಣಿ ವಾರ್ತೆ

ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ನಡೆಯುತ್ತಿರುವ ಸಂಘರ್ಷದ ಕೇಂದ್ರದಲ್ಲಿರುವುದು ಜಾಯಿಂಟ್ ಅವಾಮಿ ಆ್ಯಕ್ಷನ್ ಕಮಿಟಿ (ಜೆಎಎಸಿ). ಇದು ಪಿಒಕೆಯ ಮುಖ್ಯ ಸಂಘಟನೆಯಾಗಿದ್ದು, ಮಾನವ ಹಕ್ಕುಗಳ ಹೋರಾಟಗಾರರು, ವ್ಯಾಪಾರಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ತೊಡಗಿರುವವರು ಇದರ ಭಾಗವಾಗಿದ್ದಾರೆ. ಸಂಘಟನೆಯು ಮಾನವ ಹಕ್ಕುಗಳ ಹೋರಾಟ ಮಾತ್ರವಲ್ಲದೆ ಸಾಮಾಜಿಕ–ರಾಜಕೀಯ ಕ್ಷೇತ್ರಗಳಲ್ಲಿ ಸಕ್ರಿಯವಾಗಿದೆ. ಭಯೋತ್ಪಾದನೆ ವಿರೋಧಿ ಕಾಯ್ದೆಯ ಅನ್ವಯ ಜೆಎಎಸಿಯನ್ನು ಜೂನ್ 6ರಂದು ನಿಷೇಧಿಸಲಾಯಿತು. ಇದೇ ಸಂಘಟನೆ ಮುಖಂಡನ ಹತ್ಯೆಯೂ ಆಯಿತು. ಆ ಬಳಿಕ ಘರ್ಷಣೆ ತೀವ್ರಗೊಂಡು ಸಾವು ನೋವು ಸಂಭವಿಸಿದೆ. ಇದರೊಂದಿಗೆ, ಪಿಒಕೆಯಲ್ಲಿ ಜುಲೈ 27ರಂದು ವಿಧಾನಸಭಾ ಚುನಾವಣೆ ನಡೆಯಲಿದೆ. ನಿಷೇಧ ವಿಚಾರವು ಹೆಚ್ಚು ಪ್ರಾಮುಖ್ಯ ಪಡೆಯಲು ಮತ್ತು ಪ್ರಸ್ತುತ ಹಿಂಸಾಚಾರ ಭುಗಿಲೇಳಲು ಇದೂ ಒಂದು ಕಾರಣ ಎನ್ನಲಾಗುತ್ತಿದೆ.

ಜೆಎಎಸಿಯು ಪಿಒಕೆ ಸರ್ಕಾರದ ಮುಂದೆ ಹಲವು ಬೇಡಿಕೆಗಳನ್ನಿಟ್ಟು, ಅವುಗಳ ಈಡೇರಿಕೆಗಾಗಿ ಹಲವು ವರ್ಷಗಳಿಂದಲೂ ಪ್ರತಿಭಟನೆ ನಡೆಸುತ್ತಲೇ ಇದೆ. ಅವುಗಳಲ್ಲಿ ಮುಖ್ಯವಾದದ್ದು, ಪಿಒಕೆ ವಿಧಾನಸಭೆಯಲ್ಲಿ ನಿರಾಶ್ರಿತರ ಕೋಟಾ ರದ್ದು ಮಾಡಬೇಕು ಎನ್ನುವುದು. 1947ರ ನಂತರ ಕಾಶ್ಮೀರದಿಂದ ಬಂದು ಪಾಕಿಸ್ತಾನದಲ್ಲಿ ನೆಲಸಿರುವ ನಿರಾಶ್ರಿತರಿಗೆ ವಿಧಾನಸಭೆಯಲ್ಲಿ 12 ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಈ ಮೀಸಲಾತಿ ಬಳಸಿಕೊಂಡು, ದೇಶದ ಮುಖ್ಯವಾಹಿನಿ ರಾಜಕೀಯ ಪಕ್ಷಗಳು ಪಿಒಕೆ ಸರ್ಕಾರ ರಚನೆಯಲ್ಲಿ ಪಾತ್ರ ವಹಿಸುತ್ತಿವೆ ಎನ್ನುವುದು ಜೆಎಎಸಿಯ ಪ್ರಮುಖ ಆಕ್ಷೇಪಣೆ. ಇದು ತಕ್ಷಣದ ಕಾರಣವಾದರೂ, ಇದಕ್ಕಿಂತ ಆಳವಾದ ಮತ್ತು ದೀರ್ಘಕಾಲದ ಹಲವು ಸಮಸ್ಯೆಗಳು ಹಿಂಸಾಚಾರದ ಹಿಂದಿವೆ.

ರಾಜಕೀಯ ಪ್ರಾತಿನಿಧ್ಯ, ಪ್ರಾದೇಶಿಕ ಅಸಮತೋಲನ, ಸಂಪನ್ಮೂಲಗಳ ಹಂಚಿಕೆ, ಆಡಳಿತ ಸೇರಿದಂತೆ ಹಲವು ವಿಚಾರಗಳಲ್ಲಿ ತಮಗೆ ಅನ್ಯಾಯವಾಗಿದೆ ಎನ್ನುವ ಭಾವನೆ ಪಿಒಕೆಯ ಜನರಲ್ಲಿದೆ. ಜತೆಗೆ ನಿರುದ್ಯೋಗ, ಹಣದುಬ್ಬರ, ಅಸಮರ್ಪಕ ಇಂಟರ್‌ನೆಟ್, ವಿದ್ಯುತ್ ಪೂರೈಕೆ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ವಿಚಾರವಾಗಿ ಸ್ಥಳೀಯ ಜನ ಮತ್ತು ಅಧಿಕಾರಿಗಳ ನಡುವೆ ಆಗಿಂದಾಗ್ಗೆ ಸಂಘರ್ಷಗಳು ನಡೆಯುತ್ತಲೇ ಇದ್ದವು. ಇವುಗಳ ಜತೆಗೆ ವಿದ್ಯುತ್ ದರ ಹೆಚ್ಚಾಗಿದ್ದು, ಸಬ್ಸಿಡಿ ನೀಡಬೇಕು ಎನ್ನುವುದು ಸೇರಿ 38 ಅಂಶಗಳ ಕಾರ್ಯಸೂಚಿಯನ್ನು ಮುಂದಿಟ್ಟು, ಅದರ ಅನುಷ್ಠಾನಕ್ಕಾಗಿ ಜೆಎಎಸಿ ಒತ್ತಾಯಿಸುತ್ತಿದೆ.



ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ರಾಜಧಾನಿ, ಹಿಂಸಾಚಾರಪೀಡಿತ ಮುಜಫ್ಫರಾಬಾದ್‌ನಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ –ಎಎಫ್‌ಪಿ ಚಿತ್ರ

ಜನರ ಆಕ್ರೋಶ ಮತ್ತು ಪ್ರತಿಭಟನೆಗಳು ಪಿಒಕೆಯಲ್ಲಿ ಹೊಸವೇನಲ್ಲ. ವಿದ್ಯುತ್, ಆಹಾರಕ್ಕಾಗಿ ಈ ಹಿಂದೆಯೂ ಇಲ್ಲಿ ಜನ ಬೀದಿಗಿಳಿದ ಉದಾಹರಣೆಗಳು ಇವೆ. ಪ್ರತಿಭಟನಕಾರರು ಶಸ್ತ್ರಾಸ್ತ್ರ, ಪೆಟ್ರೋಲ್ ಬಾಂಬ್ ಇತ್ಯಾದಿಯೊಂದಿಗೆ ಸಜ್ಜಾಗಿ ಬಂದಿದ್ದರು, ಹಿಂಸಾಚಾರ ಉಂಟುಮಾಡುವ ಉದ್ದೇಶ ಅವರದ್ದಾಗಿತ್ತು ಎನ್ನುವುದು ರಕ್ಷಣಾ ಪಡೆಗಳ ವಾದ. ಆದರೆ, ಜನರು ಈ ವಾದವನ್ನು ನಿರಾಕರಿಸಿದ್ದು, ಪ್ರತಿಭಟನಕಾರರಿಗಿಂತ ನಾಗರಿಕರು ಪೊಲೀಸರ ಗುಂಡಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸತ್ತಿದ್ದಾರೆ, ಸರ್ಕಾರ ಹೇಳುತ್ತಿರುವುದಕ್ಕಿಂತಲೂ ಹೆಚ್ಚು ಮಂದಿ ಸಾವಿಗೀಡಾಗಿದ್ದಾರೆ ಎಂದು ದೂರಿದ್ದಾರೆ.

ಪಾಕ್ ನೀತಿ: ಕಾಶ್ಮೀರದ ವಿಚಾರದಲ್ಲಿ ಪಾಕ್ ಅನುಸರಿಸುತ್ತಿರುವ ನೀತಿಗಳು ಕೂಡ ಹಿಂಸಾಚಾರಕ್ಕೆ ಕಾರಣ ಎನ್ನಲಾಗುತ್ತಿದೆ. ಆಡಳಿತದಲ್ಲಿ ಪಾರದರ್ಶಕತೆ, ಸರ್ಕಾರದ ಉತ್ತರದಾಯಿತ್ವ ಮತ್ತು ಹೆಚ್ಚಿನ ಪ್ರಾತಿನಿಧ್ಯವನ್ನು ಅಲ್ಲಿನ ಜನರು ಬಯಸುತ್ತಿದ್ದಾರೆ. ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ನಡೆಯುತ್ತಿರುವ ಆರ್ಥಿಕ ಅಭಿವೃದ್ಧಿ, ಉದ್ಯೋಗ ಅವಕಾಶಗಳು, ಮಾನವ ಹಕ್ಕುಗಳ ಪರಿಸ್ಥಿತಿಯನ್ನು ಪಿಒಕೆಯ ಜನ ಗಮನಿಸುತ್ತಿದ್ದಾರೆ.

ಪಾಕಿಸ್ತಾನ ಸರ್ಕಾರ ದಶಕಗಳಿಂದ ಮುಂದಿಡುತ್ತಿರುವ ಹಳೆಯ ರಾಜಕೀಯ ಕಥನಗಳನ್ನು ಒಪ್ಪುವ ಕಾಲ ಮುಗಿದುಹೋಗಿದೆ. ಜನ ಮೂಲಭೂತ ಹಕ್ಕುಗಳು, ಉತ್ತಮ ಸೇವೆಗಳು, ಆರ್ಥಿಕ ಅವಕಾಶಗಳ ಹೊಸ ವ್ಯವಸ್ಥೆಗಾಗಿ ಬೀದಿಗಿಳಿದರೆ, ಪಾಕಿಸ್ತಾನದ ಸೇನೆಯು ಪ್ರತಿಭಟನಕಾರರ ದಮನಕ್ಕೆ ಮುಂದಾಗಿರುವುದೇ ಹಿಂಸಾಚಾರ ತೀವ್ರಗೊಳ್ಳಲು ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಪಾಕಿಸ್ತಾನದ ಮಾನವ ಹಕ್ಕುಗಳ ಆಯೋಗ (ಎಚ್‌ಆರ್‌ಸಿಪಿ) ಪಿಒಕೆಯಲ್ಲಿನ ಬೆಳವಣಿಗೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ. ಪಿಒಕೆಯಲ್ಲಿನ ಬೆಳವಣಿಗೆಗಳ ಬಗ್ಗೆ ಭಾರತ ಪ್ರತಿಕ್ರಿಯಿಸಿದ್ದು, ಹಿಂಸಾಚಾರಕ್ಕೆ ಪಾಕಿಸ್ತಾನವನ್ನು ಉತ್ತರದಾಯಿಯನ್ನಾಗಿ ಮಾಡಬೇಕು ಎಂದು ಅಂತರರಾಷ್ಟ್ರೀಯ ಸಮುದಾಯಕ್ಕೆ ಕರೆ ನೀಡಿದೆ. ಪಿಒಕೆಯಲ್ಲಿನ ಹಿಂಸಾಚಾರ ತಡೆಯಲು ಮುಂದಾಗುವಂತೆ 50ಕ್ಕೂ ಹೆಚ್ಚು ಸಂಸದರು ಬ್ರಿಟನ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸರ್ಕಾರದ ಮೇಲೆ ಅಸಮಾಧಾನ

ಪಾಕಿಸ್ತಾನದ ಒಕ್ಕೂಟ ಸರ್ಕಾರ ಪಿಒಕೆ ಮೇಲೆ ನಿಯಂತ್ರಣ ಹೊಂದಿದ್ದರೂ, ಅದು ಈ ಪ್ರಾಂತ್ಯವನ್ನು ತನ್ನದೇ ನೆಲ ಎಂದು ಪರಿಗಣಿಸುವುದಿಲ್ಲ. ಅದರ ಸಂವಿಧಾನದಲ್ಲಿ ಪಿಒಕೆ ಬಗ್ಗೆ ಉಲ್ಲೇಖ ಇಲ್ಲ. ಪಾಕಿಸ್ತಾನದ ಸಂಸತ್ತಿನಲ್ಲಿ ಪಿಒಕೆಗೆ ಪ್ರಾತಿನಿಧ್ಯವಿಲ್ಲ.

ನೈಸರ್ಗಿಕವಾಗಿ ಸಂಪದ್ಭರಿತವಾಗಿರುವ ಈ ಪ್ರಾಂತ್ಯದಿಂದ ಪಾಕಿಸ್ತಾನವು ಹಲವು ಲಾಭಗಳನ್ನು ಗಳಿಸುತ್ತಿದೆ. ಸಿಂಧೂ ನದಿ ಈ ಭಾಗದಲ್ಲಿ ಹರಿಯುತ್ತಿದ್ದು ಜಲವಿದ್ಯುತ್ ಉತ್ಪಾದನೆ, ನೀರಾವರಿ ವ್ಯವಸ್ಥೆ ಪಾಕಿಸ್ತಾನಕ್ಕೆ ಆರ್ಥಿಕವಾಗಿ ನೆರವಾಗುತ್ತಿವೆ. ಆದರೆ, ಅದರ ಪ್ರಯೋಜನ ಆ ಪ್ರಾಂತ್ಯದ ಜನರಿಗೆ ಸಿಗುತ್ತಿಲ್ಲ. ಜನರು ಅಪೌಷ್ಟಿಕತೆ, ಬಡತನ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಪ್ರಾಂತ್ಯದ ಸಂಪನ್ಮೂಲಗಳಿಂದ ಲಾಭ ಪಡೆಯುವ ಸರ್ಕಾರ ತಮಗೆ ಏನೂ ನೀಡುತ್ತಿಲ್ಲ ಎಂಬ ಅಸಮಾಧಾನ ಜನರಲ್ಲಿದೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಮತ್ತು ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್,
ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

'ಕಾಲೇಜು ಶುಲ್ಕ ತುಂಬಿದೆ'

ಕಾಲೇಜು ಶುಲ್ಕ ತುಂಬಿದೆ. ನಮ್ಮಂತಹ ಬಡ ಕುಟುಂಬದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಸಹಾಯಧನ ನೀಡಿದ 'ಪ್ರಜಾವಾಣಿಗೆ' ಧನ್ಯವಾದ.

ಲಕ್ಷ್ಮಿ ಮಂಜುನಾಥ ಗೋಣೆಪ್ಪನವರ, ಹುಬ್ಬಳ್ಳಿ

ಪಿಯು ಶಿಕ್ಷಣಕ್ಕೆ ಉಪಯೋಗ

ಆರ್ಥಿಕ ತೊಂದರೆಯಲ್ಲಿದ್ದ ನನಗೆ ಪಿಯುಸಿ ಓದಲು ಕಷ್ಟವಾಗುತ್ತಿತ್ತು. ಏನು ಮಾಡಬೇಕೆಂದು ದಿಕ್ಕು ತೋಚದ ಸ್ಥಿತಿಯಲ್ಲಿದ್ದೆ. ಸರಿಯಾದ ಸಮಯಕ್ಕೆ ಪ್ರಜಾವಾಣಿ ಸ್ಕಾಲರ್‌ಶಿಪ್ ಬಂತು. ಕಾಲೇಜು ಶುಲ್ಕ ತುಂಬಲು ಸಹಾಯವಾಯಿತು. ನನ್ನ ಶೈಕ್ಷಣಿಕ ಬದುಕಿಗೆ ಸಹಾಯಧನ ನೀಡಿದ 'ಪ್ರಜಾವಾಣಿ' ಪತ್ರಿಕೆಗೆ ಧನ್ಯವಾದ.

ನಿಖಿತಾ ಶಿಂಧೆ, ಹುಬ್ಬಳ್ಳಿ

1947ರಲ್ಲಿ ಏನಾಗಿತ್ತು?

1947ರಲ್ಲಿ ಭಾರತ ಮತ್ತು ಪಾಕಿಸ್ತಾನ ವಿಭಜನೆ ಆಗುವಾಗ ಜಮ್ಮು ಮತ್ತು ಕಾಶ್ಮೀರದಲ್ಲಿ ಆಡಳಿತ ನಡೆಸುತ್ತಿದ್ದ ಮಹಾರಾಜ ಹರಿಸಿಂಗ್ ಅವರು ಜಮ್ಮು ಮತ್ತು ಕಾಶ್ಮೀರ ಸ್ವತಂತ್ರ ಸಂಸ್ಥಾನವಾಗಿರಬೇಕು ಎಂದು ಬಯಸಿದರು. ಪಾಕಿಸ್ತಾನ ಒಪ್ಪಂದಕ್ಕೆ ಸಹಿ ಹಾಕಿದ್ದರೂ, ಜಮ್ಮು ಮತ್ತು ಕಾಶ್ಮೀರದ ಮೇಲೆ ಆಕ್ರಮಣ ಮಾಡಿತು. ಆಗ ಹರಿಸಿಂಗ್ ಅವರು ಭಾರತದ ನೆರವು ಕೋರಿದರಲ್ಲದೆ, ರಾಜ್ಯವನ್ನು ಭಾರತಕ್ಕೆ ಸೇರ್ಪಡೆಗೊಳಿಸುವ ಒಪ್ಪಂದಕ್ಕೆ ಸಹಿ ಹಾಕಿದರು. ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ನಡೆಯುತ್ತಿದ್ದಾಗ 1949ರಲ್ಲಿ ವಿಶ್ವ ಸಂಸ್ಥೆಯು ಮಧ್ಯಪ್ರವೇಶಿಸಿತು. ಇದೇ ವೇಳೆ, ಜಮ್ಮು ಮತ್ತು ಕಾಶ್ಮೀರವು ಭಾರತಕ್ಕೆ ಸೇರ್ಪಡೆಗೊಂಡಿರುವುದು ಕಾನೂನುಬದ್ಧ ಎಂದೂ ಅದು ಹೇಳಿತು.

ಆದರೆ, ಕದನ ವಿರಾಮದ ಸಂದರ್ಭದಲ್ಲಿ ಗುರುತಿಸಲಾದ ಗಡಿಯು ಜಮ್ಮು ಮತ್ತು ಕಾಶ್ಮೀರವನ್ನು ವಿಭಾಗಿಸಿತು. ಶೇ 65ರಷ್ಟು ಭೂಭಾಗ ಭಾರತದ ನಿಯಂತ್ರಣಕ್ಕೆ ಬಂದರೆ, ಉಳಿದ ಶೇ 35ರಷ್ಟು ಪ್ರದೇಶದ ಮೇಲೆ ಪಾಕಿಸ್ತಾನ ನಿಯಂತ್ರಣ ಸಾಧಿಸಿತು. ಶೇ 35ರಷ್ಟು ಭೂಭಾಗವು ತನಗೇ ಸೇರಿದ್ದು ಎಂದು ಭಾರತವು ಅಂದಿನಿಂದಿಲೂ ಪ್ರತಿಪಾದಿಸುತ್ತಾ ಬಂದಿದೆ. ಆ ಪ್ರದೇಶವನ್ನು ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಎಂದು ಕರೆಯುತ್ತದೆ. ಆಜಾದ್ ಕಾಶ್ಮೀರ ಎಂದು ಪಾಕಿಸ್ತಾನ ಕರೆಯುತ್ತದೆ. 1963ರಲ್ಲಿ ಲಡಾಖ್‌ನ ವಿಸ್ತರಿತ ಪ್ರದೇಶವನ್ನು ಪಾಕಿಸ್ತಾನ ಚೀನಾಕ್ಕೆ ಹಸ್ತಾಂತರಿಸಿತು. ಅಕ್ಸಯ್ ಚಿನ್ ಎಂದು ಕರೆಯುವ ಈ ಭೂಭಾಗವೂ ತನ್ನದು ಎಂದು ಭಾರತ ಹೇಳುತ್ತಿದೆ.

ಹಿಂಸಾಚಾರ ನಡೆದ ಮುಜಫ್ಫರಾಬಾದ್‌ನಲ್ಲಿ ಅಗತ್ಯ ವಸ್ತುಗಳ ಮಾರಾಟಗಾರರು ಗ್ರಾಹಕರ ನಿರೀಕ್ಷೆಯಲ್ಲಿದ್ದರು –ಪಿಟಿಐ ಚಿತ್ರ

ಜಮ್ಮು ಮತ್ತು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ ಎಂದು 1994ರಲ್ಲಿ ಭಾರತದ ಸಂಸತ್ತು ಸರ್ವಸಮ್ಮತದ ನಿರ್ಣಯ ಅಂಗೀಕರಿಸಿತ್ತು. ಅಲ್ಲದೇ, ಆಕ್ರಮಿತ ಪ್ರದೇಶವನ್ನು ತೊರೆಯುವಂತೆ ಪಾಕಿಸ್ತಾನವನ್ನು ಆಗ್ರಹಿಸುತ್ತಲೇ ಇದೆ.

ಪಿಒಕೆ ಆಡಳಿತ ವ್ಯವಸ್ಥೆ ಹೇಗಿದೆ?

ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಎರಡು ಪ್ರಾಂತ್ಯಗಳಿವೆ. ಒಂದು ಆಜಾದ್ ಜಮ್ಮು ಮತ್ತು ಕಾಶ್ಮೀರ (ಎಜೆಕೆ) ಮತ್ತು ಇನ್ನೊಂದು ಗಿಲ್ಗಿಟ್–ಬಲ್ಟಿಸ್ತಾನ.

ಈಗ ಹಿಂಸಾಚಾರ ನಡೆಯುತ್ತಿರುವುದು ಆಜಾದ್ ಜಮ್ಮು ಮತ್ತು ಕಾಶ್ಮೀರದಲ್ಲಿ. ಭಾರತವು ಇದನ್ನು 'ಪಾಕಿಸ್ತಾನ ಆಕ್ರಮಿತ ಕಾಶ್ಮೀರ' (ಪಿಒಕೆ) ಎಂದು ಕರೆಯುತ್ತದೆ. 45 ಲಕ್ಷದಷ್ಟು ಜನಸಂಖ್ಯೆಯನ್ನು ಹೊಂದಿರುವ ಈ ಪ್ರಾಂತ್ಯವು ಅರೆ ಸ್ವಾಯತ್ತ ಆಡಳಿತ ವ್ಯವಸ್ಥೆಯನ್ನು ಹೊಂದಿದೆ. ಮುಜಫ್ಫರಾಬಾದ್ ಇದರ ರಾಜಧಾನಿ. 10 ಜಿಲ್ಲೆಗಳನ್ನು ಹೊಂದಿರುವ ಈ ಪಾಂತ್ಯವನ್ನು ಮೂರು ವಿಭಾಗಗಳಾಗಿ (ಮೀರ್‌ಪುರ್, ಮುಜಫ್ಫರಾಬಾದ್ ಮತ್ತು ಪೂಂಛ್) ವಿಭಾಗಿಸಲಾಗಿದೆ.

ಇಲ್ಲಿನ ಆಡಳಿತವು ಅಜಾದ್ ಕಾಶ್ಮೀರ ಮಧ್ಯಂತರ ಸಂವಿಧಾನ ಕಾಯ್ದೆ 1974ರ ಅಡಿಯಲ್ಲಿ ನಿರೂಪಿತವಾಗಿದೆ. 45 ಸ್ಥಾನ ಬಲದ ಏಕಶಾಸನಸಭೆಯನ್ನು ಪಿಒಕೆ ಹೊಂದಿದೆ. ಒಟ್ಟು ಸ್ಥಾನಗಳಲ್ಲಿ 12 ಸ್ಥಾನಗಳು ಪಾಕಿಸ್ತಾನದ ವಿವಿಧ ಕಡೆಗಳಲ್ಲಿ ನೆಲಸಿರುವ ನಿರಾಶ್ರಿತರಿಗೆ (ಭಾರತದಿಂದ ಹೋದವರಿಗೆ) ಮೀಸಲಿಡಲಾಗಿದೆ. ಪ್ರಾಂತ್ಯಕ್ಕೆ ಪ್ರತ್ಯೇಕ ಸಂವಿಧಾನ ಇದೆ. ಇಲ್ಲಿ ಪ್ರಧಾನಿ ಇದ್ದಾರೆ. ಅಧ್ಯಕ್ಷರು ಇದ್ದಾರೆ. ಹೈಕೋರ್ಟ್ ಮಾತ್ರ ಅಲ್ಲ, ಸುಪ್ರೀಂ ಕೋರ್ಟ್ ಕೂಡ ಇದೆ. ಪ್ರಧಾನಿ ಶಾಸಕಾಂಗದ ಮುಖ್ಯಸ್ಥರಾದರೆ, ಅಧ್ಯಕ್ಷರು ಸಾಂವಿಧಾನಿಕ ಮುಖ್ಯಸ್ಥ. ಪ್ರಧಾನಿ ಅವರೊಂದಿಗೆ ಸಚಿವ ಸಂಪುಟದ ಸಚಿವರೂ ಆಡಳಿತದಲ್ಲಿ ಭಾಗಿಯಾಗುತ್ತಾರೆ.

ಸದ್ಯ ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಇಲ್ಲಿ ಅಧಿಕಾರದಲ್ಲಿದೆ. ರಾಜಾ ಫೈಸಲ್ ಮಮ್ತಾಜ್ ರಾಥೋಡ್ ಅವರು ಪ್ರಧಾನಿಯಾಗಿದ್ದಾರೆ.

ಪಿಒಕೆಯು ಪ್ರತ್ಯೇಕ ಆಡಳಿತ ವ್ಯವಸ್ಥೆ ಹೊಂದಿದ್ದರೂ, ಅಲ್ಲಿನ ಆಡಳಿತದಲ್ಲಿ ಪಾಕಿಸ್ತಾನದ ಒಕ್ಕೂಟ ಸರ್ಕಾರ ಬಿಗಿ ಹಿಡಿತ ಹೊಂದಿದೆ. ಸರ್ಕಾರವು 14 ಸದಸ್ಯರನ್ನೊಳಗೊಂಡ ಕಾಶ್ಮೀರ ಮಂಡಳಿಯ ಮೂಲಕ ಪಿಒಕೆ ಮೇಲೆ ಪೂರ್ಣ ನಿಯಂತ್ರಣ ಸಾಧಿಸುತ್ತದೆ. ಪಾಕಿಸ್ತಾನದ ಪ್ರಧಾನಿ ನೇತೃತ್ವದಲ್ಲಿ ಈ ಮಂಡಳಿ ಕಾರ್ಯನಿರ್ವಹಿಸುತ್ತದೆ.

ಭಾರತದೊಂದಿಗಿನ ಗಡಿ ನಿಯಂತ್ರಣ ರೇಖೆಯೂ (ಎಲ್‌ಒಸಿ) ಇದೇ ಪ್ರಾಂತ್ಯದಲ್ಲಿ ಇರುವುದರಿಂದ ಇಲ್ಲಿನ ಆಡಳಿತದಲ್ಲಿ ಪಾಕಿಸ್ತಾನ ಸೇನೆಯ ಪ್ರಭಾವವೂ ಇದೆ.

ಆಧಾರ: ಪಿಟಿಐ, ರಾಯಿಟರ್ಸ್, ಬಿಬಿಸಿ, ಮಾಧ್ಯಮ ವರದಿಗಳು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಭಾರತೀಯ ಜನತಾ ಪಕ್ಷವು (ಬಿಜೆಪಿ) ಸಾಮಾಜಿಕ ಜಾಲತಾಣದ ತನ್ನ ಹಲವು ಅಧಿಕೃತ ಖಾತೆಗಳಲ್ಲಿ ಅತ್ಯಂತ ಸುಸಜ್ಜಿತವಾದ, ಫಳ ಫಳ ಹೊಳೆಯುವ ರಸ್ತೆ, ಮೇಲ್ಸೇತುವೆಯ ವಿಡಿಯೊ ಅನ್ನು ಹಂಚಿಕೊಳ್ಳುತ್ತಿದೆ. 'ಅಚ್ಚರಿ ಪಡಬೇಡಿ. ಇದು ಪಟ್ನಾ; ಬಿಹಾರದ ರಾಜಧಾನಿ. ಎಲ್ಲೆಲ್ಲಿ ಬಿಜೆಪಿ–ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದೆಯೋ, ಅವು ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿವೆ' ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಬಿಜೆಪಿ ಬಿಹಾರ, ಬಿಜೆಪಿ ಜಾರ್ಖಂಡ್, ಪಟ್ನಾಸಾಹಿಬ್ ಲೋಕಸಭಾ ಕ್ಷೇತ್ರದ ಸಂಸದ ರವಿಶಂಕರ್ ಪ್ರಸಾದ್ ಅವರೂ ವಿಡಿಯೊ ಹಂಚಿಕೊಂಡಿದ್ದಾರೆ. ಆದರೆ, ವಾಸ್ತವ ಅಲ್ಲ.

ವಿಡಿಯೊ ಅನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಅದರಲ್ಲಿ ಕೃತಕ ಬುದ್ಧಿಮತ್ತೆಯ ವಿಡಿಯೊಗಳಲ್ಲಿ ಕಾಣುವಂತಹ ಅಸಹಜ ಅಂಶಗಳು ಕಂಡವು. ನೀಲಿ ನಾಮಫಲಕದಲ್ಲಿ ಪಟ್ನಾ ಹೈಕೋರ್ಟ್, ಸೆಕ್ರೆಟೇರಿಯಟ್ ಮತ್ತು ಏರ್‌ಪೋರ್ಟ್ ಎಂದು ಬರೆದಿರುವುದು ಕಂಡಿತು. ಹಿಂದಿಯಲ್ಲಿರುವ ಅಕ್ಷರಗಳು ಅಸಹಜವಾಗಿ ಕಂಡವು. ಜತೆಗೆ, ರಸ್ತೆಯಲ್ಲಿ ಸಂಚರಿಸುತ್ತಿರುವ ಬೈಕ್‌ಗಳಿಗೆ ನಂಬರ್ ಪ್ಲೇಟ್ ಇಲ್ಲ. ಪಟ್ನಾದ ಉಜ್ವಲ್ ಸಿಂಗ್ ಎಂಬಾತ 2026ರ ಜೂನ್ 2ರಂದು ಪೂರ್ಣ ವಿಡಿಯೊ ಪೋಸ್ಟ್ ಮಾಡಿದ್ದರು. ಪಟ್ನಾದ ವಾಸ್ತವಿಕ ದೃಶ್ಯಗಳನ್ನು ಬಳಸಿಕೊಂಡು, ಅವುಗಳನ್ನು ಎಐ ಸಾಧನಗಳಿಂದ ಉತ್ತಮಗೊಳಿಸಲಾಗಿದೆ ಎಂದು ಅವರು ತಿಳಿಸಿದರು. ಮೂಲ ವಿಡಿಯೊ ಅನ್ನೂ ಅವರು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ. ಹೈವ್ ಮಾಡರೇಷನ್ ಮತ್ತು ಸಿಂಥ್‌ಐಡಿ ಎನ್ನುವ ಎಐ ಪತ್ತೆ ಸಾಧನಗಳ ಮೂಲಕ ಪರಿಶೀಲಿಸಿದಾಗ, ವಿಡಿಯೊನ ಎಐ ನೆರವಿನಿಂದ ಮಾರ್ಪಡಿಸಿರುವುದು ಪತ್ತೆಯಾಯಿತು. ಪಟ್ನಾದ ಕೆಲವು ರಸ್ತೆ, ಮೇಲ್ಸೇತುವೆ ವಿಡಿಯೊ ಅನ್ನು ಎಐನಿಂದ ಬದಲಾಯಿಸಿ, ಸುಳ್ಳು ಹರಡಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಪಿ.ಚಂದ್ರಿಕಾ

ಮಿತಿ

ಐನ್‌ಸ್ಟೀನ್ ಅವರನ್ನು ಸಂದರ್ಶಕರು ಕೇಳಿದರು, 'ವಿಜ್ಞಾನದಿಂದಾಗಿ ಪ್ರಪಂಚ ಮುಂದುವರಿಯುತ್ತಿದೆ. ಆದರೆ, ಯುದ್ಧದಿಂದ ನಾವು ವಿನಾಶದ ಕಡೆಗೆ ಹೋಗುತ್ತಿದ್ದೇವೆ. ಎರಡು ಮಹಾಯುದ್ಧಗಳು ಸಂಭವಿಸಿದ ನಂತರವೂ ಮನುಷ್ಯ ಇನ್ನೂ ಯುದ್ಧದಾಹಿಯೇ ಆಗಿದ್ದಾನೆ. ಅವನು ಮುಂದೆ ಯಾವ ಯಾವ ಆವಿಷ್ಕಾರಗಳನ್ನು ಮಾಡುತ್ತಾನೆ? ಮುಂದಿನ ಸಂಶೋಧನೆ ಏನಾಗಿರುತ್ತದೆ? ಯುದ್ಧದ ಗೆಲುವಿಗೆ ಮತ್ತೇನು ಅಸ್ತ್ರಗಳನ್ನು ಕಂಡುಹಿಡಿಯುತ್ತಾನೆ' ಎಂದು. ಐನ್‌ಸ್ಟೀನ್, 'ಹೌದು ನನಗೂ ಕುತೂಹಲವಿದೆ ಮತ್ತು ಅಚ್ಚರಿಯೂ ಇದೆ. ಯಾಕೆಂದರೆ ವಿಜ್ಞಾನದ ಮೂಲಕ ಏನನ್ನು ಬೇಕಾದರೂ ಸಾಧಿಸಬಹುದು. ನಮ್ಮ ಊಹೆಗೂ ಮೀರಿದ ಶಸ್ತ್ರಾಸ್ತ್ರ ಯುದ್ಧವನ್ನು ಉತ್ತುಂಗಕ್ಕೆ ಒಯ್ಯಬಹುದು' ಎಂದರು.

'ನೀವೊಬ್ಬ ದೊಡ್ಡ ವಿಜ್ಞಾನಿ. ನಿಮ್ಮ ಊಹೆಗೂ ಮೀರಿದ ಯಾವ ಸಂಶೋಧನೆ ಇದೆ? ನಿಮಗೆ ಅರ್ಥವಾಗದ್ದು ಯಾವುದಿದೆ' ಎಂದು ಕೇಳುತ್ತಾರೆ ಸಂದರ್ಶಕರು. ಗಂಭೀರವಾಗಿ ಯೋಚಿಸಿದ ಐನ್‌ಸ್ಟೀನ್, 'ಮನುಷ್ಯ ಎಂಥಾ ವಿಚಿತ್ರ ಎಂದರೆ, 'ನಾನು ಕಂಡು ಹಿಡಿದದ್ದು ಅತ್ಯಂತ ವಿನಾಶಕಾರಿ ಅಸ್ತ್ರ ಆಗಬೇಕು' ಎಂದು ಬಯಸುತ್ತಾನೆ. 'ಜಗತ್ತಿನಲ್ಲಿ ನನ್ನ ಹೊರತು ಇನ್ಯಾರೂ ಉಳಿಯಬಾರದು' ಎನ್ನುವ ಉದ್ದೇಶ ಅವನದ್ದಾಗಿರುತ್ತದೆ. ಎಲ್ಲದರ ಮೇಲೂ ಹಿಡಿತ ಸಾಧಿಸುವ ತಾನು ಮಾತ್ರ ಉಳಿಯುವ ಮಹಾ ದುರಾಸೆ ಅವನದ್ದಾಗಿರುತ್ತದೆ. ಹೀಗಾಗಿ ಯಾರು ಯಾವ ಸಂಶೋಧನೆಯನ್ನು ಎಷ್ಟು ವಿನಾಶವನ್ನು ಮಾಡಬೇಕೆಂದು ಮಾಡುತ್ತಾರೋ ಗೊತ್ತಿಲ್ಲ' ಎನ್ನುತ್ತಾರೆ. 'ಹಾಗಾದರೆ ನಾಲ್ಕನೇ ಮಹಾಯುದ್ಧದ ಹೊತ್ತಿಗೆ ಏನಾದೀತು? ವಿಜ್ಞಾನಿಯಾಗಿ ವಿನಾಶವನ್ನು ನೀವು ತಡೆಯಬಲ್ಲಿರಾ' ಎಂದು ಕುತೂಹಲದಿಂದ ಸಂದರ್ಶಕ ಕೇಳುತ್ತಾರೆ.

'ಹಾ, ಇದು ನಿಜವಾದ ಪ್ರಶ್ನೆ. ನಿಜ ಹೇಳಬೇಕೆಂದರೆ ವಿಜ್ಞಾನ ವಿನಾಶವನ್ನು ತಂದೊಡ್ಡಲಾರದು. ಅದನ್ನು ಬಳಸುವವರಿಂದ ಮಾತ್ರ ವಿನಾಶ ಸಾಧ್ಯವಾದೀತು. ಮೂರನೇ ಮಹಾಯುದ್ಧದಲ್ಲಿ ಎಂಥಾ ಶಸ್ತ್ರಾಸ್ತ್ರ ಬಳಸಲಾಗುತ್ತದೆ ಎಂದು ನಾನು ಹೇಳಲಾರೆ. ಆದರೆ ನಾಲ್ಕನೇ ಮಹಾಯುದ್ಧದಲ್ಲಿ ಮಾತ್ರ ಜನ ಎಂಥಾ ಅಸ್ತ್ರಗಳನ್ನು ಬಳಸುತ್ತಾರೆ ಎಂದು ಖಚಿತವಾಗಿ ಹೇಳಬಲ್ಲೆ. ಮೂರನೇ ಮಹಾಯುದ್ಧದಲ್ಲಿ ಬದುಕುಳಿದವರು ನಾಲ್ಕನೇ ಮಹಾಯುದ್ಧದ ತಯಾರಿಯಾಗಿ ಚೂಪುಕಲ್ಲುಗಳನ್ನು ಪೇರಿಸಿಟ್ಟಿರುತ್ತಾರೆ' ಎನ್ನುತ್ತಾರೆ ಐನ್‌ಸ್ಟೀನ್. ಸಂದರ್ಶಕರಿಗೆ ಅಚ್ಚರಿ, 'ಏನು ಹೇಳುತ್ತಿದ್ದೀರಿ? ಅಂದರೆ ಮನುಷ್ಯ ಮತ್ತೆ ಆದಿಮ ಸ್ಥಿತಿಗೆ ಹೋಗುತ್ತಾನೆಯೇ' ಎಂದು ಕೇಳುತ್ತಾರೆ. 'ಮತ್ತಿನ್ನೇನು? ತಾನು ಮಾತ್ರ ಬದುಕಬೇಕು, ಗೆಲ್ಲಬೇಕು ಎಂದುಕೊಳ್ಳುವವರು ನಾಗರಿಕತೆ ಬೆಳೆದು ಬಂದಿರುವುದೇ ಸಹಬಾಳ್ವೆಯ ತತ್ವದಿಂದ ಎನ್ನುವ ಅದ್ಭುತ ಸಂಗತಿಯನ್ನು ಮರೆಯುತ್ತಾರೆ. ಮನುಷ್ಯನ ಸೈರಿಸಲಾಗದ ಈ ಗುಣ ಅವನ ಸುತ್ತಮುತ್ತಲನ್ನು ನಾಶ ಮಾಡಿದರೆ ತಾನೂ ನಾಶವಾದಂತೆ ಎನ್ನುವುದನ್ನು ಅರಿಯಲಾರದೆ ಹೋಗುತ್ತಾನೆ. ಹೀಗಾದಾಗ ಮತ್ತೆ ಯುದ್ಧ ಮಾಡಲಿಕ್ಕೆ ಚೂಪುಕಲ್ಲುಗಳನ್ನು ಬಿಟ್ಟರೆ ಬೇರೆ ಏನಿರಲಿಕ್ಕೆ ಸಾಧ್ಯ? ವಿನಾಶ ಮಾಡಲಿಕ್ಕೆ ಇನ್ನೇನು ತಾನೆ ಉಳಿದಿರುತ್ತದೆ? ವಿಜ್ಞಾನ ಇದಕ್ಕಾಗಿ ಇಷ್ಟೆಲ್ಲಾ ಬೆಳೆಯಬೇಕೇ' ಎನ್ನುತ್ತಾರೆ ಐನ್‌ಸ್ಟೀನ್.

ನಾಗರಿಕತೆಯ ಉತ್ತುಂಗದಲ್ಲಿರುವ ಜಗತ್ತು ಮತ್ತೆ ಆದಿಮ ಸ್ಥಿತಿಗೆ ತಲುಪುವ ಮೂರ್ಖತ್ವ ಐನ್‌ಸ್ಟೀನ್‌ಗೆ ಗೊತ್ತಿತ್ತು. ಆದ್ದರಿಂದಲೇ ವಿಜ್ಞಾನದ ಮಿತ ಬಳಕೆ ಮತ್ತು ಅದರಿಂದ ಉದ್ಧಾರವಾಗಬೇಕೇ ಹೊರತು ವಿನಾಶವಲ್ಲ ಎನ್ನುವ ನಂಬಿಕೆ ಅವರದ್ದಾಗಿತ್ತು. ಇದನ್ನೇ ಅಲ್ಲವೇ ನಮ್ಮವರು, ಅತಿಯಾದರೆ ಅಮೃತವೂ ವಿಷವಾಗುತ್ತದೆ ಎಂದಿದ್ದು? ❖

ಗುಂಡಣ್ಣ

ಪದಬಂಧ 6430

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೂಡುವ ಲೆಕ್ಕವಿದು (4)
3.ಗತಿಯಲ್ಲಿ ಕೊನೆಗೊಂಡಿರುವ ಮುನ್ನಡೆ (3)
5.ಕಲಸಿ ನಾದಿದ ಹಿಟ್ಟು (3)
7.ದರ ಹೇಳುತ್ತಲೇ ತೋರಿಸಿದ ಹೊಟ್ಟೆ! (3)
8.ಚರಂಡಿಯಲ್ಲಿರುವ ಬೆತ್ತ (2)
9.ಹೆಸರಿಡುವ ಶಾಸ್ತ್ರ (5)
11.ಆಕಾಶದಿಂದ ಬೀಳುವ ತೇಜೋಪುಂಜವಾದ ವಸ್ತು (2)
12.ಕಣದಲ್ಲಿ ಅಗಿರುವ ಲಗ್ನ (3)
13.ನೂರರ ಗುಂಪು (3)
16.ವಿಷ್ಣುವಿನ ವಾಹನ (3)
17.ತರಕಾರಿ ತರಲು ಈ ಆಕ್ಷೇಪಣೆ ! (4)

ಮೇಲಿಂದ ಕೆಳಕ್ಕೆ
1.ಕಬ್ಬಿಣದ ಭಾರೀ ಪೆಟ್ಟಿಗೆ (3)
2.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ! (2)
3.ಕೊನೆಗೆ ಚಾರನಿದ್ದಾಗಲೇ ಹರಡುವಿಕೆ (3)
4.ಅವಿವೇಕಿ ಇಲ್ಲಿದ್ದಾನೆ (4)
6.ನಾವೆ ನಡೆಸುವವ ತಿರುಗಿದ್ದಾನಲ್ಲಾ? (3)
7.ಕೆಲಸ ಮಾಡಲು ಬೇಕಾದ ಸಾಧನ (5)
10.ಶರ ಹಿಡಿದಿರುವ ಶೈವ ಭಕ್ತ ತಿರುಗಿದ್ದಾನೆ (3)
11.ಯೋಗವಿದ್ದರೆ ಇದು ಪ್ರಯೋಜನ! (4)
12.ಕನ್ನಡಿಗರ ಹೆಮ್ಮೆಯ ಭಾಷೆ (3)
14.ಕದ್ದಿರುವವನು ಹಿಡಿದಿರುವ ತೆನೆ (3)
15.ಸಂತತಿಯಲ್ಲಿರುವ ಸಾಧು ಕಾಣುತ್ತಿರುವನೇ (2)



6429ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊರವಂಕ 3.ಬಾಲರವಿ
5.ವಿಫಲ 6.ಕೆಸರು
8.ಗೈರತ್ತು 9.ಜನಾನಾ
10.ಪ್ರಹಾರ 11.ಅರ್ಚಕ
12.ರಿವಾಜು 14.ಬರಹ
16.ಕಪ್ಪುಹಣ 17.ಸೆರೆಮನೆ

ಮೇಲಿಂದ ಕೆಳಕ್ಕೆ:
1.ಗೊರಕೆ 2.ಕವಿ
3.ಬಾಲ 4.ವಿಪತ್ತು
7.ರುದ್ರನಾಟಕ 8.ಗೈರುಹಾಜರಿ
11.ಅಷ್ಟಕ 13.ಜುಲ್ಮಾನೆ
14.ಬಣ 15.ಹಸೆ

ಸುಡೊಕು 6813

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

8		6		4		3		5
			5		7			
	9	2		3		7		1
2	1		9		3	6		
					2			3
3	8			5			7	
9		8						7
	6			9			3	
4		3			1	2		6

6812 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

11 ಜೂನ್ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ಏಕಾದಶಿ ಗಂ. 22-37 ನಕ್ಷತ್ರ: ರೇವತಿ ಗಂ. 8-17 ಯೋಗ: ಶೋಭನ ಗಂ. 25-00 ಕರಣ: ಬವ ಗಂ. 11-53, ವೃಷಭ ಮಾಸದ 28 ನೇ ದಿನ. ಮಳೆ ನಕ್ಷತ್ರ : ಮೃಗಶಿರ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00, ಸೂರ್ಯೋದಯ : 06-07 ಸೂರ್ಯಾಸ್ತ : 06-53, ಮುಸ್ಲಿಂ ದಿನಾಂಕ : 25 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 6, 3

ಮೇಷ: ತಂದೆ ತಾಯಿಯ ಆರೋಗ್ಯ ಸುಧಾರಿಸಿ, ಮನೆಯಲ್ಲಿ ನೆಮ್ಮದಿಯ ವಾತಾವರಣ ಮೂಡಲಿದೆ. ಮೋಸದ ಸಾಧ್ಯತೆಗಳು ಇರುವ ಕಾರಣದಿಂದಾಗಿ ಲೆಕ್ಕಪತ್ರಗಳನ್ನು ಸರಿಯಾಗಿ ಪರಿಶೀಲಿಸಿ ಸಹಿ ಮಾಡಿ.

ವೃಷಭ: ಸರ್ಕಾರಿ ಗುತ್ತಿಗೆ ಕೆಲಸದ ವಿಪುಲ ಅವಕಾಶಗಳು ಒದಗಿ ಬರಲಿವೆ. ಆದಾಯದಲ್ಲಿ ಹೆಚ್ಚಳವಿರುವುದು. ಸಣ್ಣ ಸಣ್ಣ ವಿಚಾರಗಳೂ ದೊಡ್ಡ ರಾದ್ಧಾಂತವಾಗಿ ಪರಿಣಮಿಸಲಿದೆ. ಎಚ್ಚರದಿಂದ ಕಾರ್ಯ ನಿರ್ವಹಿಸಿ.

ಮಿಥುನ: ಸಂಘ ಸಂಸ್ಥೆಗಳು ಅಧಿಕಾರ ಪಡೆದುಕೊಳ್ಳುವ ವಿಚಾರದಲ್ಲಿ ವಾಮ-ಮಾರ್ಗವನ್ನು ಅನುಸರಿಸಬೇಡಿ. ಪ್ರತಿಭೆಯನ್ನು ಗುರುತಿಸಿಲ್ಲ ಎಂಬ ನೋವು ಇಂದೇ ಕೊನೆಯಾಗುವುದು.

ಕರ್ಕಾಟಕ: ಹೊಸ ಮನೆಗೆ ಒಪ್ಪುವಂಥ ಹೊಸ ಪೀಠೋಪಕರಣಗಳ ಖರೀದಿ ವಿಚಾರವಾಗಿ ಧನವ್ಯಯವಾಗಲಿದೆ. ಬೆನ್ನುನೋವು ಹೋಗಲಾಡಿಸಿಕೊಳ್ಳಲು ಚಿಕಿತ್ಸೆ ತೆಗೆದುಕೊಳ್ಳುವುದು ಅನಿವಾರ್ಯ.

ಸಿಂಹ: ಶೈಕ್ಷಣಿಕವಾಗಿ ಪ್ರಾಮಾಣಿಕ ಪ್ರಯತ್ನಗಳು ಯಶಸ್ಸು ಕಾಣುವ ಹಾದಿಯ-ಲ್ಲಿರುವುದು. ಜೀವನಕ್ರಮದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ.

ಕನ್ಯಾ: ಕಾರ್ಖಾನೆಯೊಂದನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವ ಅವಕಾಶಗಳು ಸ್ನೇಹಿತನ ಸಹಾಯದಿಂದ ನಡೆಸಬಹುದು. ವಿಪರೀತ ಕೆಲಸಗಳಿಂದ ದೇಹಾಲಸ್ಯ ತೋರಿ ವಿಶ್ರಾಂತಿಯ ಬದುಕನ್ನು ಬಯಸುವಿರಿ.

ತುಲಾ: ಅಭಿವೃದ್ಧಿಗೆ ಪೂರಕವಾದ ಹೊಸ ಅವಕಾಶಗಳ ಬಾಗಿಲು ತೆರೆಯಲಿದೆ. ನಿಯೋಜಿತ ಕೆಲಸಗಳನ್ನು ಅಕ್ಕರೆಯಿಂದ ಒಪ್ಪಿಕೊಳ್ಳಿ. ಹೊಸ ಕೆಲಸ ನಿಮಗಾಗಿ ಕಾದಿರುವುದು. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.

ವೃಶ್ಚಿಕ: ಅರ್ಹತೆ ಹೊಂದಿದವರಿಗೆ ಹೆಸರಾಂತ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕ ವೃತ್ತಿ ದೊರೆಯುವುದು. ಕೋರ್ಟು ವ್ಯವಹಾರದಲ್ಲಿ ಬಹುನಿರೀಕ್ಷಿತ ಜಯದ ಸಿಹಿಯನ್ನು ಅನಿರೀಕ್ಷಿತ ಸೋಲಿನ ಕಹಿ ಕಸಿಯಲಿದೆ.

ಧನು: ಹೀಯಾಳಿಸುವವರೇ ಸಹಾಯ ಕೋರಿ ಬರಲಿದ್ದಾರೆ. ಹಳೆಯ ವಾಹನ ಮಾರಾಟದ ವಿಷಯವನ್ನು ಕೈಬಿಡುವುದು ಉತ್ತಮ. ಕಾರ್ಯಸಾಧನೆಗೆ ವಾಮಮಾರ್ಗ ಬಳಸಬೇಡಿ.

ಮಕರ: ಮೇಲಧಿಕಾರಿಗಳು ನಿಮ್ಮೊಂದಿಗಿದ್ದಾರೆ ಎಂಬ ಭರವಸೆಯಿಂದ ಕೆಲಸ ಮಾಡದಿರಿ. ಊರಿನ ಅಥವಾ ಸುತ್ತಮುತ್ತಲಿನ ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ. ಆಧ್ಯಾತ್ಮಿಕ ವಿಚಾರಗಳತ್ತ ಮನಸ್ಸು ಹೊರಳಲಿದೆ.

ಕುಂಭ: ಜೀವನದಲ್ಲಿ ನಡೆದ ಕಹಿ ಘಟನೆಗಳನ್ನು ಪಾಠದ ರೂಪದಲ್ಲಿ ಮಗನಿಗೆ ಹೇಳುವ ಅನಿವಾರ್ಯ ಸನ್ನಿವೇಶ ಎದುರಾಗುವುದು. ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರಿ.

ಮೀನ: ರಾಜಕೀಯ ವಲಯದ ಕಾರ್ಯಕರ್ತರಿಗೆ ಮುನ್ನಡೆಯುವ ಅವಕಾಶಗಳು ಕೈ ತಪ್ಪಲಿವೆ. ಸಲಹೆ ಸೂಚನೆಗಳನ್ನು ಒಪ್ಪುವಂತೆ ವ್ಯಕ್ತಿಯ ಮನಃ ಪರಿವರ್ತನೆ ಮಾಡುವಲ್ಲಿ ಸಫಲರಾಗುತ್ತೀರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,242
ಇಂದಿನ ಅಂತ್ಯ:	23,214
ದಿನದ ಕನಿಷ್ಠ:	23,184
	27

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹640
12 ಕ್ಕೆ	₹88
ಮೈಸೂರು: 100 ಕ್ಕೆ	₹650

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹263
ಆರ್‌ಎಸ್‌ಎಸ್-5	₹256
ಗುಡ್ ಲಾಟ್	₹223

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಪ್ರಿ.ಬಿ)	₹400-696
ದ್ವಿತಳಿ (ಬಿ.ವಿ)	₹500-866

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1480 (1485)
ಸೂರ್ಯಕಾಂತಿ (ರಿಫೈನ್ಡ್)	₹1640 (1640)
ಪಾಮೋಲಿನ್	₹1465 (1465)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹22000
ಎಸಿ	₹14000
ಆರ್‌ಪಿ	₹18050
ಆರ್‌ಸಿ	₹9500

ಚಿನ್ನ ₹4,300, ಬೆಳ್ಳಿ ₹10 ಸಾವಿರ ಕುಸಿತ

ನವದೆಹಲಿ (ಪಿಟಿಐ): ಕಚ್ಚಾ ತೈಲ ದರ ಏರಿಕೆ ಮತ್ತು ಡಾಲರ್ ಮೌಲ್ಯದ ಸದೃಢತೆಯಿಂದಾಗಿ ಅಮೂಲ್ಯ ಲೋಹಗಳಿಗೆ ಬೇಡಿಕೆ ಕಡಿಮೆ ಆಗಿದೆ. ಹೀಗಾಗಿ, ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ದರ ಇಳಿದಿದೆ.

ಶೇ 99.9ರಷ್ಟು ಪರಿಶುದ್ಧತೆಯ 10 ಗ್ರಾಂ ಚಿನ್ನದ ದರವು ₹4,300 ಕಡಿಮೆಯಾಗಿ, ₹1.56 ಲಕ್ಷಕ್ಕೆ ಇಳಿದಿದೆ. ಬೆಳ್ಳಿ ಬೆಲೆಯು ಕೆ.ಜಿಗೆ ₹10 ಸಾವಿರ ಕಡಿಮೆಯಾಗಿ, ₹2,45,700ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)

10-06-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಪಾಮ್ ವಾರದ ಡೆಲಿವರಿ	1463 (1463)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1550)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,45,400 (1,51,800)
ಬೆಳ್ಳಿ ಕೆ.ಜಿಗೆ	2,34,000 (2,45,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎಂ.ಎಫ್: ₹64 ಸಾವಿರ ಕೋಟಿ ವಾಪಸ್

ಉದ್ಯಮದ ಒಟ್ಟು ಸಂಪತ್ತು ನಿರ್ವಹಣಾ ಮೌಲ್ಯವು ₹81.6 ಲಕ್ಷ ಕೋಟಿಗೆ ಇಳಿಕೆ

ನವದೆಹಲಿ (ಪಿಟಿಐ): ಮೇ ತಿಂಗಳಿನಲ್ಲಿ ದೇಶದ ಮ್ಯೂಚುವಲ್ ಫಂಡ್‌ಗಳಿಂದ (ಎಂ.ಎಫ್) ನಿವ್ವಳ ₹64 ಸಾವಿರ ಕೋಟಿ ಬಂಡವಾಳ ಹೊರಹರಿವು ದಾಖಲಾಗಿದೆ. ಏಪ್ರಿಲ್ ತಿಂಗಳಲ್ಲಿ ನಿವ್ವಳ ₹3.22 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮ್ಯೂಚುವಲ್ ಫಂಡ್‌ಗಳಲ್ಲಿ ಆಗಿತ್ತು.

ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್‌ಗಳಿಂದ ಹೂಡಿಕೆದಾರರು ಮೇ ತಿಂಗಳಲ್ಲಿ ₹96,948 ಕೋಟಿ ಮೊತ್ತವನ್ನು ಹಿಂಪಡೆದಿದ್ದು ಹೊರಹರಿವಿಗೆ ಒಂದು ಪ್ರಮುಖ ಕಾರಣ.

ತಕ್ಷಣಕ್ಕೆ ನಗದೀಕರಣ ಸಾಧ್ಯವಿರುವ ಹಾಗೂ ಅಲ್ಪಾವಧಿಯ ಫಂಡ್‌ಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಹೂಡಿಕೆ ಹಿಂಪಡೆಯಲಾಗಿದೆ. ಹಣಕಾಸು ವರ್ಷದ ಅಂತ್ಯದಲ್ಲಿ ನಗದು ಲಭ್ಯತೆಯು ಹೆಚ್ಚಿನ ಪ್ರಮಾಣದಲ್ಲಿ ಇತ್ತು, ಇದಾದ ನಂತರದ ಅವಧಿಯಲ್ಲಿ ಸಾಂಸ್ಥಿಕ ಹೂಡಿಕೆದಾರರು ಅಲ್ಪಾವಧಿಯ ಹೂಡಿಕೆಗಳನ್ನು ಹಿಂಪಡೆದಿರುವುದು ಈ ಪ್ರಮಾಣದ ಹೊರಹರಿವಿಗೆ ಒಂದು ಕಾರಣ ಎಂದು ತಜ್ಞರು ಹೇಳಿದ್ದಾರೆ.

ಬಂಡವಾಳದ ಹೊರಹರಿವಿನ ಪರಿಣಾಮವಾಗಿ ದೇಶದ ಮ್ಯೂಚುವಲ್ ಫಂಡ್ ಉದ್ಯಮ ನಿರ್ವಹಿಸುತ್ತಿರುವ ಒಟ್ಟು ಸಂಪತ್ತಿನ ಮೌಲ್ಯವು (ಎಯುಎಂ) ಮೇ ಅಂತ್ಯದ ವೇಳೆಗೆ ₹81.6 ಲಕ್ಷ ಕೋಟಿಗೆ ತಗ್ಗಿದೆ. ಇದು ಏಪ್ರಿಲ್‌ನಲ್ಲಿ ₹81.92 ಲಕ್ಷ ಕೋಟಿಯ ಮಟ್ಟದಲ್ಲಿತ್ತು.

ಮೇ ತಿಂಗಳಲ್ಲಿ ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ ಮೊತ್ತವು ಕಡಿಮೆ ಆಗಿದೆ. ಈ ವಿಭಾಗದ ಫಂಡ್‌ಗಳಲ್ಲಿ ನಿವ್ವಳ ₹22,908 ಕೋಟಿ ಹೂಡಿಕೆ ಮಾಡಲಾಗಿದೆ. ಇದು ಒಂದು ವರ್ಷದ ಅವಧಿಯಲ್ಲಿ ಆಗಿರುವ ಅತಿಕಡಿಮೆ ಹೂಡಿಕೆ. ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು, ಕಚ್ಚಾ ತೈಲದ ಬೆಲೆ ಏರಿಕೆಯು ಹೂಡಿಕೆದಾರರ ಮೇಲೆ ಪ್ರಭಾವ ಬೀರಿರುವುದು ಈ ರೀತಿ ಆಗಿರುವುದಕ್ಕೆ ಒಂದು ಕಾರಣ.

ಏಪ್ರಿಲ್‌ನಲ್ಲಿ ಈಕ್ವಿಟಿ ಆಧಾರಿತ ಫಂಡ್‌ಗಳಲ್ಲಿ ಒಟ್ಟು ₹38,440 ಕೋಟಿ ನಿವ್ವಳ ಹೂಡಿಕೆ ಆಗಿತ್ತು. ಇದಕ್ಕೆ ಹೋಲಿಸಿದರೆ ಮೇ ತಿಂಗಳಲ್ಲಿ ನಿವ್ವಳ ಹೂಡಿಕೆಯು ಶೇ 40ರಷ್ಟು ಕಡಿಮೆ ಆಗಿದೆ. ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಗೆ ಸಂಬಂಧಿಸಿದ ಮೇ ತಿಂಗಳ ಅಂಕಿ-ಅಂಶಗಳನ್ನು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಬುಧವಾರ ಬಿಡುಗಡೆ ಮಾಡಿದೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಆಗುವ ಹೂಡಿಕೆಗಳು ಕೂಡ ಮೇ ತಿಂಗಳಲ್ಲಿ ತುಸು ಕಡಿಮೆ ಆಗಿವೆ. ಏಪ್ರಿಲ್‌ನಲ್ಲಿ ಎಸ್‌ಐಪಿ ಮೂಲಕ ₹31,115 ಹೂಡಿಕೆ ಆಗಿತ್ತು. ಅದು ಮೇ ತಿಂಗಳಲ್ಲಿ ₹30,954 ಕೋಟಿಗೆ ತಗ್ಗಿದೆ.

ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳು, ಸರಕುಗಳ ಬೆಲೆಯಲ್ಲಿನ ಅಸ್ಥಿರತೆಯು ಮ್ಯೂಚುವಲ್ ಫಂಡ್ ಉದ್ಯಮದ ನಿರ್ವಹಣಾ ಸಂಪತ್ತಿನ ಮೌಲ್ಯ ಕಡಿಮೆ ಆಗಲು ಪ್ರಮುಖ ಕಾರಣಗಳು ಎಂದು ಎಎಂಎಫ್‌ಐ ಮುಖ್ಯ ಕಾರ್ಯನಿರ್ವಾಹಕ ವೆಂಕಟ ಚಲಸಾನಿ ಹೇಳಿದ್ದಾರೆ.

ಚಿನ್ನದ ಇಟಿಎಫ್: ಹೂಡಿಕೆ ಹಿಂತೆಗೆತ

ಚಿನ್ನದ ಇಟಿಎಫ್‌ಗಳಿಂದ ಮೇ ತಿಂಗಳಲ್ಲಿ ₹725 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿದೆ. ಇದರೊಂದಿಗೆ ಸತತ 13 ತಿಂಗಳುಗಳಿಂದ ಈ ಇಟಿಎಫ್‌ಗಳಲ್ಲಿ ಆಗುತ್ತಿರುವ ನಿವ್ವಳ ಹೂಡಿಕೆಗೆ ತಡೆ ಬಿದ್ದಂತಾಗಿದೆ.

ಚಿನ್ನ ಖರೀದಿಯನ್ನು ಮುಂದೂಡಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದ್ದುದು ಹಾಗೂ ಹಲವಾರು ಆಸ್ತಿ ನಿರ್ವಹಣಾ ಕಂಪನಿಗಳು ಚಿನ್ನದ ಇಟಿಎಫ್‌ಗಳಲ್ಲಿ ಹೊಸ ಹೂಡಿಕೆಗೆ ಅವಕಾಶ ಕೊಡದೆ ಇದ್ದುದು ಇದಕ್ಕೆ ಪ್ರಮುಖ ಕಾರಣಗಳಾಗಿವೆ.

2025ರ ಮೇ ನಂತರದಲ್ಲಿ ಚಿನ್ನದ ಇಟಿಎಫ್‌ಗಳಲ್ಲಿ ಒಟ್ಟು ₹70 ಸಾವಿರ ಕೋಟಿಗಿಂತ ಹೆಚ್ಚು ಹೂಡಿಕೆ ಆಗಿದೆ. ಏಪ್ರಿಲ್‌ನಲ್ಲಿ ಈ ಇಟಿಎಫ್‌ಗಳಲ್ಲಿ ಒಟ್ಟು ₹3,040 ಕೋಟಿ ಹೂಡಿಕೆ ಆಗಿತ್ತು.

ವಿವಿಧ ಬಗೆಯ ಫಂಡ್‌ಗಳಲ್ಲಿ ಮೇ ಹೂಡಿಕೆ ಹೀಗಿದೆ

₹5,175 ಕೋಟಿ ಫ್ಲೆಕ್ಸಿಕ್ಯಾಪ್ ಫಂಡ್‌ಗಳಲ್ಲಿ ಆಗಿರುವ ನಿವ್ವಳ ಹೂಡಿಕೆ

₹4,945 ಕೋಟಿ ಸ್ಮಾಲ್‌ಕ್ಯಾಪ್ ಫಂಡ್‌ಗಳಲ್ಲಿ ಆಗಿರುವ ನಿವ್ವಳ ಹೂಡಿಕೆ

₹4,383 ಕೋಟಿ ಮಿಡ್‌ಕ್ಯಾಪ್ ಫಂಡ್‌ಗಳಲ್ಲಿ ಆಗಿರುವ ನಿವ್ವಳ ಹೂಡಿಕೆ

₹1,593 ಕೋಟಿ ಲಾರ್ಜ್‌ಕ್ಯಾಪ್ ಫಂಡ್‌ಗಳಲ್ಲಿ ಆಗಿರುವ ನಿವ್ವಳ ಹೂಡಿಕೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹32650-32650
ಬೆಂಗಳೂರು	₹36000-39000
ತುರುವೇಕೆರೆ	₹29000-31000

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಜನಸೇವೆಯ ಮಾತನಾಡುವ ಸಚಿವರು ಪದೇ ಪದೇ ಖಾತೆ ಬದಲಾವಣೆಯ ಒತ್ತಡ ಹೇರುತ್ತಿರುವುದು ಸರಿಯೇ?

ಸರಿ | ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಅಡಿಕೆ ಧಾರಣೆ

ಕುಮಟಾ				ಸಿದ್ದಾಪುರ	
ಚಿಪ್ಪು	30709-33999	ಹೊಸತು	30000-47000	ಬಿಳಿಗೋಟು	25900-35659
ಕೋಕ	17098-32999	ಹಳತು	49000-55000	ಚಾಲಿ	39899-48059
ಫ್ಯಾಕ್ಟರಿ	13509-25600	**ಶಿವಮೊಗ್ಗ**		ಕೋಕ	21689-27359
ಹಳೆಚಾಲಿ	45599-48511	ಸರಕು	57399-95039	ಕೆಂಪುಗೋಟು	30900-35799
ಹೊಸಚಾಲಿ	41569-47099	ಬೆಟ್ಟೆ	51599-62899	ರಾಶಿ	51899-53089
ಪುತ್ತೂರು		ರಾಶಿ	48009-54099	ತಟ್ಟಿಬೆಟ್ಟೆ	35900-43899
ಕೋಕ	20000-33500	ಗೊರಬಲು	25015-45589		

ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದ ಬೆಲೆ

ರಬ್ಬರ್ ದರ ಕೆ.ಜಿ.ಗೆ ₹263

ಪ್ರಜಾವಾಣಿ ವಾರ್ತೆ

ಮಂಗಳೂರು: ರಬ್ಬರ್ ಬೆಳೆಗೆ ಬುಧವಾರ ಕೆ.ಜಿ.ಯೊಂದಕ್ಕೆ ಗರಿಷ್ಠ ₹263 ದೊರೆತಿದ್ದು, ಇದು ಸಾರ್ವಕಾಲಿಕ ದಾಖಲಾಗಿದೆ.

ಕ್ಯಾಂಪ್ಕೊ ಮಾರುಕಟ್ಟೆಯಲ್ಲಿ ಆರ್‌ಎಸ್‌ಎಸ್-4 ದರ್ಜೆಯ ರಬ್ಬರ್‌ಗೆ ಕೆ.ಜಿ.ಯೊಂದಕ್ಕೆ ಕನಿಷ್ಠ ₹252ರಿಂದ ಗರಿಷ್ಠ ₹263ರವರೆಗೆ, ಆರ್‌ಎಸ್‌ಎಸ್-5 ದರ್ಜೆಗೆ ₹222ರಿಂದ ಗರಿಷ್ಠ ₹252ರವರೆಗೆ ಧಾರಣೆ ದೊರೆತಿದೆ.

'ದಶಕದ ಹಿಂದೆ ರಬ್ಬರ್ ಕೆ.ಜಿ.ಗೆ ಗರಿಷ್ಠ ₹245ರವರೆಗೆ ದರ ದೊರೆತಿತ್ತು. ನಂತರದ ವರ್ಷಗಳಲ್ಲಿ ರಬ್ಬರ್ ದರ ಏರಿಳಿತವಾಗುತ್ತಿತ್ತು. ಕಳೆದ ವರ್ಷ ಕೆ.ಜಿ.ಗೆ ₹130ರವರೆಗೆ ಇಳಿಕೆಯಾಗಿ ಬೆಳೆಗಾರರು ಕಂಗಾಲಾಗಿದ್ದರು. ಕೆಲವು ದಿನಗಳಿಂದ ರಬ್ಬರ್ ದರ ಏರುಗತಿಯಲ್ಲಿ ಸಾಗಿದೆ. ಬೇಡಿಕೆ ಹೆಚ್ಚುತ್ತಿದ್ದು, ಉತ್ಪಾದನೆ ಕಡಿಮೆಯಾಗುತ್ತಿದೆ. ಮಧ್ಯಪ್ರಾಚ್ಯ ದೇಶಗಳಲ್ಲಿ ಎದುರಾಗಿರುವ ಸಂಘರ್ಷದಿಂದ ಕಚ್ಚಾತೈಲದ ಬೆಲೆ ಏರಿಕೆಯಾಗಿದ್ದು, ಕೃತಕ ರಬ್ಬರ್ ಉತ್ಪಾದನೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡಿದೆ. ಈ ಎಲ್ಲ ಅಂಶಗಳು ರಬ್ಬರ್ ದರ ಏರಿಕೆಗೆ ಕಾರಣವಾಗಿರಬಹುದು' ಎನ್ನುತ್ತಾರೆ ಬೆಳೆಗಾರರು.

'ರಬ್ಬರ್ ಮರಗಳಿಗೆ ಟ್ಯಾಪಿಂಗ್ ಮಾಡಲು ನುರಿತ ಕಾರ್ಮಿಕರು ಸಿಗುತ್ತಿಲ್ಲ. ಕೃಷಿಕರು ರಬ್ಬರ್ ಮರಗಳನ್ನು ಕಡಿದು ಪರ್ಯಾಯ ಬೆಳೆಯತ್ತ ಮುಖ ಮಾಡಿದ್ದಾರೆ. ವರ್ಷದಿಂದ ವರ್ಷಕ್ಕೆ ರಬ್ಬರ್ ಬೆಳೆ ಇಳಿಮುಖವಾಗುತ್ತಿದ್ದು, ಬೇಡಿಕೆ ಅಧಿಕವಾಗುತ್ತಿದೆ. ಮೊದಲ ಸಲ ರಬ್ಬರ್‌ಗೆ ಗರಿಷ್ಠ ಧಾರಣೆ ದೊರೆತಿದೆ' ಎನ್ನುತ್ತಾರೆ ರಬ್ಬರ್ ಬೆಳೆಗಾರ ಮುರಳಿ ಮುಳ್ಳಂಕೊಚ್ಚಿ.

ಟ್ಯಾಪಿಂಗ್ ಮಾಡಿದ ಮರಗಳು

'ಕೃಷಿ ಕಾರ್ಮಿಕರ ಕೂಲಿ ಹೆಚ್ಚಳ ಆಗಿದೆ. ಈ ದರ ಸ್ಥಿರವಾಗಿ ಉಳಿದರೆ ಬೆಳೆಗಾರರಿಗೆ ಲಾಭ. ಉತ್ಪಾದನೆ ಕಡಿಮೆ ಇರುವ ಕಾರಣ ದರ ಇನ್ನೂ ಏರಿಕೆಯಾಗಬಹುದೆಂಬ ನಿರೀಕ್ಷೆಯಲ್ಲಿದ್ದೇವೆ' ಎಂದು ಮತ್ತೊಬ್ಬ ಬೆಳೆಗಾರರು ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

'ಐ.ಟಿ: ಭಾರಿ ನೇಮಕ ಅಂತ್ಯ'

ಬೆಂಗಳೂರು: 'ಕೃತಕ ಬುದ್ಧಿಮತ್ತೆ ಯುಗದ ಆರಂಭದಿಂದಾಗಿ ಮಾಹಿತಿ ತಂತ್ರಜ್ಞಾನ (ಐ.ಟಿ) ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ನೇಮಕಾತಿಗಳು ಅಂತ್ಯಗೊಳ್ಳುತ್ತಿವೆ' ಎಂದು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ.

ಆದರೆ, ಕೃತಕ ಬುದ್ಧಿಮತ್ತೆಯು (ಎ.ಐ) ಹೊಸ ಹುದ್ದೆ ಮತ್ತು ಅವಕಾಶಗಳನ್ನು ಸೃಷ್ಟಿಸುವ ಆಶಾವಾದ ಇದೆ ಎಂದು ಹೇಳಿದ್ದಾರೆ.

ಕಂಪನಿಯು ತನ್ನ ವ್ಯವಹಾರಗಳಲ್ಲಿ ಎ.ಐ ಏಜೆಂಟ್ ಬಳಕೆಯನ್ನು ಈಗಾಗಲೇ ಹೆಚ್ಚಿಸಿಕೊಂಡಿದೆ. ಹೀಗಾಗಿ, ಹಿಂದಿನ ವರ್ಷಗಳಲ್ಲಿ ನೇಮಕಾತಿ ಮಾಡಿಕೊಂಡ ಬಗೆಯಲ್ಲಿ ಹೆಚ್ಚಿನ ನೇಮಕಾತಿಯನ್ನು ಇನ್ನು ಮುಂದೆ ಮಾಡಿಕೊಳ್ಳುವುದಿಲ್ಲ ಎಂದು ಕಂಪನಿಯ 31ನೇ ವಾರ್ಷಿಕ ಮಹಾಸಭೆಯಲ್ಲಿ ಹೇಳಿದ್ದಾರೆ.

ಪ್ರತಿಭಾವಂತರ ನೇಮಕಾತಿ ಮತ್ತು ಎ.ಐ ಏಜೆಂಟ್‌ಗಳ ಬಳಕೆಯನ್ನು ಹೆಚ್ಚಿಸಿಕೊಳ್ಳುವುದರ ಮೇಲೆ ಕಂಪನಿ ಗಮನಹರಿಸಿದೆ. ಮುಂದಿನ ಮೂರು ವರ್ಷಗಳಲ್ಲಿ ಕಂಪನಿಯು ಮಾನವ ಉದ್ಯೋಗಿಗಳಷ್ಟೇ ಸಂಖ್ಯೆಯಲ್ಲಿ ಎ.ಐ ಏಜೆಂಟ್‌ಗಳನ್ನು ಹೊಂದಲಿದೆ ಎಂದು ತಿಳಿಸಿದ್ದಾರೆ.

ಟಿಸಿಎಸ್ 5 ಲಕ್ಷಕ್ಕೂ ಅಧಿಕ ಎ.ಐ ಏಜೆಂಟ್‌ಗಳನ್ನು ಹೊಂದುವ ದಿನವು ದೂರ ಉಳಿದಿಲ್ಲ ಎಂದಿದ್ದಾರೆ.

2025-26ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ಸಿಬ್ಬಂದಿ ಸಂಖ್ಯೆ 23,460 ಕಡಿಮೆಯಾಗಿದ್ದು, 5,84,519ರಷ್ಟಿದೆ.

ಜಾಗತಿಕವಾಗಿ ಐ.ಟಿ ಉದ್ಯಮದ ಒಟ್ಟು ಮೌಲ್ಯವು ಅಂದಾಜು ₹152 ಲಕ್ಷ ಕೋಟಿ. ಮುಂದಿನ ಒಂದು ದಶಕದಲ್ಲಿ ಇದು ₹286 ಲಕ್ಷ ಕೋಟಿಗೆ ತಲುಪುವ ನಿರೀಕ್ಷೆ ಇದೆ. ಕೃತಕ ಬುದ್ಧಿಮತ್ತೆಯು ಎಲ್ಲ ವಲಯಗಳಲ್ಲಿ ತಂತ್ರಜ್ಞಾನವನ್ನು ಹೆಚ್ಚಿಸಲಿದೆ ಎಂದು ತಿಳಿಸಿದ್ದಾರೆ.

ಟಿಸಿಎಸ್ ಎ.ಐ ವರಮಾನವು ಸ್ಥಿರವಾಗಿ ಬೆಳೆಯುತ್ತಿದೆ. ಮಾರ್ಚ್ ತ್ರೈಮಾಸಿಕದಲ್ಲಿ, ₹22,876 ಕೋಟಿ ವರಮಾನ ಗಳಿಸಿದ್ದು, ಶೇ 22.4ರಷ್ಟು ಪ್ರಗತಿ ಸಾಧಿಸಿದೆ. ಬಹಳಷ್ಟು ಎ.ಐ ಕೌಶಲಗಳನ್ನು ನಿರ್ಮಿಸುವ ಅಗತ್ಯವಿದೆ ಎಂದು ಹೇಳಿದ್ದಾರೆ.

ಪಿಒಕೆಯಲ್ಲಿ ಪ್ರತಿಭಟನೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ವಿವಿಧೆಡೆ ಬುಧವಾರವೂ ಅಂಗಡಿ - ಮುಂಗಟ್ಟು, ಮಾರುಕಟ್ಟೆಗಳನ್ನು ಬಂದ್ ಮಾಡಿ ಜನರು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ಪಾಕಿಸ್ತಾನದ ಭದ್ರತಾ ಪಡೆಗಳು ಪಿಒಕೆಯಲ್ಲಿ ನಡೆಸಿದ ನಾಗರಿಕರ ಹತ್ಯೆ ಖಂಡಿಸಿ ಜಂಟಿ ಅವಾಮಿ ಕ್ರಿಯಾ ಸಮಿತಿಯು (ಜೆಎಎಸಿ) ಪ್ರತಿಭಟನೆಗೆ ಮಂಗಳವಾರ ಕರೆ ನೀಡಿತ್ತು. ಜೆಎಎಸಿ ಕರೆಗೆ ಸಾರ್ವಜನಿಕರೂ ಬೆಂಬಲ ವ್ಯಕ್ತಪಡಿಸಿ, ಬಂದ್‌ಗೆ ಸಹಕಾರ ನೀಡಿದ್ದಾರೆ.

ಪಿಒಕೆಯ ವಿವಿಧ ಭಾಗಗಳಲ್ಲಿ ರಸ್ತೆಗಳು ಜನರಿಲ್ಲದೆ ಬಿಕೋ ಎನ್ನುತ್ತಿದ್ದವು, ವಾಹನಗಳ ಸಂಚಾರವೂ ವಿರಳವಾಗಿತ್ತು ಎಂದು ಬಿಬಿಸಿ ಮತ್ತು ಡಾನ್ ಪತ್ರಿಕೆಗಳು ವರದಿ ಮಾಡಿವೆ.

ಜೆಎಎಸಿಯ ಸುಮಾರು 2 ಸಾವಿರ ಪ್ರತಿಭಟನಕಾರರು ಭಿಂಬರ್‌ನಿಂದ ಮೀರ್‌ಪುರ ಮಾರ್ಗವಾಗಿ ಮುಜಾಫರಾಬಾದ್‌ಗೆ ಪ್ರತಿಭಟನಾ ಜಾಥಾ ನಡೆಸುತ್ತಿದ್ದು, ಪ್ರತಿಭಟನಾ ಮಾರ್ಗ, ಇತರ ಪ್ರದೇಶ ಗಳಲ್ಲಿ ಗಸ್ತಿಗಾಗಿ ಪೊಲೀಸರು ಮತ್ತು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಮಿರ್‌ಪುರದ ಖಾಯಿದ್ -ಎ- ಆಜಾಂ ಕ್ರೀಡಾಂಗಣದಲ್ಲಿ ನೂರಾರು ಮಂದಿ ಜಮಾಯಿಸಿ, ಪ್ರತಿಭಟನೆ ನಡೆಸಿದರು ಎಂದೂ ವರದಿಯಾಗಿದೆ.

ವಕೀಲರ ಬೆಂಬಲ: ಜೆಎಎಸಿಯ ಪ್ರಮುಖ ಸದಸ್ಯರಾದ ಹಿರಿಯ ವಕೀಲ ಅಮ್ಜದ್ ಅಲಿ ಖಾನ್ ಅವರ ಬಂಧನ ಖಂಡಿಸಿ ಪಿಒಕೆ ಬಾರ್ ಕೌನ್ಸಿಲ್ ಕೂಡ ಪ್ರತಿಭಟನೆಗೆ ಕರೆ ನೀಡಿದೆ. ವಕೀಲರು ಕೂಡ ನ್ಯಾಯಾಲಯದ ಕಲಾಪಗಳನ್ನು ಬುಧವಾರ ಬಹಿಷ್ಕರಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ

ಶ್ರೀಮತಿ ಡಿ. ಗೌರಮ್ಮ
(ಲೇಟ್ ಶ್ರೀ ಪಿ. ನರಸಿಂಹಯ್ಯನವರ (ಅಬಕಾರಿ ಗುತ್ತಿಗೆದಾರರು) ಧರ್ಮಪತ್ನಿ)
ತಾ|| 01-06-2026 ಸೋಮವಾರದಂದು ನಮ್ಮ ತಾಯಿಯವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ 11-06-2026ನೇ ಗುರುವಾರ ಸಂಜೆ 7.00ಕ್ಕೆ ನಮ್ಮ ಸ್ವಗೃಹ ಜಯನಗರ, ನಂ.510, 46ನೇ ಅಡ್ಡರಸ್ತೆ, 5ನೇ ಬಡಾವಣೆ, 9ನೇ ಮುಖ್ಯರಸ್ತೆ, ಜಯನಗರ, ಬೆಂಗಳೂರು - 560 041.
(ಲ್ಯಾಂಡ್ ಮಾರ್ಕ್: ಮುಗ್ಧ ಸಿಲ್ಕ್ ಸ್ಯಾರಿ ಶೋರೂಂ ಪಕ್ಕ)
ಇಲ್ಲಿ ನಡೆಸಲು ನಿಶ್ಚಯಿಸಲಾಗಿದೆ.
ಆದ್ದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ
ಇಂತಿ,
ಮಕ್ಕಳು ಹಾಗೂ ಮೊಮ್ಮಕ್ಕಳು

ತೃತೀಯ ವರ್ಷದ ಪುಣ್ಯಸ್ಮರಣೆ

ನಿಧನ : 11-06-2023
ಶ್ರೀಮತಿ ಮುನಿಯಮ್ಮ (ಹೊಸೂರಮ್ಮ) ರವರು
ಶ್ರೀ ಮಾರುತಿ ಫಾರಂ
ಕೊಡಿಗೇಹಳ್ಳಿ, ಬೆಂಗಳೂರು-560092
ನಿಮ್ಮ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಸದಾ ನಿಮ್ಮ ಸ್ಮರಣೆಯಲ್ಲಿರುವೆಂದು ಪ್ರಾರ್ಥಿಸುವೆ.
ಇಂತಿ ದುಃಖತಪ್ತರು: ಶ್ರೀ ಕೆ.ಆರ್.ರಾಜು
ಸಹೋದರರು ಮತ್ತು ಸಹೋದರಿಯರು
ಸೊಸೆಯಂದಿರು ಹಾಗೂ ಮೊಮ್ಮಕ್ಕಳು

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ
ಶ್ರೀಮತಿ ಮತ್ತು ಶ್ರೀ ಜೆ. ಸುದರ್ಶನ್
ನಂ.7, 2ನೇ ಮುಖ್ಯರಸ್ತೆ, ಓ.ಎಂ.ಬಿ.ಆರ್ ಲೇಔಟ್, ಚಿಕ್ಕ ಬಾಣಸವಾಡಿ, ಬೆಂಗಳೂರು-560043

ತಾ|| 30.05.2026ನೇ ಶನಿವಾರ ಮಧ್ಯಾಹ್ನ 3:15 ಘಂಟೆಗೆ ನಮ್ಮ ತೀರ್ಥ ರೂಪ ಸಮಾನರಾದ ನನ್ನ ತಂದೆಯವರು
ಶ್ರೀ ಗೌಡರ ಪಿ. ಜಗದೀಶ ರೆಡ್ಡಿಯವರು
(ಲೇಟ್ ಜಿ.ಪಿ. ಪಾಪರೆಡ್ಡಿಯವರ ಮಗ)
ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ತತ್ಸಂಬಂಧವಾದ ಪುಣ್ಯಾರ್ಚನೆ ವೈಕುಂಠ ಸಮಾರಾಧನೆಯನ್ನು ತಾ|| 11.06.2026ನೇ ಗುರುವಾರ ಬೆಳಿಗ್ಗೆ 9:00 ಘಂಟೆಗೆ ಓ.ಎಂ.ಬಿ.ಆರ್ ಲೇಔಟ್, ಚಿಕ್ಕ ಬಾಣಸವಾಡಿಯಲ್ಲಿರುವ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಆದ್ದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಧರ್ಮಪತ್ನಿ ಶ್ರೀಮತಿ ಪ್ರೇಮ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬದವರು

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತುರ್ತಾಗಿ ಬೇಕಾಗಿದ್ದಾರೆ: ಪ್ರಮುಖ ಮುದ್ರಣ ಮತ್ತು ಪ್ಯಾಕೇಜಿಂಗ್ ಕಂಪನಿ - ಅರುಣೋದಯ ಪ್ರಿಂಟ್‌ಪ್ಯಾಕ್ ಪ್ರೈವೇಟ್ ಲಿಮಿಟೆಡ್, ಹೈದರಾಬಾದ್ - 6 ಕಲರ್ ಆಫ್‌ಸೆಟ್ ಪ್ರಿಂಟಿಂಗ್ & 2 ಕಲರ್ ಪರ್ಫೆಕ್ಟರ್ ಪ್ರಿಂಟಿಂಗ್ ಆಪರೇಟರ್‌ಗಳು. ಸಂಪರ್ಕಿಸಿ: 9849192963

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಮೊದಲ ಆದ್ಯತೆ. 19,000 -25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 7090177446

Wanted

ಮನೆಯಿಂದಲೇ ಮಾಡುವ ಕೆಲಸ, ಆಫೀಸ್ ಕೆಲಸ, ಪ್ಯಾಕಿಂಗ್ ಪೀಕಿಂಗ್ ಡೇಟಾ ಎಂಟ್ರಿ, ಬಡವರಿಗೆ ಮೊದಲ ಆದ್ಯತೆ ಸಂಪರ್ಕಿಸಿ: 8951835051, 8951874031

ವ್ಯಾಪಾರ

Business to Business

Business

ಶೂನ್ಯದಿಂದ ಶೂನ್ಯದವರಿಗೆ. ನೊಂದವರ ಜನ ಸೇವಾ ಟ್ರಸ್ಟ್ (ರಿ) ಶೇಷಾದ್ರಿಪುರಂ ಬೆಂಗಳೂರು. ಗೋಲ್ಡ್ ಚಿಟ್ ಫಂಡ್ 1ಲಕ್ಷದಿಂದ - 5 ಲಕ್ಷ , 10ಲಕ್ಷದವರಿಗೆ ಮತ್ತು 1 ಲಕ್ಷದಿಂದ - 5 ಲಕ್ಷದವರಿಗೆ , ಸ್ವಂತ ಮನೆ, ಮತ್ತು ಬಿಸಿನೆಸ್, ಲೋನ್ ಕೂಡಲಾಗುವುದು. ಸಂಪರ್ಕಿಸಿ : 9036316959

ವೈಯಕ್ತಿಕ

Change of Name

I AJAY S/o Sanyam Tirpathi R/O E-11,Mangalore have changes my name to Ajay Tirapathi

PUBLIC NOTICE

IN THE COURT OF THE II ADDITIONAL SENIOR CIVIL JUDGE AT NELAMANGALA
O.S.NO.223/2025

N.G. Ramaprasad ...PLAINTIFF
and
SMT. Kamalamma ...DEFENDANTS

Paper Publication Draft under Order V Rule 20 CPC Summons to the Proposed Defendants No.2,5,10,16,17, 21 and 23.

Whereas the Plaintiff Sri. N.G. Ramaprasad, have filed the case for declaration and consequential relief with regard to the Suit Schedule Property. You are hereby summoned to appear in the Court in person or by a pleader duly instructed, and able to answer all material questions relating to the case, or who shall be accompanied by some person able to answer all such questions, on the 15-07-2026 at 11 o' clock to answer the claim, and you are directed to produce on that day all the documents upon which you intend to rely in support of your defense.

DEFENDANTS

SL No.	NAME AND ADDRESS OF THE PURCHASER	Defendant Nos.
1.	Smt. Kamalamma d/o Late Chikkarangappa @ Rangaiah aged 56 years W/o Chikkarangaiah R/a Laggere Village Peenya 2nd Stage, Bangalore-560010	1
2.	Smt. Puttarangamma W/o Late, N.M.Rangaiah, Since deceased by LR'S R/a. OOP. TO Municipal office, Tumukur Main Road, Nelamangala, Bangalore Rural District.	2
3.	Sri. N.R.Vishwanathan, major 2nd son S/o Late, shri. N.M. Rangaiah R/a No. 85, 13th Main Road, 4th Block (East) Jayanagara, Bangalore-560011.	2(a)
4.	Sri. N,R. Jaganath, Major 3rd Son S/o Late Shri N.M. Rangaiah R/at. No. 1641, B.H. Road, Opposite to Municipal office Thaluk office Road Nelamangala- 562123, Bangalore District.	2(b)
5.	Shri. N.R. Parashwanath, Major 4th son, S/o Late Shri. N.M. Rangaiah, P.W.D. Contractor, No. 1341, SS, Road, Sunrise School Road, Subhashnagara, Opp. Anjaneya Temple, Nelamangala-562123, Bangalore District,	2(c)
6.	Shri. N.R. Amarnath, Major, Grandson S/o Late, Dr.N.R. Ranganath, 1st son Leelavathi Extension, Maddur, Mandya District	2(d)
7.	Smt. Lakshmidevamma, Major 1st daughter, D/o Late, Shri, N.M. Rangaiah, W/o Late Dr. B.Gangappa, No. 1659/21,21,2nd Cross Road Ramamohanapura, Nagappa block, Srirampuram, Bangalore,-560011	2(e)
8.	Smt. Yashodamma, Major 2nd Daughter, D/o Late Sri. N.M. Rangaiah, W/o Dr. M. Basavaraju, No. 33, 1st Block (East) Jayanagara Bangalore-560011	2(f)
9.	Smt. Kantha Devi Major, 3rd Daughter, D/o Late, Shri, N.M. Rangaiah W/o Bylanjanappa No. 269 5th B Main Road BEMCO Layout (BHEL) 2nd Stage, BTS Garage, Opposite Road, Vijayanagara, Bangalore-560040	2(g)
10.	Smt. Rama Devi, Major, 4th Daughter, D/o Late Sri. N.M. Rangaiah, W/o Sri Sridhar, NO, 1504, 3d Main Road, M.C. Colony, B" Block, (Adjacent to police station) Davanagere, Chitradurga District.	2(h)
11.	Smt. Sudha, Major 5th Daughter, D/o Late, Shri N.M. Rangaiah,W/o Anathraju, No. 3574, Vijayanagara, Narasanna layout, Nelamangala -562123, Bangalore District.	2(i)

SCHEDULE-1: Land measuring 3 Acres 11guntas in sy No. 6 of Kempalingana-halli, Kasba Hobli, Nelamangala Taluk and the same is Bounded on the. **East by** : Land originally belonging to Balgai ram, **West by**: Land originally belonging to muddanna, **North by:** Road, **South by:** Kunigal road.

SCHEDULE-2: Land measuring 21 Guntas in Sy.No. 7/13 of Kempalingana-halli Kasaba Hobli, Nelamangala Taluk and the same is bounded on the: **East by:** Marigangappa Land, **West by**: Siddaiah's Land and kunigal raod, **North by**: Kunigal Road, **South by**: Lands of dasaiah and others.

Take notice that, in default of your appearance on the day before mentioned, the suit will be heard determined in your absence. Given under my hand and seal of the Court this the 9th Day of June 2026.

By Order of the Court
SHERISTEDAR, Court Of Senior Civil Judge & Nelamangala
Advocate for Plaintiff, B.E. Shreedhar B.A.L. LL.B.
#15th 1st Floor, D.G. Groups, HAL Society Building 1st Cross C.K.C. Garden Near BLO Hospital, K.H. Road, Bengaluru-560027.
Bengaluru 09/06/26

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಿಲಯನ್ಸ್, ಮೆಟಾದಿಂದ ದತ್ತಾಂಶ ಕೇಂದ್ರ

ಮುಂಬೈ (ಎಎಫ್‌ಪಿ): ಫೇಸ್‌ಬುಕ್‌ನ ಮಾತೃಸಂಸ್ಥೆ ಮೆಟಾ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಜೊತೆಯಾಗಿ ಗುಜರಾತ್‌ನಲ್ಲಿ ಎ.ಐ. ಬಲದ ದತ್ತಾಂಶ ಕೇಂದ್ರವನ್ನು ನಿರ್ಮಿಸಲಿವೆ. ಇದು ಜಾಮ್‌ನಗರದಲ್ಲಿ ನಿರ್ಮಾಣ ಆಗಲಿದೆ.

ಒಪ್ಪಂದದ ಭಾಗವಾಗಿ ರಿಲಯನ್ಸ್ ಕಂಪನಿಯು 168 ಮೆಗಾವಾಟ್ ಸಾಮರ್ಥ್ಯದ ದತ್ತಾಂಶ ಕೇಂದ್ರ ಅಭಿವೃದ್ಧಿಪಡಿಸಲಿದೆ. ಇದು ಎರಡು ವರ್ಷಗಳಲ್ಲಿ ನಿರ್ಮಾಣ ಆಗಲಿದೆ. ಮೆಟಾ ಕಂಪನಿಯು ಈ ಕೇಂದ್ರದ ಸಾಮರ್ಥ್ಯವನ್ನು ಗುತ್ತಿಗೆ ಆಧಾರದಲ್ಲಿ ಬಳಸಿಕೊಳ್ಳಲಿದೆ.

ಒಪ್ಪಂದದ ಹಣಕಾಸು ಆಯಾಮದ ಬಗ್ಗೆ ಕಂಪನಿಗಳು ಮಾಹಿತಿ ಒದಗಿಸಿಲ್ಲ. 'ಮೆಟಾ ಕಂಪನಿಯಂತಹ ಜಾಗತಿಕ ತಂತ್ರಜ್ಞಾನ ನಾಯಕನ ಅಗತ್ಯಕ್ಕೆ ತಕ್ಕಂತೆ ನಿರ್ಮಾಣ ಮಾಡಿರುವ ಭಾರತದ ಮೊದಲ ದತ್ತಾಂಶ ಕೇಂದ್ರ ಇದು' ಎಂದು ರಿಲಯನ್ಸ್ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ.

ಇಸ್ರೇಲ್ ವೈಮಾನಿಕ ದಾಳಿ: ನಾಲ್ವರ ಸಾವು

ಬೈರೂತ್ (ಎಎಫ್‌ಪಿ): ಲೆಬನಾನ್ ದಕ್ಷಿಣ ಭಾಗದ ಮೇಲೆ ಬುಧವಾರ ಇಸ್ರೇಲ್ ವೈಮಾನಿಕ ದಾಳಿ ನಡೆಸಿದ್ದು, 12 ಮಂದಿ ಮೃತಪಟ್ಟಿದ್ದಾರೆ ಎಂದು ಲೆಬನಾನ್‌ನ ವೈದ್ಯಕೀಯ ಇಲಾಖೆ ವರದಿ ಆಧರಿಸಿ ಇಲ್ಲಿನ ಸರ್ಕಾರಿ ಮಾಧ್ಯಮ ವರದಿ ಮಾಡಿದೆ.

'ವೈಮಾನಿಕ ದಾಳಿಗೆ ಟ್ಯಾರ್ ಡಿಬ್ಬಾ ನಗರದಲ್ಲಿ ಎಂಟು ಮಂದಿ, ಡೈರ್ ಖಾನನ್ ಅಲ್ ನಹ್ರ್‌ನಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಒಟ್ಟು ನಾಲ್ಕು ವೈಮಾನಿಕ ದಾಳಿಗಳು ನಡೆದಿವೆ' ಎಂದು ವರದಿ ತಿಳಿಸಿವೆ.

'ಡ್ರೋನ್ ಬೋಟ್': ಭಾರತೀಯ ಅಮೆರಿಕನ್ ಎಂಜಿನಿಯರ್‌ನ ಕೊಡುಗೆ

ವಾಷಿಂಗ್ಟನ್(ಪಿಟಿಐ): ಹೊರ್ಮುಜ್ ಜಲಸಂಧಿ ಬಳಿ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ, ಪತನಗೊಂಡಿದ್ದ ಅಮೆರಿಕದ ಅಪಾಚೆ ಹೆಲಿಕಾಪ್ಟರ್‌ನ ಇಬ್ಬರು ಸಿಬ್ಬಂದಿಯ ರಕ್ಷಣೆಗೆ 'ಕಾರ್ಸ್‌ಏರ್' ಕಂಪನಿ ಅಭಿವೃದ್ಧಿಪಡಿಸಿರುವ 'ಡ್ರೋನ್ ಬೋಟ್' ಬಳಸಲಾಗಿದೆ.

ಟೆಕ್ಸಾಸ್‌ನ ಆಸ್ಟಿನ್ ನಗರದಲ್ಲಿರುವ ಸರೋನಿಕ್ ಟೆಕ್ನಾಲಜೀಸ್ ಸಂಸ್ಥೆಯು ಈ 'ಬೋಟ್ ಡ್ರೋನ್' ತಯಾರಿಸಿದೆ. ಭಾರತೀಯ ಅಮೆರಿಕನ್ ವೈಭವ ಅಲ್ಟೇಕರ್ ಅವರು ಈ ಕಂಪನಿಯ ಸಹಸಂಸ್ಥಾಪಕ ಎಂಬುದು ಗಮನಾರ್ಹ.

2022ರಲ್ಲಿ ಡಿನೊ ಮವ್ರೂಕಸ್ ಅವರು ಈ ಕಂಪನಿ ಸ್ಥಾಪಿಸಿದ್ದಾರೆ. ಅಲ್ಟೇಕರ್ ಅಲ್ಲದೇ, ಡೊ ಲ್ಯಾಂಬರ್ಟ್ ಹಾಗೂ ರಾಬ್ ಲೆಹ್‌ಮನ್ ಈ ಕಂಪನಿಯ ಸಹಸಂಸ್ಥಾಪಕರಾಗಿದ್ದಾರೆ.

ಅಲ್ಟೇಕರ್ ಅವರು ಆಟೊನಾಮಸ್ ಸಿಸ್ಟಮ್ ಹಾಗೂ ಸಾಗರಯಾನ ತಂತ್ರಜ್ಞಾನ ಪರಿಣಿತರಾಗಿದ್ದು, ಕಂಪನಿ ಸ್ಥಾಪಿಸುವುದಕ್ಕೂ ಮುನ್ನ ಅಮೆರಿಕದ ರಕ್ಷಣಾ ತಂತ್ರಜ್ಞಾನ ಇಲಾಖೆಯಲ್ಲಿ ಹಲವು ವರ್ಷಗಳ ಕಾಲ ಪ್ರಮುಖ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು.

ಅಮೆರಿಕದ ಸಶಸ್ತ್ರ ಪಡೆಗಳು ಇದೇ ಮೊದಲ ಬಾರಿಗೆ ಇಂತಹ ರಕ್ಷಣಾ ಕಾರ್ಯಾಚರಣೆ ಕೈಗೊಂಡಿರುವುದು ವಿಶೇಷ. ಇದುವರೆಗೆ, ಇಂತಹ ಕಾರ್ಯಾಚರಣೆಗಳಿಗೆ 'ಮಾನವರಹಿತ ವೈಮಾನಿಕ ವಾಹನ'ಗಳನ್ನು(ಯುಎವಿ) ಬಳಕೆ ಮಾಡಲಾಗುತ್ತಿತ್ತು. ಇದೇ ಮೊದಲ ಬಾರಿಗೆ, ಸಮುದ್ರದ ಮೇಲ್ಮೈನಲ್ಲಿ ಸಂಚರಿಸಬಲ್ಲ 'ಮಾನವರಹಿತ ವಾಹನ' (ಯುಎಸ್‌ವಿ) ಡ್ರೋನ್ ಬೋಟ್ ಬಳಸಲಾಗಿದೆ.

ವೈಶಿಷ್ಟ್ಯಗಳು

24 ಅಡಿ ಉದ್ದವಿರುವ 'ಕಾರ್ಸ್‌ಏರ್', ಡಿಸೇಲ್ ಚಾಲಿತ 'ಡ್ರೋನ್ ಬೋಟ್'. ಇದು ಗರಿಷ್ಠ ಗಂಟೆಗೆ 35 ನಾಟ್ ವೇಗದಲ್ಲಿ ಚಲಿಸಬಲ್ಲದು. 453 ಕೆ.ಜಿಯಷ್ಟು ಭಾರ ಹೊತ್ತು ಸಾವಿರ ನಾಟಿಕಲ್ ಮೈಲುಗಳಷ್ಟು ದೂರ ಸಾಗುವ ಸಾಮರ್ಥ್ಯ ಹೊಂದಿದೆ.

ಅಫ್ಗಾನಿಸ್ತಾನ: ಪಾಕ್ ವಾಯುದಾಳಿಗೆ 13 ಸಾವು

ಕಾಬೂಲ್/ ಇಸ್ಲಾಮಾಬಾದ್ (ಎಪಿ/ಎಎಫ್‌ಪಿ): ನೆರೆಯ ರಾಷ್ಟ್ರ ಅಫ್ಗಾನಿಸ್ತಾನದ ಮೇಲೆ ಪಾಕಿಸ್ತಾನ ವೈಮಾನಿಕ ದಾಳಿಯನ್ನು ತೀವ್ರಗೊಳಿಸಿದೆ.

ಮಂಗಳವಾರ ಮಧ್ಯರಾತ್ರಿ ಬಳಿಕ ನಡೆದ ವಾಯುದಾಳಿಯಲ್ಲಿ 13 ಮಂದಿ ನಾಗರಿಕರು ಮೃತಪಟ್ಟು, 14 ಮಂದಿ ಗಾಯಗೊಂಡಿದ್ದಾರೆ ಎಂದು ತಾಲಿಬಾನ್ ಮುಖ್ಯ ವಕ್ತಾರ ಝಬೀವುಲ್ಲಾ ಮುಜಾಹಿದ್ ಮಾಹಿತಿ ನೀಡಿದ್ದಾರೆ. 'ಖೋಸ್ಟ್, ಕುನಾರ್ ಮತ್ತು ಪಾಕ್ತಿಕಾ ಪ್ರದೇಶಗಳನ್ನು ಗುರಿಯಾಗಿಸಿ ದಾಳಿ ನಡೆದಿದ್ದು, 11 ಮಕ್ಕಳು, ಒಬ್ಬ ಮಹಿಳೆ ಮತ್ತು ಹಿರಿಯ ನಾಗರಿಕರೊಬ್ಬರು ಮೃತಪಟ್ಟಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಖೋಸ್ಟ್ ಪ್ರಾಂತ್ಯದ ಸ್ಪೆರಾ ಜಿಲ್ಲೆಯಲ್ಲೇ ಒಂಬತ್ತು ಮಂದಿ ಮೃತಪಟ್ಟಿದ್ದು, 10 ಮಂದಿ ಗಾಯಗೊಂಡಿದ್ದಾರೆ. ಪಾಕ್ತಿಕಾ ಪ್ರಾಂತ್ಯದ ಬರ್ಮಾಲ್ ಜಿಲ್ಲೆಯಲ್ಲಿ ಇಬ್ಬರು ಮಕ್ಕಳು ಸೇರಿ ಮೂವರು ನಾಗರಿಕರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತೀಕಾರ: ಅಫ್ಗಾನಿಸ್ತಾನದ ಗಡಿಗೆ ಹೊಂದಿಕೊಂಡ ಪಾಕಿಸ್ತಾನದ ವಾಯುವ್ಯ ಖೈಬರ್ ಪಖ್ತುಂಕ್ವಾದ ಹಸನ್ ಖೇಲ್ ಪ್ರದೇಶದ ಭದ್ರತಾ ಶಿಬಿರದ ಮೇಲೆ ಶಂಕಿತ ತಾಲಿಬಾನ್ ಉಗ್ರರು ದಾಳಿ ಮಾಡಿದ್ದರು. ಇದಕ್ಕೆ ಪ್ರತೀಕಾರವಾಗಿ ಪಾಕ್ ದಾಳಿ ನಡೆಸಿದೆ.

26 ಉಗ್ರರ ಹತ್ಯೆ: ಪಾಕಿಸ್ತಾನ

ಅಫ್ಗಾನಿಸ್ತಾನದ ಗಡಿ ಪ್ರದೇಶದಲ್ಲಿ ನಡೆಸಿದ ವಾಯುದಾಳಿಯಲ್ಲಿ 26 ಉಗ್ರರು ಹತರಾಗಿದ್ದಾರೆ ಎಂದು ಪಾಕಿಸ್ತಾನ ಸರ್ಕಾರ ಬುಧವಾರ ತಿಳಿಸಿದೆ.

'ಪಾಕಿಸ್ತಾನದಲ್ಲಿ ನಡೆದ ಇತ್ತೀಚಿನ ಉಗ್ರರ ದಾಳಿಗೆ ಪ್ರತಿಯಾಗಿ ತೆಹ್ರಿಕ್ ಇ ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ಸಂಘಟನೆಯ ತರಬೇತಿ ಶಿಬಿರ, ಮದ್ದುಗುಂಡು ಸಂಗ್ರಹಾಗಾರ ಮತ್ತು ಅಡಗುತಾಣ ಸೇರಿ ನಾಲ್ಕು ಕಡೆಗಳಲ್ಲಿ ವಾಯು ದಾಳಿ ನಡೆಸಲಾಗಿದೆ' ಎಂದು ಪಾಕಿಸ್ತಾನದ ವಾರ್ತಾ ಸಚಿವ ಅತಾವುಲ್ಲಾ ತರಾರ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ. ವಾಯುದಾಳಿಯಲ್ಲಿ 12 ನಾಗರಿಕರು ಮೃತಪಟ್ಟಿದ್ದಾರೆ ಎಂಬ ಅಫ್ಗಾನಿಸ್ತಾನದ ಆರೋಪದ ಕುರಿತು ತರಾರ್ ಪ್ರತಿಕ್ರಿಯಿಸಲಿಲ್ಲ.

'ಪಾಕಿಸ್ತಾನ ಈ ಭಾಗದಲ್ಲಿ ಶಾಂತಿ, ಸ್ಥಿರತೆ ಕಾಯ್ದುಕೊಳ್ಳಲು ಬಯಸುತ್ತದೆ. ಆದರೆ ಕೆಲವೊಮ್ಮೆ ನಮ್ಮ ನಾಗರಿಕರ ಸುರಕ್ಷತೆ ಮತ್ತು ಭದ್ರತೆಯೂ ಅಷ್ಟೇ ಪ್ರಮುಖವಾಗಿದೆ' ಎಂದು ಅವರು ಹೇಳಿದ್ದಾರೆ.

ಕಾಲ್ಚಳಕದ ಪುಳಕದಲ್ಲಿ ಮರೆಯಲಿ ಯುದ್ಧದ ಕರಾಳತೆ

• ಗಿರೀಶ ದೊಡ್ಡಮನಿ

ಬೆಂಗಳೂರು: 'ದೇಶದ ಗಾತ್ರ ಅಥವಾ ಆಟಗಾರರ ದೇಹದಾರ್ಢ್ಯಕ್ಕೂ ಫುಟ್‌ಬಾಲ್ ಆಟಕ್ಕೂ ಸಂಬಂಧವಿಲ್ಲ. ಕಠಿಣ ಶ್ರಮ, ಹೃತ್ಪೂರ್ವಕ ಪ್ರೀತಿ ಮತ್ತು ಕೌಶಲಗಳಷ್ಟೇ ಮುಖ್ಯವಾಗುತ್ತವೆ..'

– ಫುಟ್‌ಬಾಲ್ ದಿಗ್ಗಜ ಪೆಲೆ ಅವರ ಈ ಮಾತುಗಳು ಸರ್ವಕಾಲಕ್ಕೂ ಸಲ್ಲುವಂಥದ್ದು. ಏಕೆಂದರೆ; ಗುರುವಾರ ಆರಂಭವಾಗಲಿರುವ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಕೇವಲ 1.80 ಲಕ್ಷ ಜನಸಂಖ್ಯೆಯ ದೇಶ ಕ್ಯುರಾಸಾವೊ ಕಣಕ್ಕಿಳಿಯಲಿದೆ. ಫುಟ್‌ಬಾಲ್ ಆಟದ ದಿಗ್ಗಜ ದೇಶಗಳಾದ ಬ್ರೆಜಿಲ್, ಅರ್ಜೆಂಟಿನಾ, ಫ್ರಾನ್ಸ್, ಇಂಗ್ಲೆಂಡ್, ಪೋರ್ಚುಗಲ್, ಸ್ಪೇನ್, ಜರ್ಮನಿ ಮತ್ತು ದಕ್ಷಿಣ ಆಫ್ರಿಕಾ ಸೇರಿದಂತೆ ಒಟ್ಟು 48 ದೇಶಗಳ ತಂಡಗಳು ಕಣಕ್ಕಿಳಿಯಲಿವೆ. ಇಷ್ಟು ತಂಡಗಳು ಇರುವುದು ಇದೇ ಮೊದಲು.

ಒಲಿಂಪಿಕ್ಸ್ ನಂತರ ಅತಿ ಹೆಚ್ಚು ಜನರು ವೀಕ್ಷಿಸುವ ಕ್ರೀಡೆಯೆಂದರೆ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿ. ಹಲವು ತಾರಾ ವರ್ಚಸ್ಸಿನ ಆಟಗಾರರಿಗೆ ತಮ್ಮ ಸಾಮರ್ಥ್ಯ ಮತ್ತು ಅನುಭವವನ್ನು ಪಣಕ್ಕೊಡ್ಡುವ ಕಣ ಇದು. ಅಲ್ಲದೇ ಹೊಸ ತಾರೆಗಳ ಉದಯಕ್ಕೂ ಇದು ವೇದಿಕೆ. ಹಲವು ಧರ್ಮ, ವರ್ಣ, ಭಾಷೆ ಮತ್ತು ದೇಶಗಳ ಜನರನ್ನು ಒಂದೇ ಸೂರಿನಡಿ ತರುವ ಕಾಲ್ಚೆಂಡು 'ಜಗತ್ತು ಗುಂಡಗಿದೆ. ಎಲ್ಲರೂ ಒಂದಿಲ್ಲೊಂದು ಸಲ ಮುಖಾಮುಖಿಯಾಗಬೇಕು' ಎಂಬ ಸಂದೇಶ ನೀಡುತ್ತದೆ.

ಪ್ರತಿ ಸಲ ಫಿಫಾ ವಿಶ್ವಕಪ್ ಟೂರ್ನಿಗೂ ಒಂದು ತಿಂಗಳು ಮುನ್ನವೇ ಸಡಗರದ ವಾತಾವರಣ ಗರಿಗೆದರುತ್ತಿತ್ತು. ಆದರೆ ಈ ಸಲ ಅಂತಹ ಭರಾಟೆಗಳು ಅಷ್ಟಾಗಿ ಕಾಣುತ್ತಿಲ್ಲ. ಏಕೆಂದರೆ, ಜಗತ್ತನ್ನು ಕಾಡುತ್ತಿರುವ ಸಂಘರ್ಷದ ವಾತಾವರಣ. ಇರಾನ್ ಮೇಲೆ ಯುದ್ಧ ಸಾರಿರುವ ಅಮೆರಿಕವೇ ಮೆಕ್ಸಿಕೊ ಮತ್ತು ಕೆನಡಾ ದೇಶಗಳೊಂದಿಗೆ 23ನೇ ವಿಶ್ವಕಪ್ ಟೂರ್ನಿಯ ಆತಿಥ್ಯ ವಹಿಸುತ್ತಿದೆ. ಆದರೆ ತೈಲ ಬೆಲೆ ಏರಿಕೆ, ವಿಮಾನ ಪ್ರಯಾಣದ ವೆಚ್ಚ ಹೆಚ್ಚಿರುವುದು, ಅಭದ್ರತೆಯ ಭಾವದಿಂದಾಗಿ ಈ ಸುಂದರ ದೇಶಗಳಿಗೆ ಪ್ರಯಾಣಿಸುವವರ ಸಂಖ್ಯೆಯಲ್ಲಿ ಭರಾಟೆ ಕಾಣುತ್ತಿಲ್ಲ ಎಂದು ಸುದ್ದಿ ಸಂಸ್ಥೆಗಳು ವರದಿ ಮಾಡುತ್ತಿವೆ. ಇರಾನ್–ಇಸ್ರೆಲ್, ಅಮೆರಿಕ ಯುದ್ಧದ ಬಿಸಿಯು ಬೆಂಗಳೂರಿನ ಜನರ ಅಡುಗೆ ಮನೆಗಳಿಗೂ ಎಲ್‌ಪಿಜಿ ಸಿಲಿಂಡರ್ ಕೊರತೆಯ ರೂಪದಲ್ಲಿಯೂ ತಟ್ಟಿದೆ. ಭಾರತ ಫುಟ್‌ಬಾಲ್ ತಂಡವು ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಅರ್ಹತೆಯನ್ನು ಈ ಬಾರಿಯೂ ಗಿಟ್ಟಿಸಿಲ್ಲ. ಆದರೆ ಪ್ರತಿಬಾರಿಯಂತೆ ಪಂದ್ಯವೀಕ್ಷಣೆಗೆ ಇಲ್ಲಿಂದ ತೆರಳುವ ಭಾರತೀಯರಿಗೇನೂ ಕಮ್ಮಿಯಿಲ್ಲ.

ಟೂರ್ನಿ ಆರಂಭವಾದ ನಂತರ ಕಳೆಗಟ್ಟುವ ನಿರೀಕ್ಷೆ ಇದೆ. ಲಯೊನೆಲ್ ಮೆಸ್ಸಿ, ಕ್ರಿಸ್ಟಿಯಾನೊ ರೊನಾಲ್ಡೊ, ನೇಮರ್, ಕೈಲಿಯನ್ ಎಂಬಾಪೆ ಅವರಂತಹ ತಾರೆಯರ ಆಟದ ವೈಭವ ತಾರಕಕ್ಕೇರಬಹುದೆನೋ?

ಮೆಸ್ಸಿ, ರೊನಾಲ್ಡೊ ಹಾಗೂ ಎಂಬಾಪೆ ಹೊರತುಪಡಿಸಿ ಬ್ರೆಜಿಲ್ ದೇಶದ ನೇಮರ್, ವಿನಿಶಿಯಸ್ ಜೂನಿಯರ್, ನಾರ್ವೆಯ ಎರ್ಲಿಂಗ್ ಹೋಲ್ಯಾಂಡ್, ಸ್ಪೇನ್ ದೇಶದ ಲಮಿನ್ ಯಮಾಲ್, ಇಂಗ್ಲೆಂಡ್‌ನ ಹ್ಯಾರಿ ಕೇನ್, ಈಜಿಪ್ಟ್‌ನ ಮೊಹಮ್ಮದ್ ಸಲಾ ಅವರತ್ತಲೂ ನಿರೀಕ್ಷೆಯ ನೋಟಗಳಿವೆ. ಇವರೆಲ್ಲರೊಂದಿಗೆ ಮತ್ತಷ್ಟು ಹೊಸಪ್ರತಿಭೆಗಳ ಮಿಂಚು ಕೂಡ ಮನಗೆಲ್ಲಬಹುದು. ಹೊಸ ತಂತ್ರಜ್ಞಾನದ ಮೋಡಿಯೂ ಮನಸೆಳೆಯಬಹುದು. ಒಟ್ಟಾರೆ ಎಲ್ಲವೂ ಅಂದುಕೊಂಡಂತೆ ಸುಸೂತ್ರವಾಗಿ ನಡೆದು ಯುದ್ಧದ ಕರಾಳತೆಯನ್ನು ಮರೆಸಿ ಸೌಹಾರ್ದತೆಯ ಸಂದೇಶ ಪಸರಿಸಿದರೆ ಫುಟ್‌ಬಾಲ್ ಗೆದ್ದಂತಾಗಲಿದೆ.



ಉದ್ಘಾಟನಾ ಪಂದ್ಯ ನಡೆಯುವ ನ್ಯೂ ಮೆಕ್ಸಿಕೊದ ಎಸ್ಟಾಡಿಯೊ ಅಝ್ಟೆಕಾ ಕ್ರೀಡಾಂಗಣದ ಹೊರನೋಟ —ಎಎಫ್‌ಪಿ ಚಿತ್ರ

ರೊನಾಲ್ಡೊ ಕನಸು ಕೈಗೂಡುವುದೇ?

ಮೆಸ್ಸಿಯ ಪ್ರತಿಸ್ಪರ್ಧಿ ಮತ್ತು ಈ ಕಾಲಘಟ್ಟದ ಮತ್ತೊಬ್ಬ ದಿಗ್ಗಜ ಪೋರ್ಚುಗಲ್ ತಂಡದ ಕ್ರಿಸ್ಟಿಯಾನೊ ರೊನಾಲ್ಡೊ ಫುಟ್‌ಬಾಲ್ ಅಂಗಳದಲ್ಲಿ ಎಲ್ಲ ಸಾಧನೆಗಳನ್ನೂ ಮಾಡಿದ್ದಾರೆ. ಆದರೆ ಅವರಿಗೆ ಏಕೈಕ ಕೊರಗು ವಿಶ್ವಕಪ್ ವಿಜಯದ್ದು. 41 ವರ್ಷದ ರೊನಾಲ್ಡೊಗೆ ಇದು ಬಹುತೇಕ ಕೊನೆಯ ವಿಶ್ವಕಪ್ ಟೂರ್ನಿ. ಅತ್ಯಂತ ಶ್ರೀಮಂತ ಫುಟ್‌ಬಾಲ್ ಆಟಗಾರನೆಂಬ ಹೆಗ್ಗಳಿಕೆಯಿರುವ ರೊನಾಲ್ಡೊಗೆ ವಿಶ್ವದಾದ್ಯಂತ ಅಭಿಮಾನಿಗಳಿದ್ದಾರೆ. ಪ್ರತಿಷ್ಠಿತ ಪ್ರಶಸ್ತಿಗಳನ್ನೂ ಗೆದ್ದಿದ್ದಾರೆ. ದೇಶಕ್ಕಾಗಿ ಮೊದಲ ಟ್ರೋಫಿ ಜಯಿಸಿಕೊಡಲು ಇದು ಕೊನೆಯ ಅವಕಾಶವೂ ಆಗಿದೆ.

ದಾಖಲೆ ಮೇಲೆ ಕೈಲಿಯನ್ ಎಂಬಾಪೆ ಕಣ್ಣು

ಕಳೆದ ಎಂಟು ವರ್ಷಗಳಲ್ಲಿ ಫುಟ್‌ಬಾಲ್ ಪ್ರಿಯರ ಗಮನವನ್ನು ಸತತವಾಗಿ ಸೆಳೆದವರು ಫ್ರಾನ್ಸ್ ತಂಡದ ಕೈಲಿಯನ್ ಎಂಬಾಪೆ. ಫ್ರಾನ್ಸ್ ತಂಡವು ಸತತ ಮೂರನೇ ಬಾರಿ ಫೈನಲ್ ಪ್ರವೇಶಿಸುವತ್ತ ಚಿತ್ತ ನೆಟ್ಟಿದೆ. ಹಾಗೆ ಎಂಬಾಪೆ ಅವರೂ 'ಹ್ಯಾಟ್ರಿಕ್' ಸಾಧನೆ ಮಾಡುವ ಗುರಿ ಇಟ್ಟುಕೊಂಡಿದ್ದಾರೆ. ತಂಡವು 2018ರಲ್ಲಿ ಕ್ರೊವೇಷ್ಯಾದ ಎದುರು ಫೈನಲ್‌ನಲ್ಲಿ ಗೆದ್ದಿತ್ತು. 2022ರಲ್ಲಿ ಅರ್ಜೆಂಟಿನಾ ಎದುರು ಸೋತು ರನ್ನರ್ಸ್ ಅಪ್ ಆಗಿದ್ದರು. ಆ ಟೂರ್ನಿಯಲ್ಲಿ ಎಂಬಾಪೆ ಅವರು ಚಿನ್ನದ ಬೂಟು ಗಳಿಸಿದ್ದರು.

27 ವರ್ಷದ ಎಂಬಾಪೆ ಅವರ ಡ್ರಿಬ್ಲಿಂಗ್ ಹಾಗೂ ವೇಗದ ಓಟ ಫುಟ್‌ಬಾಲ್ ಪ್ರಿಯರನ್ನು ಸೂಜಿಗಲ್ಲಿನಂತೆ ಸೆಳೆದಿದೆ. ಈ ಬಾರಿಯೂ ಅವರು ಅಂತಹದೇ ಮೋಡಿ ತೋರುವರೇ ಕಾದು ನೋಡಬೇಕು.

ವಿಶ್ವಕಪ್‌ನಲ್ಲಿ ಹೆಚ್ಚು ಪಂದ್ಯ ಆಡಿದ ದೇಶಗಳು

ದೇಶ	ಪಂದ್ಯ
ಬ್ರೆಜಿಲ್	114
ಜರ್ಮನಿ	112
ಅರ್ಜೆಂಟೀನಾ	88
ಇಟಲಿ	83
ಇಂಗ್ಲೆಂಡ್	74

ವಿಶ್ವಕಪ್‌ನಲ್ಲಿ ಗರಿಷ್ಠ ಪಂದ್ಯ ಆಡಿದವರು

ಪಂದ್ಯ	ಆಟಗಾರ	ದೇಶ
26	ಲಯೊನೆಲ್ ಮೆಸ್ಸಿ	ಅರ್ಜೆಂಟೀನಾ
25	ಲೋಥರ್ ಮ್ಯಾಥ್ಯೂಸ್	ಜರ್ಮನಿ
24	ಮಿರೋಸ್ಲಾವ್ ಕ್ಲೋಸ್	ಜರ್ಮನಿ
23	ಪಾವೊಲೊ ಮಾಲ್ದಿನಿ	ಇಟಲಿ
22	ಕ್ರಿಸ್ಟಿಯಾನೊ ರೊನಾಲ್ಡೊ	ಪೋರ್ಚುಗಲ್

₹416 ಕೋಟಿ ಚಾಂಪಿಯನ್ ತಂಡವು ಪಡೆಯುವ ಬಹುಮಾನ

₹275 ಕೋಟಿ ರನ್ನರ್ಸ್ ಅಪ್ ತಂಡವು ಗಳಿಸುವ ಬಹುಮಾನ

₹241 ಕೋಟಿ ತೃತೀಯ ಸ್ಥಾನ ಪಡೆಯುವ ತಂಡ ಗಳಿಸುವ ಮೊತ್ತ

₹225 ಕೋಟಿ ನಾಲ್ಕನೇ ಸ್ಥಾನ ಪಡೆಯುವ ತಂಡ ಗಳಿಸುವ ಮೊತ್ತ

ಉದ್ಘಾಟನಾ ಕಾರ್ಯಕ್ರಮ

ಜೂನ್ 11: ಮೆಕ್ಸಿಕೊ ಸಿಟಿಯಲ್ಲಿ ಸಮಾರಂಭ (ಸಂಜೆ 6.30)
ಜೂನ್ 12: ಟೊರಾಂಟೊದಲ್ಲಿ ಕಾರ್ಯಕ್ರಮ (ಸಂಜೆ 6.30)
ಜೂನ್ 12: ಲಾಸ್ ಏಂಜಲೀಸ್ ಸಮಾರಂಭ (ತಡರಾತ್ರಿ 12.30)
ಪ್ರಮುಖ ಆಕರ್ಷಣೆ: ಖ್ಯಾತ ಗಾಯಕಿ ಶಕೀರಾ ಮತ್ತು ಬರ್ನಾ ಬಾಯ್ ಜೋಡಿ ಅಧಿಕೃತ ಹಾಡು 'ದೈ ದೈ..' ಪ್ರಸ್ತುತಪಡಿಸುವರು.

ಹೆಚ್ಚು ಬಾರಿ ಪ್ರಶಸ್ತಿ ಗೆದ್ದ ದೇಶಗಳು

ದೇಶ	ಬಾರಿ	ವರ್ಷ
ಬ್ರೆಜಿಲ್	5 ಬಾರಿ	1958, 1962, 1970, 1994, 2002
ಜರ್ಮನಿ	4 ಬಾರಿ	1954, 1974, 1990, 2014
ಇಟಲಿ	4 ಬಾರಿ	1934, 1938, 1982, 2006
ಅರ್ಜೆಂಟೀನಾ	3 ಬಾರಿ	1978, 1986, 2022
ಫ್ರಾನ್ಸ್	2 ಬಾರಿ	1998, 2018
ಉರುಗ್ವೆ	2 ಬಾರಿ	1930, 1950
ಇಂಗ್ಲೆಂಡ್	1 ಬಾರಿ	1966
ಸ್ಪೇನ್	1 ಬಾರಿ	2010

ಮತ್ತೆ ಮಿಂಚುವರೇ ಮೆಸ್ಸಿ?

ವಿಶ್ವದ ಅಗ್ರಮಾನ್ಯ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ ಅವರಿಗೆ 2022ರವರೆಗೂ ಎಂಟು ಬ್ಯಾಲನ್ ಡಿ ಓವರ್ ಗೌರವಗಳು, ಒಲಿಂಪಿಕ್ಸ್ ಚಿನ್ನ, ಕೊಪಾ ಅಮೆರಿಕ ಟ್ರೋಫಿ, ಲಾ ಲೀಗಾ ಸೇರಿದಂತೆ ಪ್ರತಿಷ್ಠಿತ ಟ್ರೋಫಿಗಳು ಒಲಿದಿದ್ದವು. ಅವರ ಸಂಗ್ರಹದಲ್ಲಿ ಏಕೈಕ ಕೊರತೆಯೆಂದರೆ ವಿಶ್ವಕಪ್ ಟ್ರೋಫಿಯದ್ದು. ಆ ಕನಸು ಕತಾರ್‌ನಲ್ಲಿ ಕೈಗೂಡಿತ್ತು.

ಅವತ್ತು ಚಿನ್ನದ ಟ್ರೋಫಿಗೆ ಮುತ್ತಿಟ್ಟು ಭಾವಪರವಶರಾದ ಮೆಸ್ಸಿ ಅವರ ಚಿತ್ರ ಈಗಲೂ ಕಣ್ಣಿಗೆ ಕಟ್ಟಿದಂತಿದೆ. 38 ವರ್ಷದ ಮೆಸ್ಸಿ ಈ ಬಾರಿಯೂ ಅರ್ಜೆಂಟಿನಾಕ್ಕೆ ಪ್ರಶಸ್ತಿ ಗೆಲ್ಲಿಸಿಕೊಡುವರೇ ಎಂಬ ಕುತೂಹಲ ಮನೆಮಾಡಿದೆ. ದಂತಕತೆ ಡಿಯಾಗೊ ಮರಡೋನಾ ನಂತರ ಈ ದೇಶಕ್ಕೆ ಸಿಕ್ಕಿರುವ ಅಪ್ರತಿಮ ತಾರೆ ಮೆಸ್ಸಿ ಅಂತಹ ಸಾಧನೆ ಮಾಡಬಲ್ಲ ಸಮರ್ಥರು. ಹೋದ ಸಲ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಫ್ರಾನ್ಸ್ ತಂಡದ ಕಠಿಣ ಸವಾಲನ್ನು ಮೀರಿ ನಿಲ್ಲುವಲ್ಲಿ ಮೆಸ್ಸಿ ಆಟವೇ ಪ್ರಮುಖವಾಗಿತ್ತು. ಆ ಪಂದ್ಯದ ನಂತರ ಅವರು ನಿವೃತ್ತಿಯಾಗಬಹುದೆಂಬ ಮಾತುಗಳೂ ಕೇಳಿಬಂದಿದ್ದವು. ಆದರೆ ತಮ್ಮ ಫಿಟ್‌ನೆಸ್ ಮತ್ತು ಕೌಶಲಗಳಿಗೆ ಮತ್ತಷ್ಟು ಸಾಣೆ ಹಿಡಿದಿರುವ ಅವರು ಹೊಸ ಕನಸಿನೊಂದಿಗೆ ಕಣಕ್ಕಿಳಿಯುತ್ತಿದ್ದಾರೆ.

ಮೆಕ್ಸಿಕೊ ಸಿಟಿಯಲ್ಲಿ ಅಭಿಮಾನಿಗಳು ಫಿಫಾ ಫುಟ್‌ಬಾಲ್ ವಿಶ್ವಕಪ್ ಟ್ರೋಫಿಯ ಪ್ರತಿರೂಪದೊಂದಿಗೆ ಪೋಸ್ ನೀಡಿದರು —ಎಎಫ್‌ಪಿ ಚಿತ್ರ

ವಿಶ್ವಕಪ್‌ನಲ್ಲಿ ಹೆಚ್ಚು ಗೋಲು ಗಳಿಸಿದವರು

ಗೋಲು	ಆಟಗಾರ	ದೇಶ
16	ಮಿರೋಸ್ಲಾವ್ ಕ್ಲೋಸ್	ಜರ್ಮನಿ
15	ರೊನಾಲ್ಡೊ	ಬ್ರೆಜಿಲ್
14	ಗರ್ಡ್ ಮುಲ್ಲರ್	ಜರ್ಮನಿ
13	ಲಯೊನೆಲ್ ಮೆಸ್ಸಿ	ಅರ್ಜೆಂಟೀನಾ
13	ಜಸ್ಟ್ ಫಾಂಟೈನ್	ಫ್ರಾನ್ಸ್

ವಿಶ್ವಕಪ್ ತಾಣಗಳು

ಕ್ರೀಡಾಂಗಣ	ಆಸನ
ಡಲ್ಲಾಸ್, ಟೆಕ್ಸಾಸ್	94,000
ಮೆಕ್ಸಿಕೊ ಸಿಟಿ	83,000
ಮೆಟ್‌ಲೈಫ್, ನ್ಯೂಜೆರ್ಸಿ	82,500
ಮರ್ಸಿಡಿಸ್ ಬೆನ್ಜ್, ಅಟ್ಲಾಂಟಾ	75,000
ಆರೋಹೆಡ್, ಮಿಸೌರಿ	73,000
ಎನ್‌ಆರ್‌ಜಿ, ಹ್ಯೂಸ್ಟನ್	72,000
ಲೆವಿಸ್, ಕ್ಯಾಲಿಫೋರ್ನಿಯಾ	71,000
ಸೋಫಿ, ಕ್ಯಾಲಿಫೋರ್ನಿಯಾ	70,000
ಲಿಂಕನ್ ಫೈನಾನ್ಷಿಯಲ್ ಫೀಲ್ಡ್, ಫಿಲಡೆಲ್ಫಿಯಾ	69,000
ಲುಮೆನ್ ಫೀಲ್ಡ್, ಸಿಯಾಟಲ್	69,000
ಜಿಲೆಟ್, ಫಾಕ್ಸ್‌ಬರೋ	65,000
ಹಾರ್ಡ್ ರಾಕ್, ಫ್ಲೋರಿಡಾ	65,000
ಬಿ.ಸಿ ಪ್ಲೇಸ್, ಬ್ರಿಟಿಷ್ ಕೊಲಂಬಿಯಾ	54,000
ಎಸ್ಟಾಡಿಯೊ ಬಿಬಿವಿಎ, ಮೆಕ್ಸಿಕೊ	53,500
ಎಸ್ಟಾಡಿಯೊ ಅಕ್ರಾನ್, ಮೆಕ್ಸಿಕೊ	48,000
ಬಿಎಂಒ ಫೀಲ್ಡ್, ಟೊರೊಂಟೊ	45,000

ಉದ್ಘಾಟನಾ ಪಂದ್ಯದಲ್ಲಿ ರಾನ್‌ವೆಲ್ ಪಡೆಗೆ ಗೆಲ್ಲುವ ಒತ್ತಡ

ಆತಿಥೇಯ ಮೆಕ್ಸಿಕೊಗೆ ದಕ್ಷಿಣ ಆಫ್ರಿಕಾ ಸವಾಲು

ಮೆಕ್ಸಿಕೊ ಸಿಟಿ (ಎಎಫ್‌ಪಿ/ ಎಪಿ): ಮೆಕ್ಸಿಕೊ ತಂಡವು ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಅಭಿಯಾನವನ್ನು ದಕ್ಷಿಣ ಆಫ್ರಿಕಾ ವಿರುದ್ಧ ಎಸ್ಟಾಡಿಯೊ ಅಝ್ಟೆಕಾ ಕ್ರೀಡಾಂಗಣದಲ್ಲಿ ಗುರುವಾರ ಆರಂಭಿಸಲಿದ್ದು, ತವರಿನ ಪ್ರೇಕ್ಷಕರ ಮುಂದೆ ಗೆಲುವಿನ ಆರಂಭ ಮಾಡುವ ಒತ್ತಡದಲ್ಲಿದೆ.

ಮೆಕ್ಸಿಕೊದಲ್ಲಿ ಮೂರನೇ ಬಾರಿ ವಿಶ್ವಕಪ್ ನಡೆಯುತ್ತಿದೆ. ಈ ಹಿಂದೆ 1970 ಮತ್ತು 1986ರಲ್ಲಿ ಆತಿಥ್ಯ ವಹಿಸಿದ್ದ ಮೆಕ್ಸಿಕೊ ಈ ಬಾರಿ ಅಮೆರಿಕ ಮತ್ತು ಕೆನಡಾ ಜೊತೆ ಸಂಯುಕ್ತವಾಗಿ ಆತಿಥ್ಯ ವಹಿಸಿದೆ. ಈಗ ದೀರ್ಘಕಾಲದ ನಂತರ ಪ್ರಸಿದ್ಧ ಎಸ್ಟಾಡಿಯೊ ಅಝ್ಟೆಕಾ ಕ್ರೀಡಾಂಗಣದಲ್ಲಿ ವಿಶ್ವಕಪ್ ಫುಟ್‌ಬಾಲ್ ಪಂದ್ಯ ನಡೆಯುತ್ತಿದೆ.

2010ರ ವಿಶ್ವಕಪ್ ಟೂರ್ನಿಯ ಉದ್ಘಾಟನಾ ಪಂದ್ಯವೂ ಇವೆರಡು ತಂಡಗಳ ಮಧ್ಯೆ ನಡೆದಿತ್ತು. ಆಗ ಆತಿಥ್ಯ ವಹಿಸಿದ್ದ ಆತಿಥೇಯ ದಕ್ಷಿಣ ಆಫ್ರಿಕಾ ತಂಡವು ಜೊಹಾನೆಸ್‌ಬರ್ಗ್‌ನಲ್ಲಿ ಮೆಕ್ಸಿಕೊ ಸಂಗಡ 1–1 ಡ್ರಾ ಮಾಡಿಕೊಂಡಿತ್ತು.

ಈ ಬಾರಿ ಮೆಕ್ಸಿಕೊ ಪಂದ್ಯ ಗೆಲ್ಲುವ ನೆಚ್ಚಿನ ತಂಡವಾಗಿ ಕಾಣುತ್ತಿದೆ. ಹೀಗಾಗಿ 'ಎ' ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ದೃಷ್ಟಿಯಿಂದ ಆತಿಥೇಯರಿಗೆ ಶುಭಾರಂಭ ಮಾಡುವುದು ಮಹತ್ವದ್ದಾಗಲಿದೆ. ದಕ್ಷಿಣ ಕೊರಿಯಾ ಮತ್ತು ಝೆಕ್ ರಿಪಬ್ಲಿಕ್ ತಂಡಗಳೂ ಇದೇ ಗುಂಪಿನಲ್ಲಿರುವ ಇನ್ನೆರಡು ತಂಡಗಳಾಗಿವೆ.

ಮೆಕ್ಸಿಕೊ ಕಳೆದ ಎಂಟು ಪಂದ್ಯಗಳಿಂದ ಅಜೇಯವಾಗುಳಿದಿದೆ. ತಂಡ ತನ್ನ ಹಿಂದಿನ ಗೆಲುವಿನ ಸರಪಣಿಯ ದಾಖಲೆ ಸರಿಗಟ್ಟಿದ್ದು, ಹೇವಿಯರ್ ಅಗಿರೆ ಮಾರ್ಗದರ್ಶನದ ತಂಡ ಉತ್ಸಾಹದಿಂದ ಕಣಕ್ಕಿಳಿಯಲು ನೆರವಾಗಲಿದೆ.

ದಕ್ಷಿಣ ಆಫ್ರಿಕಾ ತಂಡದ ನಾಯಕ ರಾನ್‌ವೆಲ್ ವಿಲಿಯಮ್ಸ್



ಮೆಕ್ಸಿಕೊ ತಂಡದ ನಾಯಕ ಎಡ್ಸನ್ ಅಲ್ವಾರೆಝ್ —'ಎಕ್ಸ್' ಚಿತ್ರಗಳು

ಅಝ್ಟೆಕಾ ಕ್ರೀಡಾಂಗಣವು 80,000 ಆಸನ ಸಾಮರ್ಥ್ಯ ಹೊಂದಿದ್ದು, ಪಂದ್ಯದ ವೇಳೆ ಹಬ್ಬದ ವಾತಾವರಣ ನೆಲೆಸುವ ಸಕಲ ಸಾಧ್ಯತೆಯಿದೆ. ಆದರೆ ತವರಿನ ಲಾಭ ಪಡೆಯುವ ಒತ್ತಡ ತಂಡದ ಮೇಲಿದೆ.

ದಕ್ಷಿಣ ಆಫ್ರಿಕಾ ತಂಡವು 2010ರಲ್ಲಿ ಆತಿಥ್ಯ ವಹಿಸಿದ ನಂತರ ಇದೇ ಮೊದಲ ಬಾರಿ ವಿಶ್ವಕಪ್ ಕಣಕ್ಕೆ ಇಳಿಯುತ್ತಿದೆ. ಈ ತಂಡದ ಹೆಡ್ ಕೋಚ್ ಹ್ಯೂಗೊ ಬ್ರೂಸ್ ಅವರು ಬೆಲ್ಜಿಯಂನ ಅಂತರ ರಾಷ್ಟ್ರೀಯ ಆಟಗಾರರಾಗಿದ್ದು, 1986ರಲ್ಲಿ ವಿಶ್ವಕಪ್ ಟೂರ್ನಿ ನಡೆದಾಗ ಆತಿಥೇಯ ಮೆಕ್ಸಿಕೊ ತಂಡದ ವಿರುದ್ಧ ಎದುರಿಸಿದ್ದರು.

'ತವರಿನ ತಂಡಕ್ಕೆ ಒಕ್ಕೊರಲ ಬೆಂಬಲ ನೀಡುವ ಪ್ರೇಕ್ಷಕರಿಂದ ತುಂಬಿರುವ ಕ್ರೀಡಾಂಗಣದಲ್ಲಿ ಆಡುವುದು ಸವಾಲಾಗಬಹುದು. ಆದರೆ ಏಕಾಗ್ರತೆ ಕಳೆದುಕೊಳ್ಳಬಾರದು' ಎಂದು ಬ್ರೂಸ್ ಅವರು ಆಟಗಾರರಿಗೆ ಕಿವಿಮಾತು ಹೇಳಿದ್ದಾರೆ.

ಪಂದ್ಯ ಆರಂಭ: ರಾತ್ರಿ 12.30 (ಭಾರತೀಯ ಕಾಲಮಾನ)

ಒಮರ್ ಅರ್ತನ್ ಎಎಫ್‌ಪಿ ಚಿತ್ರ

ಸೊಮಾಲಿಯಾದ ರೆಫ್ರಿ ಅರ್ತನ್‌ಗೆ ವೀರೋಚಿತ ಸ್ವಾಗತ

ಮೊಗಾದಿಶು (ಸೊಮಾಲಿಯಾ): ಅಮೆರಿಕದ ವೀಸಾ ಸಿಗದ ಕಾರಣ ವಿಶ್ವಕಪ್‌ನಲ್ಲಿ ಭಾಗಿಯಾಗುವ ಅವಕಾಶ ವಂಚಿತರಾದ ಸೊಮಾಲಿಯಾದ ರೆಫ್ರಿ ಒಮರ್ ಅರ್ತನ್ ಅವರು ಬುಧವಾರ ಇಲ್ಲಿಗೆ ಬಂದಿಳಿದಾಗ ಬೆಂಬಲಿಗರು ಮತ್ತು ಅಧಿಕಾರಿಗಳು ಅವರಿಗೆ ವೀರೋಚಿತ ಸ್ವಾಗತ ಕೋರಿದರು.

ಮುಂದಿನ ವಿಶ್ವಕಪ್‌ನಲ್ಲಿ ಕಾರ್ಯನಿರ್ವಹಿಸಲು ಯೋಚಿಸುತ್ತೇನೆ ಎಂದು ಅಭಿಮಾನಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದ ಬಗ್ಗೆ ಅಭಿಮಾನ ಹೊಂದುವಂತೆ ಯುವಜನತೆಗೆ ಮನವಿ ಮಾಡಿದರು.

ಈ ವಿಶ್ವಕಪ್‌ನಲ್ಲಿ ಕಾರ್ಯನಿರ್ವಹಿಸುವ ರೆಫ್ರಿಗಳ ಪಟ್ಟಿಯಲ್ಲಿ ಅರ್ತನ್ ಹೆಸರೂ ಇತ್ತು. ಅವರು ಅವಕಾಶ ಪಡೆದಿದ್ದಲ್ಲಿ ವಿಶ್ವಕಪ್‌ನಲ್ಲಿ ಪಂದ್ಯ ನಿರ್ವಹಿಸಿದ ಸೊಮಾಲಿಯಾದ ಮೊದಲ ರೆಫ್ರಿ ಎನಿಸುತ್ತಿದ್ದರು. ಅವರು 2025ರಲ್ಲಿ ಫಿಫಾದಿಂದ 'ಆಫ್ರಿಕಾದ ಶ್ರೇಷ್ಠ ಪುರುಷ ರೆಫ್ರಿ' ಗೌರವಕ್ಕೆ ಪಾತ್ರರಾಗಿದ್ದರು.

ಹೋದ ಶನಿವಾರ ಮಯಾಮಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಒಮರ್ ಅವರ ದಾಖಲೆ ಪರಿಶೀಲಿಸಿ, ವೀಸಾ ನಿರಾಕರಿಸಲಾಯಿತು. ನಂತರ ಅವರ ಹೆಸರನ್ನು ವಿಶ್ವಕಪ್ ರೆಫ್ರಿಗಳ ಪಟ್ಟಿಯಿಂದ ಫಿಫಾ ಕೈಬಿಟ್ಟಿತು.

'ದೇವರು ಬಯಸಿದಲ್ಲಿ ನಾನು ಮುಂದಿನ ವಿಶ್ವಕಪ್‌ಗೆ ರೆಫ್ರಿಯಾಗಿರುತ್ತೇನೆ ಎಂಬ ಭರವಸೆ ನೀಡುತ್ತೇನೆ' ಎಂದು ನೂರಾರು ಸಂಖ್ಯೆಯಲ್ಲಿ ವಿಮಾನ ನಿಲ್ದಾಣದಲ್ಲಿ ಸೇರಿದ್ದ ಜನರನ್ನು ಉದ್ದೇಶಿಸಿ ಅರ್ತನ್ ಹೇಳಿದರು.

ಎರಡನೇ ಸುತ್ತಿಗೆ ಸಿಂಧು, ತನ್ವಿ

ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್: ಮಾಳವಿಕಾ ಮುನ್ನಡೆ • ಪುರುಷರಿಗೆ ನಿರಾಸೆ

ಸಿಡ್ನಿ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ಬುಧವಾರ ಸುಲಭ ಗೆಲುವು ಸಾಧಿಸಿದರು. ಆದರೆ ಮೊದಲ ದಿನ ಗಮನಸೆಳೆದಿದ್ದು ಐದನೇ ಶ್ರೇಯಾಂಕದ ಚಿಯು ಪಿನ್ ಚಿಯಾನ್ ಅವರಿಗೆ ಆಘಾತ ನೀಡಿದ ಹದಿಹರೆಯದ ಆಟಗಾರ್ತಿ ತನ್ವಿ ಶರ್ಮಾ.

ಮೂರನೇ ಶ್ರೇಯಾಂಕದ ಸಿಂಧು, ತನ್ವಿ ಜೊತೆ ಮಾಳವಿಕಾ ಬನ್ಸೋಡ್, ಇಶಾರಾಣಿ ಬರುವಾ ಮತ್ತು ತಾನ್ಯಾ ಹೇಮಂತ್ ಅವರೂ 16ರ ಸುತ್ತಿಗೆ ಮುನ್ನಡೆದರು. ಆದರೆ ಸೂಪರ್ 500 ಶ್ರೇಣಿಯ ಈ ಟೂರ್ನಿಯ ಪುರುಷರ ವಿಭಾಗದಲ್ಲಿ ಭಾರತಕ್ಕೆ ನಿರಾಸೆ ಕಾಡಿತು. ಕಿರಣ್ ಜಾರ್ಜ್, ತರುಣ್ ಮನ್ನೇಪಲ್ಲಿ ಮತ್ತು ಅರ್ಹತಾ ಸುತ್ತಿನಿಂದ ಬಂದ ಸನೀತ್ ದಯಾನಂದ್ ಹೊರಬಿದ್ದರು.

ಸಿಂಧು 21–13, 21–11 ರಿಂದ ಪೆರುವಿನ ಇನೆಸ್ ಲೂಸಿಯಾ ಕ್ಯಾಸ್ಟಿಲ್ಲೊ ಸಲಝಾರ್ ಅವರನ್ನು ಹಿಮ್ಮೆಟ್ಟಿಸಲು ತೆಗೆದುಕೊಂಡಿದ್ದು 32 ನಿಮಿಷಗಳನ್ನಷ್ಟೇ. ಮುಂದಿನ ಸುತ್ತಿನಲ್ಲಿ ಸಿಂಧು ಅವರ ಎದುರಾಳಿಯಾಗಿರುವ ಇಶಾರಾಣಿ ಇನ್ನೊಂದು ಪಂದ್ಯದಲ್ಲಿ ಚೀನಾದ ಹಾನ್ ಕಿಯಾನ್ ಷಿ ಅವರನ್ನು 22–20, 10–21, 21–14 ರಿಂದ ಸೋಲಿಸಿದರು.

17 ವರ್ಷ ವಯಸ್ಸಿನ ತನ್ವಿ 21–12, 22–20 ರಿಂದ ವಿಶ್ವ ಕ್ರಮಾಂಕದಲ್ಲಿ 11ನೇ ಸ್ಥಾನದಲ್ಲಿರುವ ಚಿಯು ಪಿನ್ ಅವರನ್ನು ಮುಕ್ಕಾಲು ಗಂಟೆಯಲ್ಲಿ ಪರಾಭವಗೊಳಿಸಿದರು. ವಿಶ್ವ ಕ್ರಮಾಂಕದಲ್ಲಿ 36ನೇ ಸ್ಥಾನದಲ್ಲಿರುವ ತನ್ವಿ ಎರಡನೇ ಸುತ್ತಿನಲ್ಲಿ ಸ್ವದೇಶದ ಮಾಳವಿಕಾ ಅವರನ್ನು ಎದುರಿಸಲಿದ್ದಾರೆ. ಮಾಳವಿಕಾ 15–21, 21–7, 21–13 ರಿಂದ ಥಾಯ್ಲೆಂಡ್‌ನ ತೊನ್ರುಗ್ ಸೇಹೆಂಗ್ ಅವರನ್ನು ಹಿಮ್ಮೆಟ್ಟಿಸಿದರು.

ತಾನ್ಯಾ ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಇಶಿಕಾ ಜೈಸ್ವಾಲ್ ಅವರನ್ನು 21–17, 21–18 ರಿಂದ ಸೋಲಿಸಲು ಹೆಚ್ಚೇನೂ ಪ್ರಯಾಸಪಡಲಿಲ್ಲ. ಅವರು ಮುಂದಿನ ಸುತ್ತಿನಲ್ಲಿ ವಿಶ್ವ ಕ್ರಮಾಂಕದಲ್ಲಿ ಎಂಟನೇ ಸ್ಥಾನದಲ್ಲಿರುವ ಪೋರ್ನ್‌ಪವೀ ಚೊಚುವಾಂಗ್ (ಥಾಯ್ಲೆಂಡ್) ಅವರನ್ನು ಎದುರಿಸಲಿದ್ದಾರೆ.

ಕಿರಣ್, ತರುಣ್‌ಗೆ ನಿರಾಸೆ: ಕಿರಣ್ ಜಾರ್ಜ್ ಪುರುಷರ ಸಿಂಗಲ್ಸ್‌ನಲ್ಲಿ 19–21, 21–14, 15–21 ರಿಂದ ಮಲೇಷ್ಯಾದ ಜಸ್ಟಿನ್ ಹೋ ಅವರಿಗೆ ಸೋತರು. ಅರ್ಹತಾ ಸುತ್ತನ್ನು ದಾಟಿ ಬಂದಿದ್ದ ಸನೀತ್ 8–21, 10–21 ರಲ್ಲಿ ಚೀನಾದ ಹು ಝೆಯಾನ್ ಅವರಿಗೆ ಮಣಿದರು.

ತರುಣ್ ಹೋರಾಟ ಪ್ರದರ್ಶಿಸಿದರೂ, ಅಂತಿಮವಾಗಿ 21–18, 13–21, 23–25 ರಲ್ಲಿ ಹತ್ತನೇ ಕ್ರಮಾಂಕದ ಚುನ್-ಯಿ (ಚೀನಾ ತೈಪೆ) ಅವರಿಗೆ ಸೋತರು. ಈ ಪಂದ್ಯ 80 ನಿಮಿಷ ನಡೆಯಿತು.

ಧ್ರುವ್- ಮನೀಷಾ ಮುನ್ನಡೆ ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ರಾವತ್- ಮನೀಷಾ ಕೆ. ಜೋಡಿ ಎರಡನೇ ಸುತ್ತಿಗೆ ಮುನ್ನಡೆಯಿತು. ಈ ಜೋಡಿ 21–13, 21–14 ರಿಂದ ಆಸ್ಟ್ರೇಲಿಯಾದ ಲಿಮ್ ಜೇಡೆನ್- ವಿಕ್ಟೋರಿಯಾ ಜೊನಡಿ ಜೋಡಿಯನ್ನು 27 ನಿಮಿಷಗಳಲ್ಲಿ ಸೋಲಿಸಿತು.

ಭಾರತದ ತನ್ವಿ ಶರ್ಮಾ ಅವರ ಬ್ಯಾಕ್‌ಹ್ಯಾಂಡ್ ಹೊಡೆತದ ಪರಿ —'ಬಿಎಐ' ಚಿತ್ರ

ಫಲ ನೀಡದ ರಿಚಾ ವೀರೋಚಿತ ಆಟ

ಕಾರ್ಡಿಫ್ (ಪಿಟಿಐ): ಭಾರತ ತಂಡವು ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಗೆ ಮುನ್ನ ಕೊನೆಯ ಸಿದ್ಧತಾ ಪಂದ್ಯದಲ್ಲಿ ಬುಧವಾರ ಇಂಗ್ಲೆಂಡ್ ಎದುರು ಐದು ರನ್‌ಗಳಿಂದ ಸೋಲನುಭವಿಸಿತು. ರಿಚಾ ಘೋಷ್ (68, 36ಎ, 4x9, 6x2) ಅವರ ಮಿಂಚಿನ ಬ್ಯಾಟಿಂಗ್ ಫಲ ನೀಡಲಿಲ್ಲ.

ಡಾನಿ ಗಿಬ್ಸನ್ ಅವರ ಆಲ್‌ರೌಂಡ್ ಆಟವು ಇಂಗ್ಲೆಂಡ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು. ಅಗ್ರ ಸರದಿಯ ಬ್ಯಾಟಿಂಗ್ ವೈಫಲ್ಯ ಭಾರತದ ಹಿನ್ನಡೆಗೆ ಕಾರಣವಾಯಿತು. ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಇಂಗ್ಲೆಂಡ್ ತಂಡವು ಆ್ಯಮಿ ಜೋನ್ಸ್ (64, 45 ಎಸೆತ), ನಾಯಕಿ ನ್ಯಾಟ್ ಶಿವರ್ ಬ್ರಂಟ್ (57, 45 ಎಸೆತ) ಅವರ ಬ್ಯಾಟಿಂಗ್ ನೆರವಿನಿಂದ 6 ವಿಕೆಟ್‌ಗೆ 171 ರನ್ ಕಲೆಹಾಕಿತು. ಗಿಬ್ಸನ್ ಕೊನೆಯಲ್ಲಿ 12 ಎಸೆತಗಳಿಂದ 30 ರನ್ ಗಳಿಸಿದ್ದರು. ಆಫ್ ಸ್ಪಿನ್ನರ್ ಶ್ರೇಯಾಂಕ ಪಾಟೀಲ 29 ರನ್ನಿಗೆ 2 ವಿಕೆಟ್ ಪಡೆದರು.

ಮೊತ್ತ ಬೆನ್ನಟ್ಟಿದ ಭಾರತ ತಂಡವು ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಕೊನೆಯಲ್ಲಿ ರಿಚಾ ಘೋಷ್ ಅವರ ಮಿಂಚಿನ ಬ್ಯಾಟಿಂಗ್‌ನಿಂದ ಗೆಲುವಿನ ಸನಿಹ ತಲುಪಿದರೂ ಒಂದು ಎಸೆತ ಉಳಿದಿರುವಂತೆ 166 ರನ್‌ಗಳಿಗೆ ಆಲೌಟ್ ಆಯಿತು. ಒಂದು ಹಂತದಲ್ಲಿ 17.3 ಓವರುಗಳಲ್ಲಿ 7 ವಿಕೆಟ್‌ಗೆ 132 ರನ್ ಗಳಿಸಿದ್ದಾಗ ಭಾರತ ಸುಲಭವಾಗಿ ಮಣಿಯುವಂತೆ ಕಂಡಿತ್ತು. ಆದರೆ ರಿಚಾ ಏಕಾಂಗಿಯಾಗಿ ಬೀಸಾಟವಾಡಿ ಪಂದ್ಯಕ್ಕೆ ಜೀವಂತಿಕೆ ತಂದುಕೊಟ್ಟರು. ಅವರಿಗೆ ಉಳಿದವರಿಂದ ಬೆಂಬಲ ಸಿಗಲಿಲ್ಲ. ರಿಚಾ ಬಿಟ್ಟರೆ ಯಾರೂ 20ರ ಗಡಿ ದಾಟಲಿಲ್ಲ.

ಎಡಗೈ ಸ್ಪಿನ್ನರ್ ಲಿನ್ಸೆ ಸ್ಮಿತ್ ಅವರು ರಿಚಾ ಅವರ ವಿಕೆಟ್ ಸೇರಿದಂತೆ 42 ರನ್ನಿಗೆ 3 ವಿಕೆಟ್ ಪಡೆದರು. ಅವರಿಗೆ ಚಾರ್ಲಿ ಡೀನ್ (16ಕ್ಕೆ2) ಮತ್ತು ಟಿಲ್ಲಿ ಕೋರ್ಟೀನ್ (22ಕ್ಕೆ2) ಮತ್ತು ಡಾನಿ ಗಿಬ್ಸನ್ (17ಕ್ಕೆ2) ಅವರು ಬೆಂಬಲ ನೀಡಿದರು.

ಈ ಸೋಲು ಭಾರತದ ಅಗ್ರ ಸರದಿ ಬ್ಯಾಟಿಂಗ್ ಅಸ್ಥಿರವಾಗಿರುವುದಕ್ಕೆ ಕನ್ನಡಿಯಾಗಿದ್ದು, ವಿಶ್ವಕಪ್‌ಗೆ ಮೊದಲು ಕಳವಳಕ್ಕೆ ಕಾರಣವಾಗಿದೆ. ಕ್ಷೇತ್ರರಕ್ಷಣೆಯಲ್ಲೂ ಲೋಪಗಳಾಗಿ ಇಂಗ್ಲೆಂಡ್‌ಗೆ ದೊರೆತ ಹೆಚ್ಚುವರಿ ರನ್‌ಗಳು ಅಂತಿಮವಾಗಿ ನಿರ್ಣಾಯಕವಾದವು.

ನೆಟ್ಸ್‌ನಲ್ಲಿ ರೋಹಿತ್ 'ಬ್ಯಾಟಿಂಗ್'



ಮೊಹಾಲಿ (ಪಿಟಿಐ): 'ಹಿಟ್‌ಮ್ಯಾನ್' ಖ್ಯಾತಿಯ ರೋಹಿತ್ ಶರ್ಮಾ ಅವರು ಭಾರತ ತಂಡದ ನೆಟ್ಸ್‌ಗೆ ಮರಳಿದರು. ತಂಡದಲ್ಲಿ ಯುವ ಮತ್ತು ಉದಯೋನ್ಮುಖ ಆಟಗಾರರಿದ್ದರೂ ರೋಹಿತ್ ಅವರೇ ಆಕರ್ಷಣೆಯ ಕೇಂದ್ರಬಿಂದುವಾಗಿದ್ದರು.

ಐ.ಎಸ್. ಬಿಂದ್ರಾ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ಭಾರತ ತಂಡದವರ ಬಸ್ ಬರುವ ಮುನ್ನವೇ ಅಭಿಮಾನಿಗಳು ಲಗ್ಗೆ ಇಟ್ಟಿದ್ದರು. ಮಂಗಳವಾರವಷ್ಟೇ ರೋಹಿತ್ ಅವರು ಬಿಸಿಸಿಐ ಶ್ರೇಷ್ಠತಾ ಕೇಂದ್ರದಿಂದ ಫಿಟ್‌ನೆಸ್ ಪ್ರಮಾಣಪತ್ರ ಪಡೆದು ತಂಡಕ್ಕೆ ಮರಳಿದ್ದರು. ಇದರಿಂದಾಗಿ ಅವರ ಬರುವಿಕೆಗಾಗಿ ಅಭಿಮಾನಿಗಳೂ ಕಾದಿದ್ದರು.

ಶ್ರೇಯಸ್ ಅಯ್ಯರ್ ನಾಯಕತ್ವದ ಟಿ20 ತಂಡವು ಕ್ರೀಡಾಂಗಣದಲ್ಲಿ ಸೇರಿದಾಗ ರೋಹಿತ್ ಮೇಲೆ ಎಲ್ಲರ ಗಮನ ಇತ್ತು. ಅವರೊಂದಿಗೆ ಯಶಸ್ವಿ ಜೈಸ್ವಾಲ್, ಯುವ ಆಟಗಾರರಾದ ಗುರ್ನೂರ್ ಬ್ರಾರ್, ಪ್ರಿನ್ಸ್ ಯಾದವ್ ಮತ್ತು ಹರ್ಷ ದುಬೆ ಇದ್ದರು.

ರೋಹಿತ್ ಅವರು ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ಆರಂಭಿಸುವ ಮುನ್ನ ಸ್ಟ್ರೆಂತ್ ಮತ್ತು ಕಂಡಿಷನಿಂಗ್ ಕೋಚ್ ಏಡ್ರಿಯನ್ ಲೀ ರಾಕ್ಸ್ ಅವರೊಂದಿಗೆ ಸ್ವಲ್ಪ ಹೊತ್ತು ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಅವರೊಂದಿಗೆ ಇಶಾನ್ ಕಿಶನ್ ಕೂಡ ಇದ್ದರು. ನಂತರ ಐದು ಸುತ್ತುಗಳ ಡ್ರಿಲ್ ಮಾಡಿದರು. ನಂತರ ಬ್ಯಾಟಿಂಗ್ ಮಾಡಿದರು.

ಅಫ್ಗನ್ ಏಕದಿನ ಸರಣಿ: ಪಾಂಡ್ಯ ಅಲಭ್ಯ

ಮುಲ್ಲನಪುರ (ಪಿಟಿಐ): ಏಕದಿನ ಪಂದ್ಯದಲ್ಲಿ ಆಡಲು ಅನುಮತಿ ದೊರೆತ ಕೆಲವೇ ಗಂಟೆಗಳಲ್ಲಿ ಭಾರತ ತಂಡದ 'ಸ್ಟಾರ್ ಆಲ್‌ರೌಂಡರ್' ಹಾರ್ದಿಕ್ ಪಾಂಡ್ಯ ಅವರು ಅಫ್ಗಾನಿಸ್ತಾನ ವಿರುದ್ಧ ಸರಣಿಗೆ ಅಲಭ್ಯರಾದರು. ತೊಡೆಸಂದು ನೋವು ಕಾಣಿಸಿಕೊಂಡಿದ್ದು ಇದಕ್ಕೆ ಕಾರಣ.

ಐಪಿಎಲ್ ವೇಳೆ ಶುರುವಾದ ಬೆನ್ನುನೋವಿಗೆ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಪುನಃಶ್ಚೇತನ ಶಿಬಿರದಲ್ಲಿ ಚಿಕಿತ್ಸೆ ಪಡೆದಿದ್ದ ಪಾಂಡ್ಯ ಅವರಿಗೆ ಕ್ರೀಡಾ ವಿಜ್ಞಾನ ತಜ್ಞರು ಏಕದಿನ ತಂಡಕ್ಕೆ ಮರಳಲು ಮಂಗಳವಾರ ಅನುಮತಿ ನೀಡಿದ್ದರು.

ಹಾರ್ದಿಕ್ ಪಾಂಡ್ಯ

ಶ್ರೇಷ್ಠತಾ ಕೇಂದ್ರದಲ್ಲಿ 10 ಓವರುಗಳ ಕೋಟಾ ಮುಗಿಸುವ ವೇಳೆ ಹೊಸದಾಗಿ ಗಾಯದ ಸಮಸ್ಯೆ ಕಾಣಿಸಿಕೊಂಡಿತು ಎನ್ನಲಾಗಿದೆ. ಅಫ್ಗಾನಿಸ್ತಾನ ವಿರುದ್ಧ ಏಕದಿನ ಸರಣಿ 13ರಂದು ಧರ್ಮಶಾಲಾದಲ್ಲಿ ಆರಂಭ ಆಗಲಿದೆ. ಜೂನ್ 17 ಮತ್ತು 20ರಂದು ಲಖನೌ ಮತ್ತು ಚೆನ್ನೈನಲ್ಲಿ ಉಳಿದ ಎರಡು ಪಂದ್ಯಗಳು ನಿಗದಿಯಾಗಿವೆ.

ಚೇತರಿಕೆಗೆ ಮೂರು ವಾರ ಬೇಕಾಗುವ ಕಾರಣ ಪಾಂಡ್ಯ ಅವರು ಈ ಸರಣಿ ಆಡುವ ಸಾಧ್ಯತೆ ದೂರವಾಗಿದೆ ಎಂದು ಬಿಸಿಸಿಐ ಮೂಲ ತಿಳಿಸಿದೆ.

ಇಂಗ್ಲೆಂಡ್ ತಂಡದಿಂದ ನಾಯಕ ಬೆನ್ ಸ್ಟೋಕ್ಸ್, ಗಸ್ ಅಟ್ಕಿನ್ಸನ್ 'ಔಟ್'

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಮತ್ತು ವೇಗದ ಬೌಲರ್ ಗಸ್ ಅಟ್ಕಿನ್ಸನ್ ಅವರನ್ನು ಮುಂದಿನ ವಾರ ಓವಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ನಡೆಯಲಿರುವ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯಕ್ಕೆ ಕೈಬಿಡಲಾಗಿದೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಬುಧವಾರ ಪ್ರಕಟಿಸಿದೆ.

ಕಳೆದ ಭಾನುವಾರ ಲಾರ್ಡ್ಸ್‌ನಲ್ಲಿ ಮುಕ್ತಾಯಗೊಂಡ ಮೊದಲ ಟೆಸ್ಟ್‌ನಲ್ಲಿ 115 ರನ್‌ಗಳಿಂದ ಜಯಗಳಿಸಿದ ನಂತರ ಸ್ಟೋಕ್ಸ್ ಮತ್ತು ಅಟ್ಕಿನ್ಸನ್ ಅವರು ನಿಯಮ ಉಲ್ಲಂಘಿಸಿ ನೈಟ್ ಕ್ಲಬ್‌ಗೆ ತೆರಳಿದ್ದರು. ಆಟಗಾರರಿಗೆ ಜನವರಿಯಲ್ಲಿ 'ನೈಟ್ ಕರ್ಫ್ಯೂ' ಹೇರಲಾಗಿತ್ತು. ಸೋಮವಾರ ಬೆಳಗಿನ ಜಾವ ಸೊರಸೆನ್ಸ್ ರಗ್ಬಿ ತಂಡದ ಆಟಗಾರನೊಬ್ಬ ಅಟ್ಕಿನ್ಸನ್ ಅವರಿಗೆ ಪಂಚ್ ಮಾಡಲು ಯತ್ನಿಸಿದ್ದ. ತಡೆಯಲೆತ್ನಿಸಿದ ಇಸಿಬಿ ಭದ್ರತಾ ಸಿಬ್ಬಂದಿ ಏಟು ತಿನ್ನಬೇಕಾಯಿತು.

ಬೆನ್ ಸ್ಟೋಕ್ಸ್

ಗಸ್ ಅಟ್ಕಿನ್ಸನ್

ಈ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರೂ ಆಟಗಾರರು ಇಸಿಬಿಯಿಂದ ತನಿಖೆ ಎದುರಿಸುತ್ತಿದ್ದಾರೆ.

ಸ್ಟೋಕ್ಸ್ ಗೈರುಹಾಜರಿಯಲ್ಲಿ ಜೋ ರೂಟ್ ಅವರು ತಂಡದ ಉಸ್ತುವಾರಿ ನಾಯಕರಾಗಿ ಕಾರ್ಯನಿರ್ವಹಿಸಲಿದ್ದಾರೆ. 2022ರಲ್ಲಿ ಸ್ಟೋಕ್ಸ್ ನಾಯಕರಾಗುವ ಮೊದಲು ಜೋ ರೂಟ್ ಐದು ವರ್ಷ ಇಂಗ್ಲೆಂಡ್ ತಂಡವನ್ನು ಮುನ್ನಡೆಸಿದ್ದರು.

ಆಸ್ಟ್ರೇಲಿಯಾ ಎದುರು ಆ್ಯಷಸ್ ಸರಣಿಯಲ್ಲಿ 4–1 ರಿಂದ ಸೋತ ಸಂದರ್ಭದಲ್ಲಿ ಇಂಗ್ಲೆಂಡ್ ಆಟಗಾರರು ಮದ್ಯಪಾನ ವ್ಯಸನ ಬೆಳೆಸಿಕೊಂಡಿದ್ದರೆಂಬ ಆರೋಪಗಳು ಕೇಳಿಬಂದಿದ್ದವು.

ಹವ್ಯಕ ಬ್ಯಾಡ್ಮಿಂಟನ್ ಅಸೋಸಿಯೇಟ್ಸ್‌ನ ಸಹಸ್ಥಾಪಕರಾದ ಕಮಲಾಕರ ಕೆ.ಎಸ್, ಸಿ.ಎ. ರಾಮಮೋಹನ ಹೆಗಡೆ, ಜಗದೀಶ್ ಹೊಸಬಾಳೆ, ಸಂಸ್ಥೆಯ ಅಧ್ಯಕ್ಷ ಶ್ರೇಯಸ್ ಕುಮಾರ್ ರಾವ್, ಬ್ಯಾಡ್ಮಿಂಟನ್ ಆಟಗಾರ ಜೈರಾಮ್ ಪೈ, ಸಾತ್ವಿಕ್ ಭಟ್, ಅಖಿಲ್ ಹೆಗಡೆ, ನಟ ದಿಗಂತ್ ಮಂಚಾಲೆ, ಹೃದ್ರೋಗ ತಜ್ಞ ಡಾ. ದಿವಾಕರ್ ಭಟ್, ಅಘಮಾನಾ ಡೆವಲಪರ್ಸ್‌ನ ಸಹಸಂಸ್ಥಾಪಕ ಸುದರ್ಶನ್ ಭಟ್, ವಿನಯ್ ಹೆಗಡೆ, ಸತೀಶ್ ಕಾಕಲ್, ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ ಅರವಿಂದ ಭಟ್, ಮಂಜುನಾಥ್ ರಾವ್ ಚಿತ್ರದಲ್ಲಿದ್ದಾರೆ

ಹವ್ಯಕ ಬ್ಯಾಡ್ಮಿಂಟನ್ ಟೂರ್ನಿ: ಅಖಿಲ್, ಆರ್ಯಾ ಕೂರ್ಸೆಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಲಿಕಾನ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಈಚೆಗೆ ನಡೆದ 'ಹವ್ಯಕ ಬ್ಯಾಡ್ಮಿಂಟನ್ ಟೂರ್ನಿ'ಯ ಪುರುಷರ (35 ವರ್ಷದೊಳಗಿನವರ) ಸಿಂಗಲ್ಸ್‌ನಲ್ಲಿ ಅಖಿಲ್ ಹೆಗಡೆ ಅವರು ಚಾಂಪಿಯನ್ ಆದರು. ಸಾತ್ವಿಕ್ ಭಟ್ ಅವರು ರನ್ನರ್ಸ್ ಅಪ್ ಆದರು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಆರ್ಯಾ ಕೂರ್ಸೆ ಅವರು ವರ್ಷಾ ಭಟ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡರು. ಇದೇ ವಯೋಮಾನದವರ ಶ್ರೇಯಾಂಕ ರಹಿತ ಪುರುಷರ ವಿಭಾಗದಲ್ಲಿ ಆದಿತ್ಯ ಜಿ. ಭಟ್ ಕಿರೀಟ ತಮ್ಮದಾಗಿಕೊಂಡರು.

ವಿಜೇತರು: 16 ವರ್ಷದೊಳಗಿನವರು: ಬಾಲಕರು: ಓಂಕಾರ್ ಭಟ್; ಬಾಲಕಿಯರು: ಚಾರ್ವಿ ಗಣೇಶ್; ಮಿಶ್ರ ಡಬಲ್ಸ್: ಆರ್ಯಾ ಕೂರ್ಸೆ– ಅರ್ಜುನ್. 35 ವರ್ಷದೊಳಗಿನವರು: ಪುರುಷರ ಸಿಂಗಲ್ಸ್: ಅಖಿಲ್ ಹೆಗಡೆ; ಆದಿತ್ಯ ಜಿ. ಭಟ್ (ಶ್ರೇಯಾಂಕ ರಹಿತರು); ಮಹಿಳೆಯರು: ಆರ್ಯಾ ಕೂರ್ಸೆ; 35ರಿಂದ 50 ವರ್ಷದೊಳಗಿನವರು: ಪುರುಷರು: ಶ್ರೀನಿಧಿ ಎಸ್.; ಮಹಿಳೆಯರು: ಸಂಪೂರ್ಣಾ ಭಟ್; 50ರಿಂದ 60 ವರ್ಷದೊಳಗಿನವರು: ಪುರುಷರು: ಗಣಪತಿ ಪಂಡಿತ್; 60 ವರ್ಷ ದಾಟಿದವರು: ಪುರುಷರು: ಸುಬ್ಬರಾವ್.

ಸೆಮಿಗೆ ಫಾರ್ಮಿಡೇಬಲ್ಸ್, ಫೆನೆಸ್ತ

ಪ್ರಜಾವಾಣಿ ವಾರ್ತೆ

ಮಂಗಳೂರು: ಎರಡನೇ ದಿನದಂತ್ಯಕ್ಕೆ ಅಗ್ರಸ್ಥಾನಕ್ಕೇರಿದ್ದ ಫಾರ್ಮಿಡೇಬಲ್ಸ್ ತಂಡ ಬುಧವಾರ ಗೆಲುವಿನ ಲಯ ಮುಂದುವರಿಸಿ ಮವೆರಿಕ್ಸ್ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್‌ನ 'ಗೋಲ್ಡ್' ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿತು.

ಕರಾವಳಿ ಬ್ರಿಜ್ ಸಂಸ್ಥೆಯು ಭಾರತ ಬ್ರಿಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಯ ಸಹಯೋಗದಲ್ಲಿ ಬೆಂದೂರಿನ ಸೇಂಟ್ ಸೆಬಾಸ್ಟಿಯನ್ ಸಭಾಂಗಣದಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನಲ್ಲಿ ಇಎ ಬ್ರಿಜ್, ಫೆನೆಸ್ತ ಮತ್ತು ಹೇಮಂತ್ ಜಲನ್ ತಂಡಗಳು ಕೂಡ ನಾಲ್ಕರ ಘಟ್ಟಕ್ಕೆ ಲಗ್ಗೆ ಇಟ್ಟವು.

ಸೆಮಿಫೈನಲ್‌ನ ಮೊದಲ ಸೆಗ್ಮೆಂಟ್‌ನಲ್ಲಿ ಫಾರ್ಮಿಡೇಬಲ್ಸ್ 24, ಇಎ ಬ್ರಿಜ್–24, ಫೆನೆಸ್ತ 3 ಮತ್ತು ಹೇಮಂತ್ ಜಲನ್–3 ಸ್ಕೋರು ಗಳಿಸಿದೆ.

ಸಿಲ್ವರ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಓವರ್‌ಟ್ರಿಕ್ಸ್, ವಾಣಿಜ್ಯ ತೆರಿಗೆ ಇಲಾಖೆ, ಟೀಮ್ ಬೈಕುಂತ್ ಮತ್ತು ಟಾಪ್‌ರಫ್ ತಂಡಗಳು ಪ್ರತಿ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿವೆ.

ಒಂದನೇ ಗುಂಪಿನಲ್ಲಿ ಓವರ್‌ಟ್ರಿಕ್ಸ್ (ಸ್ಕೋರು: 36) ಜೊತೆ ಜುತಿಕಾ, 2ನೇ ಗುಂಪಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆ (34) ಜೊತೆ ವೇದಾಂತ, 3ನೇ ಗುಂಪಿನಲ್ಲಿ ಬೈಕುಂತ್ (103) ಜೊತೆ ಸೂಪರ್ ಲಕ್ಕಿ ಮತ್ತು 4ನೇ ಗುಂಪಿನಲ್ಲಿ ಟಾಪ್‌ರಫ್ (8) ಜೊತೆ ಮಿರಾಕಲ್ ಸ್ಥಾನ ಪಡೆದುಕೊಂಡಿವೆ.

ವಾರ್ವಿಕ್‌ಶೈರ್ ಪರ ಸುತಾರ್ ಕಣಕ್ಕೆ

ಲಂಡನ್ (ಪಿಟಿಐ): ಅಫ್ಗಾನಿಸ್ತಾನ ವಿರುದ್ಧ ಏಕೈಕ ಟೆಸ್ಟ್ ಪಂದ್ಯದ ಗೆಲುವಿನಲ್ಲಿ ಮಿಂಚಿದ ಎಡಗೈ ಸ್ಪಿನ್ನರ್ ಮಾನವ್ ಸುತಾರ್ ಅವರು ಇಂಗ್ಲಿಷ್ ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ವಾರ್ವಿಕ್ ಶೈರ್ ಪರ ಮುಂದಿನ ಎರಡು ಸುತ್ತಿನ ಪಂದ್ಯಗಳನ್ನು ಆಡುವುದಕ್ಕೆ ಒಪ್ಪಂದ ಮಾಡಿಕೊಂಡಿದ್ದಾರೆ.

ವಾರ್ವಿಕ್‌ಶೈರ್ ತಂಡವು ಅಲ್ಪಾವಧಿ ಒಪ್ಪಂದ ಏರ್ಪಟ್ಟಿರುವುದನ್ನು ಬುಧವಾರ ಪ್ರಕಟಿಸಿದೆ. ಅವರು 12 ರಿಂದ 15ರವರೆಗೆ ಸ್ಕಾರ್‌ಬರೊದಲ್ಲಿ ಯಾರ್ಕ್‌ಶೈರ್ ವಿರುದ್ಧ ಪಂದ್ಯದಲ್ಲಿ ಆಡುವರು. ಅದರ ನಂತರದ ವಾರ ಟಾಂಟನ್‌ನಲ್ಲಿ ಸಾಮರ್ಸೆಟ್ ವಿರುದ್ಧ ಆಡಲಿದ್ದಾರೆ.